ವಿಶ್ವವಾಣಿ
ವಿಶ್ವಾಸವೇ ವಿಶ್ವ
VISHWAVANI DAILY

ಕರ್ನಾಟಕ ಸಂಘ, ಮಸ್ಕತ್
ಸಹಕಾರದೊಂದಿಗೆ
ವಿಶ್ವವಾಣಿ ಗ್ಲೋಬಲ್ ಫೋರಂ
ಪ್ರಸ್ತುತಪಡಿಸುವ
ಭಾರತ ಹಾಗೂ ಒಮಾನ್ ವಿಶೇಷ ನಿಯೋಗದ ಸಮ್ಮುಖದಲ್ಲಿ
ಕರ್ನಾಟಕ ಹಾಗೂ ಒಮಾನ್ ಸಾಂಸ್ಕೃತಿಕ ಸಮ್ಮಿಲನ ಮತ್ತು ಜಾಗತಿಕ ಸಾಧನೆಗೈದ

ಕರ್ನಾಟಕದ ಅಪರೂಪದ ಸಾಧಕರಿಗೆ

ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ದಿವ್ಯ ಸಾನ್ನಿಧ್ಯ

ಪೂಜ್ಯ ಶ್ರೀ ಪ್ರಥಮ ಜಗದ್ಗುರು ಬಸವಜಯ ಮೃತ್ಯುಂಜಯ ಸ್ವಾಮೀಜಿಯವರು
ಲಿಂಗಾಯತ ಪಂಚಮಸಾಲಿ
ಜಗದ್ಗುರು ಮಹಾಪೀಠ, ಕೂಡಲಸಂಗಮ

ಮುಖ್ಯ ಅತಿಥಿಗಳು

ಶ್ರೀ ಯು ಟಿ ಖಾದರ್
ಸಭಾಧ್ಯಕ್ಷರು,
ಕರ್ನಾಟಕ ವಿಧಾನಸಭೆ

ಅತಿಥಿಗಳು

ಶ್ರೀ ಎಸ್ ಡಿ ಟಿ ಪ್ರಸಾದ್
ಅಧ್ಯಕ್ಷರು,
ಕರ್ನಾಟಕ ಸಂಘ,
ಮಸ್ಕತ್

ಅಧ್ಯಕ್ಷತೆ

ಶ್ರೀ ವಿಶ್ವೇಶ್ವರ ಭಟ್
ಪ್ರಧಾನ ಸಂಪಾದಕ
ವಿಶ್ವವಾಣಿ

ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಅಪರೂಪದ ಸಾಧಕರನ್ನು ಗುರುತಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವುದು, ಎರಡೂ ದೇಶಗಳ ಮೈತ್ರಿ, ಪರಸ್ಪರ ಸಾಂಸ್ಕೃತಿಕ ವಿನಿಮಯ ಹಾಗೂ ಸಂಸ್ಕೃತಿ ಪರಿಚಯ ಈ ಕಾರ್ಯಕ್ರಮದ ಆಶಯ. ಕಳೆದ ವರ್ಷದಿಂದ ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷ್ಯಾ, ಮಾರಿಷಸ್, ಮಾಲ್ಡೀವ್ಸ್ ಹಾಗೂ ಜಪಾನ್ ದೇಶಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಗೊಳಿಸಲಾಗಿದೆ. ಇಂಥ ವಿಶಿಷ್ಟ ಸಾಂಸ್ಕೃತಿಕ ಸಮ್ಮಿಲನದ ಜವಾಬ್ದಾರಿ ಇದೀಗ ಒಮಾನ್ ದೇಶದವರೆಗೂ ನಮ್ಮನ್ನು ಕರೆದುಕೊಂಡು ಬಂದಿದೆ.

ಇದು ವಿಶ್ವವಾಣಿಯ ಹೆಮ್ಮೆ ಹಾಗೂ ಜವಾಬ್ದಾರಿ.

ಶುಕ್ರವಾರ, 31.01.2025
ಹೋಟೆಲ್ ಗ್ರ್ಯಾಂಡ್ ಮಿಲೇನಿಯಮ್
ಮಸ್ಕತ್, ಒಮಾನ್

ಸಮಾಚಾರ ಸಣ್ಣದಲ್ಲ

ಇಂದು ಕುವೆಂಪು ಪ್ರಶಸ್ತಿ ಪ್ರದಾನ



ಬೆಂಗಳೂರು: ರಾಷ್ಟ್ರಕವಿ ಕುವೆಂಪು ಮತ್ತು ದ.ರಾ. ಬೇಂದ್ರೆ ಜನ್ಮದಿನಾಚರಣೆ ಮತ್ತು ಕುವೆಂಪು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಶುಕ್ರವಾರ ಸಂಜೆ 5 ಗಂಟೆಗೆ ಬಿಎಂಶ್ರೀ ಕಲಾಭವನದಲ್ಲಿ ಆಯೋಜಿಸಲಾಗಿದೆ. ಕನ್ನಡ ಸಂಘರ್ಷ ಸಮಿತಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ಪತ್ರಕರ್ತ ರಾಮಣ್ಣ ಎಚ್., ಡಾ.ಕೆ.ವೆಂ.ಶ್ರೀನಿವಾಸ ಮೂರ್ತಿ, ಎ.ಎಸ್.ನಾಗರಾಜಸ್ವಾಮಿ ಭಾಗವಹಿಸಲಿದ್ದಾರೆ. ಕುವೆಂಪು ಅನಿಕೇತನ ಪ್ರಶಸ್ತಿಗೆ ಡಾ. ವಡ್ಡಗೆರೆ ನಾಗರಾಜಯ್ಯ, ಕುವೆಂಪು ಚಿರಂತನ ಪ್ರಶಸ್ತಿಗೆ ಪ್ರೊ. ಅಗ್ರಹಾರ ಕೃಷ್ಣಮೂರ್ತಿ, ಕುವೆಂಪು ಯುವ ಕವಿ ಪ್ರಶಸ್ತಿಗೆ ಮಂಜುಳಾ ಹುಲಿಕುಂಟೆ ಭಾಜನರಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಫೆ.7ರಿಂದ ಪ್ರವೇಶ, ಕಾವ, ಜಾಣ ಪರೀಕ್ಷೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕನ್ನಡ ಸಾಹಿತ್ಯ ಪರೀಕ್ಷೆಗಳಾದ ಕನ್ನಡ ಪ್ರವೇಶ, ಕಾವ, ಜಾಣ ಪರೀಕ್ಷೆಗಳು ಫೆ.7,8 ಮತ್ತು 9ರಂದು ನಡೆಯಲಿದೆ ಎಂದು ಕಸಾಪ ಅಧ್ಯಕ್ಷ ಡಾ.ನಾಡೋಜ ಮಹೇಶ್ ಜೋಶಿ ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತು 2024-25ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪರೀಕ್ಷೆಗಳನ್ನು ಫೆ.7, 8 ಮತ್ತು 9ರಂದು ಒಟ್ಟು 3 ದಿನಗಳ ಕಾಲ ರಾಜ್ಯದ 18 ಕೇಂದ್ರಗಳಲ್ಲಿ ನಡೆಸಲಿದೆ. ಅರ್ಹ ಅಭ್ಯರ್ಥಿಗಳಿಗೆ ಮೇಲ್ಕಂಡ ಪರೀಕ್ಷೆಗಳ ಪ್ರವೇಶ ಪತ್ರಗಳನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿದೆ. ಪೆ.1ರ ಬಳಿಕವೂ ಪ್ರವೇಶ ಪತ್ರ ತಲುಪದಿದ್ದರೆ ಈ ಬಗ್ಗೆ ಅಭ್ಯರ್ಥಿಗಳು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವಿಚಾರಿಸಬಹುದು. ಹೆಚ್ಚಿನ ಮಾಹಿತಿಗೆ 080-26612991, 26623584, 26523867 ಸಂಪರ್ಕಿಸಿ. ಅಭ್ಯರ್ಥಿಗಳು ಪ್ರವೇಶ ಪತ್ರ ಮತ್ತು ಪರೀಕ್ಷಾ ಕೇಂದ್ರಗಳ ವಿಳಾಸವನ್ನು ಅಂತರ್ಜಾಲ ತಾಣ www.kasapa.in ಮೂಲಕ ಸಹ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಆರ್ಥೋಪೆಡಿಕ್ ಸಮ್ಮೇಳನ ಇಂದು

ಬೆಂಗಳೂರು: ಕರ್ನಾಟಕ ಆರ್ಥೋಪೆಡಿಕ್ ಅಸೋಸಿಯೇಷನ್‌ನ 49ನೆ ವಾರ್ಷಿಕ ಸಮ್ಮೇಳನ ಜ.31ರಿಂದ ಫೆ.2ರ ವರೆಗೆ ನಗರದ ಅರಮನೆ ಮೈದಾನದ ಚಾಮರ ವಜ್ರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಡಾ.ದೀಪಕ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಈ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದ ವೈದ್ಯಕೀಯ ಧುರೀಣರು, ಸಂಶೋಧಕರು, ಚಿಕಿತ್ಸಕರು ಸೇರಿದಂತೆ ಇನ್ನಿತರರು ಭಾಗಿಯಾಗಲಿದ್ದಾರೆ. ಅಲ್ಲದೇ 680ಕ್ಕೂ ಹೆಚ್ಚು ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಂದ ಪೇಪರ್ ಮತ್ತು ಪೋಸ್ಟರ್‌ಗಳನ್ನು ಪ್ರಸ್ತುಪಡಿಸಲಾಗುತ್ತದೆ. 3 ದಿನಗಳ ನಡೆಯುವ ಸಮ್ಮೇಳನದಲ್ಲಿ 100ಕ್ಕೂ ಹೆಚ್ಚು ಔಷಧ ಕಂಪನಿಗಳು ಹೊಸ ತಂತ್ರಜ್ಞಾನ ಆಧಾರಿತ ಚಿಕಿತ್ಸೆಗಳ ಉಪಕರಣಗಳನ್ನು ಪ್ರದರ್ಶಿಸಲಿದ್ದಾರೆ.

ಯುವಭಕ್ತರ ಪರಿಶ್ರಮದಿಂದ ಮಂದಿರಕ್ಕೆ ಹೊಸರೂಪ | ಕೇರಳ ವಾಸ್ತುಶಿಲ್ಪ ಮಾದರಿಯಲ್ಲಿ ಸಕಲ ವ್ಯವಸ್ಥೆಗಳೊಂದಿಗೆ ಸಜ್ಜು

ಅಮೃತ ಮಲ್ಲಿಕಾರ್ಜುನ, ಭ್ರಮರಾಂಬೆಗೆ ಭವ್ಯ ಆವರಣ

ವಿಶ್ವವಾಣಿ ಸುದ್ದಿಮನೆ, ಆನೇಕಲ್

ನಗರದ ಪುರಾತನ ದೇವಾಲಯವಾದ ಶ್ರೀ ಭ್ರಮರಾಂಬೆ ಸಹಿತ ಶ್ರೀ ಅಮೃತ ಮಲ್ಲಿಕಾರ್ಜುನ ದೇವಾಲಯವು ವಿಶಾಲ ಆವರಣ ಹೊಂದಿದ್ದರೂ ಆಕರ್ಷಣೆ ಕಳೆಗುಂದಿತ್ತು. ಯುವಭಕ್ತರ ತಂಡ ಸಂಕಲ್ಪ ಮಾಡಿ ಸತತ 6 ತಿಂಗಳ ಪರಿಶ್ರಮದಲ್ಲಿ ಹೊಸರೂಪ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

ಸುಂದರ ಸ್ವಾಗತ ಕಮಾನು ಕರ ಜೋಡಿಸಿ ನಮಿಸಿ ಕರೆದರೇ, ಆವರಣ ಪ್ರವೇಶಿಸುತ್ತಿದಂತೆ ಪಾದರಕ್ಷೆಗಳ ತಾಣ, ಕೈ-ಕಾಲು ಶುದ್ಧಿಗಾಗಿ ನೀರಿನ ವ್ಯವಸ್ಥೆ ಭಕ್ತರ ಮನಸ್ಸನ್ನು ಆಧ್ಯಾತ್ಮದ ಹೊಸಲೋಕಕ್ಕೆ ಕರೆದೊಯ್ಯುತ್ತದೆ. ಜನರ ಬಾಯಲ್ಲಿ ಕಂಬದ ಗಣಪ ಎಂದು ಭಕ್ತಿ-ಭಾವ ದಿಂದ ಕರೆಸಿಕೊಳ್ಳುವ ಪಶ್ಚಿಮಾಭಿಮುಖ ವಿನಾಯಕನ ಕೃಷ್ಣ ಶಿಲಾಮೂರ್ತಿ ಎಲ್ಲರ ಆಕರ್ಷಣೆಯಾಗಿದೆ. ಇತರ ದೇಗುಲಗಳಂತೆ ಮೂರ್ತಿಯನ್ನು ಗರ್ಭಗುಡಿಯಲ್ಲಿ ಬಂಧಿಸದೆ ಪಂಚಭೂತಗಳ ನಡುವೆ ನಿಸರ್ಗದ ಮಡಿಲಲ್ಲಿ ಆರು ಋತುಗಳ ರಶ್ಮಿ ಬಿಸಿಲು, ಬೆಳಕು, ಮಳೆ, ಗಾಳಿ, ಮಂಜು, ಛಳಿಗೆ ಮೈಯೊಡ್ಡಿ ಸರ್ವಜನರ ಕಷ್ಟವನ್ನು ಆಲಿಸಿ ಅವರ ಕೈಯಿಂದ ಎಣ್ಣೆ ಮಜ್ಜನ ಮಾಡಿಸಿಕೊಂಡು, ಪುಷ್ಪಾಲಂಕಾರ, ಪಂಚಾಮೃತ, ಒಣಹಣ್ಣುಗಳು, ವಡೆ, ಕಡುಬು ಇತ್ಯಾದಿ ಭಕ್ಷ್ಯಗಳಿಂದ ಅಲಂಕಾರ ಸೇವೆಗಳನ್ನು ಸಮೃದ್ಧವಾಗಿ ಪಡೆದು ಕೇಳಿದವರಿಗೆ ಕೇಳಿದ ವರಕೊಡುವ, ಸಂಕಷ್ಟಗಳನ್ನು ನಿವಾರಿಸಿ ನೆಮ್ಮದಿ ನೀಡುವ ವಿಘ್ನೇಶ್ವರ ಎಲ್ಲರ ಅಚ್ಚುಮೆಚ್ಚಿನ ಇಷ್ಟದೈವ.

ಆನೇಕಲ್‌ನ ನವೀಕೃತ ಶ್ರೀ ಭ್ರಮರಾಂಬೆ ಸಹಿತ ಶ್ರೀ ಅಮೃತ ಮಲ್ಲಿಕಾರ್ಜುನ ದೇವಾಲಯ ಪ್ರತಿಷ್ಠಾಪನೆಗೆ ಸಜ್ಜಾಗಿದೆ.

ಕೇರಳ ಮಾದರಿಯ ನವೀಕೃತ ದೇವಾಲಯ: ಈಗ ಕೇರಳ ಮಾದರಿಯ ನವೀಕೃತ ದೇವಾಲಯ ಹೊಸ ಮಾದರಿಯಲ್ಲಿ ಸಜ್ಜಾಗಿದೆ. 20X20 ಚೌಕಾಕೃತಿಯಲ್ಲಿ ತಾಮ್ರದ ಹೊದಿಕೆಯ ಮಾಡು, ಶಿಲ್ಪಕಲಾ ಕೆತ್ತನೆ ತುಂಬಿರುವ ತೇಗಮರದ ಕಂಬಗಳು, ದ್ವಾರದಲ್ಲಿ ಜೋಡಿ ಆನೆಗಳಿಂದ ಸ್ವಾಗತ, ಪ್ರದಕ್ಷಿಣೆ ಮಾಡಲು ಪಾದ ಜಾರದಂತೆ ಸುಂದರ ನೆಲಹಾಸು, ಏಕಾಗ್ರತೆ ಸಾಧಿಸಲು ಪಂಚಲೋಹ ಘಂಟೆ, ಸ್ವಯಂ ಅರ್ಚನೆ, ಪೂಜೆಗೆ ಸುಸಜ್ಜಿತ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲಿಂದಾಚೆಗೆ ನಡೆದರೆ ದಂಪತಿ, ವಾಹನಸಹಿತ ನವಗ್ರಹಗಳು ನಮನಕ್ಕೆ ಲಭ್ಯ. ಪಕ್ಕದಲ್ಲೇ ನಾಗರ ಕಲ್ಲುಗಳು, ಅಶ್ವತ್ಥವೃಕ್ಷ ಪ್ರದಕ್ಷಿಣಾ ಫಲ ನೀಡಲು ಆಗಸದೆತ್ತರಕ್ಕೆ ಬೆಳೆದು ನಿಂತಿವೆ. ನೂತನ ಕಲ್ಲಿನ ಕಂಬಗಳ ಮಂಟಪ ರಕ್ಷಾಕವಚದಂತೆ ನಿಂತಿದೆ.

ಇಂದು ಪ್ರತಿಷ್ಠಾಪನಾ ಕಾರ್ಯಕ್ಕೆ ಚಾಲನೆ

ಪ್ರಮುಖ ಸೇವಾಕರ್ತರಾದ ವಿ. ಮೋಹನ್, ಆರ್. ಸತೀಶ್, ಆರ್. ದೇವರಾಜ್, ಕೇಬಲ್ ಶಿವು ಅವರು ನೂರಾರು ಸೇವಾಕರ್ತರ ಸಹಕಾರದಲ್ಲಿ ನವೀಕೃತ ದೇಗುಲ ನಿರ್ಮಾಣಕ್ಕೆ ಟೊಂಕಕಟ್ಟಿ ನಿಂತಿದ್ದು ದಿವ್ಯಾ ದಿನೇಶ್ ಗುರೂಜಿ ಅವರು ಜ. 31 ಶುಕ್ರವಾರರಂದು ಪ್ರತಿಷ್ಠಾಪನಾ ಕಾರ್ಯಕ್ಕೆ ಚಾಲನೆ ನೀಡಲಿದ್ದಾರೆ. ಫೆ.1 ಶನಿವಾರದಂದು ನವಗ್ರಹಗಳ ಪ್ರತಿಷ್ಠೆ, ಫೆ. 2 ಭಾನುವಾರ ಸ್ಥಂಭ ಗಣಪತಿ ಪ್ರತಿಷ್ಠೆ, ನಾಗದೇವತೆಗಳ ಪ್ರತಿಷ್ಠೆ ನಂತರ ದಿವ್ಯ ಸಂಕೀರ್ತನೆ, ನಾದಸ್ವರ, ಪ್ರಸಾದ ವಿನಿಯೋಗ ನಡೆಯಲಿದೆ, ತಾಲೂಕು ದಂಡಾಧಿಕಾರಿ ಶಶಿಧರ ಮಾಡ್ಯಾಳ್, ಪುರಸಭಾಧ್ಯಕ್ಷೆ ಸುಧಾ ನಿರಂಜನ್, ಉಪಾಧ್ಯಕ್ಷೆ ಭುವನಾ ದಿನೇಶ್, ಸದಸ್ಯರು, ಸಹಸ್ರಾರು ಭಗವದ್ ಭಕ್ತರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಧಾನ ಅರ್ಚಕ ಬಿ.ಎನ್. ದೀಕ್ಷಿತ್ ತಿಳಿಸಿದ್ದಾರೆ.

ಅಮೃತ ಮಲ್ಲಿಕಾರ್ಜುನ ಆಕರ್ಷಣೆ

ಮುಂದೆ ಸಾಗಿಬಂದರೆ ಸುಂದರವಾದ ಕಲ್ಲುಬಸವ ಅಮೃತ ಮಲ್ಲಿಕಾರ್ಜುನ ದೇವರ ಇರುವಿಕೆಯನ್ನು ಸೂಚಿಸುತ್ತದೆ. ಲಿಂಗ ಪುಟ್ಟದಾದರೂ ಆಕರ್ಷಣೀಯವಾಗಿದೆ. ಪಕ್ಕದಲ್ಲಿ ನೆಲೆಸಿರುವ ಭ್ರಮರಾಂಬೆಯು ಸುಂದರವಾಗಿದ್ದು ಅಭಯಧಾರಿಣಿಯಾಗಿರುವಳು. ಸಮೀಪದಲ್ಲೇ ಪ್ರಸಾದ ವಿನಿಯೋಗ ಕೇಂದ್ರ, ಕುಡಿಯುವ ನೀರಿನ ಕೌಂಟರ್ ಪ್ರತ್ಯೇಕವಾಗಿದ್ದು ಹರಿಹರನ ಆರಾಧನೆಗೆ ಹೇಳಿ ಮಾಡಿಸಿದ ಸುಸಜ್ಜಿತ ತಾಣವಾಗಿದೆ. ನಂಬಿ - ಧ್ಯಾನಿಸಿ - ಧನ್ಯರಾಗಿ ಘೋಷಣಾ ಫಲಕ ಅರ್ಥಪೂರ್ಣವಾಗಿದೆ.

ವಿಶೇಷ ನ್ಯಾಯಾಲಯದಿಂದ ದಿನಾಂಕ ನಿಗದಿ

ಜಯಾ ಆಸ್ತಿ ತ.ನಾಡು ಸರಕಾರಕ್ಕೆ ಹಸ್ತಾಂತರ

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮಾಜಿ ಸಿಎಂ ಜಯಲಲಿತಾ ಅವರಿಂದ ವಶಪಡಿಸಿಕೊಳ್ಳಲಾಗಿದ್ದ ಬೆಲೆಬಾಳುವ ವಸ್ತುಗಳು ಮತ್ತು ಆಸ್ತಿಗಳನ್ನು ತಮಿಳುನಾಡು ಸರಕಾರಕ್ಕೆ ಹಸ್ತಾಂತರಿಸಲು ಫೆಬ್ರವರಿ 14 ಮತ್ತು 15 ರಂದು ಎರಡು ದಿನ ನಿಗದಿಪಡಿಸಿ ಬೆಂಗಳೂರಿನ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಸಿಬಿಐ/ಇಡಿ ಪ್ರಕರಣಗಳ ವಿಚಾರಣೆ ನಡೆಸಲು ಸ್ಥಾಪನೆಯಾಗಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಮೋಹನ್ ಬುಧವಾರ ಆದೇಶ ಹೊರಡಿಸಿದ್ದು, ಬೆಲೆಬಾಳುವ ವಸ್ತುಗಳನ್ನು ತಮಿಳುನಾಡು ಸರಕಾರಕ್ಕೆ ಹಸ್ತಾಂತರಿಸಲು ದಿನಾಂಕಗಳನ್ನು ನಿಗದಿಪಡಿಸಿದ್ದಾರೆ. ಜಪ್ತಿ ಮಾಡಲಾದ ಬೆಲೆಬಾಳುವ ವಸ್ತುಗಳು ಮತ್ತು ಆಸ್ತಿ ಮೇಲಿನ ಹಕ್ಕುಗಳನ್ನು ಕೋರಿ ಜಯಲಲಿತಾ ಕಾನೂನು ವಾರಸುದಾರ ಜೆ ದೀಪಕ್ ಮತ್ತು ಜೆ.ದೀಪಾ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ವಿಶೇಷ ಕೋರ್ಟ್ ಆದೇಶಕ್ಕೆ ಅಸ್ತು: ಬೆಲೆಬಾಳುವ ವಸ್ತುಗಳು ಮತ್ತು ಆಸ್ತಿಯನ್ನು ತಮಿಳುನಾಡಿಗೆ ಹಸ್ತಾಂತರ ಮಾಡುವ ವಿಶೇಷ ನ್ಯಾಯಾಲಯದ ಆದೇಶವನ್ನು 2023 ರ ಜುಲೈ 12 ರಂದು ಹೈಕೋರ್ಟ್ ಎತ್ತಿಹಿಡಿದಿತ್ತು. ಆದರೆ, ಅದರ ವಿರುದ್ಧ ಮತ್ತೆ ಮೇಲ್ಮನವಿ ಸಲ್ಲಿಕೆಯಾಗಿತ್ತು. ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಯಲಲಿತಾ ಅವರಿಂದ ವಶಪಡಿಸಿಕೊಳ್ಳಲಾಗಿದ್ದ 7 ಕೆ.ಜಿ. ಚಿನ್ನ, ವಜ್ರಾಭರಣ, 700 ಕೆ.ಜಿ. ಬೆಳ್ಳಿ, 740 ದುಬಾರಿ ಬೆಲೆಯ ಚಪ್ಪಲಿ ಸೇರಿದಂತೆ ಜಪ್ತಿ ಮಾಡಲಾಗಿದ್ದ ಅವರ ವಸ್ತುಗಳನ್ನು ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರ ಮಾಡುವಂತೆ ವಿಶೇಷ ನ್ಯಾಯಾಲಯ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ.

ವಾರಸುದಾರರ ಮೇಲ್ಮನವಿ ತಿರಸ್ಕೃತ: 2024 ರ ಫೆಬ್ರವರಿ 19ರಂದು, ವಿಶೇಷ ನ್ಯಾಯಾಲಯವು ಬೆಲೆಬಾಳುವ ವಸ್ತುಗಳು, ಚಿನ್ನ ಮತ್ತು ವಜ್ರದ ಆಭರಣಗಳನ್ನು ಹಿಂದಿರುಗಿಸಲು ದಿನಾಂಕ ನಿಗದಿಪಡಿಸಿತ್ತು. ಮಾರ್ಚ್ 6 ಮತ್ತು 7 ರಂದು ಅಧಿಕೃತ ಅಧಿಕಾರಿಗಳನ್ನು ನಿಯೋಜಿಸುವಂತೆ ತಮಿಳುನಾಡು ಸರಕಾರಕ್ಕೆ ನಿರ್ದೇಶಿಸಿತ್ತು. ಆದರೆ, ಅದರ ವಿರುದ್ಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಕೆಯಾದ ಕಾರಣ ಹಸ್ತಾಂತರ ಮಾಡಲಾಗಿರಲಿಲ್ಲ. ಜಯಲಲಿತಾ ಅವರ ಕಾನೂನು ವಾರಸುದಾರರಾದ ಜೆ. ದೀಪಕ್ ಮತ್ತು ಜೆ.ದೀಪಾ ಹೈಕೋರ್ಟ್ ಮೊರೆಹೋಗಿದ್ದರು. ಆದರೆ, ಅವರ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದ್ದರಿಂದ ವಿಶೇಷ ನ್ಯಾಯಾಲಯ ಮತ್ತೆ ಹಸ್ತಾಂತರಕ್ಕೆ ದಿನಾಂಕ ನಿಗದಿ ಮಾಡಿದೆ.

ಜಪ್ತಿ ಮಾಡಲಾಗಿದ್ದ ವಸ್ತುಗಳು

- 7040 ಗ್ರಾಂ. ತೂಕದ 468 ಬಗೆಯ ಚಿನ್ನ, ವಜ್ರ ಆಭರಣ. 700 ಕೆ.ಜಿ - ಬೆಳ್ಳಿ ಆಭರಣ.
- 740 - ದುಬಾರಿ ಬೆಲೆಯ ಚಪ್ಪಲಿಗಳು, 11,344 - ರೇಷ್ಮೆ ಸೀರೆ, 250 - ಶಾಲುಗಳು
- 12 - ರೆಫ್ರಿಜರೇಟರ್, 10 - ಟಿ.ವಿ. ಸೆಟ್

ಕೇತಗಾನಹಳ್ಳಿ ಸರಕಾರಿ ಭೂಮಿ ಕಬಳಿಕೆ ಪ್ರಕರಣ: ಕೋರ್ಟ್ ಗರಂ

ಎಚ್‌ಡಿಕೆ ವಿರುದ್ಧದ ಭೂಹಗರಣ: ಹೈ ಎಚ್ಚರಿಕೆ

ಬೆಂಗಳೂರು: ಪ್ರತಿವಾದಿಗಳು ಪ್ರಭಾವಿಗಳು (ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಡಿ.ಸಿ. ತಮ್ಮಣ್ಣ ಮುಂತಾದವರು) ಎಂದು ನೀವು ಐದು ವರ್ಷ ಏನೂ ಮಾಡಿಲ್ಲ ತಾನೇ..? ನಿಮಗೆ ಇನ್ನೆರಡು ವಾರ ಸಮಯ ಕೊಡುತ್ತೇನೆ. ನೀವು ಅಸಮರ್ಥರು ಎಂದಾದರೆ ನಿಮ್ಮನ್ನು ಎಲ್ಲಿಗೆ ಕಳಿಸಬೇಕೋ ಅಲ್ಲಿಗೆ ಕಳುಹಿಸುತ್ತೇನೆ. ಹದಿನೈದು ದಿನ ಜೈಲಿನಲ್ಲಿ ಇದ್ದು ಬಂದರೆ ಸರಿ ಹೋಗ್ತೀರಿ ಎಂದು ಹೈಕೋರ್ಟ್ ಮೌಖಿಕವಾಗಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದೆ.

ರಾಮನಗರ ಜಿಲ್ಲೆಯ ಕೇತಗಾನಹಳ್ಳಿಯಲ್ಲಿ ಸರಕಾರಿ ಭೂಮಿ ಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಸ್ತೃತ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಲೋಕಾಯುಕ್ತರು ಆದೇಶ ಮಾಡಿರುವುದನ್ನು ಜಾರಿಮಾಡುವಂತೆ ಹೈಕೋರ್ಟ್ ಆದೇಶಿಸಿತ್ತು. ಇದನ್ನು ಜಾರಿಮಾಡಲು ವಿಫಲವಾಗಿರುವ ರಾಜ್ಯ ಸರಕಾರದ ನಡೆ ಪ್ರಶ್ನಿಸಿ ಎಸ್.ಆರ್.ಹಿರೇಮಠ ನೇತೃತ್ವದ ಸಮಾಜ ಪರಿವರ್ತನಾ ಸಮುದಾಯ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಕೆ ಸೋಮಶೇಖರ್ ಮತ್ತು ಟಿ.ವೆಂಕಟೇಶ್ ನಾಯ್ಕ್ ಅವರ ನೇತೃತ್ವದ ವಿಭಾಗೀಯ ಪೀಠವು ನಡೆಸಿತು.

ಹಿರಿಯ ಅಧಿಕಾರಿ ಹಾಜರು: ಜ.7ರಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಖುದ್ದು ನ್ಯಾಯಾಲಯದ ಮುಂದ ಬರಬೇಕು ಎಂದು ಆದೇಶಿಸಿದ್ದ ಹಿನ್ನೆಲೆಯಲ್ಲಿ ರಾಜೇಂದ್ರ ಕುಮಾರ್ ಕಠಾರಿಯಾ ಅವರು ಪೀಠದ ಮುಂದೆ ಹಾಜರಾಗಿ, ಸರಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಪೀಠಕ್ಕೆ ವಿವರಿಸಲು ಮುಂದಾದರು. ಆಗ ನ್ಯಾಯಮೂರ್ತಿ ಸೋಮಶೇಖರ್ ಅವರು ಕೆ ವಾಸುದೇವನ್ ವರ್ಸಸ್ ಟಿ.ಆರ್. ಧನಂಜಯ ಅವರ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಾಂಗ ನಿಂದನೆ ಮೊಕದ್ದಮೆಗಳಲ್ಲಿ ಅದೂ ಸಾರ್ವಜನಿಕ ಕಾಳಜಿಯುಳ್ಳ ಪ್ರಕರಣಗಳಲ್ಲಿ ಆಡಳಿತಾಂಗಕ್ಕೆ ಕಿಂಚಿತ್ತೂ ಕರುಣೆ ತೋರಬಾರದು ಎಂದಿದೆ. ಇದನ್ನೇ ನಾನೂ ಅನುಸರಿಸಬೇಕಾಗುತ್ತದೆ ಎಂದು ಗುಡುಗಿದರು.

ನ್ಯಾಯಾಂಗ ನಿಂದನೆ ದೋಷಾರೋಪ: ನಿಮ್ಮ ವಿರುದ್ಧ ಈಗಲೇ ನ್ಯಾಯಾಂಗ ನಿಂದನೆಯ ದೋಷಾರೋಪ ನಿಗದಿಗೊಳಿಸುವ ಪ್ರಕ್ರಿಯೆ ಆರಂಭಿಸುತ್ತೇನೆ. ನೀವು ನೆಪ ಹೇಳಿ ತಪ್ಪಿಸಿಕೊಳ್ಳಲು ಅವಕಾಶವೇ ಇಲ್ಲ. ವ್ಯವಸ್ಥೆ ನೋಡಿ ಜನ ನಗ್ತಾ ಇದ್ದಾರೆ ಗೊತ್ತಾ? ನೀವೆಲ್ಲಾ ನ್ಯಾಯಾಲಯದ ಆದೇಶಗಳನ್ನು ಪಾಲನೆ ಮಾಡುವ ತನಕ ನಿಮ್ಮ ಸಂಬಳ ತಡೆಹಿಡಿದರೆ ಗೊತ್ತಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ವಿಚಾರಣೆಯ ಒಂದು ಹಂತದಲ್ಲಿ ನ್ಯಾಯಾಲಯಕ್ಕೆ ಉತ್ತರಿಸಲು ಮುಂದಾದ ಕಠಾರಿಯಾ ಅವರು ವ್ಯವಸ್ಥೆ ತುಂಬಾ ಕೆಟ್ಟದಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ ಸರ್. ಆದರೂ, ಸರಕಾರ ತನ್ನೆಲ್ಲಾ ಪ್ರಯತ್ನ ಮಾಡುತ್ತಿದೆ. ನಾವು 14 ಎಕರೆಗೂ ಹೆಚ್ಚು ಅಕ್ರಮಿತ ಸರಕಾರಿ ಭೂಮಿಯನ್ನು ವಶಕ್ಕೆ ಪಡೆದಿದ್ದೇವೆ. ಸಮಗ್ರ ಮತ್ತು ನಿಷ್ಪಕ್ಷಪಾತ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಎಸ್‌ಐಟಿ ರಚನೆ ಮಾಡಿದ್ದೇವೆ. ಭ್ರಷ್ಟಾಚಾರ ನಿರ್ಮೂಲನೆಗೆ ಶ್ರಮಿಸುತ್ತಿದ್ದೇವೆ ಎಂದು ಸಮಜಾಯಿಷಿ ನೀಡಿದರು. ಇದಕ್ಕೆ ಧ್ವನಿಗೂಡಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರು, ಕಠಾರಿಯಾ ಅವರು ಕಂದಾಯ ಇಲಾಖೆಯ ಸುಧಾರಣೆಗೆ ಇ-ಖಾತಾ ವ್ಯವಸ್ಥೆ ರೂಪಿಸಿದ್ದಾರೆ ಎಂದರು.

ಎಲ್ಲ ಪ್ರತಿವಾದಿಗಳನ್ನೂ ಬೆಂಗಾವಲಿನಲ್ಲಿ ಕರೆಸುತ್ತೇನೆ

ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ರೋಣ ಅವರು ಪ್ರಕರಣಕ್ಕೆ ಸಂಬಂಧ ಸರಕಾರ ಕೈಗೊಂಡಿರುವ ಕ್ರಮ ಮತ್ತು ಈತನಕ ಹೈಕೋರ್ಟ್‌ಗೆ ಸಲ್ಲಿಸಿರುವ ಅನುಪಾಲನಾ ಅಫಿಡವಿಟ್‌ಗಳ ಕುರಿತು ವಿವರಿಸಲು ಮುಂದಾದರು. ಹೈಕೋರ್ಟ್ ಆದೇಶದ ಅನುಪಾಲನೆಗೆ ಮೂರು ತಿಂಗಳಾದರೂ ಕಾಲಾವಕಾಶ ನೀಡಬೇಕು ಎಂದು ಕೋರಿದರು. ಆದರೆ, ನ್ಯಾಯಮೂರ್ತಿ ಸೋಮಶೇಖರ್ ಅವರು ರೋಣ ಅವರ ಮನವಿಯನ್ನು ಸಾರಾಸಗಟಾಗಿ ತಳ್ಳಿ ಹಾಕಿದರು. 2 ವಾರಗಳ ಕಾಲಾವಕಾಶ ನೀಡುತ್ತೇನೆ. ಅಷ್ಟರೊಳಗೆ ಆದೇಶ ಪಾಲಿಸಿದರೆ ಸರಿ. ಇಲ್ಲವೆಂದರೆ, ಎಲ್ಲ ಪ್ರತಿವಾದಿಗಳನ್ನೂ ಬೆಂಗಾವಲಿನಲ್ಲಿ ಕರೆಯಿಸಿಬಿಡುತ್ತೇನೆ. ಅಧಿಕಾರಿಗಳನ್ನು ಎಲ್ಲಿಗೆ ಕಳುಹಿಸಬೇಕೊ ಅಲ್ಲಿಗೆ ಕಳುಹಿಸುತ್ತೇನೆ ಎಂದರು. ಯಾವುದಾದರೂ ವಿಷಯಕ್ಕೆ ಎಸ್‌ಐಟಿ ರಚಿಸುವುದು ಸರಕಾರಕ್ಕೆ ರೂಢಿಯಾಗಿದೆ ಎಂದು ಚಾಟಿ ಬೀಸಿದರು.

INDEGENE LIMITED
(formerly Indegene Private Limited)
CIN No. U73100KA1998PLC102040
Regd Office: Aspen Block G4, 3rd Floor, Manyata Embassy Business Park, Outer Ring Road, Nagawara, Bengaluru - 560 045

Extract of Unaudited Consolidated Financial Results for the quarter and nine months ended 31 December 2024

(All amounts in ₹ millions, except per share data)

Sl. No.	Particulars	Quarter ended 31 December 2024 Unaudited	Nine months ended 31 December 2024 Unaudited	Quarter ended 31 December 2023 Unaudited
1	Revenue from operations	7,204	20,837	6,734
2	Net profit for the period (before tax and exceptional items)	1,463	3,900	1,323
3	Net profit for the period before tax (after exceptional items)	1,463	3,900	1,323
4	Net profit for the period after tax (after exceptional items)	1,097	2,891	988
5	Total comprehensive income for the period	1,229	3,121	984
6	Equity share capital (Face value of ₹ 2 each)	478	478	444
7	Earnings per share (EPS) for the period			
	(face value of ₹ 2 each) (Not annualised for interim periods)			
	(a) Basic EPS	4.59	12.23	4.45
	(b) Diluted EPS	4.55	12.12	4.42

Notes:

1. The above results have been reviewed by the Audit Committee and approved by the Board of Directors at its meeting held on 30 January 2025. The statutory auditors have performed a limited review of the Consolidated Financial Results for the quarter and nine months ended 31 December 2024 and have issued an unmodified review report on the same.
2. The above Consolidated Financial Results of the Group have been prepared in accordance with Indian Accounting Standards ("Ind AS") 34 - Interim Financial Reporting, recognition and measurement principles of Indian Accounting Standards ("Ind AS") prescribed under Section 133 of the Companies Act, 2013, as amended, read with the relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015.
3. During the nine months ended 31 December 2024, the Company has completed Initial Public Offer (IPO) of 40,766,550 equity shares of face value of ₹2 each at an issue price of ₹452 per share, comprising fresh issue of 16,833,818 shares aggregating to ₹7,600 and offer for sale of 23,932,732 shares by selling shareholders aggregating to ₹10,818. The Equity shares of the Company were listed on National Stock Exchange of India Limited (NSE) and BSE Limited (BSE) on 13 May 2024. The Company was not mandatorily required to prepare and publish results for the quarter and nine months ended 31 December 2023 in accordance with the regulations.
4. Standalone Information:

(All amounts in ₹ millions, except per share data)

Sl. No.	Particulars	Quarter ended 31 December 2024 Unaudited	Nine months ended 31 December 2024 Unaudited	Quarter ended 31 December 2023 Unaudited
1	Revenue from operations	2,867	8,269	2,600
2	Profit before tax	661	1,720	408
3	Net profit for the period	499	1,270	296
4	Other comprehensive income / (losses)	8	11	(6)
5	Total comprehensive income for the period	507	1,281	290

5. The above is an extract of the detailed format of Quarterly Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The detailed format of consolidated and standalone results of the Company are available on the National Stock Exchange of India Limited (URL: www.nseindia.com), the BSE Limited website (URL: www.bseindia.com) and on the Company's website (URL: www.indegene.com/investor-relations).

For and on behalf of the Board of Directors
INDEGENE LIMITED
(formerly INDEGENE PRIVATE LIMITED)

Bengaluru
30 January 2025

Manish Gupta
Chief Executive Officer and Executive Director

Adfactors 571/25

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಆತ್ಮಹತ್ಯೆ

ಅಪರಾಧ ಸುದ್ದಿಗಳು

ಬೆಂಗಳೂರು: ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಹನುಮಂತನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಶ್ರೀನಗರದ ಭೂಮಿಕಾ (15) ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿನಿ. ಭೂಮಿಕಾ ಅವರ ಪೋಷಕರಿಗೆ ಇಬ್ಬರು ಮಕ್ಕಳು. ಒಂದು ಹೆಣ್ಣು ಹಾಗೂ ಒಂದು ಗಂಡು. ಭೂಮಿಕಾ ಉತ್ತಮ ವ್ಯಾಸಂಗ ಮಾಡುತ್ತಿದ್ದಳು. ಪ್ರಿಪರೇಟರಿ ಪರೀಕ್ಷೆ ನಡೆಯುತ್ತಿದ್ದು, ಬುಧವಾರ ರಾತ್ರಿ ಊಟ ಮಾಡಿ ಓದಿಕೊಳ್ಳುವುದಾಗಿ ಹೇಳಿ ಕೊಠಡಿಗೆ ಹೋಗಿ ಬಾಗಿಲು ಹಾಕಿಕೊಂಡಿದ್ದಾಳೆ. ಆದರೆ ಬೆಳಗಾಗುವಷ್ಟರಲ್ಲಿ ಸೀರೆಯಿಂದ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಬೆಳಗಿನಜಾವ ಪೋಷಕರು ಎದ್ದು ನೋಡಿದಾಗ ರೂಂ ಬಾಗಿಲು ಹಾಕಿಯೇ ಇತ್ತು. ಬಾಗಿಲು ತಟ್ಟಿದ್ದಾರೆ. ಒಳಗಿನಿಂದ ಪ್ರತಿಕ್ರಿಯೆ ಬಾರದಿದ್ದಾಗ ಗಾಬರಿಯಾಗಿ ಕಿಟಕಿ ಮೂಲಕ ನೋಡಿದಾಗ ಭೂಮಿಕಾ ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡುಬಂದಿದೆ. ತಕ್ಷಣ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಧಾವಿಸಿದ ಹನುಮಂತನಗರ ಠಾಣೆ ಪೊಲೀಸರು ಬಾಗಿಲು ಒಡೆದು ಪರಿಶೀಲಿಸಿದ್ದಾರೆ. ಭೂಮಿಕಾ ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ.

ಸಾಲಗಾರರ ಕಿರುಕುಳಕ್ಕೆ ಉದ್ಯಮಿ ಸಾವು

ಬೆಂಗಳೂರು: ಸಾಲಗಾರರ ಕಿರುಕುಳ ತಾಳಲಾರದೆ ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ರಾಜಾಜಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಅರುಣ್ (38) ಆತ್ಮಹತ್ಯೆ ಮಾಡಿಕೊಂಡಿರುವ ವ್ಯಕ್ತಿ. ಅರುಣ್ ತಂದೆ ದೇವರಾಜ್ ದೂರಿನ ಹಿನ್ನೆಲೆಯಲ್ಲಿ ಸಾಲ ನೀಡಿದ್ದ ದಿನೇಶ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಪ್ರಕಾಶ್ ನಗರದಲ್ಲಿ ಕಳೆದ 20 ವರ್ಷಗಳಿಂದ ಅರುಣ್ ವಾಸಿಸುತ್ತಿದ್ದರು. ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಇತ್ತೀಚೆಗೆ ವ್ಯವಹಾರಕ್ಕಾಗಿ ಪೂಜಾ ಎಂಟರ್ ಪ್ರೈ. ಹೆಸರಿನಲ್ಲಿ ಫೈನಾನ್ಸ್ ನಡೆಸುತ್ತಿದ್ದ ದಿನೇಶ್ ಎಂಬುವರನ್ನು 15 ದಿನಗಳ ಹಿಂದೆ ಭೇಟಿಮಾಡಿದ್ದ ಅರುಣ್, 6 ಲಕ್ಷ ರೂ. ಸಾಲ ಪಡೆದಿದ್ದರು. ಇದಕ್ಕೆ ಶ್ಯೂರಿಟಿಯಾಗಿ ತಮ್ಮ ಕಾರನ್ನು ಒಪ್ಪಿಸಿದ್ದರು.

ಸಾಲಗಾರನ ಬೆದರಿಕೆ: ಆರು ಲಕ್ಷ ಹೊಂದಿಸಲು ಸಾಧ್ಯವಾಗದೆ 1.50 ಲಕ್ಷ ರು.ಗಳನ್ನು ಅರುಣ್ ನೀಡಲು ಮುಂದಾದಾಗ ಬೆದರಿಕೆ ಹಾಕಿದ್ದಾರೆ ಎಂದು ದಿನೇಶ್ ವಿರುದ್ಧ ಮೃತನ ತಂದೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ನಿಗದಿತ ಅವಧಿಯೊಳಗೆ ಹಣ ನೀಡಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಅರುಣ್‌ನನ್ನು ತಮ್ಮ ಅಂಗಡಿಗೆ ಕರೆಸಿ ದಿನೇಶ್ ಬೆದರಿಕೆ ಹಾಕಿ, ಹಲ್ಲೆ ಮಾಡಿದ್ದರು.

ವ್ಹೀಲಿಂಗ್: ಏಕೆ ಕ್ರಮ ಕೈಗೊಂಡಿಲ್ಲ

ಬೆಂಗಳೂರು: ಬೆಂಗಳೂರು ನಗರದಲ್ಲಿ ವ್ಹೀಲಿಂಗ್ ಮಾಡುವವರ ಹಾವಳಿ ಹೆಚ್ಚಾಗಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ನಿರ್ಲಕ್ಷ್ಯವೇಕೆ ಎಂದು ಪೊಲೀಸರ ವಿರುದ್ಧ ಹೈಕೋರ್ಟ್ ಗರಂ ಅಗಿದೆ. ಬೆಂಗಳೂರು ನಗರದಲ್ಲಿ ವ್ಹೀಲಿಂಗ್ ಸರ್ವೆ ಸಾಮಾನ್ಯವಾಗಿದೆ. ನಗರದ ಕೆಲವು ಪ್ರದೇಶಗಳಲ್ಲಿ, ಇಪ್ಪತ್ತರ ಹರೆಯದ ಯುವಕರು ಸ್ಕೂಟರ್ ಅಥವಾ ಮೋಟಾರ್ ಬೈಕ್‌ನಲ್ಲಿ ವ್ಹೀಲಿಂಗ್ ಮಾಡುವುದನ್ನು ನಾವು ನೋಡುತ್ತೇವೆ. ಪೊಲೀಸರು ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಈ ಬಗ್ಗೆ ಸರಕಾರ ಏನು ಮಾಡುತ್ತಿದೆ ಎಂದು ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿ ಎಂ.ಐ. ಅರುಣ್ ಪ್ರಶ್ನಿಸಿದರು. ದ್ವಿಚಕ್ರ ವಾಹನದಲ್ಲಿ ಕುಳಿತುಕೊಳ್ಳುವ ಮಕ್ಕಳಿಗೆ ಹೆಲ್ಮೆಟ್ ಕಡ್ಡಾಯ ಕುರಿತಂತೆ ವಿವರವಾದ ಆಕ್ಷೇಪಣೆ ಸಲ್ಲಿಸುವಂತೆ ಸರಕಾರಕ್ಕೆ ಹೈಕೋರ್ಟ್ ಸೂಚಿಸಿದೆ. ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುವ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಹೆಲ್ಮೆಟ್ ಕಡ್ಡಾಯ ಮತ್ತು ಸವಾರನಿಗೆ ಬಿಗಿಯಾಗಿ ಅಂಟಿಕೊಂಡು ಕೂರುವ ಸುರಕ್ಷತಾ ಸಾಧನೆ ಬಳಸುವ ಕುರಿತು ಮೋಟಾರು ವಾಹನ ತಿದ್ದುಪಡಿ ಕಾಯ್ದೆಯಲ್ಲಿ ಉಲ್ಲೇಖಿಸಲಾಗಿತ್ತು.

ಅತಿಥಿ ಶಿಕ್ಷಕರ ಗೌರವಧನ ಹೆಚ್ಚಳ

ಬೆಂಗಳೂರು: ರಾಜ್ಯ ಸರಕಾರ ಅತಿಥಿ ಶಿಕ್ಷಕರು, ಉಪನ್ಯಾಸಕರ ಗೌರವಧನವನ್ನು ಹೆಚ್ಚಳ ಮಾಡಿ ಸರಕಾರ ಆದೇಶಿಸಿದೆ. ಈ ಕುರಿತಂತೆ ರಾಜ್ಯದ ಆರ್ಥಿಕ ಇಲಾಖೆಯ ಸರಕಾರದ ಅಧೀನ ಕಾರ್ಯದರ್ಶಿ ಮಾಹಿತಿ ನೀಡಿದ್ದು, ಆಡಳಿತ ಇಲಾಖಯ ಪ್ರಸ್ತಾವನೆಯನ್ನು ಪರಿಶೀಲಿಸಿದೆ.

ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರು ಮತ್ತು ಅತಿಥಿ ಉಪನ್ಯಾಸಕರ ಗೌರವಧವನ್ನು ಹೆಚ್ಚಿಸಲು ಆರ್ಥಿಕ ಇಲಾಖೆ ಸಮ್ಮತಿಸಿದೆ ಎಂದು ತಿಳಿಸಿದ್ದಾರೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿಶಾಲೆಯ ಅತಿಥಿ ಶಿಕ್ಷಕರ ಪ್ರಸ್ತುತ ಗೌರವಧನ 10,500 ರು. ಜೊತೆಗೆ ಮಾಸ್ಟರ್ ಆನ್ ಡ್ಯೂಟಿ ಭತ್ಯೆ 3,150 ಹಾಗೂ ಪ್ರಯಾಣಭತ್ಯೆ 3000 ರು. ಸೇರಿದಂತೆ ಒಟ್ಟು 16,650 ಕ್ಕೆ ಏರಿಕೆ ಮಾಡಲಾಗಿದೆ.

ಅತಿಥಿ ಉಪನ್ಯಾಸಕರಿಗೆ ಪ್ರಸ್ತುತ ಪಾವತಿಸುತ್ತಿರುವ ಗೌರವಧನ 12,000 ರು., ಮಾಸ್ಟರ್ ಆನ್‌ಡ್ಯೂಟಿ ಭತ್ಯೆ 3150 ರು. ಹಾಗೂ ಪ್ರಯಾಣ ಭತ್ಯೆ 3000 ರು. ಸೇರಿದಂತೆ ಒಟ್ಟು ಗೌರವ ಧನವನ್ನು 18,150 ರು.ಗೆ ಹೆಚ್ಚಳ ಮಾಡಲಾಗಿದೆ.

बैंक ऑफ़ बड़ौदा
Bank of Baroda

ಬ್ಯಾಂಕ್ ಆಫ್ ಬರೋಡಾ
ಮದ್ದೂರು ಶಾಖೆ, ಮಹಾವೀರ್ ಥಿಯೇಟರ್ ಎದುರು, ಹಳೆ ಎಂಸಿ ರಸ್ತೆ, ಮದ್ದೂರು, ಮಂಡ್ಯ ಜಿಲ್ಲೆ-571428.

ಮಾರಾಟ ಸೂಚನೆ (ಅಡವಿಟ್ಟ ಚಿನ್ನದ ವಸ್ತುಗಳ ಹರಾಜು)

ಈ ಕೆಳಕಂಡ ಸಾಲಗಾರರು ನಮ್ಮಲ್ಲಿ ಚಿನ್ನದ ಆಭರಣ ಒತ್ತೆಯಿಟ್ಟು ಸಾಲ ಪಡೆದಿರುತ್ತಾರೆ. ಈ ಬಾಬ್ತು ಪಾವತಿ ಮಾಡಬೇಕಾದ ಹಣದ ಬಗ್ಗೆ ಸಾಲಗಾರರಿಗೆ ನೋಟೀಸ್‌ಗಳನ್ನು ನೀಡಿದ್ದು. ಸಕಾಲದಲ್ಲಿ ಸಾಲದ ಮೊತ್ತ ಮತ್ತು ಬಡ್ಡಿಯನ್ನು ಪಾವತಿ ಮಾಡಿರುವುದಿಲ್ಲ. **ದಿನಾಂಕ: 17.02.2025** ರೊಳಗೆ ಆಭರಣಗಳನ್ನು ಬಿಡಿಸಿಕೊಳ್ಳದಿದ್ದಲ್ಲಿ ಬ್ಯಾಂಕಿನ ಅವರಣದಲ್ಲಿ ದಿನಾಂಕ **18.02.2025** ರಂದು ಮಧ್ಯಾಹ್ನ **3.00** ಗಂಟೆಗೆ **ಬ್ಯಾಂಕ್ ಆಫ್ ಬರೋಡ, ಮದ್ದೂರು ಶಾಖೆಯ** ಅವರಣದಲ್ಲಿ ಬಹಿರಂಗ/ಆಫ್‌ಲೈನ್ ಹರಾಜು ಮಾಡಲಾಗುವುದು. ಬ್ಯಾಂಕಿನ ಸಂಪೂರ್ಣ ಗಮನದ ಮೇರೆಗೆ ಯಾವುದೇ ಸೂಚನೆಯಿಲ್ಲದೆ ಯಾವುದೇ ಅನುಕೂಲಕರ ದಿನಾಂಕದಂದು.

ಕ್ರ. ಸಂ.	ಸಾಲಗಾರರ ಹೆಸರು	ಖಾತೆ ಸಂಖ್ಯೆ	ಒಟ್ಟು ತೂಕ	ಒಟ್ಟು ನಿವ್ವಳ ತೂಕ	ಬಾಕಿ ಉಳಿದಿರುವ ಮೊತ್ತ
1	ಶಿವಲಿಂಗಯ್ಯ ಸಿ	79080600013630	36	30	1,43,653.05
2	ಎಂ ಎನ್ ಕೈಲಾಶ್	79080600007258	36.2	25	1,08,194.73
3	ಸುಬ್ರಹ್ಮಣ್ಯಂ ಕೆ	79080600012215	26	20	60,035.42
4	ಮುಮ್ತಾಜ್ ಪರ್ವೀನ್	79080600006472	19.2	13	42,533.87

ಸ್ಥಳ : ಮದ್ದೂರು
ದಿನಾಂಕ : 30.01.2025

ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

PUBLIC NOTICE

Public are informed that, my client Sri. S. Chandra Prakash has lost the Original document of 1). Gift Deed dated 09/06/1972 executed by Hanumareddy in favour of Smt. H.Vanamala @ H. Vanamalamma vide regd. as doc. No. 7220/1971-72.
If any person/s firm company, institution or organization has any claim are holding the afore mentioned document, they may contact the undersigned in writing within 7 days from the date of this notice failing which it will be presumed that there are no claims.

SCHEDULE

All that piece and parcel of the Property bearing Sy. No. 19, situated at Chinnappanahalli Village, K. R. Puram Hobli, Bangalore East Taluk, now comes under the Jurisdiction of BBMP Limits Bangalore, Measuring East to West 40 feet and North South 120 feet in all measuring 4800 Sq. ft. and bounded on :
EAST : Bande Road,
WEST: Road,
NORTH: Property belongs to Sarasamma,
SOUTH: Road.

KSR Associates
ADVOCATES & LEGAL CONSULTANTS
OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003
Email : raviksadvocate@gmail.com
Mobile: 99450 00789

PUBLIC NOTICE

Public are informed that, my client Meenakshi K.R. is the absolute owner of Site No. 4, BBMP B Katha Sl. No. 1003, Proeprty No. 24/5-4, measuring East to West 40 feet North to South 25 feet in all measuring about 1000 sq. ft., situated at Basapura Village, Begur Hobli, Bangalore South Taluk, and bounded as follows:
East by : Private Proeprty,
West by : 30 feet Road,
North by : Site No. 05,
South by : Site No. 03.
and informing general public that Meenakshi K.R. intent to mortgage the said property in favour of M/s PIRAMAL CAPITAL AND HOUSING FINANCE LIMITED and anyone having any claim over the said property or any other claims by any person/s Nationalized banks, MNC Banks Private Banks, Co-Operative Banks any Financial institutions Governed by the RBI Rules may lodge their objections in writing within 07 days from this day to the under mentioned Advocate.

KSR Associates
ADVOCATES & LEGAL CONSULTANTS
OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com
Mobile: 99450 00789

ಮಕ್ಕಳಿಗೆ ಹೆಲ್ಮೆಟ್ ಕಡ್ಡಾಯ: ಸೂಚನೆ

ಬೆಂಗಳೂರು: ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುವ ಮಕ್ಕಳಿಗೂ ಹೆಲ್ಮೆಟ್ ಕಡ್ಡಾಯಗೊಳಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ವಿವರವಾದ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರಕಾರಕ್ಕೆ ಹೈಕೋರ್ಟ್ ಸೂಚನೆ ನೀಡಿದೆ. ಶಿವಮೊಗ್ಗದ ಕಟೀಲು ಅಶೋಕ್ ಪೈ ಸ್ಮಾರಕ ಕಾಲೇಜಿನ ಸಹ ಪ್ರಾಧ್ಯಾಪಕಿ ಮತ್ತು ಮನೋವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ.ಅರ್ಚನಾ ಭಟ್ ಸಲ್ಲಿಸಿದ ಅರ್ಜಿ ಮೇರೆಗೆ ಈ ಸೂಚನೆ ನೀಡಲಾಗಿದೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಟಾಟಾ ಸ್ಟೀಲ್ ಚೆಸ್: ಅಗ್ರಸ್ಥಾನದಲ್ಲಿ ಗುಕೇಶ್

ಡಚ್ (ನೆದರ್ಲೆಂಡ್ಸ್‌ನ) ಗ್ರ್ಯಾಂಡ್‌ಮಾಸ್ಟರ್ ಮ್ಯಾಕ್ಸ್ ವಾರ್ಮರ್‌ಡ್ಯಾಮ್ ಅವರನ್ನು ಸೋಲಿಸಿದ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಚೆಸ್ ಟೂರ್ನಿಯ ಹತ್ತನೇ ಸುತ್ತಿನ ನಂತರ ಅಗ್ರಸ್ಥಾನದಲ್ಲೇ ಮುಂದುವರಿದಿದ್ದಾರೆ.

ಸೊಂಪಾದ ಪುಟಗಳು

ಅಮೆರಿಕನ್ನರ ಪುಸ್ತಕ ಪ್ರೀತಿ ನಮ್ಮಲ್ಲೇಕಿಲ್ಲ?
ಶಿಶಿರಕಾಲ ಶಿಶಿರ್ ಹೆಗಡೆ 6

ಇರುವೆಗಳನ್ನು ತಿನ್ನುವ ಹಾರುವ ಓತಿ!
ಶಶಾಂಕಣ ಶಶಿಧರ ಹಾಲಾಡಿ 7

ದಾರಿದೀಪೋಕ್ತಿ



ಕಳೆದುಹೋದ ಸಂಗತಿಗಳ ಬಗ್ಗೆ ಸದಾ ಚಿಂತಿಸುವುದರಿಂದ ಮತ್ತು ನಿಮ್ಮನ್ನು ಬೇರೆಯವರಿಗೆ ಹೋಲಿಸಿಕೊಳ್ಳುವುದರಿಂದ ನೀವು ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ನಿಮ್ಮ ಮಾನಸಿಕ ನೆಮ್ಮದಿ ಎಲ್ಲಿದೆ ಎಂಬುದನ್ನು ಅರಿಯದಿದ್ದರೆ ಅದನ್ನು ಅನುಭವಿಸಲು ಆಗದೇ ಸದಾ ಬೇಸರದಲ್ಲೇ ಇರಬೇಕಾಗುತ್ತದೆ.

ವಕ್ರತುಂಡೋಕ್ತಿ

ವಾದದಲ್ಲಿ ಗೆದ್ದರೆ ಏನೂ ಸಿಗುವುದಿಲ್ಲ. ಹೀಗಾಗಿ ಆನೆಗಳು ಹಾರುತ್ತವೆ ಎಂದು ಯಾರಾದ್ರೂ ವಾದಿಸಿದರೆ ಒಪ್ಪಿಕೊಳ್ಳಬಹುದು.

ಕುಂಭಮೇಳದಲ್ಲಿ ಅಗ್ನಿ ದುರಂತ: 15 ಟೆಂಟ್ ಭಸ್ಮ

ಪ್ರಯಾಗರಾಜ್: ಮಹಾ ಕುಂಭಮೇಳ ಪ್ರದೇಶದ ಸೆಕ್ಟರ್ 22ರ ಹೊರವಲಯದಲ್ಲಿರುವ ಚಮನ್‌ಗಂಜ್ ಚೌಕಿಯಲ್ಲಿ ಗುರುವಾರ ಅಗ್ನಿ ಅವಘಡ ಸಂಭವಿಸಿದ್ದು, 15 ಟೆಂಟ್‌ಗಳು ಭಸ್ಮವಾಗಿವೆ. ಯಾವುದೇ ಪ್ರಾಣ ಹಾನಿಯಾಗಿಲ್ಲ. ಅವಘಡದ ಮಾಹಿತಿ ಬಂದ ತಕ್ಷಣ ಸ್ಥಳಕ್ಕೆ ತೆರಳಿದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಈ ಟೆಂಟ್‌ಗಳನ್ನು ಅಕ್ರಮವಾಗಿ ನಿರ್ಮಾಣ ಮಾಡಲಾಗಿತ್ತು. ಅಗ್ನಿ ಅವಘಡಕ್ಕೆ ಕಾರಣ ಗೊತ್ತಾಗಿಲ್ಲ ಜಿಲ್ಲಾಡಳಿತ ತಿಳಿಸಿದೆ.

ವಿದ್ಯಾರ್ಥಿನಿಯ ಕತ್ತು ಸೀಳಿ ಕೊಲೆ

ರಾಯಚೂರು: ಸಿಂಧನೂರಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯನ್ನು ಚಾಕುವಿನಿಂದ ಕತ್ತುಕೊಯ್ದು ಕೊಲೆ ಮಾಡಲಾಗಿದೆ. ಲಿಂಗಸುಗೂರು ಪಟ್ಟಣದ ಶಿಫಾ ಅಬ್ದುಲ್ ವಾಹೀದ್ (24) ಹತ್ಯೆಯಾದ ವಿದ್ಯಾರ್ಥಿನಿ. ಲಿಂಗಸುಗೂರು ಮೂಲದ ಕಾರ್ಮಿಕ ಮುಬಿನ್ ಯುವತಿ ಕೊಲೆ ಮಾಡಿ, ಬಳಿಕ ಠಾಣೆಗೆ ಶರಣಾಗಿದ್ದಾನೆ.

ಮಾತಂದ್ರೆ ಮಾತು

ಕುಂಭಮೇಳವನ್ನು ಟೀಕಿಸುತ್ತಿರುವ ಕಾಂಗ್ರೆಸ್‌ನವರೆಲ್ಲಾ ಅಯೋಗ್ಯರು. 144 ವರ್ಷಗಳ ನಂತರ ನಡೆಯುತ್ತಿರುವ ಕುಂಭಮೇಳದ ಬಗ್ಗೆ ಬಾಯಿಗೆ ಬಂದಂತೆ ಅವರು ಟೀಕೆ ಮಾಡುತ್ತಿದ್ದಾರೆ. ಹಿಂದೂಗಳ ಭಾವನೆಗೆ ಧಕ್ಕೆ ತರುವುದೇ ಕಾಂಗ್ರೆಸ್‌ನವರ ಉದ್ದೇಶ.

– ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಫನ್‌ತರಂಗ

– ರಘುಪತಿ ಶೃಂಗೇರಿ –

ಈ ರಾಜ್ಯಾಧ್ಯಕ್ಷ ಚಡ್ಡಿ ಹಾಕೋ ಮುನ್ನವೇ ನಾನು ಪಕ್ಷ ಸಂಘಟನೆ ಮಾಡಿದ್ದೇನೆ – ಯತ್ನಾಳ್

ಮೈಕ್ರೋ ಫೈನಾನ್ಸ್ ಹಾವಳಿಗೆ ಬ್ರೇಕ್ ಹಾಕುವ ಸುಗ್ರೀವಾಜ್ಞೆ ಜಾರಿಗೊಳಿಸಲು ಸಂಪುಟ ಸಭೆ ಒಪ್ಪಿಗೆ

ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಾಗದ ರೀತಿ ಕಾನೂನು ರೂಪಿಸಲು ಸಿದ್ದರಾಮಯ್ಯ ಸೂಚನೆ

ಅನಗತ್ಯ ಕಿರುಕುಳಕ್ಕೆ 3 ವರ್ಷ ಜೈಲು ಶಿಕ್ಷೆ, ಲಕ್ಷ ರು. ದಂಡ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಮೈಕ್ರೋ ಫೈನಾನ್ಸ್ ಹಾವಳಿಗೆ ಬ್ರೇಕ್ ಹಾಕಲು ರಾಜ್ಯ ಸರಕಾರ ಸುಗ್ರೀವಾಜ್ಞೆ ಜಾರಿಗೊಳಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದ್ದು, ಅನಗತ್ಯ ಕಿರುಕುಳ ನೀಡಿದರೆ ಮೂರು ವರ್ಷ ಜೈಲು ಶಿಕ್ಷೆ, ಒಂದು ಲಕ್ಷ ರು. ದಂಡ ವಿಧಿಸುವ ಕಾನೂನು ಜಾರಿಗೆ ರಾಜ್ಯ ಸರಕಾರ ಚಿಂತನೆ ನಡೆಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ವಿಧಾನಸೌಧದಲ್ಲಿ ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಮೈಕ್ರೋ ಫೈನಾನ್ಸ್ ಕಿರುಕುಳ ತಪ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಸುಗ್ರೀವಾಜ್ಞೆ ತರಲು ತೀರ್ಮಾನಿಸಿತು. ಆದರೆ ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಾಗದ ರೀತಿಯಲ್ಲಿ ಹಾಗೂ ಕಾನೂನು ಬದ್ಧವಾಗಿ ಮೈಕ್ರೋಫೈನಾನ್ಸ್ ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ಕಾನೂನು ರೂಪಿಸುವುದಕ್ಕಾಗಿ ಪ್ರತ್ಯೇಕ ಉನ್ನತಮಟ್ಟದ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಸಿದರು. ಈ ವೇಳೆ ಯಾವುದೇ ಕಾನೂನಾತ್ಮಕ ಸಮಸ್ಯೆಯಾಗದ ರೀತಿ ಕಾನೂನು ರೂಪಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬಳಿಕ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ಈಗಾಗಲೇ ಪ್ರಸ್ತುತವಿರುವ ಕಾನೂನಿನಲ್ಲಿ ಮೈಕ್ರೋ ಫೈನಾನ್ಸ್‌ಗಳ ಕಿರುಕುಳ ನಿಯಂತ್ರಿಸಲು ಹಲವು ಅವಕಾಶಗಳಿದ್ದು, ಅವುಗಳನ್ನು ಏಕೆ ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿಲ್ಲ? ಎಂದು ಅಧಿಕಾರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿರುವ ಸಿದ್ದರಾಮಯ್ಯ ಅವರು, ದೂರು ದಾಖಲು ಮಾಡುವ ತನಕ ಕಾಯದೆ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಸುಗ್ರೀವಾಜ್ಞೆ ಅಂಶ ಮತ್ತೊಮ್ಮೆ ಪರಿಶೀಲಿಸಿ: ಸಭೆಯಲ್ಲಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕಿರುಕುಳ ತಪ್ಪಿಸುವ ಉದ್ದೇಶದಿಂದ ರಚಿಸಲಾಗಿರುವ ಸುಗ್ರೀವಾಜ್ಞೆಯಲ್ಲಿನ ಅಂಶಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಬಲಿಷ್ಠ ಕಾಯಿದೆಯನ್ನು ಆದಷ್ಟು ಶೀಘ್ರ ಜಾರಿ ಮಾಡಬೇಕು. ಇದಕ್ಕಾಗಿ ಕಾನೂನು ಇಲಾಖೆ, ಹಣಕಾಸು ಇಲಾಖೆಯ ಹಿರಿಯ ಅಧಿಕಾರಿಗಳ ತಂಡ ರಚನೆ ಮಾಡಲಾಗಿದೆ. ಅನೇಕ ಸಮಯದಲ್ಲಿ ಸರಕಾರಗಳು ತರುವ ಕಾನೂನುಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ, ಕಾನೂನುಗಳು ಜಾರಿಯಾಗದ ರೀತಿಯಲ್ಲಿ ಪಟ್ಟಭದ್ರರು ಮಾಡುತ್ತಾರೆ. ಆದ್ದರಿಂದ ಕಾಯಿದೆಯನ್ನು ಕಾಯ್ದೆ ಸಂಪೂರ್ಣ ಸಂವಿಧಾನಬದ್ಧವಾಗಿದ್ದು, ಯಾವುದೇ ಲೋಪದೋಷಗಳನ್ನು ಹೊಂದಿರಬಾರದು. ಈ ರೀತಿಯಲ್ಲಿ ಎಚ್ಚರವಹಿಸಿ ಎಂದು ಸೂಚನೆ ನೀಡಿದರು.

ಈ ಕಾಯಿದೆಯನ್ನು ರೂಪಿಸುತ್ತಿರುವುದು ಸಾಲಗಾರರು ಎದುರಿಸುತ್ತಿರುವ ಕಿರುಕುಳವನ್ನು ತಪ್ಪಿಸಲು ಹಾಗೂ ಸಾಲ ನೀಡಿದವರು ಬಲವಂತದ ವಸೂಲಿ ಮಾಡುವುದನ್ನು ನಿಯಂತ್ರಿಸುವ ಉದ್ದೇಶ. ಇದು ಜಾರಿಯಾಗುವಂತೆ ಕ್ರಮವಹಿಸಬೇಕು. ನೋಂದಣಿಯಾಗದ ಲೇವಾದೇವಿಗಾರರ ಕಿರುಕುಳವನ್ನು ತಪ್ಪಿಸಲು ಕಠಿಣ ಕಾನೂನು ಜಾರಿ ಮಾಡಬೇಕು ಎನ್ನುವ ಬಗ್ಗೆ ಚರ್ಚಿಸಿದರು ಎಂದು ತಿಳಿದುಬಂದಿದೆ.

ಮೂರು ವರ್ಷ ಜೈಲು: ಮೈಕ್ರೊ ಫೈನಾನ್ಸ್ ಕಂಪನಿಗಳು ನಿಯಮ ಮೀರಿ ಸಾಲ ವಸೂಲಾತಿ ಪ್ರಕ್ರಿಯೆಗಳನ್ನು ನಡೆಸಿದರೆ ಕನಿಷ್ಠ ಆರು ತಿಂಗಳಿನಿಂದ ಗರಿಷ್ಠ ಮೂರು ವರ್ಷಗಳವರೆಗೆ ಕಾರಾಗೃಹ ಶಿಕ್ಷೆ ಹಾಗೂ ಕನಿಷ್ಠ 10 ಸಾವಿರದಿಂದ ಗರಿಷ್ಠ ಒಂದು ಲಕ್ಷ ರು.ಗಳವರೆಗೂ ದಂಡ ವಿಧಿಸುವ ಕಠಿಣ ಕಾನೂನು ತರುವ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚಿಸಲಾಗಿತ್ತು. ಇದಕ್ಕೆ ಪೂರಕವಾಗಿ ಗುರುವಾರ ಸಂಜೆ ನಡೆದ ಉನ್ನತ ಮಟ್ಟದ ಸಭೆಯಲ್ಲಿಯೂ ಚರ್ಚಿಸಲಾಗಿದ್ದು, ಶೀಘ್ರದಲ್ಲಿಯೇ ಅಧಿಕಾರಿಗಳು ಈ ಎಲ್ಲ ಅಂಶವಿರುವ ಕಾನೂನನ್ನು ಸಿದ್ಧಪಡಿಸಲಿದ್ದಾರೆ ಎನ್ನಲಾಗಿದೆ.

ಕಾಯಿದೆಯಲ್ಲಿ ಸಾಲದ ವಹಿವಾಟು ನಿರ್ವಹಿಸುವ ಹಣಕಾಸಿನ ಸಂಸ್ಥೆ, ಆರ್‌ಬಿಐ ನಿಯಮಾವಳಿ ಅನುಸಾರ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ಈವರೆಗೂ ಕಾರ್ಯ ಚಟುವಟಿಕೆ ನಡೆಸುತ್ತಿದ್ದ ಯಾವುದೇ ಅನಧಿಕೃತ ಸಂಸ್ಥೆಗಳು 30 ದಿನದೊಳಗಾಗಿ ನೋಂದಾಯಿಸಿಕೊಳ್ಳಬೇಕು. ಒಂದು ವೇಳೆ ನೋಂದಣಿ ಮಾಡಿಕೊಳ್ಳದೇ ಇದ್ದರೆ ಅಂತಹ ಸಂಸ್ಥೆಗಳನ್ನು ಜಪ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ನಿಯಮ ಮೀರಿ ಸಾಲ ನೀಡುವುದು ಹಾಗೂ ಸಾಲ ವಸೂಲಾತಿಗಾಗಿ ಅತಿಕ್ರಮಣದ ಕಾರ್ಯ ಚಟುವಟಿಕೆಗಳನ್ನು ಅನುಸರಿಸಿದ ಹಣಕಾಸು ಸಂಸ್ಥೆಗಳ ವಿರುದ್ಧ ಪ್ರಕರಣ ದಾಖಲಿಸುವ, ಶೋಧ ಕಾರ್ಯಾಚರಣೆ ನಡೆಸುವ ಅಧಿಕಾರವನ್ನು ದೂರು ಆಧರಿಸಿ ಕಾನೂನು ಕ್ರಮ ನಿರ್ವಹಿಸಲು ಪೊಲೀಸರಿಗೆ ಅವಕಾಶ ಕಲ್ಪಿಸಲು ತೀರ್ಮಾನಿಸಲಾಗಿದೆ.

ಸಾಲ ಹಾಗೂ ಹಣಕಾಸಿನ ವಹಿವಾಟಿನ ದಸ್ತಾವೇಜುಗಳನ್ನು ಸ್ಥಳೀಯ ಭಾಷೆಗಳಲ್ಲೆ ಗ್ರಾಹಕರಿಗೆ ಒದಗಿಸಬೇಕು. ಸಾಲ, ಬಡ್ಡಿ ಪ್ರಮಾಣ ಸೇರಿದಂತೆ ಎಲ್ಲ ವಿಚಾರದ ಬಗ್ಗೆ ಸಾಲ ಪಡೆಯುವವರಿಗೆ ಸ್ಪಷ್ಟವಾಗಿ ತಿಳುವಳಿಕೆ ನೀಡಬೇಕು. ಸಾಲ ಪಡೆಯುವವರಿಂದ ಪಡೆಯಲಾಗುವ ಭದ್ರತಾ ಆಸ್ತಿ ಪತ್ರಗಳು ಹಾಗೂ ಇತರ ವಿಚಾರಗಳ ಕುರಿತು ಪಾರದರ್ಶಕತೆ ಪಾಲನೆ ಮಾಡಬೇಕು ಎಂದು ಸೂಚಿಸಲಾಗಿದೆ.

ಒಂದು ವಾರದ ಅಂತರದಲ್ಲಿಯೇ 15ಕ್ಕೂ ಹೆಚ್ಚು ಜನರ ಸಾವು

ರಾಜ್ಯಾದ್ಯಂತ ಮೈಕ್ರೋ ಫೈನಾನ್ಸ್ ಕಂಪನಿ ಹಾಗೂ ಮೀಟರ್ ಬಡ್ಡಿ ದಂಧೆಗೆ ನೂರಾರು ಮಂದಿ ಮೃತಪಟ್ಟಿರುವ ಬಗ್ಗೆ ಆರೋಪ ಕೇಳಿಬಂದಿದೆ. ಆದರೆ ಕಳೆದೊಂದು ವಾರದಲ್ಲಿಯೇ 15ಕ್ಕೂ ಹೆಚ್ಚು ಮಂದಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಗಳು ಬೆಳಕಿಗೆ ಬಂದಿದೆ. ಆದ್ದರಿಂದ ಈ ಆತ್ಮಹತ್ಯೆಗಳನ್ನು ತಡೆಗಟ್ಟುವ ಹಾಗೂ ಅನಗತ್ಯ ಕಿರುಕುಳವನ್ನು ತಪ್ಪಿಸುವ ನಿಟ್ಟಿನಲ್ಲಿ ಕ್ರಮವಹಿಸಬೇಕು ಎನ್ನುವ ಮಾತುಗಳು ಸಂಪುಟ ಸಭೆಯಲ್ಲಿ ಕೇಳಿ ಬಂತು. ಆರ್‌ಬಿಐ ಸೂಚಿತ ನಿಯಮಾವಳಿ ಅನುಸಾರವೇ ಪಟ್ಟಿ ಇರಬೇಕು. ಗ್ರಾಹಕರ ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಮಾತ್ರ ಸಾಲ ನೀಡಬೇಕು. ಬಲವಂತದ ಸಾಲ ವಸೂಲಾತಿಯನ್ನು ಕ್ರಿಮಿನಲ್ ಅಪರಾಧವನ್ನಾಗಿ ಪರಿಗಣಿಸುವ ಮತ್ತು ಅದನ್ನು ತನಿಖೆ ಮಾಡುವ ಅಧಿಕಾರವನ್ನು ಪೊಲೀಸರಿಗೆ ನೂತನ ತಿದ್ದುಪಡಿಯಲ್ಲಿ ಒದಗಿಸಲಾಗಿದೆ. ವಿಧಾನಸಭೆ ಅಧಿವೇಶನ ವಿಳಂಬವಾಗುವುದರಿಂದಾಗಿ ತುರ್ತಾಗಿ ಸುಗ್ರೀವಾಜ್ಞೆಯ ಮೂಲಕವೇ ಮಸೂದೆಯನ್ನು ಜಾರಿಗೊಳಿಸಲು ಚರ್ಚಿಸಲಾಗಿದ್ದು, ರಾಜ್ಯಪಾಲರಿಗೆ ಸುಗ್ರೀವಾಜ್ಞೆಯ ಪ್ರತಿಯನ್ನು 2-3 ದಿನದೊಳಗಾಗಿ ಕಳುಹಿಸಲು ನಿರ್ಧರಿಸಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.



ಸುಗ್ರೀವಾಜ್ಞೆ ಜಾರಿಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಚಿವ ಸಂಪುಟ ಅಧಿಕಾರವನ್ನು ನೀಡಿದೆ. ಸಿಎಂ ಜತೆ ಸಭೆಯ ಬಳಿಕ ಕಾನೂನಾತ್ಮಕವಾಗಿ ತೀರ್ಮಾನ ಆಗಲಿದೆ. ಸಂಪುಟ ಸಭೆಯಲ್ಲಿ ಸಂಪೂರ್ಣ ಅಧಿಕಾರ ಸಿಎಂ ಅವರಿಗೆ ನೀಡಲಾಗಿದೆ. ನಮ್ಮಲ್ಲಿರುವ ಕಾನೂನುಗಳಲ್ಲಿ ಕೆಲ ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳಿವೆ. ಆದ್ದರಿಂದ ಕಾನೂನಾತ್ಮಕ ತೀರ್ಮಾನವನ್ನು ಹಿರಿಯ ಸಚಿವರೊಂದಿಗೆ ನಡೆಸಿ ತೀರ್ಮಾನಿಸಲಾಗಿದೆ.

– ಎಚ್.ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ಬಿಜೆಪಿಯಲ್ಲಿ ಈಗ ಮೂಲ-ವಲಸಿಗರ ಬಣದಾಟ ಆರಂಭ

ಡಿವಿಎಸ್ ಮನೆಯಲ್ಲಿ ಹಾಲಿ, ಮಾಜಿ ಸಂಸದರ ಸಭೆ ಸುಧಾಕರ್ ವಿರುದ್ಧ ಬಿ.ವೈ.ವಿಜಯೇಂದ್ರ ಬೆಂಬಲಿಗರ ವಾಗ್ದಾಳಿ | ಯತ್ನಾಳ್‌ಗೆ ಕೆ.ಎಸ್.ಈಶ್ವರಪ್ಪ ಬೆಂಬಲ

ಬೆಂಗಳೂರು: ರಾಜ್ಯ ಬಿಜೆಪಿ ನಾಯಕರು ಒಂದಾಗುವುದು ಮರೀಚಿಕೆಯಾಗಿದ್ದು, ಮನೆಯೊಂದು ಹತ್ತಾರು ಬಾಗಿಲು ಎಂಬಂತಾಗಿದೆ. ಅಸಮಾಧಾನಿತರು, ತಟಸ್ಥರು, ಅವಕಾಶವಾದಿಗಳು ಹೀಗೆ ಹಲವು ನಾಯಕರ ಗುಂಪುಗಳಿಂದ ಪಕ್ಷ ವಿಭಜನೆಗೊಂಡಿದ್ದು, ನಿಷ್ಠಾವಂತರು ಮತ್ತು ಕಾರ್ಯಕರ್ತರು ಲೆಕ್ಕಕ್ಕಿಲ್ಲದಂತಾಗಿದೆ. ಹಿರಿಯ ಮತ್ತು ಕಿರಿಯ ನಾಯಕರ ನಡುವೆ ವಾಕ್ಸಮರ ತಾರಕ್ಕೇರಿ ಪ್ರತಿಷ್ಠೆಯ ಕಾರಣ ಪಕ್ಷದ ಪ್ರಾಬಲ್ಯ ಮಣ್ಣು ಪಾಲಾಗುತ್ತಿದ್ದು, ಹೊಸದಾಗಿ ವಲಸಿಗ ಹಾಗೂ ಮೂಲ ಬಡಿದಾಟ ಆರಂಭವಾಗಿದೆ.

ರಾಜ್ಯಾಧ್ಯಕ್ಷರ ವಿರುದ್ಧ ಯುದ್ಧ ಸಾರಿದ್ದ ಸಂಸದ ಡಾ.ಕೆ. ಸುಧಾಕರ್ ಅವರ ನಡೆಗೆ ರಾಜ್ಯಾಧ್ಯಕ್ಷರ ಬಣ ಕೆಂಡಾಮಂಡಲಾಗಿದೆ. ಜಿಲ್ಲಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬುದು ಪಕ್ಷದ ಕಾರ್ಯಕರ್ತರಿಗೆ ತಿಳಿದಿದೆ. 4-5 ವರ್ಷಗಳ ಹಿಂದೆ ಪಕ್ಷ ಸೇರಿದವರಿಗೆ ಅಲ್ಲ ಎಂದು ಹೇಳುವ ಮೂಲಕ ಸುಧಾಕರ್ ವಲಸಿಗರು ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಪರೋಕ್ಷವಾಗಿ ಹೇಳಿರುವುದು ಗಮನಿಸಿದರೆ ಇತ್ತೀಚೆಗೆ ಪಕ್ಷದೊಳಗಿದ್ದು ಹೆಚ್ಚಿನ ಮಾತನಾಡುತ್ತಿರುವವರು ಬೇರೆ ಪಕ್ಷದಿಂದ ಬಂದವರೇ ಆಗಿದ್ದಾರೆ. ಇದೇ ನಮಗೆ ತೊಂದರೆಯಾತ್ತಿರುವುದು ಎಂಬ ಅನಿಸಿಕೆ ಪಕ್ಷದ ನಿಷ್ಠಾವಂತರಲ್ಲಿ ಕೇಳಿ ಬರುತ್ತಿದೆ.

→ 4

ರಾಜ್ಯಾಧ್ಯಕ್ಷನಾಗಿ ಯಾವುದೇ ಜಿಲ್ಲೆಯ ಚುನಾವಣೆ ಸಂಬಂಧ ಅಭಿಪ್ರಾಯ ಕೊಟ್ಟಿಲ್ಲ. ಕೊಡಲು ಅವಕಾಶವೂ ಇಲ್ಲ. ಕೇಂದ್ರದಿಂದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರಿಗೆ ಚುನಾವಣೆಯ ಜವಾಬ್ದಾರಿ ಕೊಟ್ಟಿದ್ದಾರೆ. 13 ಜನ ವೀಕ್ಷಕರ ನೇಮಕ ಮಾಡಿದ್ದರು. ಪ್ರತಿಯೊಬ್ಬ ವೀಕ್ಷಕರಿಗೂ 3 ಜಿಲ್ಲೆಗಳ ಜವಾಬ್ದಾರಿ ಕೂಡ ನೀಡಲಾಗಿತ್ತು.

– ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಪಕ್ಷ ಸಂಘಟನೆ ಕುರಿತು ನಾನು ವಿಜಯೇಂದ್ರನಂತಹ ಬಚ್ಚಾ ಅವರಿಂದ ನಾನು ಕಲಿಯಬೇಕಿಲ್ಲ, ಏಕೆಂದರೆ ಅವರಪ್ಪ ಯಡಿಯೂರಪ್ಪನವರ ಜತೆ ಪಕ್ಷ ಕಟ್ಟಿದ್ದೇನೆ. ನಾನು ಪಕ್ಷ ಸಂಘಟನೆ ಮಾಡುತ್ತಿದ್ದಾಗ ವಿಜಯೇಂದ್ರ ಚಡ್ಡಿ ಹಾಕಿ ತಿರುಗಾಡುತ್ತಿದ್ದರು.

– ಬಸನಗೌಡ ಪಾಟೀಲ್ ಯತ್ನಾಳ್

ಬಿಜೆಪಿಯಲ್ಲಿ ಇರಲು ಸಾಧ್ಯವಾಗದಿದ್ದರೆ ಅಂಥವರು ಪಕ್ಷ ಬಿಟ್ಟು ಹೋಗಲು ಸ್ವತಂತ್ರರು. ಪಕ್ಷ ಶುದ್ಧಿಯಾಗಬೇಕೆಂದರೆ ಬಾಯಿಗೆ ಬಂದಂತೆ ಮಾತನಾಡುವವರು ಮೊದಲು ತೊಲಗಲಿ.

– ಎಸ್.ಆರ್.ವಿಶ್ವನಾಥ್ ಶಾಸಕ

ವಕ್ಫ್ ವಿಧೇಯಕ: ಸ್ಪೀಕರ್‌ಗೆ ವರದಿ

ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರು ಇತರ ಸದಸ್ಯರೊಂದಿಗೆ ಸ್ಪೀಕರ್ ಬಿರ್ಲಾ ಅವರನ್ನು ಸಂಸತ್ ಭವನದ ಕಚೇರಿಯಲ್ಲಿ ಭೇಟಿಯಾಗಿ ವರದಿಯನ್ನು ಹಸ್ತಾಂತರಿಸಿದರು.

ದೆಹಲಿ: ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲಿಸಲು ರಚಿಸಿದ ಸಂಸತ್ತಿನ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಗುರುವಾರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ತನ್ನ ವರದಿ ಸಲ್ಲಿಸಿದೆ.

ಬುಧವಾರ ಸಮಿತಿಯು ಆಡಳಿತಾರೂಢ ಬಿಜೆಪಿ ಸದಸ್ಯರು ಸೂಚಿಸಿದ ಬದಲಾವಣೆಗಳನ್ನು ಒಳಗೊಂಡಿರುವ ತನ್ನ ವರದಿಯನ್ನು ಬಹುಮತದ ಮತದಿಂದ ಅಂಗೀಕರಿಸಿತ್ತು. ಪ್ರತಿಪಕ್ಷಗಳ ಸದಸ್ಯರು ಪ್ರಸ್ತಾಪಿಸಿದ ಎಲ್ಲ ಬದಲಾವಣೆಗಳನ್ನು ಸಮಿತಿ ತಿರಸ್ಕರಿಸಿದೆ. ಜೆಪಿಸಿ ಮಸೂದೆ ಕುರಿತ ಕರಡು ವರದಿಯನ್ನು 15-11 ಬಹುಮತದಿಂದ ಅಂಗೀಕರಿಸಿದೆ. ವರದಿಗೆ ಪ್ರತಿಪಕ್ಷದ ಸದಸ್ಯರು ಭಿನ್ನಾಭಿಪ್ರಾಯ ಟಿಪ್ಪಣಿಗಳನ್ನು ಸಲ್ಲಿಸಿದ್ದಾರೆ.

2024ರ ಆಗಸ್ಟ್‌ನಲ್ಲಿ ಲೋಕಸಭೆಯಲ್ಲಿ ಪರಿಚಯಿಸಲಾದ ಮಸೂದೆಯು, ವಕ್ಫ್ ಆಸ್ತಿಗಳ ನಿರ್ವಹಣೆಯಲ್ಲಿ ಆಧುನಿಕತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರುವ ಗುರಿಯನ್ನು ಹೊಂದಿದೆ ಎಂದು ಬಿಜೆಪಿ ಸದಸ್ಯರು ಸಮರ್ಥಿಸಿಕೊಂಡಿದ್ದಾರೆ. ಆದರೆ, ಪ್ರತಿಪಕ್ಷಗಳು ಇದನ್ನು ಮುಸ್ಲಿಂ ಸಮುದಾಯದ ಸಾಂವಿಧಾನಿಕ ಹಕ್ಕುಗಳ ಮೇಲಿನ ದಾಳಿ ಮತ್ತು ವಕ್ಫ್ ಮಂಡಳಿಗಳ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ ಎಂದಿವೆ.

ಆರ್‌ಟಿಐಗೆ ಆಯುಕ್ತರ ನೇಮಕ

ಬೆಂಗಳೂರು: ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಮತ್ತು ರಾಜ್ಯ ಮಾಹಿತಿ ಆಯುಕ್ತರನ್ನು ನೇಮಕಗೊಳಿಸಿ ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ. ರಾಜ್ಯ ಮುಖ್ಯ ಮಾಹಿತಿ ಆಯುಕ್ತರಾಗಿ ಆಶಿತ್ ಮೋಹನ್ ಪ್ರಸಾದ್ (ಐಪಿಎಸ್ ನಿವೃತ್ತ), ರಾಜ್ಯ ಮಾಹಿತಿ ಆಯುಕ್ತರಾಗಿ ಡಾ. ಮಮತಾ ಬಿ.ಆರ್. (ಐಎಎಸ್ ನಿವೃತ್ತ), ಹಿರಿಯ ಪತ್ರಕರ್ತರಾದ ರುದ್ರಣ್ಣ ಹರ್ತಿಕೋಟೆ, ಬದ್ರುದ್ದೀನ್ ಕೆ., ರಾಜಶೇಖರ ಎಸ್. ಹಾಗೂ ರಾಮನ್.ಕೆ., ಡಾ.ಹರೀಶ್ ಕುಮಾರ್, ನಾರಾಯಣ ಜಿ.ಚಾನಾಲ್ ಅವರನ್ನು ನೇಮಕ ಮಾಡಲಾಗಿದೆ.

ಸಿ.ಟಿ.ರವಿಗೆ ತಾತ್ಕಾಲಿಕ ರಿಲೀಫ್

ಬೆಂಗಳೂರು: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಅಶ್ಲೀಲ ಪದ ಬಳಕೆ ಪ್ರಕರಣದಲ್ಲಿ ಬಿಜೆಪಿ ಪರಿಷತ್ ಸದಸ್ಯ ಸಿ.ಟಿ.ರವಿ ಅವರಿಗೆ ಹೈಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ.

ಎಫ್‌ಐಆರ್ ರದ್ದು ಕೋರಿ ಸಿ.ಟಿ.ರವಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಗುರುವಾರ ಹೈಕೋರ್ಟ್‌ನಲ್ಲಿ ನಡೆಯಿತು. ತನಿಖೆಯ ವ್ಯಾಪ್ತಿಯ ಪ್ರಶ್ನೆ ತೀರ್ಮಾನಿಸಬೇಕಿದೆ ಎಂದು ಅಭಿಪ್ರಾಯಪಟ್ಟ ನ್ಯಾ.ಎಂ. ನಾಗಪ್ರಸನ್ನ ಅವರಿದ್ದ ಪೀಠ ಫೆ.20 ರವರೆಗೆ ಮಧ್ಯಂತರ ತಡೆ ನೀಡಿ ದೂರುದಾರೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ನೋಟಿಸ್ ಜಾರಿ ಮಾಡಿದೆ. ಸಿ.ಟಿ.ರವಿ ಪರ ವಾದ ಮಂಡಿಸಿದ ಪ್ರಭುಲಿಂಗ ನಾವದಗಿ, ಸದನದೊಳಗೆ ಭಯ ಮುಕ್ತರಾಗಿ ಮಾತನಾಡಲು ಅವಕಾಶ ಇದೆ. ಮಾನನಷ್ಟ ಪ್ರಕರಣದ ಭೀತಿಯಿಲ್ಲದೇ ಚರ್ಚೆ ನಡೆಸಬಹುದು. ಮಹಿಳೆ ಗೌರವಕ್ಕೆ ಧಕ್ಕೆಯಾಗುವ ಮಾತುಗಳಿದ್ದರೂ ಸಭಾಪತಿ ಕ್ರಮ ಕೈಗೊಳ್ಳಬಹುದು ಎಂದು ಹೇಳಿದರು.

ಎಸ್‌ಪಿಪಿ ಬಿ.ಎ.ಬೆಳ್ಳಿಯಪ್ಪ ಅವರು, ರವಿ ಅವರ ಧ್ವನಿ ಮಾದರಿ ಪಡೆಯಲು ಅವಕಾಶ ನೀಡಬೇಕು. ಸದನದ ವ್ಯಾಪ್ತಿಯ ಚರ್ಚೆಗೆ ಮಾತ್ರ ಕ್ರಮದಿಂದ ವಿನಾಯಿತಿ ಇದೆ. ಟೇಬಲ್ ಮುರಿದು ದಾಂಧಲೆ, ಅಶ್ಲೀಲ ಪದ ಬಳಕೆಗೆ ವಿನಾಯಿತಿ ಇಲ್ಲ ಎಂದು ವಾದಿಸಿದರು.

ಅರಮನೆಯ ಭೂಮಿ ಬಳಕೆ, ನಿಯಂತ್ರಣ ಅಧಿಕಾರ ಸರಕಾರಕ್ಕೆ

ಅರಮನೆ ವಿಧೇಯಕಕ್ಕೆ ರಾಜ್ಯಪಾಲರ ಅಂಕಿತ

ಬೆಂಗಳೂರು: ಬೆಂಗಳೂರು ಅರಮನೆ ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರದ ಸುಗ್ರೀವಾಜ್ಞೆಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರು ಬುಧವಾರ ಒಪ್ಪಿಗೆ ಸೂಚಿಸಿದ್ದಾರೆ. ಈ ಮೂಲಕ 472 ಎಕರೆ ಮತ್ತು 16 ಗುಂಟೆ ಬೆಂಗಳೂರು ಅರಮನೆಯ ಭೂಮಿ ಬಳಕೆ ಹಾಗೂ ನಿಯಂತ್ರಿಸುವ ಅಧಿಕಾರವನ್ನು ರಾಜ್ಯ ಸರಕಾರ ಪಡೆದುಕೊಂಡಿದೆ.

ಕಳೆದ ಸಚಿವ ಸಂಪುಟ ಸಭೆಯಲ್ಲಿ ಟಿಡಿಆರ್ ನೀಡದಿರಲು ಸರಕಾರ ತೀರ್ಮಾನಿಸಿತ್ತು. ಇದಕ್ಕೆ ಸಂಬಂಧಿಸಿದಂತೆ ಬೆಂಗಳೂರು ಅರಮನೆ ಭೂ ಕಬಳಿಕೆ ಮತ್ತು ನಿಯಂತ್ರಣ ಅಧ್ಯಾದೇಶ 2025ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಮೂರು ಸಾವಿರ ಕೋಟಿ ಮೌಲ್ಯದ ಬೆಂಗಳೂರು ಅರಮನೆ ಮೈದಾನದ ಭೂಮಿಗೆ ಟಿಡಿಆರ್ ನೀಡುವ ವಿಚಾರದಲ್ಲಿ ಮೈಸೂರು ರಾಜ ಮನೆತನ ಮತ್ತು ರಾಜ್ಯ ಸರಕಾರದ ನಡುವೆ ಹಗ್ಗಜಗ್ಗಾಟ ನಡೆದಿತ್ತು. ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಬೇಕಾದ ಹಿನ್ನೆಲೆಯಲ್ಲಿ ಸಂಪುಟ ಸಭೆಯಲ್ಲಿ ಸುಗ್ರೀವಾಜ್ಞೆ ಹೊರಡಿಸುವ ನಿರ್ಣಯ ಕೈಗೊಳ್ಳಲಾಗಿತ್ತು. ಇದೀಗ ಈ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಸೇನಾ ಹೆಲಿಕಾಪ್ಟರ್ ಡಿಕ್ಕಿಯಾಗಿ ನದಿಗುರುಳಿದ ವಿಮಾನ: 64 ಸಾವು

ವಾಷಿಂಗ್ಟನ್: ಅಮೆರಿಕದ ವಾಷಿಂಗ್ಟನ್ ಡಿಸಿಯ ರೊನಾಲ್ಡ್ ರೇಗನ್ ವಿಮಾನ ನಿಲ್ದಾಣದ ಬಳಿ ಸೇನಾ ಹೆಲಿಕಾಪ್ಟರ್ ನೇರವಾಗಿ ಪ್ರಯಾಣಿಕರ ವಿಮಾನಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ 60 ಪ್ರಯಾಣಿಕರು, 4 ಸಿಬ್ಬಂದಿಗಳಿದ್ದ ಜೆಟ್ ವಿಮಾನ ಪೋಟೋಮ್ಯಾಕ್ ನದಿಗೆ ಬಿದ್ದಿದ್ದು, 30 ಮೃತದೇಹಗಳನ್ನು ನದಿಯಿಂದ ಹೊರತೆಗೆಯಲಾಗಿದೆ. ವಿಮಾನದಲ್ಲಿದ್ದ ಎಲ್ಲರೂ ಸಾವಿಗೀಡಾಗಿರುವ ಶಂಕೆ ವ್ಯಕ್ತವಾಗಿದೆ.

ಅಮೆರಿಕನ್ ಏರ್‌ಲೈನ್ಸ್‌ನ ಫ್ಲೈಟ್ ನಂಬರ್ 5342 ರೇಗನ್ ವಿಮಾನ ನಿಲ್ದಾಣದಲ್ಲಿ ಇಳಿಯುವ ಹಂತದಲ್ಲಿದ್ದಾಗ ಸೇನಾಪಡೆಯ ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್ ಹಾರಿಬಂದು ನೇರ ಡಿಕ್ಕಿ ಹೊಡೆದಿದೆ. ವಿಮಾನ-ಹೆಲಿಕಾಪ್ಟರ್ ಅಪಘಾತದ ವಿಡಿಯೊ ವೈರಲ್ ಆಗಿದೆ.

ವಿಮಾನ ನಿಲ್ದಾಣದಲ್ಲಿ ತಕ್ಷಣವೇ ಎಲ್ಲ ವಿಮಾನಗಳ ಹಾರಾಟ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಅಗ್ನಿಶಾಮಕ ದಳ ಸ್ಥಳಕ್ಕೆ ಧಾವಿಸಿ ಕಾರ್ಯಾಚರಣೆ ಆರಂಭಿಸಿ, ನದಿಯಿಂದ ನಾಲ್ವರು ಪ್ರಯಾಣಿಕರನ್ನು ರಕ್ಷಣೆ ಮಾಡಿದೆ. ಅಗ್ನಿಶಾಮಕ ಇಲಾಖೆಯ ಹಲವು ದೋಣಿಗಳು

ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದು, 30 ಮೃತದೇಹಗಳನ್ನು ನದಿಯಿಂದ ಮೇಲೆತ್ತಲಾಗಿದೆ.

ಕಾನ್ಸಾಸ್‌ನಿಂದ ವಾಷಿಂಗ್ಟನ್ ಡಿ.ಸಿ.ಯ ರೊನಾಲ್ಡ್ ರೇಗನ್ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಜೆಟ್ ವಿಮಾನ ಬುಧವಾರ ತಡರಾತ್ರಿ ತೆರಳುತ್ತಿದ್ದಾಗ ಅಡ್ಡಲಾಗಿ ಹಾರಾಡುತ್ತಾ ಬಂದ ಸೇನಾ ಹೆಲಿಕಾಪ್ಟರ್ ನೇರವಾಗಿ ಡಿಕ್ಕಿ ಹೊಡೆದಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಎರಡು ಹಂತಗಳಲ್ಲಿ ಈ ಬಾರಿಯ ಬಜೆಟ್ ಅಧಿವೇಶನ | ವಕ್ಫ್ ವಿಧೇಯಕ ಮರುಮಂಡನೆ ನಿರೀಕ್ಷೆ

ಬಜೆಟ್ ಅಧಿವೇಶನ: ಇಂದು ಆರ್ಥಿಕ ಸಮೀಕ್ಷೆ

ದೆಹಲಿ: ಬಹು ನಿರೀಕ್ಷೆಯ ಬಜೆಟ್ ಸಂಸತ್ ಅಧಿವೇಶನ ಶುಕ್ರವಾರ ಆರಂಭಗೊಳ್ಳುತ್ತಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ನಂತರದಲ್ಲಿ ದೇಶದ ಆರ್ಥಿಕ ಸಮೀಕ್ಷೆಯನ್ನು ಕೇಂದ್ರ ಹಣಕಾಸು ಸಚಿವಾಲಯ ಮಂಡಿಸಲಿದೆ.

ಇಡೀ ದೇಶ ಕಾತರದಿಂದ ಕಾಯುತ್ತಿರುವ 2025-26ನೇ ಹಣಕಾಸು ವರ್ಷದ ಬಜೆಟ್ ಅನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶನಿವಾರ ಬೆಳಗ್ಗೆ 11 ಗಂಟೆಗೆ ಮಂಡಿಸಲಿದ್ದಾರೆ. ಶನಿವಾರದ ಪೂರ್ಣ ಕಲಾಪ ಬಜೆಟ್ ಮಂಡನೆ, ಚರ್ಚೆಗೆ ಮೀಸಲಾಗಿರಲಿದೆ.

ಈ ಬಾರಿಯ ಬಜೆಟ್ ಅಧಿವೇಶನ ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದ ಅಧಿವೇಶನ ಜ.30ರಿಂದ ಫೆ.13ರಂದು ವಿರಾಮ ಪಡೆಯಲಿದೆ. ಆ ಬಳಿಕ ಮಾ.10ರಂದು ಸದನ ಮರಳಿ ಸಮಾವೇಶಗೊಳ್ಳಲಿದ್ದು, ಬಜೆಟ್ ಅಧಿವೇಶನದ ಎರಡನೇ ಹಂತ ಆರಂಭಗೊಳ್ಳಲಿದೆ. ನಂತರ ಸುದೀರ್ಘ ಅವಧಿಗೆ ಕಲಾಪ ನಡೆದು ಏ.4ರಂದು ಬಜೆಟ್ ಅಧಿವೇಶನ ಸಮಾಪನಗೊಳ್ಳಲಿದೆ.

ಈ ಬಾರಿಯ ಬಜೆಟ್ ಅಧಿವೇಶನದಲ್ಲಿ 16 ವಿಧೇಯಕಗಳು ಮಂಡನೆಗೆ ಸಾಲುಗಟ್ಟಿವೆ. ಮುಖ್ಯವಾಗಿ ವಕ್ಫ್(ತಿದ್ದುಪಡಿ) ವಿಧೇಯಕ-2025 ಮರು ಮಂಡನೆಯಾಗಲಿದೆ.

6 ತಿಂಗಳುಗಳ ಕಾಲ 34 ಸಭೆಗಳನ್ನು ನಡೆಸಿ 108 ಗಂಟೆಗಳಷ್ಟು ಸುದೀರ್ಘ ಅವಧಿಗೆ ಚರ್ಚೆ ನಡೆಸಿರುವ ಜಂಟಿ ಸಂಸದೀಯ ಸಮಿತಿ, ಒಟ್ಟು 14 ತಿದ್ದುಪಡಿಗಳಿಗೆ ಸಮ್ಮತಿ ಸೂಚಿಸಿದೆ. ಈ ತಿದ್ದುಪಡಿಗಳನ್ನು ಒಳಗೊಂಡ ಜೆಪಿಸಿ ವರದಿಗೆ ಸಮಿತಿಯು ಬುಧವಾರ ಅಂಗೀಕಾರ ಮುದ್ರೆ ಒತ್ತಿದೆ.

ಮಂಡನೆಯಾಗಲಿರುವ ವಿಧೇಯಕಗಳು

- ಕೇಂದ್ರ ಹಣಕಾಸು ವಿಧೇಯಕ 2025-26(ಬಜೆಟ್)
- ವಕ್ಫ್(ತಿದ್ದುಪಡಿ) ವಿಧೇಯಕ 2024
- ಬ್ಯಾಂಕಿಂಗ್ ಕ್ಷೇತ್ರ ನಿಯಂತ್ರಣಗಳ ವಿಧೇಯಕ
- ಭಾರತೀಯ ರೈಲ್ವೆ ಮತ್ತು ಭಾರತೀಯ ರೈಲ್ವೆ ಮಂಡಳಿ ವಿಲೀನ ವಿಧೇಯಕ
- ತೈಲ ಪ್ರದೇಶ-ವಿಕೋಪ ನಿರ್ವಹಣೆ(ನಿಯಂತ್ರಣ-ಅಭಿವೃದ್ಧಿ) ಕಾನೂನು
- ಕರಾವಳಿ ಪ್ರದೇಶ ಮತ್ತು ವಾಣಿಜ್ಯ ನೌಕೆಗಳ ವಹಿವಾಟು ವಿಧೇಯಕ
- ರೂರಲ್ ಮ್ಯಾನೇಜ್‌ಮೆಂಟ್ ಆನಂದ್ ಸಂಸ್ಥೆಗೆ ಮರುನಾಮಕರಣ
- ವಾಯುಯಾನ ಕ್ಷೇತ್ರದಲ್ಲಿ ಹಣಕಾಸು ಹಿತಾಸಕ್ತಿಗೆ ಸುರಕ್ಷತೆ ವಿಧೇಯಕ
- ವಲಸೆ ನೀತಿ ನಿಯಂತ್ರಣ ನಿಯಮಗಳಲ್ಲಿ ಬದಲಾವಣೆ ವಿಧೇಯಕ
- ವಿದೇಶಿಯರ ಭಾರತ ಪ್ರವೇಶ ನಿಯಂತ್ರಣ ವಿಧೇಯಕ

ವಿದ್ಯಾರ್ಥಿನಿ ಕೊಲೆ: ಆರೋಪಿ ಸೆರೆ

ಸಿಂಧನೂರು: ಇಲ್ಲಿನ ಸರಕಾರಿ ಪದವಿ ಮಹಾವಿದ್ಯಾಲಯದ ಎಂಎಸ್ಸಿ ವಿದ್ಯಾರ್ಥಿನಿಯನ್ನು ಪರಿಚಿತ ಯುವಕ ಖಾಸಗಿ ಲೇಔಟ್ ಗೆ ಕರೆದೊಯ್ದು ಕತ್ತು ಕೊಯ್ದು ಕೊಲೆ ಮಾಡಿ ಪರಾರಿಯಾಗಿರುವ ಘಟನೆ ಗುರುವಾರ ಬೆಳಗ್ಗೆ ನಡೆದಿದೆ. ಲಿಂಗಸೂಗೂರು ನಿವಾಸಿ ಅಬ್ದುಲ್ ವಾಹೀದ್ ಅವರ ಪುತ್ರಿ ಶಿಫಾ (22) ಕೊಲೆಗೀಡಾದ ವಿದ್ಯಾರ್ಥಿನಿ. ಎಂದಿನಂತೆ ವಿದ್ಯಾರ್ಥಿನಿ ಶಿಫಾ ಗುರುವಾರ ಬೆಳಗ್ಗೆ ಲಿಂಗಸೂಗೂರಿನಿಂದ ಸಿಂಧನೂರಿನ ಕಾಲೇಜಿಗೆ ಬರುತ್ತಿದ್ದ ಸಂದರ್ಭ ಲಿಂಗಸೂಗೂರಿನಿಂದ ಬೈಕ್‌ನಲ್ಲಿ ಆಗಮಿಸಿದ್ದ ಪರಿಚಿತ ಯುವಕ, ಮಾತನಾಡುವುದಿದೆ ಬಾ ಎಂದು ಖಾಸಗಿ ಲೇಔಟ್‌ಗೆ ಕರೆದುಕೊಂಡು ಹೋಗಿದ್ದಾನೆ. ದಿಢೀರ್ ಚಾಕು ತೆಗೆದು ಕತ್ತು ಕೊಯ್ದಿದ್ದಾನೆ. ಘಟನೆಗೆ ಸಂಬಂಧಿಸಿ ಯುವಕನೊಬ್ಬನನ್ನು ಲಿಂಗಸೂಗೂರಿನಲ್ಲಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಮೃತ ವಿದ್ಯಾರ್ಥಿನಿಯ ಪೋಷಕರ ರೋಧನ ಮುಗಿಲು ಮುಟ್ಟಿದೆ.ಘಟನಾ ಸ್ಥಳಕ್ಕೆ ಡಿವೈಎಸ್ಪಿ ಬಿ.ಎಸ್. ತಳವಾರ, ಸಿಪಿಐ ವೀರಾರೆಡ್ಡಿ, ಪಿಎಸ್‌ಐಗಳಾದ ಯರಿಯಪ್ಪ, ಸುಜಾತ, ಬಸವರಾಜ ಸೇರಿದಂತೆ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ, ತನಿಖೆ ಕೈಗೊಂಡಿದ್ದಾರೆ.

ಫೈನಾನ್ಸ್ ಕಿರುಕುಳ: ವ್ಯಕ್ತಿ ಆತ್ಮಹತ್ಯೆ

ಪಿರಿಯಾಪಟ್ಟಣ: ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಬೇಸತ್ತು ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಬೆಟ್ಟದಪುರ ಬಸವೇಶ್ವರ ಕಾಲೋನಿಯಲ್ಲಿ ಗುರುವಾರ ನಡೆದಿದೆ. ಈ ಕೃತ್ಯವನ್ನು ಖಂಡಿಸಿ ಕರ್ನಾಟಕ ರೈತ ಹಾಗೂ ಹಸಿರು ಸೇನೆಯ ಪದಾಧಿಕಾರಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಸವೇಶ್ವರ ಕಾಲೋನಿ ನಿವಾಸಿ ಸುಬ್ರಹ್ಮಣ್ಯ (37) ಎಂಬುವವರು ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಸುಬ್ರಹ್ಮಣ್ಯ 17 ಫೈನಾನ್ಸ್ ಗಳಿಂದ ಬರೋಬ್ಬರಿ 10 ಲಕ್ಷ ಸಾಲ ಪಡೆದಿದ್ದರು. ಆತ್ಮಹತ್ಯೆಗೆ ಮುನ್ನಾ ಫೈನಾನ್ಸ್ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿವುದಾಗಿ ಗೋಡೆ ಮೇಲೆ ಬರೆದಿದ್ದಾರೆ. ತನ್ನ ಪತಿ ಫೈನಾನ್ಸ್ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತನ ಪತ್ನಿ ಭವ್ಯ ಆರೋಪಿಸಿದ್ದಾರೆ. ಇವರು ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು ಇವರ ಆಧಾರ್ ಕಾರ್ಡ್ ಪಡೆದು ಖಾಸಗಿ ಫೈನಾನ್ಸ್ ಕಂಪನಿಗಳು 14 ಲಕ್ಷ ಹಾಗೂ ಕೈಸಾಲ 2 ಲಕ್ಷಕ್ಕೂ ಅಧಿಕ ಸಾಲ ಪಡೆದಿದ್ದರು. ಸಾಲ ಮರುಪಾವತಿಗೆ ಕಂಪನಿ ಸಿಬ್ಬಂದಿ ಮನೆ ಬಾಗಿಲಿಗೆ ಬಂದು ಪ್ರತಿನಿತ್ಯ ಕಿರುಕುಳ ನೀಡುತ್ತಿದ್ದಲ್ಲದೆ ಮಾನಸಿಕ ಒತ್ತಡ ಹೇರುತ್ತಿದ್ದರು ಎಂದು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಬೆಟ್ಟದಪುರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿದ್ದಾರೆ.

ಕಾಡುಹಂದಿ ಬೇಟೆಗೆ ಹೊಂಚು: ಬಂಧನ

ಚಾಮರಾಜನಗರ: ಕಾಡುಹಂದಿ ಬೇಟೆಗೆ ಹೊಂಚುಹಾಕಿದ್ದ ಮೂವರನ್ನು ಪೊಲೀಸರು ಬಂಧಿಸಿದ ಘಟನೆ ಚಾಮರಾಜನಗರ ತಾಲೂಕಿನ ಮೇಲಾಜಿಪುರ ಸಮೀಪ ನಡೆದಿದೆ. ಪಣ್ಯದಹುಂಡಿ ಗ್ರಾಮದ ಕುಮಾರ್, ಹಾಸನದ ಚಂದನ್ ಹಾಗೂ ಚನ್ನಪಟ್ಟಣದ ವಿವೇಕ್ ಬಂಧಿತರು. ಕಾರಿನಲ್ಲಿ ಹೊಂಚುಹಾಕಿ ಕುಳಿತಿದ್ದ ಅವರನ್ನು ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ ಎರಡು ನಾಡ ಬಂದೂಕು, ಆರು ಸಜೀವ ಕಾಟ್ರೇಜ್‌ಗಳು, ಕಬ್ಬಿಣದ ಬಾಲ್ಸ್, ಕಾರು ಮತ್ತು ಬೈಕ್ ವಶಕ್ಕೆ ಪಡೆಯಲಾಗಿದೆ. ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಸದ ಸುಧಾಕರ್ ಆರೋಪಗಳನ್ನು ತಿರಸ್ಕರಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ

ಜಿಲ್ಲಾ ಅಧ್ಯಕ್ಷರ ಚುನಾವಣೆಯಲ್ಲಿ ನನ್ನ ಪಾತ್ರವಿಲ್ಲ

ಬೆಂಗಳೂರು: ಪಕ್ಷದ ರಾಜ್ಯಾಧ್ಯಕ್ಷನಾಗಿ ಯಾವುದೇ ಜಿಲ್ಲಾ ಅಧ್ಯಕ್ಷರ ಚುನಾವಣೆ ಪ್ರಕ್ರಿಯೆಯಲ್ಲಿ ತಮ್ಮ ಯಾವುದೇ ಪಾತ್ರವಿಲ್ಲ ಎಂದು ಬಿಜೆ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದ್ದಾರೆ.

ಸಂಸದ ಸುಧಾಕರ್ ಅವರ ಆರೋಪ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿ, ಚುನಾವಣೆ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎನ್ನುವುದನ್ನು ಎಲ್ಲ ಹಿರಿಯರಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ರಾಜ್ಯದ ಅಧ್ಯಕ್ಷನಾಗಿ ಯಾವುದೇ ಜಿಲ್ಲೆಯ ಚುನಾವಣೆ ಸಂಬಂಧ ಅಭಿಪ್ರಾಯ ಕೊಟ್ಟಿಲ್ಲ. ಕೊಡಲು ಅವಕಾಶವೂ ಇಲ್ಲ. ಕೇಂದ್ರದಿಂದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರಿಗೆ ಚುನಾವಣೆಯ ಜವಾಬ್ದಾರಿ ಕೊಟ್ಟಿದ್ದಾರೆ. 13 ಜನ ವೀಕ್ಷಕರನ್ನು ಕೂಡ ನೇಮಕ ಮಾಡಿದ್ದರು. ಪ್ರತಿಯೊಬ್ಬ ವೀಕ್ಷಕರಿಗೂ ಕೂಡ ಮೂರು-ಮೂರು ಜಿಲ್ಲೆಗಳ ಜವಾಬ್ದಾರಿ ಕೂಡ ನೀಡಲಾಗಿತ್ತು ಎಂದು ಸ್ಪಷ್ಟಪಡಿಸಿದರು.

ಪ್ರತಿ ಜಿಲ್ಲೆಗೂ ಚುನಾವಣಾಧಿಕಾರಿ, ರಿಟರ್ನಿಂಗ್ ಆಫೀಸರ್ ಕೂಡ ನೇಮಕಾತಿ ಆಗಿದೆ. ಅವರ ಸಮಕ್ಷಮದಲ್ಲಿ ಆಯಾ ಜಿಲ್ಲೆಗಳಲ್ಲಿ ಎಲ್ಲ ಪ್ರಮುಖರ ವಿಶ್ವಾಸಕ್ಕೆ ತೆಗೆದುಕೊಂಡು ಮೂರು ಹೆಸರನ್ನು ರಾಜ್ಯಕ್ಕೆ ಕಳುಹಿಸಿಕೊಟ್ಟಿದ್ದಾರೆ. ಜಿಲ್ಲೆಯ ತಂಡದಿಂದ ಕಳುಹಿಸಿದ 3 ಹೆಸರು ಹೈಕಮಾಂಡ್‌ಗೆ ಕಳುಹಿಸಿ ಅಲ್ಲಿಂದ ಅಂತಿಮ ತೀರ್ಮಾನವಾದ ಬಳಿಕ ಚುನಾವಣಾ ಪ್ರಕ್ರಿಯೆ ನಡೆದಿದೆ. ಅಧ್ಯಕ್ಷರ ಹೆಸರುಗಳ ಘೋಷಣೆಯಾಗಿದೆ. ಈ ಪ್ರಕ್ರಿಯೆಯಲ್ಲಿ ವಿಜಯೇಂದ್ರ ಪಾತ್ರ ಶೂನ್ಯ. ನಾನು ರಾಜ್ಯದ ಅಧ್ಯಕ್ಷನಾಗಿದ್ದರೂ ಸಹ ನನ್ನ ಜಿಲ್ಲೆಯ ಬಗ್ಗೆ ಅಭಿಪ್ರಾಯ ಕೊಡಬಹುದೇ ಹೊರತು ರಾಜ್ಯದ ಬೇರೆ ಜಿಲ್ಲೆಗಳ ಜಿಲ್ಲಾಧ್ಯಕ್ಷರ ಆಯ್ಕೆ ವಿಚಾರದಲ್ಲಿ ಅಭಿಪ್ರಾಯ ಕೊಡುವಂತಿಲ್ಲ. ನನಗೂ ಆ ಅಧಿಕಾರವಿಲ್ಲ ಎಂದರು.

ನಾನು ಯಾರನ್ನೂ, ಸುಧಾಕರ್ ಅವರನ್ನು ಕೂಡ ದೂಷಿಸುವುದಿಲ್ಲ. ಈ ಚುನಾವಣಾ ಪ್ರಕ್ರಿಯೆ ಬಗ್ಗೆ ಅವರಿಗೆ ಗೊಂದಲವಿದೆ. ಇಡೀ ದೇಶದಲ್ಲಿ ಪಕ್ಷದ ಸಂಘಟನಾತ್ಮಕ ಚುನಾವಣೆ ಇದೇ ರೀತಿಯಲ್ಲಿ ನಡೆಯುತ್ತಿದೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲೂ ಹಾಗೆಯೇ ನಡೆದಿದೆ. ಹೊಸದಾಗಿ ಯಾವುದೇ ಪ್ರಕ್ರಿಯೆ ಮಾಡಲು ನನಗೆ ಅಧಿಕಾರವಿಲ್ಲ. ಕೇಂದ್ರ ಎಲ್ಲವನ್ನೂ ಗಮನಿಸುತ್ತಿದೆ. ಈ ರೀತಿ ಹೇಳಿಕೆ ಕೊಡಬೇಡಿ. ಅದು ನಿಮಗೂ, ನನಗೂ ಗೌರವ ತರುವುದಿಲ್ಲ. ಅಲ್ಲಿ ಆಯ್ಕೆಯಾದವರು ಕೂಡ ಪಕ್ಷದ ಒಬ್ಬ ಕಾರ್ಯಕರ್ತ. ಮತ್ತೆ ಸುಧಾಕರ್ ಅವರ ಸಂಬಂಧಿ ಕೂಡ ಹೌದು. ಚುನಾವಣಾ ಪ್ರಕ್ರಿಯೆ ಅವರು ಅರ್ಥ ಮಾಡಿಕೊಳ್ಳಲಿ. ಅವರು ಏನೇ ಟೀಕೆ ಮಾಡಿದರೂ ನಾನು ಟೀಕಿಸಲು ಹೋಗುವುದಿಲ್ಲ. ಮಾಜಿ ಸಚಿವರಾಗಿ ಅವರಿಗೂ ಸಹ ಜವಾಬ್ದಾರಿಗಳಿವೆ. ಪಕ್ಷ ಏನು ತೀರ್ಮಾನ ಮಾಡಿದೆಯೋ ಅದಕ್ಕೆ ಕೇಂದ್ರದ ಸಮ್ಮತಿ ಕೂಡ ಇದೆ. ಯಾರೂ ಮೂಗು ತೂರಿಸುವುದಿಲ್ಲ ಎಂದರು.

ತಪ್ಪುಗಳಿದ್ದರೆ ತಿದ್ದಿಕೊಳ್ಳುವೆ

ಈ ರೀತಿ ಹೇಳಿಕೆ ಕೊಡುವುದು ಪಕ್ಷಕ್ಕೂ ಗೌರವ ತರುವುದಿಲ್ಲ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ನನ್ನ ನಡವಳಿಕೆಗಳನ್ನು ತಿದ್ದಿಕೊಳ್ಳಬೇಕು ಎಂದು ಹೇಳಿದ್ದಾರೆ. ತಪ್ಪುಗಳಿದ್ದರೆ ತಿದ್ದಿಕೊಳ್ಳಲು ನಾನು ಸಿದ್ಧ. ಸುಧಾಕರ್ ಅವರನ್ನು ಭೇಟಿ ಮಾಡುತ್ತೇನೆ. ನಾನೂ ಸಹ ತಿದ್ದಿಕೊಳ್ಳುತ್ತೇನೆ. ನಾನೊಬ್ಬ ರಾಜ್ಯದ ಅಧ್ಯಕ್ಷ. ಇದು ಮಂತ್ರಿ ಸ್ಥಾನ ಅಲ್ಲ. ಮನೆ ಮಠ ಬಿಟ್ಟು ಕೆಲಸ ಮಾಡುತ್ತಿದ್ದೇನೆ. ಪಕ್ಷ ಅವರ ಸ್ವತ್ತೂ ಅಲ್ಲ, ನನ್ನ ಸ್ವತ್ತೂ ಅಲ್ಲ. ಲಕ್ಷಾಂತರ ಕಾರ್ಯಕರ್ತರು ಪಕ್ಷಕ್ಕೋಸ್ಕರ ದುಡಿಯುತ್ತಿದ್ದಾರೆ. ಹಾಗಾಗಿ ಪಕ್ಷ ನನ್ನ ಸ್ವತ್ತು, ನಾನು ಮುಂದೆ ಮುಖ್ಯಮಂತ್ರಿ ಆಗಬೇಕು ಎನ್ನುವ ಯೋಚನೆ ತಲೆಯಲ್ಲಿಟ್ಟುಕೊಂಡು ನಾನು ಪಕ್ಷ ಸಂಘಟನೆ ಮಾಡುತ್ತಿಲ್ಲ. ಹಗುರವಾಗಿ ಮಾತನಾಡುವುದು ಅವರಿಗೆ ಶೋಭೆ ತರುವುದಿಲ್ಲ. ಖಂಡಿತ ಆ ರೀತಿ ಮಾತನಾಡಬಾರದು ಎಂದು ನಾನು ಮನವಿ ಮಾಡುತ್ತೇನೆ ಎಂದರು.

ಸುಧಾಕರ್ ನಮ್ಮ ಪಕ್ಷಕ್ಕೆ ಐರನ್ ಲೆಗ್ ಇದ್ದಂತೆ

ದಾವಣಗೆರೆ: ಸಂಸದ ಡಾ.ಕೆ ಸುಧಾಕರ್ ಯಡಿಯೂರಪ್ಪನವರು ಮತ್ತು ರಾಜ್ಯಾಧ್ಯಕ್ಷ ವಿಜಯೇಂದ್ರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಆತ ನಮ್ಮ ಬಿಜೆಪಿಗೆ 'ಐರನ್ ಲೆಗ್' ಇದ್ದಂತೆ ಎಂದು ಮಾಜಿ ಸಚಿವ ಎಂಪಿ ರೇಣುಕಾಚಾರ್ಯ ಅಕ್ರೋಶ ಹೊರಹಾಕಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನಲ್ಲಿ ಇದ್ದೆ. ನಿನಗೆ ಅಲ್ಲಿ ಸಚಿವ ಸ್ಥಾನ ಕೊಡಲಿಲ್ಲ. ಇಂಧನ ಸಚಿವ ಬೇಕೆಂದು ಪಟ್ಟು ಹಿಡಿದಿದ್ದೆ. ಅದು ಆಗದಿದ್ದಾಗ ಮುಂಬಯಿಗೆ ಹೋಗಿ ವಾಪಸ್ಸು ಬಂದಿದ್ದೆ. ಕಾಂಗ್ರೆಸ್‌ನಲ್ಲಿ ಏನೂ ಆಗದ ಹಿನ್ನೆಲೆಯಲ್ಲಿ ಬಿಜೆಪಿಗೆ ಬಂದೆ ಅಷ್ಟೇ ಹೊರತು ಬೇರೆ ಯಾವ ಉದ್ಧಾರಕ್ಕಲ್ಲ ಎಂದರು.

ನಂಬಿಕೆಗೆ ಸುಧಾಕರ್ ಅನರ್ಹ

ಬೆಂಗಳೂರು: ಒಂದು ವೇಳೆ ಬಿಜೆಪಿಯಲ್ಲಿ ಇರಲು ಸಾಧ್ಯವಾಗದಿದ್ದರೆ ಅಂಥವರು ಪಕ್ಷ ಬಿಟ್ಟು ಹೋಗಲು ಸ್ವತಂತ್ರರು. ಪಕ್ಷ ಶುದ್ಧಿಯಾಗಬೇಕೆಂದರೆ ಬಾಯಿಗೆ ಬಂದಂತೆ ಮಾತನಾಡುವವರು ಮೊದಲು ತೊಲಗಲಿ ಎಂದು ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಭಿನ್ನಮತೀಯರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್ ನಂಬಿಕೆಗೆ ಅನರ್ಹ ಎಂದು ನಾನು ಮೊದಲೇ ಹೇಳಿದ್ದೆ. ಈಗ ನನ್ನ ಮಾತು ನಿಜವಾಗಿದೆ. ಕಾಂಗ್ರೆಸ್‌ನಲ್ಲಿ ಈತ ಮೂಲೆಗುಂಪಾಗಿದ್ದ. ಬಿಜೆಪಿಗೆ ಬಂದು ಎರಡು ಪ್ರಬಲ ಖಾತೆ ಪಡೆದಾಗ ಎಲ್ಲವೂ ಚೆನ್ನಾಗಿತ್ತು. ಈಗ ಈ ಮಹಾನುಭಾವನಿಗೆ ಪಕ್ಷದಲ್ಲಿ ಯಾವುದೂ ಚೆನ್ನಾಗಿಲ್ಲವೇ ಎಂದು ತರಾಟೆಗೆ ತೆಗೆದುಕೊಂಡರು. ಲೋಕಸಭೆ ಚುನಾವಣೆಯಲ್ಲಿ ನೀನು ಗೆದಿದ್ದು ನಿನ್ನ ವೈಯಕ್ತಿಕ ವರ್ಚಸ್ಸಿನಿಂದಲ್ಲ, ಪ್ರಧಾನಿ ನರೇಂದ್ರ ಮೋದಿ ಅಲೆ, ಬಿಜೆಪಿ-ಜೆಡಿಎಸ್ ಮೈತ್ರಿಯಿಂದಾಗಿ ಲೋಕಸಭೆ ಪ್ರವೇಶ ಮಾಡಿದೆ. ನಿನ್ನ ಪರವಾಗಿ ಯಡಿಯೂರಪ್ಪ, ವಿಜಯೇಂದ್ರ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಎಚ್.ಡಿ.ಕುಮಾರಸ್ವಾಮಿ ಅವರು ಪ್ರಚಾರ ಮಾಡಿರಲಿಲ್ಲವೇ? ಉಂಡ ಮನೆಗೆ ಎರಡು ಬಗೆಯುವ ನಿಮಂಥವರು ಯಾವ ಪಕ್ಷದಲ್ಲಿರಲು ನಾಲಾಯಕ್ ಎಂದು ಟೀಕಾ ಪ್ರಹಾರ ನಡೆಸಿದರು.

ಗೆದ್ದ ಮೇಲೆ ಕಾರ್ಯಕರ್ತರಿಗೆ ಬೆಲೆಯನ್ನೇ ಕೊಡುವುದಿಲ್ಲ. ಯಲಹಂಕದಲ್ಲಿ ನಾನು ಬಿಜೆಪಿ ವತಿಯಿಂದ ನಿನಗೆ ಎಷ್ಟು ಮುನ್ನಡೆ ಕೊಟ್ಟೆ ಎಂಬುದನ್ನು ಮರೆಯಬೇಡ. ಮಿಸ್ಟರ್ ಸುಧಾಕರ್ ಲೋಕಸಭೆ ಚುನಾವಣೆಯಲ್ಲಿ ಗೆದ್ದ ನಂತರ ಸೌಜನ್ಯಕ್ಕಾದರೂ ಮಾತನಾಡಿಸಿಲ್ಲ. ಕಾರ್ಯಕರ್ತರಿಗೆ ಗೌರವ ಕೊಡದಿದ್ದರೆ ನೀನು ಜನಪ್ರತಿನಿಧಿಯಾಗಲು ಅರ್ಹನೇ ಅಲ್ಲ. ಕಾಲ ಈಗಲೂ ಮಿಂಚಿಲ್ಲ. ತಪ್ಪು ತಿದ್ದಿಕೊಂಡು ಈಗಲಾದರೂ ಸಂಸದರಾಗಿ ನಿಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಿ. ಬಾಯಿಗೆ ಬಂದಂತೆ ಇನ್ನು ಮುಂದೆ ಮಾತನಾಡಿದರೆ ಸುಮ್ಮನಿರುವುದಿಲ್ಲ.

-**ಎಸ್.ಆರ್.ವಿಶ್ವನಾಥ್**, ಶಾಸಕ

ಬಚ್ಚಾಗಳಿಂದ ಕಲಿಯಬೇಕಿಲ್ಲ

ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಚಡ್ಡಿ ಹಾಕುವ ಮುನ್ನ ನಾವು ಬಿಜೆಪಿ ಸಂಘಟನೆ ಮಾಡಿದ್ದೇವೆ. ಈ ಬಚ್ಚಾನಿಂದ ನಾವು ಕಲಿಯಬೇಕೆ ? ಎಂದು ಕೆಲ ಕಾಲ ತಣ್ಣಗಿದ್ದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷ ಸಂಘಟನೆ ಕುರಿತು ನಾನು ವಿಜಯೇಂದ್ರನಂತಹ ಬಚ್ಚಾ ಅವರಿಂದ ನಾನು ಕಲಿಯಬೇಕಿಲ್ಲ. ಏಕೆಂದರೆ ಅವರಪ್ಪ ಯಡಿಯೂರಪ್ಪನವರ ಜತೆ ಪಕ್ಷ ಕಟ್ಟಿದ್ದೇನೆ. ನಾನು ಬಿಜೆಪಿಯಲ್ಲಿ ಸಂಘಟನೆ ಮಾಡುತ್ತಿದ್ದಾಗ ವಿಜಯೇಂದ್ರ ಚಡ್ಡಿ ಹಾಕಿ ತಿರುಗಾಡುತ್ತಿದ್ದ ಎಂದರು. ನೀವು ನಮನ್ನು ಪಕ್ಷದಿಂದ ಹೊರ ಹಾಕುವುದಿದ್ದರೆ ಹಾಕಿ ನಮದೇನೂ ತಕರಾರು ಇಲ್ಲ. ಎಲ್ಲದಕ್ಕೂ ನಾವು ಸಜ್ಜಾಗಿದ್ದೇವೆ. ನಮಗೆ ಯಾರ ಭಯವೂ ಇಲ್ಲ. ನಿಮಪ್ಪನ ಮನೆಯಲ್ಲಿ ಭಯ ಇರಬಹುದೇ ಹೊರತು ನಮಗೇನೂ ಭಯವಿಲ್ಲ. ನಾವು ಎಲ್ಲದಕ್ಕೂ ಸಿದ್ದರಾಗಿಯೇ ಯುದ್ಧ ಸಾರಿದ್ದೇವೆ. ಮುಂದೇನಾಗುತ್ತದೋ ಗೊತ್ತಿಲ್ಲ. ಬಿಜೆಪಿಯೊಳಗೆ ಸರ್ವಾಧಿಕಾರಿ ಧೋರಣೆ ಕೊನೆಗೊಳ್ಳಬೇಕು. ವಿಜಯೇಂದ್ರ ಕಾರ್ಯವೈಖರಿ ಬಗ್ಗೆ ಯಾರಿಗೂ ಸಮಾಧಾನವಿಲ್ಲ. ಪಕ್ಷದ ಹಿರಿಯರೇ ಅಸಮಾಧಾನ ಹೊರ ಹಾಕುತ್ತಿದ್ದಾರೆ. ಅವರ ಚೇಲಾಗಳಿಗೆ ಸಮಾಧಾನ ಇದ್ದರೂ ಇರಬಹುದು ಎಂದರು.

ವಿಜಯೇಂದ್ರ ಅವರ ಅಸಲಿ ಬಣ್ಣ ಬಯಲಾಗುತ್ತಿದೆ. ಜಿಲ್ಲಾಧ್ಯಕ್ಷರ ನೇಮಕ ಹೇಗೆ ಆಗಿದೆ ಎಲ್ಲಾ ವಿಚಾರಗಳು ಗೊತ್ತಾಗುತ್ತಿವೆ. ವಿಜಯೇಂದ್ರ ಅವರಿಗೆ ಸಲಹೆ ಕೊಡುತ್ತೇನೆ. ಯಾಕೆ ಸುಮ್ಮನೆ ಸರ್ಕಸ್ ಮಾಡಿತ್ತೀರಿ ನೇರವಾಗಿ ರಾಧಾ ಮೋಹನ್ ದಾಸ್ ಅವರ ಬಳಿ ಮಾತಾಡಿ. ಯಾವ ನಿಟ್ಟನಲ್ಲಿ ಪಕ್ಷ ಹೋಗುತ್ತಿದೆ ನೋಡಿ. ಅಪ್ಪ, ಮಗ ಮತ್ತೊಬ್ಬ ಮಗ ನೀವೆ ಎಲ್ಲಾ ಇದ್ದು ಬಿಡಲಿ. ಮುಂದೆ ನಡೆಯಲಿರುವ ಸಭೆಯಲ್ಲಿ ಏನು ಚರ್ಚೆ ಮಾಡಬೇಕೋ ಮಾಡುತ್ತೇವೆ. ವಿಜಯೇಂದ್ರ ಅವರ ಅಧ್ಯಕ್ಷತೆ ಒಪ್ಪಲು ಸಾಧ್ಯವಿಲ್ಲ. ಸುತಾರಾಂ ಒಪ್ಪುವುದಿಲ್ಲ.

-**ಬಸನಗೌಡ ಪಾಟೀಲ್ ಯತ್ನಾಳ್**, ಶಾಸಕ

ಬಿಎಸ್‌ವೈ ಬಗ್ಗೆ ಮಾತನಾಡಬೇಡಿ

ಬೆಂಗಳೂರು: ಪಕ್ಷದ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಬಗ್ಗೆ ಮಾತನಾಡುವಾಗ ಗೌರವ ಕೊಟ್ಟು ಮಾತನಾಡಬೇಕು. ಪಕ್ಷದ ಚೌಕಟ್ಟಿನಲ್ಲಿ ಮಾತನಾಡದಿದ್ದರೆ ಅದೇ ಭಾಷೆಯಲ್ಲಿ ನಾವು ಮಾತನಾಡಬೇಕಾಗುತ್ತದೆ ಎಂದು ಸಂಸದ ಡಾ.ಕೆ.ಸುಧಾಕರ್ ಅವರಿಗೆ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಎಚ್ಚರಿಕೆ ಕೊಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೀವು ಬೇರೆಯವರದ್ದೇನು ಬಿಚ್ಚಿಡುವುದು ಬೇಡ. ನಿಮ್ಮದೇನಾದರೂ ಬಿಚ್ಚಿಕೊಂಡಿದ್ದರೆ ಅದನ್ನು ಮೊದಲು ಮುಚ್ಚಿಕೊಂಡರೆ ಸಾಕು. ವಿಜಯೇಂದ್ರ ಮತ್ತು ಯಡಿಯೂರಪ್ಪನವರ ಬಗ್ಗೆ ನಾಲಿಗೆ ಬಿಗಿ ಹಿಡಿದು ಮಾತನಾಡದಿದ್ದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದರು.

ಸುಧಾಕರ್ ಗಂಭೀರವಾಗಿ ನಡೆದುಕೊಂಡು ಪಕ್ಷದ ಚೌಕಟ್ಟಿನಲ್ಲೇ ಮಾತನಾಡಬೇಕೆಂದು ನಾನು ಕಾರ್ಯಕರ್ತರ ಪರವಾಗಿ ಮನವಿ ಮಾಡುತ್ತೇನೆ. ರಾಜ್ಯಾಧ್ಯಕ್ಷರ ಬಗ್ಗೆ ಹಗುರವಾಗಿ ಮಾತನಾಡುವುದು ಬೇಡ. ಅವರ ಶಕ್ತಿ ಏನೆಂಬುದನ್ನು ವರಿಷ್ಠರು ಅರಿತೇ ರಾಜ್ಯಾಧ್ಯಕ್ಷರನ್ನಾಗಿ ಮಾಡಿದ್ದಾರೆ. ಸುಧಾಕರ್ ಒಬ್ಬರಿಂದಲೇ ಯಡಿಯೂರಪ್ಪ ಮುಖ್ಯಮಂತ್ರಿಯಾಗಿರಲಿಲ್ಲ. ಅವರನ್ನು ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದೇ ಪಕ್ಷದ ಹೈಕಮಾಂಡ್ ಚುನಾವಣೆಯಲ್ಲಿ ಘೋಷಣೆ ಮಾಡಿತ್ತು. ಪರಿಣಾಮವಾಗಿ ನಾವು 104 ಸ್ಥಾನ ಗೆದ್ದಿದ್ದವು. ಕಾಂಗ್ರೆಸ್‌ನಲ್ಲಿ ನೀವು ಏನಾಗಿದ್ದಿರ ಎಂದು ಪ್ರಶ್ನೆಮಾಡಿದರು.

ನೀವು ಮಹಾನ್ ನಾಯಕ ಎಂಬ ಕಾರಣಕ್ಕಾಗಿ ಪಕ್ಷ ನಿಮ್ಮನ್ನು ಚುನಾವಣಾ ಪ್ರಣಾಳಿಕೆ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದರು. ಅವರ ಪ್ರಣಾಳಿಕೆಯಿಂದಲೇ ಬಿಜೆಪಿ 66 ಸ್ಥಾನಕ್ಕೆ ಇಳಿಯಿತು. ಸಮಾಧಿ ಕಟ್ಟುವ ಮಾತು ಬೇಡ. ಪಕ್ಷದ ವ್ಯವಸ್ಥೆ ಅರ್ಥ ಮಾಡಿಕೊಂಡು ಸಂಸದರಾಗಿ ನೀವು ನಿಮ್ಮ ಕೆಲಸ ಮಾಡಿ. ಎಲ್ಲವೂ ನೀವು ಹೇಳಿದಂತೆ ಆಗಬೇಕೆಂದರೆ ನಡೆಯುವುದಿಲ್ಲ. ಬಿಜೆಪಿ ಕಾರ್ಯಕರ್ತರ ಪಕ್ಷ ಎಂಬುದನ್ನು ಅರಿಯಿರಿ.

- **ಪ್ರೀತಂಗೌಡ**, ಬಿಜೆಪಿ ಪ್ರಧಾನ ಕಾರ್ಯದರ್ಶಿ

ಬಿಜೆಪಿಯಲ್ಲೀಗ ಮೂಲ-ವಲಸಿಗರ ಬಣದಾಟ

← ಮೊದಲಪುಟದಿಂದ

ರಾಜ್ಯಾಧ್ಯಕ್ಷರ ಬದಲಾವಣೆ ಕೂಗಿನಿಂದ ಆರಂಭಗೊಂಡ ಬಣ ಬಡಿದಾಟ, ನಂತರ ಏಕವಚನ ಪ್ರಯೋಗಕ್ಕೂ ಕಾರಣವಾಗಿ ಬಚ್ಚಾ, ಚಡ್ಡಿ ಭಾಷೆ ಮೀರಿ ತಾಕತ್ತಿನ ಮಾತನ್ನೂ ದಾಟಿ ಈಗ ಪಕ್ಷದಿಂದ ಹೊರ ಹಾಕುವುದಿದ್ದರೆ ಹಾಕಿ ನಮ್ಮದೇನೂ ತಕರಾರಿಲ್ಲ. ಎಲ್ಲದಕ್ಕೂ ನಾವು ಸಜ್ಜಾಗಿದ್ದೇವೆ ಎಂಬಲ್ಲಿಗೆ ಭಿನ್ನರ ಬಣ ಬಂದು ತಲುಪಿದೆ. ಇದೇ ವೇಳೆ ಸಂಸದ ಡಾ.ಕೆ.ಸುಧಾರಕ್ ಅವರ ಮಾತಿನಿಂದ ತಿರುಗಿ ಬಿದ್ದಿರುವ ಬಿಜೆಪಿಯ ಹಲವು ನಾಯಕರು ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ. ಇದೇ ವೇಳೆ ಜಿಲ್ಲಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯಲ್ಲಿ ತಮ್ಮ ಪಾತ್ರವಿಲ್ಲ, ವರಿಷ್ಠರ ಸೂಚನೆಯಂತೆ ನಡೆದಿದೆ ಎಂದು ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಸೊರಗಿದ ಕಮಲ- ಹೋರಾಟ ವಿಫಲ: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಆಡಳಿತಕ್ಕೆ ಬಂದು ಎರಡು ವರ್ಷಗಳಾಗುತ್ತಿದೆ. ಆದರೆ, ಸರಕಾರದ ವೈಫಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಪ್ರತಿಪಕ್ಷ ಬಿಜೆಪಿ ಸಂಪೂರ್ಣ ವಿಫಲವಾಗಿದೆ ಎಂಬ ಆರೋಪ ಕೇಳಿ ಬರುತ್ತಿದೆ. ಕಮಲ ಪಕ್ಷದ ಆಂತರಿಕ ಕಿತ್ತಾಟ ಪಕ್ಷಕ್ಕೆ ದುಬಾರಿಯಾಗಿ ಪರಿಣಮಿಸಿದ್ದು, ಮುಂದೇನು ಎಂಬ ಗೊಂದಲ ಸ್ವತಃ ರಾಜ್ಯ ನಾಯಕರಲ್ಲೂ ಕಾಡುತ್ತಿದೆ. ಬಣ ಗುದ್ದಾಟದಿಂದ ಬಳಲಿ ಹೋಗಿರುವ ಬಿಜೆಪಿಗೆ ಆಂತರಿಕ ಆಪರೇಷನ್ ಅಗತ್ಯವಿದೆ ಎಂಬ ಚರ್ಚೆಗಳು ಪಕ್ಷದಲ್ಲಿ ತೀವ್ರವಾಗಿ ನಡೆಯುತ್ತಿವೆ.

ಬಿಜೆಪಿಯಲ್ಲಿ ನಡೆಯುತ್ತಿರುವ ವಿದ್ಯಮಾನ ಗಮನಿಸಿದರೆ ಬಿ.ವೈ.ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ಇರುವ ತನಕ ಪಕ್ಷದಲ್ಲಿನ ಗೊಂದಲಗಳು ಬಗೆಹರಿಯುವ ಲಕ್ಷಣಗಳು ಕಾಣಿಸುತ್ತಿಲ್ಲ. ಭಿನ್ನರ ಕೈ ಮೇಲಾಗುತ್ತಿದ್ದು, ಅವರ ಪ್ರಮುಖ ಬೇಡಿಕೆ ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಇಳಿಸುವುದೇ ಆಗಿರುವುದರಿಂದ ಅದು ಈಡೇರುವ ತನಕ ಭಿನ್ನರು ಸುಮ್ಮನಿರುವುದಿಲ್ಲ. ಒಂದು ವೇಳೆ ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಇಳಿಸಿದ ತಕ್ಷಣ ಎಲ್ಲವೂ ಸರಿ ಹೋಗುತ್ತದಾ ಎಂದರೆ, ಅದೂ ಖಂಡಿತ ಇಲ್ಲ. ಇದೆಲ್ಲವನ್ನು ಗಮನಿಸಿದರೆ ರಾಜ್ಯ ಬಿಜೆಪಿ ಒಗ್ಗಟ್ಟು ಮೂಡುವುದು ಕಷ್ಟ ಎನ್ನಲಾಗಿದೆ.

ಜಿಲ್ಲಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಯಾವ ರೀತಿ ನಡೆಯುತ್ತದೆ ಅಂತ ಬಿಜೆಪಿ ಕಾರ್ಯಕರ್ತರಿಗೆಲ್ಲ ಗೊತ್ತಿದೆ. ನಾಲ್ಕೈದು ವರ್ಷಗಳ ಹಿಂದೆ ಸೇರಿರುವವರಿಗೆ ಚುನಾವಣಾ ಪ್ರಕ್ರಿಯೆ ಗೊತ್ತಿರಲ್ಲ. ಸಂಸದ ಸುಧಾಕರ್ ಗಂಭೀರವಾಗಿ ನಡೆದುಕೊಂಡು ಪಕ್ಷದ ಚೌಕಟ್ಟಿನಲ್ಲೇ ಮಾತನಾಡಬೇಕೆಂದು ಕಾರ್ಯಕರ್ತರ ಪರವಾಗಿ ಮನವಿ ಮಾಡುತ್ತೇನೆ. ರಾಜ್ಯಾಧ್ಯಕ್ಷರ ಬಗ್ಗೆ ಹಗುರವಾಗಿ ಮಾತನಾಡುವುದು ಬೇಡ.

- **ಪ್ರೀತಂಗೌಡ,** ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ಹುಟ್ಟೂರಲ್ಲಿ 10 ಕಿಲೋಮೀಟರ್ ವರೆಗೆ ಮೆರವಣಿಗೆ

ಬಿಗ್‌ಬಾಸ್ ವಿನ್ನರ್ ಹನುಮಂತಗೆ ಸ್ವಾಗತ

ಹಾವೇರಿ: ಬಿಗ್ ಬಾಸ್ ಕನ್ನಡ 11ರ ವಿನ್ನರ್ ಹನುಮಂತಗೆ ತವರೂರಲ್ಲಿ ಅದ್ದೂರಿ ಸ್ವಾಗತ ಸಿಕ್ಕಿದೆ. ಜವಾರಿ ಹೈದನಿಗೆ ಹೂವಿನ ಹಾರ ಹಾಕಿ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು. ಹಾವೇರಿ ಜಿಲ್ಲೆ ಸವಣೂರು ಪಟ್ಟಣದಿಂದ ಚಿಲ್ಲೂರು ಬಡ್ನಿ ವರೆಗೆ ಅದ್ದೂರಿ ಮೆರವಣಿಗೆ ಮಾಡಲಾಯಿತು. ಸುಮಾರು 10 ಕಿಲೋಮೀಟರ್ ವರೆಗೆ ತೆರದ ವಾಹನ ಮೆರವಣಿಗೆ ಸಾಗಿತು. ಹನುಮಂತನ ಫ್ಯಾನ್ಸ್, ಸ್ಥಳೀಯರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ನಮ್ಮ ಹುಡುಗ ಬಿಗ್ ಬಾಸ್ ವಿನ್ನರ್ ಆದ' ಎಂದು ಡಿಜೆ ಹಾಡಿಗೆ ಅಭಿಮಾನಿಗಳು ಕುಣಿದು ಕುಪ್ಪಳಿಸಿದರು. ಪಟಾಕಿ ಸಿಡಿಸಿ ಸಂಭ್ರಮಿಸಿದರು. ಬಿಗ್ ಬಾಸ್ ವಿನ್ನರ್ ಕಪ್ ಹಿಡಿದು ಹನುಮಂತ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಅಭಿಮಾನಿಗಳು ಕುಣಿದು ಕುಪ್ಪಳಿಸಿದರು. ಹನುಮಂತ ಜೊತೆ ಸೆಲ್ಫಿ ತೆಗೆಸಿಕೊಳ್ಳಲು ಮುಗಿಬಿದ್ದರು. ಜನರತ್ತ ಕೈ ಬಿಸಿ, ಕೈ ಮುಗಿದು ಹನುಮಂತ ಧನ್ಯವಾದ ತಿಳಿಸಿದರು. ತನ್ನನ್ನು ಗೌರವಿಸಿ ಅದ್ದೂರಿ ಮೆರವಣಿಗೆ ಮಾಡಿದ ಊರಿನವರಿಗೆ ಕೃತಜ್ಞತೆ ಸಲ್ಲಿಸಿದರು.

ಬಿಗ್ ಬಾಸ್ ಕನ್ನಡ 11ರ ವಿನ್ನರ್ ಹನುಮಂತಗೆ ತವರೂರಲ್ಲಿ ಹೂವಿನ ಹಾರ ಹಾಕಿ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು.

ಅತ್ತೆಯನ್ನು ಕೊಂದು ಕಾಲುವೆಗೆ ಎಸೆದ ಅಳಿಯ

ದೇವರ ಹಿಪ್ಪರಗಿ: ನಿರಂತರ ಮದ್ಯ ಸೇವಿಸಿ ಹೆಂಡತಿಯ ಜತೆ ಜಗಳವಾಡುತ್ತಿದ್ದ ಅಳಿಯನಿಗೆ ಬುದ್ಧಿವಾದ ಹೇಳಲು ಬಂದ ಅತ್ತೆಯನ್ನೇ ಬರ್ಬರವಾಗಿ ಕೊಲೆಮಾಡಿ ಅತ್ತೆಯ ಶವವನ್ನು ಚೀಲದಲ್ಲಿ ತುಂಬಿ ಕಾಲುವೆಗೆ ಎಸೆದ ಘಟನೆ ದೇವರ ಹಿಪ್ಪರಗಿ ಚಿಕ್ಕರೂಗಿಯಲ್ಲಿ ನಡೆದಿದೆ ಇಂಡಿ ತಾಲೂಕಿನ ಶಿರಶ್ಯಾಡ ಗ್ರಾಮದ ಗೌರಬಾಯಿ ಈರಣ್ಣನರಳಿಯನ್ನು ಭೀಮಪ್ಪ ಗುಗ್ಗರಿ(ಪಡಸಲಗಿ)ಕೊಲೆ ಮಾಡಿದ್ದಾನೆ.

ಘಟನೆಯ ವಿವರ: ಭೀಮಪ್ಪನಿಗೆ ಗೌರಾಬಾಯಿಯ ಮಗಳು ದೇವಕಿ ಜತೆ ಮದುವೆ ಮಾಡಲಾಗಿತ್ತು, ವಿಪರೀತ ಸಾರಾಯಿ ಚಟಕ್ಕೆ ದಾಸನಾದ ಕಾರಣ ಗಂಡ-ಹೆಂಡತಿ ನಡುವೆ ಆಗಾಗ ಜಗಳ ನಡೆಯುತ್ತಿತ್ತು. ಅಳಿಯ ಮಗಳಿಗೆ ಬುದ್ಧಿವಾದ ಹೇಳಲು ಶಿರಶ್ಯಾಡದಿಂದ ಮಂಗಳವಾರ ಗೌರಾಬಾಯಿ ಚಿಕ್ಕರೂಗಿ ಗ್ರಾಮಕ್ಕೆ ಬಂದಿದ್ದಳು. ಈ ವೇಳೆ ಭೀಮಪ್ಪ ಅತ್ತೆಯ ಮೇಲೆ ಸಿಟ್ಟಿಗೆದ್ದು ದೊಣ್ಣೆಯಿಂದ ಬಲವಾಗಿ ಹೊಡೆದು ಕೊಂದಿದ್ದಾನೆ. ನಂತರ ಶವವನ್ನು ಚೀಲದಲ್ಲಿ ಕಟ್ಟಿ ಗ್ರಾಮದ ಹತ್ತಿರವಿರುವ ನೀರಾವರಿ ಕಾಲುವೆಗೆ ಬಿಸಾಕಿದ್ದಾನೆ. ಈ ವಿಷಯ ತಿಳಿದ ಪತ್ನಿ ದೇವಕಿಗೆ ಜೀವ ಬೆದರಿಕೆ ಹಾಕಿದ್ದ. ಆದರೂ ಪತ್ನಿ ದೇವರಹಿಪ್ಪರಗಿ ಪೊಲೀಸ್ ಠಾಣೆಗೆ ಧಾವಿಸಿ ನಡೆದ ವಿಷಯ ತಿಳಿಸಿದ್ದಾಳೆ.

ಕೂಡಲೇ ಸ್ಥಳಕ್ಕೆ ತೆರಳಿದ ಪಿಎಸ್‌ಐ ಬಸವರಾಜ ತಿಪ್ಪಾರೆಡ್ಡಿ ಹಾಗೂ ಪೊಲೀಸ್ ಸಿಬ್ಬಂದಿ ಅಗ್ನಿಶಾಮಕ ಸಿಬ್ಬಂದಿ ಜತೆಗೂಡಿ ಕೆನಾಲ್‌ನಲ್ಲಿ ಶವಕ್ಕಾಗಿ ಶೋಧನೆ ಕೈಗೊಂಡು ಬುಧವಾರ ಮಧ್ಯಾಹ್ನ ಶವವನ್ನು ಹೊರತೆಗೆದಿದ್ದಾರೆ.

ಫೆ.4ರಂದು ಬ್ರಿಗೇಡ್‌ಗೆ ಚಾಲನೆ: ಈಶ್ವರಪ್ಪ

ಶಿವಮೊಗ್ಗ: ಬಸವನಬಾಗೇವಾಡಿಯಲ್ಲಿ ಫೆ. 4ರಂದು ಸಾವಿರಾರು ಸ್ವಾಮೀಜಿಗಳ ನೇತೃತ್ವದಲ್ಲಿ ಕ್ರಾಂತಿವೀರ ಬ್ರಿಗೇಡ್‌ಗೆ ಚಾಲನೆ ನೀಡಲಾಗುವುದು ಎಂದು ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಹೇಳಿದರು.

ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕ್ರಾಂತಿವೀರ ಬ್ರಿಗೇಡ್ ಎನ್ನುವುದು ಪಕ್ಷಾತೀತವಾಗಿದೆ. ಹಿಂದೂ ಸಮಾಜದ ಒಗ್ಗೂಡುವಿಕೆಗಾಗಿ ಇದನ್ನು ಸ್ಥಾಪಿಸಲಾಗುತ್ತಿದೆ. ಬಸವಣ್ಣ ಹುಟ್ಟಿದ ನಾಡಾದ ಬಸವನ ಬಾಗೇವಾಡಿಯಿಂದಲೇ ಇದಕ್ಕೆ ಚಾಲನೆ ಸಿಗಲಿದೆ. ಫೆ. 4ರಂದು ಇದರ ಉದ್ಘಾಟನೆಯಾಗಲಿದೆ. ಉತ್ತರ ಕರ್ನಾಟಕದಿಂದ 1008 ಸ್ವಾಮೀಜಿಗಳು ಈ ಕಾರ್ಯಕ್ರಮಕ್ಕೆ ಆಗಮಿಸಲಿದ್ದು, ಶಿವಮೊಗ್ಗದಿಂದಲೂ ಕೂಡ ಸುಮಾರು 250ಕ್ಕೂ ಅಧಿಕ ರಾಷ್ಟ್ರ ಭಕ್ತರ ಬಳಗದ ಕಾರ್ಯಕರ್ತರು ಇದರಲ್ಲಿ ಭಾಗವಹಿಸಲಿದ್ದಾರೆ ಎಂದರು.

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್, ಗದಗ)
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ,
ಕೊಠಡಿ ಸಂಖ್ಯೆ-101, ಜಿಲ್ಲಾ ಆಡಳಿತ ಭವನ, ಗದಗ.
ದೂರವಾಣಿ : 08372-233996 ಇಮೇಲ್ : dhogadag@gmail.com
ಕ್ರ.ಸಂ:ಪೂರೈಕೆ/ಇ-ಟೆಂಡರ್/207/2024-25 ದಿನಾಂಕ : 30.01.2025

ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ

2024-25 ನೇ ಸಾಲಿನಲ್ಲಿ ಗದಗ ಜಿಲ್ಲೆಯ ಅಧೀನ ಆರೋಗ್ಯ ಸಂಸ್ಥೆಗಳಿಗೆ ಪೀಠೋಪಕರಣ ಸಾಮಗ್ರಿ ಹಾಗೂ ಇತರೆ ಸಾಮಗ್ರಿಗಳನ್ನು ಖರೀದಿಸುವ ಕುರಿತು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ ಮೂಲಕ Tender Reference No - DHFWS/2024-25/IND1124/CALL-2 ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/576/24-25

ನಗರಸಭಾ ಕಾರ್ಯಾಲಯ
ದೊಡ್ಡಬಳ್ಳಾಪುರ - 561 203.
E-mail : itstaff_ulb_doddaballapur@yahoo.com
Website : www.doddaballapurcity.gov.in
ಸಂಖ್ಯೆ : ನ.ಸ.ದೊ./ಆ.ಶಾ./ಸಿ.ಆರ್./89-94/24-25 ದಿನಾಂಕ : 27-01-2025

ಮರು ಇ-ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು ಅಧಿಕೃತ ಮಾನ್ಯತೆ ಪಡೆದ ಅರ್ಹ ಗುತ್ತಿಗೆದಾರರು / ಏಜೆನ್ಸಿಯವರಿಂದ ಸಾಮಾಗ್ರಿಗಳ ಸರಬರಾಜು & ಸೇವೆಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 1) Goods Indent No. : a) DMA/2024-25/IND0032/Call-3, b) DMA/2024-25/IND2135/Call-3, c) DMA/2024-25/IND3921/Call-2, d) DMA/2024-25/IND3922/Call-2, 2) Service Indent No. : a) DMA/2024-25/SE3798/Call-3, b) DMA/2024-25/SE3794/Call-3, c) DMA/2024-25/SE4407/Call-2, d) DMA/2024-25/SE4124, e) DMA/2024-25/SE4555, ರ ಮೂಲಕ ಇ-ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ. ನಿಯಮಗಳನ್ವಯ ಆಹ್ವಾನಿಸಲಾಗಿದ್ದು, ಆಸಕ್ತರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಲಾಗಿನ್ ಮೂಲಕ ಈ ಕೆಳಕಾಣಿಸಿದ ವಿವರಗಳಂತೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ.

ಟೆಂಡರ್‌ನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 17-02-2025 ರ ಸಂಜೆ 5.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18-02-2025 ರ ಸಂಜೆ 5.30 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 19-02-2025 ರ ಸಂಜೆ 11.00 ಗಂಟೆಗೆ, ಇ-ಟೆಂಡರ್‌ಗಳಿಗೆ ಸಂಬಂಧಿಸಿದಂತೆ ವೇಳಾಪಟ್ಟಿ ಅಥವಾ ಇನ್ನಿತರ ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಅಥವಾ www.doddaballapurcity.gov.in, https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯತಕ್ಕದ್ದು.

ಸಹಿ/- ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ.
ಸಹಿ/- ಉಪಾಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ.
ಸಹಿ/- ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ.
ಸಹಿ/- ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ.
ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/4684/2024-25

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕೊಡಗು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಮಡಿಕೇರಿ
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಅಂಗ ಸಂಸ್ಥೆ)
ದೂರವಾಣಿ: 08272-295457
ಸಂಖ್ಯೆ: ಡಿ.ಪಿ.ಎಂ.ಯು/ಎನ್.ಹೆಚ್.ಎಂ/ವೆಂಡರ್/ಹೆಚ್.ಆರ್/03/2024-25
ದಿನಾಂಕ: 27/01/2025

ಇ-ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ : **2025-26ನೇ ಸಾಲಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಕುರಿತು.**

ಕೊಡಗು ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ 2025-26ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಒಬ್ಬರು ಕಾರ್ಯಕ್ರಮ ಸಹಾಯಕರು, ಒಬ್ಬರು ಜಿಲ್ಲಾ ಲೆಕ್ಕ ಸಹಾಯಕರು, ಒಬ್ಬರು ಜಿಲ್ಲಾ ಲೆಕ್ಕ ಸಹಾಯಕರು (ಜಿಲ್ಲಾ ಆಸ್ಪತ್ರೆ), 3 ಜನ ತಾಲ್ಲೂಕು ಲೆಕ್ಕ ಸಹಾಯಕರು, ಒಬ್ಬರು MIS ನಿರ್ವಹಕರು (NLEP), 15 ಜನ ಡಾಟಾ ಎಂಟ್ರಿ ಆಪರೇಟರ್ಸ್ ಒಬ್ಬರು ರೆಕಾರ್ಡ್ ಕೀಪರ್ (Medical Record Assistant), ಒಬ್ಬರು ವಾರ್ಡ್ ಅಸಿಸ್ಟೆಂಟ್, ಒಬ್ಬರು ಕಿರಿಯ ದರ್ಜೆ ಗುಮಾಸ್ತರು (ನಗರ ಆರೋಗ್ಯ ಕೇಂದ್ರ), 15 ಜನ ಚಾಲಕರು (ಜೆ.ಎಸ್.ವಿ. ಮತ್ತು ನಗು-ಮಗು) 2 ಜನ ಮಲ್ಟಿಟಾಸ್ಕ್ ವರ್ಕರ್, 5 ಜನ 'ಡಿ' ದರ್ಜೆ ನೌಕರರು ಮತ್ತು 8 ಜನ ಆಯುಷ್ ಸ್ವಚ್ಚತಾಗಾರರು, ಈ ಹುದ್ದೆಗಳ ಸೇವೆಯನ್ನು ಒದಗಿಸಲು ಅರ್ಹ ಹೊರಗುತ್ತಿಗೆ ಸಂಸ್ಥೆಗಳಿಂದ ಕೆಪಿಪಿಪಿ ಪೋರ್ಟಲ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ.

ಇ-ಟೆಂಡರ್ ನಮೂನೆಗಳಿಗಾಗಿ, ಇ.ಎಂ.ಡಿ. ಬಗ್ಗೆ ಮತ್ತು ಇ-ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ ಕೆಪಿಪಿಪಿ ಪೋರ್ಟಲ್ ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

1. ಇ-ಟೆಂಡರ್ ನಮೂನೆಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ: 28-01-2025 ರಿಂದ 18-02-2025 ರವರೆಗೆ ಸಂಜೆ 3.00 ಗಂಟೆಯವರೆಗೆ.
2. ಭರ್ತಿ ಮಾಡಿದ, ಇ-ಟೆಂಡರ್ ಫಾರಂಗಳನ್ನು ಇ-ಟೆಂಡರ್‌ಗೆ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ: 19-02-2025 ರ ಸಂಜೆ 03.00 ಗಂಟೆಯವರೆಗೆ.
3. ಇ-ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21.02.2025 ಅಪರಾಹ್ನ 3.00 ಗಂಟೆಯ ನಂತರ.
4. ಇ-ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 25.02.2025 ಅಪರಾಹ್ನ 3.00 ಗಂಟೆಯ ನಂತರ.

ಸಹಿ/-
ಉಪಾಧ್ಯಕ್ಷರು/ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಆರೋಗ್ಯ ಮತ್ತು ಕು.ಕ. ಸೊಸೈಟಿ, ಮಡಿಕೇರಿ,
ಕೊಡಗು ಜಿಲ್ಲೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು.
ಆಸ್ತಿ ಅಧಿಕಾರಿಗಳು, ಕೃವಿವಿ, ರಾಯಚೂರು.
ನಂ. ಆಅ/ಕೃವಿವಿವಿರಾ/ಟೆ.ನೋ.-177 /2024-25 ದಿನಾಂಕ: 25-01-2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕೆ.ಪಿ.ಡಬ್ಲ್ಯೂ.ಡಿ. ಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ ಡಾಕುಮೆಂಟ್ಸ(ಕೆ.ಡಬ್ಲ್ಯೂ-I) ಅನುಸಾರವಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಕೃವಿವಿ ರಾಯಚೂರು ಪರವಾಗಿ ಮುಖ್ಯ ಆವರಣ ಮತ್ತು ಇತರೆ ಆವರಣಗಳಲ್ಲಿ ಸಿವ್ಹಿಲ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ನಿರ್ವಹಿಸಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆಯ ಹೆಚ್ಚಿನ ವಿವರಗಳು ವೆಬ್‌ಸೈಟ್ ವಿಳಾಸ https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ವೇಳಾ ಪಟ್ಟಿ:- (1) ತುಂಬಿದ ಟೆಂಡರನ್ನು ವೆಬ್‌ಸೈಟ್‌ನ ಮೂಲಕ ಸಲ್ಲಿಸುವ ಕೊನೆಯ ದಿನಾಂಕ:-11-02-2025 ಸಾಯಂಕಾಲ 4.00 ಗಂಟೆಯವರೆಗೆ(2) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:-12-02-2025 ಸಾಯಂಕಾಲ 4.10 ಗಂಟೆಗೆ (3) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ:-15-02-2025 ಬೆಳಿಗ್ಗೆ 11.00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ಕೆಲಸದ ದಿನಗಳಂದು ಸದರಿ ಕಛೇರಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು (Ph. No. 08532 – 220640) ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ https://kppp.karnataka.gov.in ನಲ್ಲಿ ಇಲ್ಲವೆ ಹೆಲ್ಪಡೆಸ್ಕನಿಂದ(ಸಹಾಯಕ ದೂರವಾಣಿ ಸಂಖ್ಯೆ: 080-25501216 ಮತ್ತು 25501227) ಪಡೆಯಬಹುದು.

ಸಹಿ/- ಆಸ್ತಿ ಅಧಿಕಾರಿಗಳು,
ಕೃ.ವಿ.ವಿ.ವಿ. ರಾಯಚೂರು.
DIP/RCR/699/KSMCA/700/2024-25

ಕರ್ನಾಟಕ ಸರಕಾರ
ಜಂಟಿ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ
ಮಿನಿ ವಿಧಾನ ಸೌಧ ಎದರುಗಡೆ, ಐವಾನ್-ಇ-ಶಾಹಿ-ರಸ್ತೆ, ಕಲಬುರಗಿ-585102
ದೂರವಾಣಿ ಸಂಖ್ಯೆ : 08472-278621, ಇ-ಮೇಲ್ ವಿಳಾಸ : dswoglb@gmail.com
ಸಂ:ಜನಿ:ಸಕಇಕ:ಲೆಕ್ಕ:ಆಹಾರ:ಸಿಆರ್-42:2024-25 ದಿನಾಂಕ:27-01-2025

:: ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ::

2025-26 ಹಾಗೂ 2026-27ನೇ ಸಾಲಿಗಾಗಿ ಕಲಬುರಗಿ ಜಿಲ್ಲೆಯ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಮತ್ತು ಭಾರತ ರತ್ನ ಡಾ:ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳಿಗೆ ಆಹಾರ ಹಾಗೂ ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ನೊಂದಾಯಿತ ಏಜೆನ್ಸಿ/ಸಂಸ್ಥೆಗಳಿಂದ ಇ-ಪ್ರಕ್ಯೂರ್‌ಮೆಂಟ್ (e-Procurement) ಮೂಲಕ ಅಲ್ಪಾವಧಿ ಇ-ಟೆಂಡರ್ ಅಹ್ವಾನಿಸಲಾಗಿದೆ.

:: ಇ-ಟೆಂಡರ್ ಘಟನಾವಳಿಗಳು ::

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ದಿನಾಂಕ:27-01-2025, ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ **ರೂ. 5744.34 ಲಕ್ಷಗಳು,** ಟೆಂಡರ್ ಫಾರಂ ಅಪಲೋಡ್ ಮಾಡಲು ಪ್ರಾರಂಭದ ದಿನಾಂಕ:29-01-2025 ರಂದು ಬೆಳಿಗ್ಗೆ 10-00 ಗಂಟೆಯಿಂದ ದಿನಾಂಕ:27-02-2025 ರಂದು ಸಾಯಂಕಾಲ 5.30 ಗಂಟೆವರೆಗೆ, ಸ್ಯಾಂಪಲಗಳನ್ನು ಸಲ್ಲಿಸುವ ದಿನಾಂಕ: 29-01-2025 ರಿಂದ ದಿನಾಂಕ:27-02-2025 ರಂದು ಮಧ್ಯಾಹ್ನ 1-30 ಗಂಟೆ ಒಳಗೆ, ಪ್ರೀ-ಬಿಡ್ ಮೀಟಿಂಗ್ ದಿನಾಂಕ: 21-02-2025 ರಂದು ಬೆಳಿಗ್ಗೆ 11-00 ಗಂಟೆಗೆ (ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕಲಬುರಗಿ ರವರ ಕಛೇರಿಯಲ್ಲಿ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 28-02-2025, ಆರ್ಥಿಕ ಬಿಡ್ ತೆರೆಯುವ ದಿನಾಂಕ: 17-03-2025, ಇ.ಎಂ.ಡಿ ಮೊತ್ತ ರೂ: 57.44 ಲಕ್ಷ, ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕಲಬುರಗಿ ರವರ ದೂರವಾಣಿ ಸಂಖ್ಯೆ:08472-278621 www.kppp.karnataka.gov.in. ಸಂಪರ್ಕಿಸಬಹುದಾಗಿದೆ.

ಸಹಿ/- ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/898/ಕೆ.ಎಸ್.ಎಂ.ಸಿ.&ಎ/2024-25

ವಿಶ್ವವಾಣಿ ಪತ್ರಿಕೆ 10 ವರ್ಷ ಪೂರೈಸಿದೆ ಎನ್ನುವುದು ದೊಡ್ಡ ಹೆಮ್ಮೆ. ನಾಡಿನ ಇತರ ಪತ್ರಿಕೆಗಳಂತೆ ಅತ್ಯುತ್ತಮವಾಗಿ ,ಕ್ರಿಯಾಶೀಲವಾಗಿ ವಿಶ್ವೇಶ್ವರ ಭಟ್ ಅವರ ಪತ್ರಿಕೆ ಬರುತ್ತಿದೆ. ನಾನೂ ಕೂಡ ಪತ್ರಿಕೆ ಓದುಗನಾಗಿರುವೆ. ಪತ್ರಿಕೆ ಇನ್ನೂ ನೂರು ವರ್ಷಗಳ ಕಾಲ ಬೆಳಕಾಗಿ ಬೆಳಗಲಿ ಎನ್ನುವುದು ನನ್ನ ಹಾರೈಕೆ. ವಿಶ್ವವಾಣಿ ಬಳಗಕ್ಕೆ ಅಭಿನಂದನೆಗಳು.

ಶ್ರೀ ಮ.ನಿ.ಪ್ರ.ಡಾ.ಮಲ್ಲಿಕಾರ್ಜುನ ಮಹಾಸ್ವಾಮಿ (ಮುರುಘಾಮಠ ,ಧಾರವಾಡ)

ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಪತ್ರಿಕೋದ್ಯಮದಲ್ಲಿ ವೇಗವಾಗಿ ಮುನ್ನುಗ್ಗುತ್ತಿರುವ ವಿಶ್ವವಾಣಿ ದಿನಪತ್ರಿಕೆಗೆ 10ನೇ ವರ್ಷದ ಹಾರ್ದಿಕ ಶುಭಾಷಯಗಳು. ಪತ್ರಿಕೆ ಇನ್ನೂ ಯಶಸ್ವಿಯಾಗಿ ಮುನ್ನಡೆಯುತ್ತಾ ಸಮಾಜದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲಿ.

– ಸಿ.ಎಸ್.ಪುಟ್ಟರಾಜು, ಮಾಜಿ ಸಚಿವ, ಮಂಡ್ಯ

ಸ್ಪರ್ಧಾತ್ಮಕ ಯುಗದಲ್ಲಿ ಆರಂಭವಾದ ಕೆಲವೇ ದಿನಕ್ಕೆ ಇನ್ನಿತರ ಪತ್ರಿಕಾ ಸಂಸ್ಥೆಗಳಿಗೆ ಪೈಪೋಟಿ ಕೊಡುವ ಮಟ್ಟಕ್ಕೆ ಬೆಳೆದು ನಿಂತಿರುವ ನೆಚ್ಚಿನ ವಿಶ್ವೇಶ್ವರ ಭಟ್ಟರ ಕನಸಿನ ಕೂಸು ವಿಶ್ವವಾಣಿಗೆ ಶುಭಾಶಯಗಳು.

-ಪಿ.ಎಂ.ನರೇಂದ್ರಸ್ವಾಮಿ, ಶಾಸಕರು, ಮಳವಳ್ಳಿ.

ರಾಜಕಾರಣಿಗಳು ಹಾಗೂ ಸಮಾಜದ ಮುಖ್ಯವಾಹಿನಿಯ ವ್ಯಕ್ತಿಗಳು ತಪ್ಪು ಮಾಡಿದಾಗ ಕಿವಿಹಿಂಡಿ ತಿದ್ದುವುದೇ ಪತ್ರಿಕೆಗಳು. ಅಂತಹ ಸಾಲಿನಲ್ಲಿ ಬಹು ಎತ್ತರಕ್ಕೆ ಬೆಳೆಯುತ್ತಿರುವ ನಲ್ಮೆಯ ವಿಶ್ವವಾಣಿಗೆ ನನ್ನ ಶುಭಕಾಮನೆಗಳು.

-ಎಚ್.ಟಿ.ಮಂಜು, ಶಾಸಕರು, ಕೆ.ಆರ್.ಪೇಟೆ

ಸಮಾಜದ ಅಂಕು-ಡೊಂಕುಗಳನ್ನು ಎತ್ತಿ ಹಿಡಿಯುತ್ತಾ ಸಮಾಜವನ್ನು ತಿದ್ದುವ ಕೆಲಸದಲ್ಲಿ ಪತ್ರಿಕೋದ್ಯಮದ ಕೊಡುಗೆ ಅಪಾರ. ಅಂತಹ ಸಾಲಿನಲ್ಲಿ ಸಾಗುತ್ತಿರುವ ವಿಶ್ವೇಶ್ವರ ಭಟ್ ಅವರ ನೇತೃತ್ವದ ವಿಶ್ವವಾಣಿ ರಾಜ್ಯದ ನಂ.1 ಪತ್ರಿಕೆಯಾಗಿ ಇನ್ನು ಎತ್ತರಕ್ಕೆ ಬೆಳೆಯಲಿ.

– ದಿನೇಶ್ ಗೂಳಿಗೌಡ, ವಿಧಾನ ಪರಿಷತ್ ಸದಸ್ಯ, ಮಂಡ್ಯ

ವಿರಾಮ
ಪ್ರತಿ ಭಾನುವಾರ

ವಿಶಿಷ್ಟ ಅಂಕಣಗಳ ಸಮೂಹ ವಿಶ್ವವಾಣಿ

ಇಂದ್ರಕುಮಾರ್ ಎಚ್.ಬಿ

ವಿಶ್ವವಾಣಿ ದಿನಪತ್ರಿಕೆಯು ಈ ಹತ್ತುವರ್ಷಗಳಲ್ಲಿ ಒಳ್ಳೆಯ ಬೆಳವಣಿಗೆಯನ್ನು ಕಂಡಿದೆ. ನಾನು 'ಕ'ಂತ'ೂಹ'ಲದಿಂದ' ಗಮನಿಸುವ ಭಾನುವಾರದ ಸಾಹಿತ್ಯಿಕ ಪುರವಣಿ 'ವಿರಾಮ'ದಲ್ಲಿ ಪುಸ್ತಕ ವಿಮಾನ ವಿಭಾಗ. 'ಓಡುವ ಲೋಕಕ್ಕೆ ಓದುವ ನಿಲ್ದಾಣ' – ನಿಜಕ್ಕೂ ಸಮಾಧಾನದ ತಂಗುದಾಣವೇ ಆಗಿದೆ.

ಒಂದು ಇಡಿಯ ಪುಟವನ್ನು ಪುಸ್ತಕ ಪರಿಚಯಕ್ಕೆ ಮೀಸಲಿಟ್ಟಿರುವುದು ಹೆಚ್ಚುಗಾರಿಕೆಯ ವಿಷಯವೇ. ಪತ್ರಿಕೆಯ ಪ್ರತಿ ಶೀರ್ಷಿಕೆಯೂ ಗಮನಿಸುವ ಅಂಶಗಳನ್ನು ಒಳಗೊಂಡಿರುವುದನ್ನು ಮೊದಲಿನಿಂದಲೂ ಗಮನಿಸುತ್ತಿರುವೆ.

ವಿಶ್ವೇಶ್ವರ ಭಟ್ ಅವರ ಆಸ್ಕದ ದ ಎಡಿಟರ್ ಕಾಲಂ ಸಹ ಉಪಯುಕ್ತವಾಗಿದೆ. ಎನ್.ಎಸ್. ಶ್ರೀಧರ ಮೂರ್ತಿಯವರ 'ಒಡನಾಟ' ನಾನು ಇಷ್ಟಪಟ್ಟು ಓದುವ ಅಂಕಣವಾಗಿದೆ. ಪುಟವಿನ್ಯಾಸದ ಅಚ್ಚುಕಟ್ಟುತನ ಆಕರ್ಷಕ ವಿನ್ಯಾಸ ಮತ್ತೊಂದು ಆಕರ್ಷಣೆಯಾಗಿದೆ. ಹೊಸತರಹ ಬರವಣಿಗೆಯ ಲೇಖಕರೂ ಕಥೆಗಾರರನ್ನೂ ಇಲ್ಲಿ ಕಾಣಬಹುದು. ಅಲ್ಲದೆ, ಸಮಯೋಚಿತವಾದ ಲೇಖನಗಳನ್ನು ಆಪ್ತವಾದ ದಾಟಿಯಲ್ಲಿ ಪ್ರಸ್ತುತಪಡಿಸುವುದನ್ನು ಗಮನಿಸಿದ್ದೇನೆ. ಐತಿಹಾಸಿಕ ಲೇಖನಗಳಲ್ಲಿನ ಅಪರೂಪದ ಚಿತ್ರಗಳನ್ನು ಕಾಣಬಹುದು.

ವಿರಾಮದ ಓದಿಗೂ ತಿಳಿವಳಿಕೆಯ ವಿಸ್ತಾರಕ್ಕೂ ಮನರಂಜನೆಗೂ ಸಾಂಸ್ಕೃತಿಕ ಕಲೆಗಳಿಗೂ ಅವಕಾಶ ನೀಡುವಂತೆ ವಸ್ತು ವಿಷಯಾಂಶಗಳ ಆಯ್ಕೆ ಮೆಚ್ಚುವ ವಿಷಯವೇ ಆಗಿದೆ. ಅಡುಗೆಯೂ ಕ್ರೀಡೆಯೂ ಹಬ್ಬ ಆಚರಣೆಯೂ ಇಲ್ಲಿ ಜಾಗ ಪಡೆದುಕೊಳ್ಳುತ್ತದೆ. ನನ್ನಿಷ್ಟದ ಪಕ್ಷಿಗಳ ಕುರಿತಂತೆ ಹೆಚ್ಚು ಹೆಚ್ಚು ಆಕರ್ಷಕ ಲೇಖನಗಳನ್ನು ಫೋಟೋಗಳನ್ನು ವಿಶ್ವವಾಣಿ ವಿರಾಮದಲ್ಲಿ ಕಂಡು ಆನಂದಿಸಿದ್ದೇನೆ. ನಾಡು ಸಂಭ್ರಮಿಸುವ ವಿಷಯಗಳನ್ನು ಪತ್ರಿಕೆಯೂ ಸಂಭ್ರಮಿಸುತ್ತ ಲೇಖನಗಳನ್ನು ಕಾಳಜಿಯಿಂದ ಪ್ರಕಟಿಸುವುದು ಇಲ್ಲಿ ಮುಖ್ಯವಾಗಿ ನನಗೆ ಕಾಣಿಸುತ್ತದೆ. 'ಕವಿಮನ'ದಲ್ಲಿ ಒಳ್ಳೆಯ ಕವನಗಳೂ ಹೊಸ ಕವಿಗಳೂ ಪರಿಚಯವಾಗಿವೆ.

ಸುದ್ದಿಯನ್ನು ಮುಖ್ಯನೆಲೆಯಲ್ಲಿ ಮುದ್ರಿಸಿ ಓದುಗರ ಮುಟ್ಟಿಸುವ ಪತ್ರಿಕೆಯಲ್ಲಿ ಸಾಹಿತ್ಯದ ಕಾಳಜಿ ಇರುವುದು ಅನಿವಾರ್ಯ ಅಗತ್ಯವಾಗಿದೆ. ವಿಶ್ವವಾಣಿ ದಿನಪತ್ರಿಕೆಯ ಭಾನುವಾರದ ವಿಶೇಷ ಪುರವಣಿ 'ವಿರಾಮ'ದಲ್ಲಿ ಅದೆಲ್ಲವನ್ನು ನಾನು ಗಮನಿಸಿದ್ದೇನೆ. ಅದೆಷ್ಟೋ ಹೊಸ ಬರಹಗಾರರಿಗೆ ವೇದಿಕೆಯಾಗಿದೆ. ಶಿಷ್ಟ ಷಯ-ವಸ್ತು ಕುರಿತಾದ ಲೇಖನಗಳನ್ನು ಷಯಪರಿಣಿತಿಯ ಲೇಖಕರಿಂದಲೇ ಬರೆಸಿರುವುದೂ ಅಷ್ಟೇ ಮುಖ್ಯವಾದ ಷಯವಾಗಿದೆ. ಪರಂಪರೆ ಮತ್ತು ವರ್ತಮಾನವನ್ನು ಸಮಪ್ರಮಾಣದಲ್ಲಿ ಗುರುತಿಸಿ ಇಲ್ಲಿ ಒಳಗೊಳ್ಳಲಾಗಿದೆ. ಮುದನೀಡುವ ಸುಲಲಿತ ಪ್ರಬಂಧಗಳೂ ಇಲ್ಲಿವೆ.

ಪತ್ರಿಕೆ ಬೆಳೆಯುವುದರ ಜತೆ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಓದುಗ-ಬರಹಗಾರ ಸಮುದಾಯವನ್ನೂ ಬೆಳೆಸಬೇಕಾಗುತ್ತದೆ. ಆ ನಿಟ್ಟಿನಲ್ಲಿ ಈ ಪತ್ರಿಕೆಯ ಸಾಹಿತ್ಯ ಪುರವಣಿಗೆಯ ಎಲ್ಲ ಕಾಲಂಗಳನ್ನು ಅದರ ಲೇಖಕರನ್ನು ಆಯ್ದುಕೊಂಡ ಯೋಗ್ಯ ವಿಷಯ-ವಸ್ತುವನ್ನು ನಾನು ನೋಡಿದ್ದೇನೆ. ಸದೃಢ ಸಮಾಜಕ್ಕೆ ಅಗತ್ಯವಾದ ಎಲ್ಲ ಆರೋಗ್ಯಕರ ಅಂಶಗಳನ್ನು ಪತ್ರಿಕೆ ಮೈಗೂಡಿಸಿಕೊಳ್ಳುತ್ತ ಸಾಗಿದೆ. ಕಲೆಗಾರರಿಗೆ ಸೂಕ್ತ ವೇದಿಕೆಯಾಗಿದೆ. ದೂರದೇಶದ ಕನ್ನಡಿಗರೂ ಬಹಳ ಲೇಖನಗಳನ್ನು ಬರೆದಿದ್ದಾರೆ. ಹಳತಿನ ಕೊಂಡಿ ಬಿಟ್ಟುಹೋಯಿತೆಂಬ ಹಳಹಳಿಕೆ ಇಲ್ಲ, ಹೊಸತರ ಆವೇಶದಲ್ಲಿ ಅಪ್ರಬುದ್ಧತೆ ಮುನ್ನಲೆಗೆ ಬರುತ್ತಿದೆ ಅನ್ನುವ ಆತಂಕವೂ ಇಲ್ಲ.. ಎಲ್ಲವನ್ನೂ ಅಚ್ಚುಕಟ್ಟಾಗಿ ಆರಿಸಿ ಶೋಧಿಸಿ ಒಂದು ಹದದಲ್ಲಿ ಪ್ರತಿವಾರ ಪ್ರಸ್ತುತಪಡಿಸಲಾಗುತ್ತಿದೆ.ವಿಶ್ವವಾಣಿ ದಿನಪತ್ರಿಕೆಯ ಹತ್ತುವರ್ಷಗಳ ಈ ಸುಸಂದರ್ಭದಲ್ಲಿ ಒಳ್ಳೆಯ ಸಾಹಿತ್ಯಿಕ ಕೆಲಸಗಳನ್ನು ಮಾಡಿರುವ ಕಾರಣಕ್ಕೆ ಅಭಿನಂದನೆ ಸಲ್ಲಿಸುವೆ.

ಭಟ್ಟರ 'ಸ್ಕಾಚ್ ' ನನಗೇಕೆ ಇಷ್ಟ?

ರುಕ್ಕು, ಚಾಮರಾಜಪೇಟೆ, ವಿಶ್ವವಾಣಿಯ ಅಭಿಮಾನಿ.

ನಾನು ವಿಶ್ವ ವಾಣಿ ಓದುಗಳಾಗಿದ್ದೇ ಒಂದು ಆಕಸ್ಮಿಕ..! ಅದೇ ಅಪಘಾತದ , ರಾಜಕೀಯ ವೈಷಮ್ಯದ, ಮಿಥ್ಯಾರೋಪದ ಸುದ್ದಿಗಳಿಂದ ತುಂಬಿರುತ್ತಿದ್ದ ಪತ್ರಿಕೆಗಳನ್ನು ಓದಿ ಓದಿ ಒಂದು ತರಹ ವಾಕರಿಕೆ ಉಂಟಾಗುತ್ತಿತ್ತು. ಆದರೆ ವಿಧಿ ಇಲ್ಲ. ಅದೇ ಪತ್ರಿಕೆಗಳನ್ನು ಆಶ್ರಯಿಸಬೇಕಾಗುತ್ತಿತ್ತು. ಇಂತಹ ಕಾಲಘಟ್ಟದಲ್ಲಿ 'ವಿಶ್ವವಾಣಿ' ಪತ್ರಿಕೆ ಉದಯವಾಗಿತ್ತು. ಸುದ್ದಿ ಜೊತೆಗೆ ಮನೋರಂಜನೆ, ತಿಳಿವು ಕೊಡುವ ಅಂಕಣಗಳು ನನ್ನ ಬೇಸರವನ್ನು ಮರೆಸಿತ್ತು. ಇತರರ ಜೊತೆಗೆ ವಿಶ್ವೇಶ್ವರ ಭಟ್ ಅವರ ಅಂಕಣಗಳನ್ನು ಓದುತ್ತಾ ಬಂದೆ. ಇವರ ಹಾಸ್ಯ ಮನೋಭಾವದ ಜೊತೆಗೆ ತುಂಟತನ, ಎಲ್ಲೆ ಮೀರದ ರಸಿಕತೆ ಇಷ್ಟವಾಯಿತು. ಭಟ್ಟರು ' ತಿರುಗಾಲು ' ತಿಪ್ಪ ಎಂದು ಅನಿಸಿದರೂ ಅವರು ತಿರುಗದ ದೇಶವಿಲ್ಲ, ಮಾತನಾಡಿಸದ ಗೆಳೆಯ-ಗೆಳತಿಯರಿಲ್ಲ! ತಾವೊಬ್ಬರೇ ವಿದೇಶಕ್ಕೆ ಹೋಗಿಬಂದರೂ ವಾಪಸು ಬರುವಾಗ ಆ ದೇಶದ ವಿಶೇಷಗಳನ್ನು ತಿಂಡಿ-ತಿನಿಸುಗಳಂತೆ ಧಾರಾಳತನದಿಂದ ಓದುಗರಿಗೆ ಉಣಬಡಿಸುತ್ತಾರೆ..

ಕಾಲಕ್ರಮೇಣ ಭಟ್ಟರ ಮತ್ತು ಓದುಗರ ಪಾಲಿಗೆ 'ನಿತ್ಯೋತ್ಸವ ' ಎನಿಸಿರುವ ' ಭಟ್ಟರ್ ಸ್ಕಾಚ್ ' ನನ್ನನ್ನು ತೀವ್ರವಾಗಿ ಸೆಳೆಯಿತು. (ಸೆರಗು ಹಿಡಿದು ಎಳೆದಂತೆ ಎಂದರೂ ತಪ್ಪಿಲ್ಲ). ಮೊದಮೊದಲು ನನಗೂ ಅಳುಕಿತ್ತು. ನನ್ನಂತಹ ಅಂಗನೆಯ ವಯೋಸಹಜ ಪ್ರಶ್ನೆಗಳಿಗೆ ಮಧ್ಯಮ ವಯಸ್ಸಿನ ಭಟ್ಟರು ಉತ್ತರ ಕೊಡುತ್ತಾರಾ ಅಂತ. ಹತ್ತಾರು ಪ್ರಶ್ನೆಗಳಿಗೆ ಉತ್ತರ ಬಾರದಿದ್ದಾಗ ಭಟ್ಟರ ಸಹವಾಸ ಸಾಕು ಎನಿಸಿತ್ತು! ನಾನು ಆತ್ಮವಿಮರ್ಶೆ ಮಾಡಿಕೊಂಡಾಗ , ನಾನು ಕಳುಹಿಸಿದ ಪ್ರಶ್ನೆಗಳಿಗೆ ಸಾಮಂಜಸ್ಯದ ಕೊರತೆ ಇದೆ ಎಂದು ಅನಿಸಿತು. ಪತ್ರಿಕೆ ಸುದ್ದಿಗಳನ್ನು ಆಧರಿಸಿ ಪ್ರಶ್ನೆ ಕಳಿಸಲು ಪ್ರಾರಂಭಿಸಿದೆ. ಏನಾಶ್ಚರ್ಯ!! ಭಟ್ಟರ ಉತ್ತರ ಬರಲು ಆರಂಭವಾಯ್ತು. ಅದು ಇವತ್ತಿನತನಕ ಮುಂದುವರಿದಿದೆ. ಕೆಲವರು ಪತ್ರಿಕೆ ಹತ್ತನೇ ವರ್ಷಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ್ದನ್ನು ನೋಡಿದೆ. ತುಂಬಾ ಮಡಿವಂತರಂತೆ ಕಂಡುಬಂದರು.

ಯಾರ ಬಗ್ಗೆಯೂ ದುರಾಗ್ರಹ ಇಲ್ಲದೆ ನವಿರಾದ ಹಾಸ್ಯದಿಂದ ನಗಿಸುತ್ತಿರುವ ಚಂದಮಾಮದ ವಿಕ್ರಮನಂತಿರುವ ಭಟ್ಟರು ಬೆನ್ನುಬಿಡದ ಬೇತಾಳದಂತೆ ಪ್ರಶ್ನೆ ಕೇಳುತ್ತಿರುವ ನಮ್ಮನ್ನು ಮುಂದೆಯೂ ರಂಜಿಸಿ ರಂಗೇರುವಂತೆ ಮಾಡಲಿ . ಹತ್ತನೇ ವರ್ಷಕ್ಕೆ ಪಾದರ್ಪಣೆ ಮಾಡಿದ ಪತ್ರಿಕೆಗೆ , ಸಿಬ್ಬಂದಿಗೆ ಶುಭವಾಗಲಿ ಎನ್ನುವುದೇ ನನ್ನ ಆಶಯ.

ಆರ್ಥಿಕ ಹೊರೆ ತಗ್ಗಿಸಲು ಸಾರ್ವಜನಿಕ ಉದ್ದಿಮೆಗಳಿಗೆ 'ಕತ್ತರಿ ಪ್ರಯೋಗ'ಕ್ಕೆ ರಾಜ್ಯ ಸರಕಾರದ ಸಿದ್ಧತೆ

ಪೊಲೀಸ್ ಇಲಾಖೆಯಲ್ಲಿ ಮೀಸಲು ಪ್ರಮಾಣ ಶೇ.3ಕ್ಕೆ ಏರಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಲದಿನಗಳ ಹಿಂದಷ್ಟೇ ಕ್ರೀಡಾ ಕೋಟಾದ ಮೀಸಲನ್ನು ತಡೆಹಿಡಿದಿದ್ದ ರಾಜ್ಯ ಸರಕಾರ ಇದೀಗ, ಪೊಲೀಸ್ ಇಲಾಖೆಯಲ್ಲಿ ಕ್ರೀಡಾ ಕೋಟಾವನ್ನು ಶೇ.2ರಿಂದ ಮೂರಕ್ಕೆ ಹೆಚ್ಚಿಸುವ ಮಹತ್ವದ ತೀರ್ಮಾನ ಕೈಗೊಂಡಿದೆ.

ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡಿರುವ ಸರಕಾರ, ಪೊಲೀಸ್ ಇಲಾಖೆಯ ನೇರ ನೇಮಕದಲ್ಲಿ ಪೇದೆಯಿಂದ ಹಿಡಿದು ಡಿವೈಎಸ್‌ಪಿವರೆಗೆ ಪ್ರಶಂಸನೀಯ ಕ್ರೀಡಾಪಟುಗಳ ಮೀಸಲು ಪ್ರಮಾಣವನ್ನು ಶೇ.2 ರಿಂದ 3ಕ್ಕೆ ಹೆಚ್ಚಿಸಲಾಗಿದೆ. ಇದರೊಂದಿಗೆ ಡಿವೈಎಸ್‌ಪಿ ಹುದ್ದೆಯ ವಯೋಮಿತಿಯಲ್ಲಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಕೆಟಗರಿ-1ರ ಅಭ್ಯರ್ಥಿಗಳ ಗರಿಷ್ಠ ವಯೋಮಿತಿಯನ್ನು 45 ವರ್ಷಗಳಿಗೆ ಹೆಚ್ಚಿಸಲು ನಿಯಮಗಳಿಗೆ ತಿದ್ದುಪಡಿ ತರಲಾಗುತ್ತಿದೆ.

ನಿಷ್ಕ್ರಿಯ ಉದ್ಯಮ ಮುಚ್ಚಲು ಸಂಪುಟ ಅಸ್ತು

ಸರಕಾರಕ್ಕೆ 'ಬಿಳಿಯಾನೆ'ಯಾಗಿರುವ ಸಾರ್ವಜನಿಕ ಉದ್ದಿಮೆಗಳಿಂದ ಆರ್ಥಿಕ ಹೊಡೆತ ಬೀಳುವ ಆರೋಪ ಹಲವು ವರ್ಷಗಳಿಂದ ಕೇಳಿಬಂದಿತ್ತು. ಇದೀಗ ವಾಣಿಜ್ಯ ಚಟುವಟಿಕೆಗಳಿಗೆ ಸ್ಥಾಪಿಸಲಾದ ಮತ್ತು ದೀರ್ಘಕಾಲದವರೆಗೆ ನಿಷ್ಕ್ರಿಯವಾಗಿರುವ ಅಥವಾ ಪುನಶ್ಚೇತನಕ್ಕೆ ಆರ್ಥಿಕವಾಗಿ ಕಾರ್ಯಸಾಧುವಲ್ಲದ ಸರಕಾರದ ಒಡೆತನದ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚಲು ಅಥವಾ ವಿಲೀನಗೊಳಿಸುವ ನಿರ್ಧಾರಕ್ಕೆ ಸಂಪುಟ ಅನುಮೋದನೆ ನೀಡಿದೆ.

ಈ ಬಗ್ಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ರಾಜ್ಯದಲ್ಲಿ 125 ಸಾರ್ವಜನಿಕ ವಲಯದ ಉದ್ದಿಮೆಗಳಿದ್ದು, ಅವುಗಳಲ್ಲಿ 34 ಕಂಪನಿಗಳು ನಿಶ್ಚಿತ ಲಾಭದಲ್ಲಿವೆ. 33 ವಾಣಿಜ್ಯ ಕಂಪನಿಗಳು ನಷ್ಟದಲ್ಲಿವೆ. 32 ಉದ್ದಿಮೆಗಳು ಸಾಮಾಜಿಕ ವಲಯದಲ್ಲಿದ್ದು, 16 ಕಂಪನಿಗಳು ನಿಷ್ಕ್ರಿಯವಾಗಿವೆ ಹಾಗೂ ಸ್ಥಗಿತಗೊಂಡಿವೆ. ಆದ್ದರಿಂದ ಭವಿಷ್ಯದ ದೃಷ್ಟಿಯಿಂದ ಇವುಗಳ ವಿಲೀನಕ್ಕೆ ಸಂಪುಟ ಅನುಮೋದನೆ ನೀಡಿದ್ದಾಗಿ ತಿಳಿಸಿದರು.

ಜಲಭದ್ರತೆ- ವಿಪತ್ತು ನಿರೋಧಕ ಕಾರ್ಯಕ್ರಮ

ವಿಶ್ವಬ್ಯಾಂಕ್ ನೆರವಿನಿಂದ ಕರ್ನಾಟಕ ಜಲಭದ್ರತೆ ಮತ್ತು ವಿಪತ್ತು ನಿರೋಧಕ ಕಾರ್ಯಕ್ರಮವನ್ನು 5000 ಕೋಟಿ ರುಪಾಯಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಸಂಪುಟ ಅನುಮೋದಿಸಿದೆ. 2025-2031ರಿಂದ ಐದು ವರ್ಷಗಳಲ್ಲಿ ವಿಶ್ವಬ್ಯಾಂಕ್‌ನ 3500 ಕೋಟಿ ರು. ಸಾಲ ಹಾಗೂ ಸರಕಾರದ 1500 ಕೋಟಿ ರು. ಕೊಡುಗೆಯಲ್ಲಿ ಕಂದಾಯ ಇಲಾಖೆ ಉಸ್ತುವಾರಿಯಲ್ಲಿ ಯೋಜನೆ ಜಾರಿಯಾಗಲಿದೆ ಎಂದು ಸಚಿವ ಪಾಟೀಲ್ ಸ್ಪಷ್ಟಪಡಿಸಿದರು.

ಕೆಟಿಪಿಪಿ ಕಾಯ್ದೆ ಮತ್ತು ನಿಯಮಗಳನ್ನು ಅನುಸರಿಸಿ ಆಡಳಿತಾತ್ಮಕ ಇಲಾಖೆಗಳ ಮೂಲಕ ಸಕ್ಷಮ ಪ್ರಾಧಿಕಾರಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ಮೂಲಭೂತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಅಧ್ಯಕ್ಷರು, ಬೆಂಗಳೂರು ಜಲಮಂಡಳಿ, ಸಣ್ಣ ನೀರಾವರಿ ಇಲಾಖೆ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಆಯುಕ್ತರಿಗೆ ಅಧಿಕಾರ ನೀಡುವ ಹಾಗೂ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಗಾಗಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದರು.

ಪಿಪಿಪಿ ಕಾರ್ಯನೀತಿಗೆ ಒಪ್ಪಿಗೆ: ಮೂಲಸೌಕರ್ಯ ಯೋಜನೆಗಳಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಕಾರ್ಯನೀತಿ-2025ಕ್ಕೆ ಅನುಮೋದನೆ ಸಿಕ್ಕಿದೆ.

ಸುಸ್ಥಿರ ಅಭಿವೃದ್ಧಿಯೊಂದಿಗೆ ಹೆಚ್ಚಿನ ಬೆಳವ ಣಿಗೆ ಸಾಧಿಸುವ ಸಲುವಾಗಿ ಮೂಲಸೌಕರ್ಯ ಕ್ಷೇತ್ರಕ್ಕೆ ಖಾಸಗಿ ಹೂಡಿಕೆ ವಿಸ್ತರಣೆ ಮತ್ತು ವಿವಿಧ ವಲಯಗಳ ಮೂಲಸೌಕರ್ಯ ಯೋಜನೆಗಳ ಅಭಿವೃದ್ಧಿಯಲ್ಲಿ ಖಾಸಗಿ ಹೂಡಿಕೆಗಳನ್ನು ಉತ್ತೇಜಿಸಲಾಗುತ್ತದೆ. ಪಿಪಿಪಿ ಕಾರ್ಯನೀತಿ ಮೂರು ವರ್ಷಗಳಿಗೊಮ್ಮೆ ಭಾಗಿದಾರರ ಪ್ರತಿಕ್ರಿಯೆಗಳ ನಿರ್ಣಾಯಕ ಮೌಲ್ಯಮಾಪನ ಆಧರಿಸಿ ಬದಲಾವಣೆ ಅಳವಡಿಸಿಕೊಳ್ಳಲು ಅವಕಾಶ ನೀಡುವ ಮೂಲಕ ಮಧ್ಯಮಾವಧಿ ಪರಿಶೀಲನೆಗೆ ಶಿಫಾರಸು ಮಾಡಲಾಗಿದೆ ಎಂದು ಸಚಿವ ಪಾಟೀಲ್ ವಿವರಿಸಿದರು.



ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 19 ಮೊರಾರ್ಜಿ ದೇಸಾಯಿ ವಸತಿ ಶಾಲೆ-ಕಾಲೇಜುಗಳ ಕಟ್ಟಡಗಳನ್ನು 304 ಕೋಟಿ ರು.ಗಳ ಅಂದಾಜು ಮೊತ್ತದಲ್ಲಿ ಹಾಗೂ ಪ್ರಧಾನಮಂತ್ರಿ ಜನವಿಕಾಸ ಕಾರ್ಯಕ್ರಮ ಯೋಜನೆಯಡಿ 12 ವಸತಿ ಶಾಲೆ ಹಾಗೂ ವಿದ್ಯಾರ್ಥಿ ನಿಲಯಗಳನ್ನು 191.19 ಕೋಟಿ ರೂ ಮೊತ್ತದಲ್ಲಿ ನಿರ್ಮಿಸಲು ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

– ಎಚ್.ಕೆ ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ವಿಶ್ವವಾಣಿ ಕ್ಲಬ್ ಹೌಸ್
31.01.2025
ಕಾರ್ನರ್
ಸಂಜೆ: 06.55 ರಿಂದ 08.05 ರವರೆಗೆ
ಶುಕ್ರವಾರದ ಅತಿಥಿ
ಶ್ರೀ ಪಿ.ಕೆ.ನಂದೀಶ
ವಿಷಯ
ಕುವೆಂಪು ರಾಮಾಯಣ ದರ್ಶನಂ - 31
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ



- **ಸ್ಥಳ : ಯಾದಗಿರಿ**
- ಗುರಮಿಠಕಲ್ ತಾಲೂಕಿನ ಯಂಪಾಡ ಗ್ರಾಪಂ ವ್ಯಾಪ್ತಿಯ ಯಂಪಾಡ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ.
- **ಪರಿಹಾರ:** ಗುರಮಿಠಕಲ್ ತಾಲೂಕಿನ ಯಂಪಾಡ ಗ್ರಾಪಂ ವ್ಯಾಪ್ತಿಯ ಯಂಪಾಡ ಗ್ರಾಮಕ್ಕೆ ಹೊಸಜಲ ಮೂಲ ಹಾಗೂ ಪೈಪ್‌ಲೈನ್ ಪೂರ್ಣಗೊಂಡ ನಂತರ ಪ್ರತಿ ಮನೆಗೂ ಕುಡಿಯುವ ನೀರು ಪೂರೈಸಲು ಕ್ರಮಕ್ಕೈಗೊಳ್ಳಲಾಗುವುದು.

ಜಿಲ್ಲಾಡಳಿತ, ಸಾರ್ವಜನಿಕರಿಂದ ಅಂತಿಮ ನಮನ | ಮುಗಿಲು ಮುಟ್ಟಿದ ಕುಟುಂಬಸ್ಥರ ಆಕ್ರಂದನ

ಕುಂಭಮೇಳ ದುರಂತ : ಬೆಳಗಾವಿಗೆ ಇಬ್ಬರ ಕಳೇಬರ

ಬೆಳಗಾವಿ: ಪ್ರಯಾಗರಾಜ್ ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಸಿಲುಕಿ ಮೃತಪಟ್ಟಿದ್ದ ಬೆಳಗಾವಿಯ ನಾಲ್ವರ ಪೈಕಿ ಇಬ್ಬರ ಮೃತದೇಹ ಗುರುವಾರ ಸಂಜೆ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ತಲುಪಿದ್ದು, ಜಿಲ್ಲಾಡಳಿತದಿಂದ ಕುಟುಂಬದವರಿಗೆ ಹಸ್ತಾಂತರಿಸಿತು.

ಗುರುವಾರ ಸಂಜೆ ದೆಹಲಿಯಿಂದ ಬೆಳಗಾವಿಗೆ ವಿಮಾನದ ಮೂಲಕ ಶೆಟ್ಟಿ ಗಲ್ಲಿಯ ಅರುಣ್ ಕೋರ್ಪಡೆ (61), ಶಿವಾಜಿನಗರದ ಮಹಾದೇವಿ ಬಾವನೂರ (48) ಮೃತದೇಹ ತರಲಾಯಿತು. ಈ ಸಂದರ್ಭದಲ್ಲಿ ಎರಡೂ ಕುಟುಂಬದ ಸದಸ್ಯರ ಆಕ್ರಂದನ ಮುಗಿಲು ಮುಟ್ಟಿತ್ತು. ತಂದೆಯ ಪಾರ್ಥಿವ ಶರೀರ ನೋಡುತ್ತಿದ್ದಂತೆ ಅರುಣ್ ಕೋರ್ಪಡೆ ಅವರ ಪುತ್ರ ಬಿಕ್ಕಳಿಸಿ ಅಳುವ ದೃಶ್ಯ ಎಂತವರ ಹೃದಯಗಳನ್ನೂ ಕಲಕುವಂತಿತ್ತು.

ಅಧಿಕಾರಿಗಳ ಪರಿಶ್ರಮ: ರಾಜ್ಯ ಸರಕಾರ ನೇಮಿಸಿದ್ದ ಇಬ್ಬರು ವಿಶೇಷ ಅಧಿಕಾರಿಗಳಾದ ಬೆಳಗಾವಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶೃತಿ ಹಾಗೂ ಕೆಎಎಸ್ ಅಧಿಕಾರಿ ಹರ್ಷ ಶೆಟ್ಟಿ ಅವರ ನಿರಂತರ ಪ್ರಯತ್ನದಿಂದ ಗುರುವಾರ ಬೆಳಗ್ಗೆ ಪ್ರಯಾಗರಾಜ್ ಆಸ್ಪತ್ರೆಯಲ್ಲಿದ್ದ ಮೃತದೇಹಗಳನ್ನು ದೆಹಲಿಗೆ ಸ್ಥಳಾಂತರ ಮಾಡಿದ್ದಾರೆ. ಮಧ್ಯಾಹ್ನ ಮೂರು ಗಂಟೆಗೆ ದೆಹಲಿಯಿಂದ ಬೆಳಗಾವಿಗೆ ಬರುವ ವಿಮಾನದಲ್ಲಿ ಇಬ್ಬರ ಮೃತದೇಹಗಳನ್ನು ರವಾನಿಸುವಲ್ಲಿ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ. ಸಾಂಬ್ರಾ ನಿಲ್ದಾಣಕ್ಕೆ ಬಂದ ಇಬ್ಬರ ಮೃತದೇಹಗಳಿಗೆ ಮಾಜಿ ಸಿಎಂ ಜಗದೀಶ್ ಶೆಟ್ಟರ್, ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಶಾಸಕ ಅಭಯ್ ಪಾಟೀಲ, ಶಾಸಕ ಆಸೀಫ್ ಸೇಠ್, ಮಾಜಿ ಶಾಸಕ ಅನಿಲ್ ಬೆನಕೆ ಹಾಗೂ ಹಿರಿಯ ಅಧಿಕಾರಿಗಳು ಅಂತಿಮ ನಮನ ಸಲ್ಲಿಸಿದ ನಂತರ ಮೃತದೇಹಗಳನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು.

ತಡವಾಗಿ ಬಂದ ಇಬ್ಬರ ಮೃತದೇಹ : ಕುಂಭಮೇಳದ ಕಾಲ್ತುಳಿತದಲ್ಲಿ ಮೃತಪಟ್ಟ ಬೆಳಗಾವಿಯ ವಡಗಾವಿ ನಿವಾಸಿಗಳಾದ ಜ್ಯೋತಿ ಹತ್ತರವಾಠ (44) ಹಾಗೂ ಮಗಳು ಮೇಘಾ ಹತ್ತರವಾಠ (24) ಅವರ ಮೃತದೇಹ ತಡರಾತ್ರಿ ನಗರದ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ತರಲಾಗಿದೆ. ಗುರುವಾರ ಬೆಳಿಗ್ಗೆ ಪ್ರಯಾಗರಾಜ್ ನಿಂದ ಆ್ಯಂಬುಲೆನ್ಸ್ ಮೂಲಕ ದೆಹಲಿ ವಿಮಾನ ನಿಲ್ದಾಣಕ್ಕೆ ಮೃತದೇಹ ಸಾಗಿಸುವ ವೇಳೆ ಅಡಚಣೆ ಉಂಟಾಗಿದೆ. ಬೆಳಗಾವಿಗೆ ಬರಲಿದ್ದ ವಿಮಾನದ ಸಮಯಕ್ಕೆ ಸರಿಯಾಗಿ ಮೃತದೇಹ ಬರದ ಹಿನ್ನೆಲೆಯಲ್ಲಿ ಸಂಜೆಯವರೆಗೂ ನಿರೀಕ್ಷಿಸಿ ದೆಹಲಿಯಿಂದ ಗೋವಾ ಮೂಲಕ ವಿಮಾನದಲ್ಲಿ ಮೃತದೇಹ ರವಾನಿಸಿದ್ದು ಅಲ್ಲಿಂದ ಬೆಳಗಾವಿವರೆಗೆ ಆಂಬ್ಯುಲೆನ್ಸ್‌ನಿಂದ ಮೃತದೇಹ ತಂದು ಕುಟುಂಬದವರಿಗೆ ಹಸ್ತಾಂತರಿಸುವ ಪ್ರಕ್ರಿಯೆ ನಡೆದಿದೆ.

ಕುಂಭಮೇಳದಲ್ಲಿ ಸಂಭವಿಸಿದ್ದ ಭೀಕರ ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟ ಅರುಣ್ ಕೋರ್ಪಡೆ ಹಾಗೂ ಮಹಾದೇವಿ ಬಾವನೂರ ವರ ಮೃತದೇಹ ಬೆಳಗಾವಿ ಸಾಂಬ್ರಾ ವಿಮಾನ ನಿಲ್ದಾಣ ತಲುಪಿದ ವೇಳೆ ಕುಟುಂಬದವರ ಆಕ್ರಂದನ.

ಪ್ರಯಾಗರಾಜ್ ನಿಂದ ನಾಲ್ವರ ಮೃತದೇಹಗಳನ್ನು ಬೆಳಗಾವಿಗೆ ತರಲಾಗಿದೆ. ಅನಿವಾರ್ಯ ಕಾರಣಗಳಿಂದ ಮೃತದೇಹಗಳ ಮರಣೋತ್ತರ ಪರೀಕ್ಷೆ ಸಾಧ್ಯವಾಗಿಲ್ಲ. ಆರೋಗ್ಯ ಇಲಾಖೆಯಿಂದ ಮರಣೋತ್ತರ ಪರೀಕ್ಷೆ ನಡೆಸಿ ಆ ವರದಿಯನ್ನು ಪ್ರಯಾಗರಾಜ್ ಜಿಲ್ಲಾಡಳಿತಕ್ಕೆ ತ್ವರಿತವಾಗಿ ಕಳುಹಿಸಿಕೊಡುವ ಪ್ರಯತ್ನ ಮಾಡುತ್ತೇವೆ. ಈಗಾಗಲೇ ಮೂವರು ಗಾಯಾಳುಗಳನ್ನು ಕರೆತರಲಾಗಿದ್ದು ಇನ್ನುಳಿದವರ ಸಂಪರ್ಕಕ್ಕೆ ಅಧಿಕಾರಿಗಳು ಯತ್ನಿಸುತ್ತಿದ್ದಾರೆ.

ಮೊಹಮ್ಮದ್ ರೋಷನ್ , ಬೆಳಗಾವಿ ಡಿಸಿ

ಹೃದಯಾಘಾತದಿಂದ ಕುಂಭಮೇಳ ಯಾತ್ರಿ ಸಾವು

ಪ್ರಯಾಗರಾಜ್ ನಲ್ಲಿ ನಡೆಯುತ್ತಿರುವ ಕುಂಭಮೇಳಕ್ಕೆ ತೆರಳಿದ್ದ ವಾಪಸ್ ಬರುವ ವೇಳೆ ರೈಲಿನಲ್ಲಿ ಹೃದಯಾಘಾತದಿಂದ ವ್ಯಕ್ತಿ ಮೃತಪಟ್ಟ ಘಟನೆ ನಡೆದಿದೆ. ಬೆಳಗಾವಿ ನಗರದ ದೇಶಪಾಂಡೆ ಗಲ್ಲಿಯ ರವಿಂದ್ರ ಜಠಾರ್ (61) ಮೃತ ದುರ್ದೈವಿ. ಪ್ರಯಾಗರಾಜ್ ನಿಂದ ಮುಂಬೈ ಮಾರ್ಗವಾಗಿ ಬೆಳಗಾವಿಗೆ ಬರುವ ವೇಳೆ ಪುಣೆಯಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಬುಧವಾರ ನಡೆದ ಕಾಲ್ತುಳಿತದಲ್ಲಿ ಬೆಳಗಾವಿ ಮೂಲದ ನಾಲ್ವರು ಮೃತಪಟ್ಟಿದ್ದು, ಹೃದಯಾಘಾತದಿಂದ ಓರ್ವ ವ್ಯಕ್ತಿ ಸೇರಿ ಐವರು ಮೃತಪಟ್ಟಿದ್ದಾರೆ.

ಮೃತರಿಗೆ ಸದ್ಗತಿ ಸಿಗಲಿ: ಮಂತ್ರಾಲಯ ಶ್ರೀ ಸಂತಾಪ

ಕುಂಭಮೇಳದಲ್ಲಿ ತಾಳ್ಮೆ, ಎಚ್ಚರಿಕೆ ವಹಿಸಿ: ಭಕ್ತರಿಗೆ ಕರೆ

ರಾಯಚೂರು: ಕುಂಭಮೇಳ ಸಮಸ್ತ ಹಿಂದೂಗಳ ಶ್ರದ್ಧಾ ಉತ್ಸವವಾಗಿದೆ. ದೇಶ-ವಿದೇಶಗಳಿಂದ ಲಕ್ಷಾಂತರ ಭಕ್ತರು ಪುಣ್ಯಸ್ನಾನಕ್ಕಾಗಿ ಮೇಳಕ್ಕೆ ಬರುತ್ತಿದ್ದಾರೆ. ಹೆಚ್ಚಿನ ಭಕ್ತರ ಜನಸಂದಣಿ ಆಗಿ ಕಾಲ್ತುಳಿತವಾಗಿ, ಸಾವುಗಳು ಸಂಭವಿಸಿವೆ. ಭಕ್ತರು ಸಹ ಸ್ವಯಂ ಜಾಗೃತರಾಗಿರಬೇಕು. ನಿಯಮ ಪಾಲನೆ ಜತೆಗೆ ತಾಳ್ಮೆಯಿಂದ ಇರಬೇಕು ಎಂದು ಮಂತ್ರಾಲಯ ರಾಯರ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀಗಳು, ಕಾಲ್ತುಳಿತದಲ್ಲಿ ಮೃತಪಟ್ಟವರಿಗೆ ಸದ್ಗತಿ ಸಿಗಲಿ ಎಂದು ಪ್ರಾರ್ಥಿಸುವೆ ಎಂದು ಸಂತಾಪ ವ್ಯಕ್ತಪಡಿಸಿದರು.

ಗಂಗಾಸ್ನಾನದಿಂದ ಬಡತನ ದೂರವಾಗಲ್ಲ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿದ ಸ್ವಾಮೀಜಿ, ಕುಂಭಮೇಳ ಧಾರ್ಮಿಕ ಶ್ರದ್ಧೆಯ ವಿಚಾರವಾಗಿದೆ. ರಾಜಕೀಯ ನಾಯಕರು ಇದನ್ನು ಟೀಕಿಸುವುದು ಸರಿಯಲ್ಲ ಎಂದರು.

ಸನಾತನ ಹಿಂದೂ ಧರ್ಮವನ್ನು ಟೀಕಿಸುವುದನ್ನೇ ಪ್ರಧಾನವಾಗಿ ಇಟ್ಟುಕೊಳ್ಳಬಾರದು. ಬೇರೆ ಬೇರೆ ಕಾರ್ಯಕ್ರಮ ಮಾಡುವುದರಿಂದ ಸಾಲ ಪರಿಹಾರವಾಗುತ್ತದೆಯೇ..? ವಿಧರ್ಮಿಯರು ಮಾಡುವ ಕಾರ್ಯಗಳಿಂದ ಸಾಲ ಪರಿಹಾರವಾಗುತ್ತದೆಯೇ..? ಅದನ್ನು ಸಾಬೀತುಪಡಿಸಲಿ. ಇದು ಧಾರ್ಮಿಕ ವಿಚಾರ; ಟೀಕಿಸುವುದು ಅತ್ಯಂತ ಖಂಡನೀಯ.

-ಸುಬುಧೇಂದ್ರ ತೀರ್ಥ ಸ್ವಾಮಿ, ಮಂತ್ರಾಲಯ

ಸಾಲಗಾರರ ಕಿರುಕುಳ ವ್ಯಕ್ತಿ ಆತ್ಮಹತ್ಯೆ

ಬೈಲಹೊಂಗಲ: ಸಾಲಗಾರರ ಕಿರುಕುಳ ತಾಳಲಾರದೆ ವ್ಯಕ್ತಿಯೊಬ್ಬ ಬುಲೇರೋ ಗೂಡ್ಸ್ ವಾಹನಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಬುಧವಾರ ರಾತ್ರಿ ನಡೆದಿದೆ.

ಪಟ್ಟಣದ ಸಾಯಿ ಮಂದಿರ ಹತ್ತಿರದ ನಿವಾಸಿ ರಫೀಕ್ ಬಾಬುಸಾಬ ತಿಗಡಿ (38) ಸಾವನ್ನಪ್ಪಿದ್ದ ವ್ಯಕ್ತಿ. ಕೆಲ ಖಾಸಗಿ ವ್ಯಕ್ತಿಗಳ ಕಡೆ 6 ಲಕ್ಷಕ್ಕೂ ಹೆಚ್ಚು ಹಣ ಸಾಲ ಪಡೆಕೊಂಡಿದ್ದ ಎನ್ನಲಾಗಿದೆ. ಪ್ರಕರಣ ಬೈಲಹೊಂಗಲ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಸಾಲಗಾರರು ಪದೇ ಪದೇ ಮನೆಗೆ ಬಂದು ಕಿರುಕುಳ ನೀಡಿದ್ದರಿಂದ ಮನನೊಂದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಕುಟುಂಬಸ್ಥರು ತಮ್ಮ ಅಳಲು ವ್ಯಕ್ತಪಡಿಸಿದ್ದಾರೆ.

ಭಕ್ತರ ಕಾಣಿಕೆ ಸದ್ವಿನಿಯೋಗ ಆಗುತ್ತಿಲ್ಲ

ರಾಜ್ಯ ಸರಕಾರದ ಕಪಿಮುಷ್ಠಿಯಲ್ಲಿ ದೇವಾಲಯಗಳು: ಪೇಜಾವರ ಶ್ರೀ

ಉಡುಪಿ: ದೇಶದಲ್ಲಿ ಸನಾತನ ಮಂಡಳಿ ಅಸ್ತಿತ್ವಕ್ಕೆ ಬರಬೇಕು. ದೇವಾಲಯಗಳು ಸರಕಾರದ ಕಪಿಮುಷ್ಠಿಯಲ್ಲಿದ್ದು, ಭಕ್ತರ ಕಾಣಿಕೆ ಸದ್ವಿನಿಯೋಗ ಆಗುತ್ತಿಲ್ಲ ಎಂದು ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪ್ರತಿಪಾದಿಸಿದ್ದಾರೆ.

ದೇವಾಲಯಗಳು ಸರಕಾರದ ಕಪಿಮುಷ್ಠಿಯಲ್ಲಿವೆ. ಜೀರ್ಣೋದ್ಧಾರ ಇಲ್ಲ, ಪರಿಚಾರಕ ವರ್ಗಕ್ಕೆ ಸೂಕ್ತ ಸಂಭಾವನೆ ಇಲ್ಲ. ಭಕ್ತರ ಕಾಣಿಕೆ ಸದ್ವಿನಿಯೋಗ ಆಗುತ್ತಿಲ್ಲ. ದೇಗುಲದ ಸಂಪತ್ತಿನಿಂದ ಊರಿಗೆ ಶಿಕ್ಷಣ ಆಗಬೇಕು.ಜನರ ವೈದ್ಯಕೀಯಕ್ಕೆ ಹಣ ಬಳಕೆಯಾಗಬೇಕು ಎಂದು ಶ್ರೀಗಳು ಸಲಹೆ ನೀಡಿದರು.

18 ತಿಂಗಳಲ್ಲಿ ಮಂದಿರ ಕಾಮಗಾರಿ ಪೂರ್ಣ: ಅಯೋಧ್ಯೆಯಲ್ಲಿ ಮುಂದಿನ ಒಂದೂವರೆ ವರ್ಷದಲ್ಲಿ ರಾಮಮಂದಿರದ ಕಾಮಗಾರಿ ಪೂರ್ಣವಾಗಲಿದೆ. ಭಕ್ತರ ಸುಗಮ ದರ್ಶನಕ್ಕೆ ಸೂಕ್ತ ವ್ಯವಸ್ಥೆಯಿದೆ. ತಿರುಪತಿಯಂತೆ ಬದಲಿಸಿದರೆ ವ್ಯವಸ್ಥೆ ಇಕ್ಕಟ್ಟು ಮಾಡಿದಂತಾಗುತ್ತದೆ. ಪ್ರಯಾಗದ ಕುಂಭಮೇಳಕ್ಕೆ ತೆರಳುವವರು ತಾಳ್ಮೆಯಿಂದ ವರ್ತಿಸಿ, ಅಪಾಯಕ್ಕೊಳಗಾಗಬೇಡಿ. ಮುಂದಿನ ಎಲ್ಲ ಉತ್ಸವಗಳು ಸಾಂಗವಾಗಿ ನಡೆಯಲಿ. ಪ್ರಯಾಗದಲ್ಲಿ ಅಭೂತಪೂರ್ವ ವ್ಯವಸ್ಥೆ ಇದೆ. ಯಾವುದೇ ಅನಾನುಕೂಲ ಆಗದಂತೆ ದೇವರಲ್ಲಿ ಪ್ರಾರ್ಥನೆ. ಬಹುಮತದ ಎಲ್ಲರ ಭಾವನೆಯನ್ನು ನಾವು ಗೌರವಿಸಬೇಕು, ಯಾರನ್ನೂ ನೋಯಿಸಬಾರದು. ಇಂತಹ ಹೇಳಿಕೆ ನಿಮ್ಮ ಘನತೆಗೆ ತಕ್ಕದಾದುದ್ದಲ್ಲ. ನಾವು ಯಾವುದೇ ಪ್ರತಿಕ್ರಿಯೆ ಕೊಡಲ್ಲ. ಖರ್ಗೆಯವರದ್ದು ಬಾಲಿಶ ಹೇಳಿಕೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿ. ಸಂಕೇಶ್ವರ ಮೀಡಿಯಾ ಸ್ಕೂಲ್ ಅತ್ಯುತ್ತಮ ಸಾಧನೆ

ಯಲ್ಲಾಪುರ: ಕರ್ನಾಟಕ ವಿಶ್ವವಿದ್ಯಾಲಯದ 2023 24ನೇ ಸಾಲಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಪಿಜಿ ಡಿಪ್ಲೊಮಾ ಅಂತಿಮ ಸೆಮಿಸ್ಟರ್ ಪರೀಕ್ಷೆಯಲ್ಲಿ ಪಟ್ಟಣದ ವಿಶ್ವದರ್ಶನದ ಡಾ.ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಉತ್ತಮ ಫಲಿತಾಂಶ ಸಾಧಿಸಿದೆ. ಈ ಕಾಲೇಜಿನಲ್ಲಿ 100/100 ಫಲಿತಾಂಶ ಬಂದಿದೆ.

ಶೋಭಾ ಕೆ ಗೌಡ ಶೇ.80 ಅಂಕಗಳೊಂದಿಗೆ ಪ್ರಥಮ, ವಾಣಿ ಎನ್ ಭಟ್ ಶೇ.78.2 ಅಂಕಗಳೊಂದಿಗೆ ದ್ವಿತೀಯ, ಪಲ್ಲವಿ ಎನ್ ಮರಾಠಿ ಶೇ.77.6 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಹರಿಪ್ರಕಾಶ್ ಕೋಣೆಮನೆ, ಕಾರ್ಯದರ್ಶಿಗಳು, ಆಡಳಿತ ಮಂಡಳಿ, ಪತ್ರಿಕೋದ್ಯಮ ವಿಭಾಗದ ಪ್ರಾಚಾರ್ಯರು ಹಾಗೂ ಉಪನ್ಯಾಸಕ ವರ್ಗ ಅಭಿನಂದಿಸಿದ್ದಾರೆ.

ಇಂದು ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅವಾರ್ಡ್

ಬೆಂಗಳೂರು: ಕರ್ನಾಟಕ ಸಂಘ, ಮಸ್ಕತ್ ಸಹಕಾರದೊಂದಿಗೆ ವಿಶ್ವವಾಣಿ ಗ್ಲೋಬಲ್ ಫೋರಂ ಜ.31ರಂದು ಒಮಾನ್ ರಾಜಧಾನಿ ಮಸ್ಕತ್‌ನ ಹೋಟೆಲ್ ಗ್ರ್ಯಾಂಡ್ ಮಿಲೇನಿಯಮ್‌ನಲ್ಲಿ ಕರ್ನಾಟಕದ ಅಪರೂಪದ ಸಾಧಕರಿಗೆ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅವಾರ್ಡ್ ನೀಡಿ ಗೌರವಿಸಲಾಗುತ್ತಿದೆ. ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುತ್ತಿರುವ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್‌ಗೆ ಈಗ ವರ್ಷದ ಸಂಭ್ರಮ. ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಅಪರೂಪದ ಸಾಧಕರನ್ನು ಗುರುತಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವುದು, ಎರಡೂ ದೇಶಗಳ ಮೈತ್ರಿ, ಪರಸ್ಪರ ಸಾಂಸ್ಕೃತಿಕ ವಿನಿಮಯ ಹಾಗೂ ಸಂಸ್ಕೃತಿ ಪರಿಚಯ ಈ ಕಾರ್ಯಕ್ರಮದ ಆಶಯ. ಕಳೆದ ವರ್ಷದಿಂದ ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷ್ಯಾ, ಮಾರಿಷಸ್, ಮಾಲ್ಡೀವ್ಸ್ ಹಾಗೂ ಜಪಾನ್ ದೇಶಗಳಲ್ಲಿ ಕಾರ್ಯಕ್ರಮ ಗಳನ್ನು ಆಯೋಜಿಸಿ ಯಶಸ್ವಿಗೊಳಿಸಲಾಗಿದೆ. ಇಂಥ ವಿಶಿಷ್ಟ ಸಾಂಸ್ಕೃತಿಕ ಸಮ್ಮಿಲನ ಈ ಬಾರಿ ಒಮಾನ್ ದೇಶದ ರಾಜಧಾನಿ ಮಸ್ಕತ್ ನಲ್ಲಿ ನಡೆಯಲಿದೆ. ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠ ಶ್ರೀ ಪ್ರಥಮ ಜಗದ್ಗುರು ಬಸವಜಯ ಮೃತ್ಯುಂಜಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಅತಿಥಿಯಾಗಿ ಮಸ್ಕತ್ ಕನ್ನಡ ಸಂಘದ ಅಧ್ಯಕ್ಷ ಎಸ್. ಡಿ. ಟಿ. ಪ್ರಸಾದ್ ಭಾಗವಹಿಸಲಿದ್ದಾರೆ. ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅಧ್ಯಕ್ಷತೆ ವಹಿಸಲಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಕಾಲ್ತುಳಿತದ ಸಾವು ದುರದೃಷ್ಟಕರ

ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ 144 ವರ್ಷಗಳ ಬಳಿಕ ನಡೆಯುತ್ತಿರುವ ಮಹಾಕುಂಭದಲ್ಲಿ ಮೌನಿ ಅಮಾವಾಸ್ಯೆಯಾದ ಜನವರಿ 29ರಂದು ಕಾಲ್ತುಳಿತದಲ್ಲಿ 30ಕ್ಕೂ ಹೆಚ್ಚು ಮಂದಿ ಭಕ್ತರು ಗಾಯಗೊಂಡು ನೂರಾರು ಮಂದಿ ಗಾಯಗೊಂಡಿರುವುದು ದುರದೃಷ್ಟಕರ ವಿದ್ಯಮಾನ. 10 ಕೋಟಿಗೂ ಹೆಚ್ಚು ಜನರು ಸೇರುವ ಇಂತಹ ಸ್ಥಳದಲ್ಲಿ ಕಾಲ್ತುಳಿತ ಘಟನೆಗಳು ಅನಿರೀಕ್ಷಿತವೇನಲ್ಲ. 1954ರಲ್ಲಿ ನಡೆದ ಪ್ರಯಾಗ ಕುಂಭಮೇಳದ ಸಮಯದಲ್ಲಿ ಪ್ರಧಾನಿ ಜವಹರಲಾಲ್ ನೆಹರೂ ಅವರನ್ನು ಕಾಣಲು ನೂಕುನುಗ್ಗಲು ಉಂಟಾಗಿ ನೂರಾರು ಮಂದಿ ಮೃತಪಟ್ಟಿದ್ದರು. ಈ ಬಾರಿ ಉತ್ತರ ಪ್ರದೇಶ ಸರಕಾರ ಸರ್ವ ಸಿದ್ಧತೆಗಳನ್ನು ಮಾಡಿದ ಬಳಿಕವೂ ದುರ್ಘಟನೆ ಸಂಭವಿಸಿರುವುದು ನೋವಿನ ವಿಚಾರ. ಈ ದುರ್ಘಟನೆಯಲ್ಲಿ ಬೆಳಗಾವಿಯ ತಾಯಿ-ಮಗಳು ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ. ಪವಿತ್ರ ಸ್ನಾನದ ಹೆಸರಿನಲ್ಲಿ ಪುಣ್ಯಸ್ಥಳಕ್ಕೆ ಹೋದವರು ಈ ರೀತಿ ಬಾರದ ಲೋಕಕ್ಕೆ ಹೋಗಿರುವುದು ಅವರ ಆಪ್ತೇಷ್ಟರಿಗೆ ನಿಜಕ್ಕೂ ಆಘಾತಕಾರಿ ಸುದ್ದಿ. ಇತ್ತೀಚೆಗಷ್ಟೇ ತಿರುಪತಿಯಲ್ಲಿ ಆರು ಮಂದಿ ನೂಕುನುಗ್ಗಲಿನಲ್ಲಿ ಸಿಲುಕಿ ಮೃತಪಟ್ಟಿದ್ದರು. ಇಂತಹ ಸ್ಥಳಗಳಲ್ಲಿ ಸುರಕ್ಷತಾ ಕ್ರಮಗಳಿಗಿಂತಲೂ, ಜನರು ಹೆಚ್ಚು ಜಾಗರೂಕರಾಗಿ, ವಿವೇಕದಿಂದ ವರ್ತಿಸಬೇಕಾಗಿದೆ. ಪ್ರಯಾಗದಲ್ಲಿ ನಾಗಾ ಸಾಧುಗಳನ್ನು ಮೊದಲು ಸ್ನಾನ ಘಟ್ಟಕ್ಕೆ ಬಿಡಲು ಗೇಟ್ ತೆರೆದಾಗ ಉಳಿದವರು ಒಟ್ಟಿಗೇ ನುಗ್ಗಿದ್ದು ದುರಂತಕ್ಕೆ ಕಾರಣವಾಯಿತೆಂದು ಹೇಳಲಾಗಿದೆ. ಧಾರ್ಮಿಕ ಸ್ಥಳವಾಗಲಿ, ಪ್ರವಾಸೀ ಸ್ಥಳವಾಗಲಿ ಅಲ್ಲಿ ಎದುರಾಗಬಹುದಾದ ಸನ್ನಿವೇಶಗಳ ಬಗ್ಗೆ ಸ್ವಲ್ಪವಾದರೂ ತಿಳಿದುಕೊಂಡಿರಬೇಕು. ಅಲ್ಲಿನ ಶಿಸ್ತು, ನಿಯಮಗಳನ್ನು ಪಾಲಿಸಬೇಕು. ಕುಂಭ ಮೇಳಕ್ಕೆ ದೇಶದೆಲ್ಲೆಡೆಯಿಂದ 10 ಕೋಟಿಗಿಂತ ಹೆಚ್ಚು ಜನರು ಆಗಮಿಸುತ್ತಿರುವ ವಿಚಾರ ಉತ್ತರಪ್ರದೇಶ ಸರಕಾರ ಮತ್ತು ಕೇಂದ್ರ ಸರಕಾರಕ್ಕೆ ತಿಳಿದಿತ್ತು. ಇದಕ್ಕೆ ಪೂರ್ವಭಾವಿಯಾಗಿ ಅನುಸರಿಸಬೇಕಾದ ನಿಯಮಗಳನ್ನು ಜನರಿಗೆ ಮನದಟ್ಟು ಮಾಡಿಕೊಡಬೇಕಿತ್ತು. ಇಂತಹ ಸ್ಥಳಗಳಲ್ಲಿ ನೂಕು ನುಗ್ಗಲು ಉಂಟಾದಾಗ ಜೀವಾಪಾಯದಿಂದ ಪಾರಾಗುವ ಸರಳ ತಂತ್ರಗಳ ಬಗ್ಗೆಯೂ ಜನರಿಗೆ ತರಬೇತಿ ನೀಡುವ ಅವಶ್ಯಕತೆ ಇದೆ. ಈ ಹಿಂದಿನ ತಪ್ಪುಗಳಿಂದ ಪಾಠ ಕಲಿತು ಮುಂದೆ ಇಂತಹ ದುರ್ಘಟನೆಗಳು ಆಗದಂತೆ ತಡೆಯುವುದು ಸರಕಾರದ ಕರ್ತವ್ಯ.

ಸೊಂಪಾದಕೀಯ

ಸುಧಾರಕ-ಸುಧಾಕರ

ಬಿಜೆಪಿಯ ಸಂಸದ ಕೆ.ಸುಧಾಕರ್ ದಂಗೆ ಎದ್ದಿದ್ದೋದು ಯಾಕೆ ಅನ್ನೋ ಪ್ರಶ್ನೆ ಎಲ್ಲಾ ಕಡೆ ಓಡಾಡ್ತಾ ಇದೆ. ಬಿಜೆಪಿಯಲ್ಲಿ ಬಣಗಳ ಸೌಂಡು ಹೆಚ್ಚಾಗಿತ್ತು ಅನ್ನೋದು ಇತ್ತೀಚಿನ ಬೆಳವಣಿಗೆ. ಆದರೆ ಅತೃಪ್ತರ ಪಟ್ಟಿಗೆ ಈಗ ಸಂಸದ ಸುಧಾಕರ್ ಕೂಡ ಸೇರಿಕೊಂಡಿರೋದು ಬಣಗಳ ಕಣದ ರೋಚಕತೆ ಹೆಚ್ಚಿಸಿ ರಣರಂಗ ರೆಡಿ ಆದ ಹಾಗಿದೆ. ಇದಕ್ಕೆ ಕಾರಣ ಬಿಜೆಪಿಯಲ್ಲಿ ಜಿಲ್ಲಾಧ್ಯಕ್ಷರುಗಳ ನೇಮಕ. ಈ ವಿಷಯದಲ್ಲಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರದ್ದು ಸರ್ವಾಧಿಕಾರಿ ಧೋರಣೆ ಅನ್ನೋದು ಸುಧಾಕರ್ ಅವರ ಅನಿಸಿಕೆ. ವಿಜಯೇಂದ್ರ ರಾಜ್ಯಾಧ್ಯಕ್ಷ ಹುದ್ದೆಯಲ್ಲಿದ್ದರೂ ತಾನು ಸಿಎಂ ಅಥವಾ ಅದಕ್ಕಿಂತ ಮೇಲಿನ ಹುದ್ದೆಯಲ್ಲಿದ್ದೇನೆ ಅನ್ನೋ ಭ್ರಮೆಯಲ್ಲಿದ್ದಾರೆ. ಅವರ ನೇಮಕಾತಿ ರಾಜಕೀಯವನ್ನು ಹೈ ಕಮ್ಯಾಂಡ್ ಗಮನಕ್ಕೆ ತರುತ್ತೇನೆ. ಅವರ ನೇಮಕಾತಿಯನ್ನು ಬದಲಿಸಬೇಕು, ಇಲ್ಲ ಅಂದ್ರೆ ಅವರನ್ನೇ ಬದಲಾಯಿಸಿಬಿಡುತ್ತೇನೆ ಅಂತ ಗುಟುರು ಹಾಕಿದ್ದಾರೆ ಸುಧಾಕರ್. ಹಾಗಾಗಿ ಈಗ ಬಿಜೆಪಿಯಲ್ಲಿ ಇರೋ ಅರಾಜಕತೆಯನ್ನು ಬಗೆಹರಿಸುವ ಸುಧಾರಕರಾಗಿ ಎಲ್ಲರ ಕಣ್ಣಿಗೆ ಕಾಣಿಸಿಕೊಳ್ಳುತ್ತಿದ್ದಾರೆ ಸುಧಾಕರ್. ವಿಜಯೇಂದ್ರ ಅವರು ಅವರ ತಂದೆ ಯಡಿಯೂರಪ್ಪ ಅವರಂತೆ ಅಲ್ಲ, ಇವರಿಗೆ ಪದವಿಯ ಮದ ಏರಿದೆ ಅಂತಿದ್ದಾರೆ ಸುಧಾಕರ್. ಆದರೆ ಇದು ಇಷ್ಟಕ್ಕೇ ನಿಲ್ಲದೆ ತಮ್ಮ ಹಳೆಯ ವೈಭವದ ದಿನಗಳನ್ನು ನೆನಪಿಸಿಕೊಂಡು ಕೊರಗಿದ್ದಾರೆ ಸುಧಾಕರ್. ನಾನು ಸಿದ್ರಾಮಣ್ಣ ಅವರ ಮಾತು ಕೇಳಬೇಕಿತ್ತು. ಸಿದ್ದರಾಮಣ್ಣ ಮತ್ತು ಇತರ ಕಾಂಗ್ರೆಸ್ ನಾಯಕರು ನನಗೆ ಮೊದಲೇ ಎಚ್ಚರಿಕೆ ಕೊಟ್ಟಿದ್ದರು, ಇವರ ಸಹವಾಸ ಮಾಡಿದರೆ ರಾಜಕೀಯವಾಗಿ ನಿನ್ನನ್ನು ಮುಗಿಸಿಬಿಡುತ್ತಾರೆ ಅಂತ, ನಾನು ಅವರ ಮಾತು ಕೇಳಲಿಲ್ಲ ಅಂತ ಈಗ ಸುಧಾಕರ್ ಪಶ್ಚಾತ್ತಾಪ ಪಡುತ್ತಿದ್ದಾರೆ. ಅಲ್ಲದೆ ನಾನು ಪಕ್ಷ ತೊರೆದು ಸಿದ್ದರಾಮಯ್ಯ ಅವರ ಕಾಂಗ್ರೆಸ್ ಸೇರಲೂ ಸಿದ್ಧ ಅಂತ ಪರೋಕ್ಷವಾಗಿ ಪಕ್ಷತ್ಯಾಗದ ಮಾತನಾಡಿದ್ದಾರೆ ಅವರು. ಹಾಗಾಗಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ನಾಯಕರ ಪಟ್ಟಿಗೆ ಸುಧಾಕರ್ ಕೂಡಾ ಅತಿ ಶೀಘ್ರದಲ್ಲಿ ಸೇರ್ಪಡೆ ಆದರೆ ಅದರಲ್ಲಿ ಅಚ್ಚರಿ ಏನಿಲ್ಲ ಅನ್ನಿಸುವಂತಿದೆ ಸದ್ಯದ ರಾಜಕೀಯ ಬೆಳವಣಿಗೆ. ಆದರೆ ಅದೆಲ್ಲಾ , ಬಿಜೆಪಿಯ ಹೈ ಕಮ್ಯಾಂಡ್ ನಿರ್ಧಾರದ ಮೇಲೆ ನಿಂತಿದೆ. ಒಟ್ಟಿನಲ್ಲಿ ಸುಧಾಕರ್ ಮತ್ತು ವಿಜಯೇಂದ್ರ ಇವರಿಬ್ಬರಲ್ಲಿ ವರಿಷ್ಠರಿಗೆ ಯಾರು ಇಷ್ಟ ಅನ್ನೋದ್ರ ಮೇಲೆ ಎಲ್ಲವೂ ನಿರ್ಧಾರ ಆಗಲಿದೆ.

ಸಂಪಾದಕರ ಸದ್ಯಶೋಧನೆ

ಪ್ರತಿಸ್ಪರ್ಧಿ ಮೇಲೆ ಹದ್ದಿನಗಣ್ಣು

ಜಗತ್ತಿನ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ವಿಶ್ವದೆಲ್ಲೆಡೆ ಇರುವ ಬೇರೆ ಕಂಪನಿಗಳು ಏನು ಮಾಡುತ್ತಿವೆ ಎಂಬ ಬಗ್ಗೆ ಮೈಯೆಲ್ಲ ಕಣ್ಣಾಗಿ ನೋಡುತ್ತಾ ಕುಳಿತಿರುತ್ತವೆ. ತಮ್ಮ ಪ್ರತಿಸ್ಪರ್ಧಿ ಕಂಪನಿಗಳಷ್ಟೇ ಅಲ್ಲ, ಸಣ್ಣ ಪುಟ್ಟ ಕಂಪನಿಗಳು ಸಹ ಏನು ಮಾಡುತ್ತಿವೆ ಎಂಬ ಬಗ್ಗೆ ಕಾಲಕಾಲಕ್ಕೆ ತಮ್ಮದೇ ಜಾಲಗಳನ್ನು ಬಳಸಿ, ಮಾಹಿತಿಯನ್ನು ಪಡೆಯುತ್ತಿರುತ್ತವೆ. ಈ ರೀತಿ ಮಾಹಿತಿ ಪಡೆಯಲೆಂದೇ, ಸಾವಿರಾರು ಕೋಟಿ ರುಪಾಯಿ ಹಣವನ್ನು ವ್ಯಯಿಸುತ್ತವೆ. ಯಾವುದೋ ಒಂದು ಕಂಪನಿ ಸಿದ್ಧಪಡಿಸುವ ವಸ್ತು ಅಥವಾ ಉತ್ಪನ್ನ, ಈಗಾಗಲೇ ಮಾರುಕಟ್ಟೆಯಲ್ಲಿರುವ ತನ್ನ ಪ್ರಾಡಕ್ಟನ್ನು ಹಿಂದಕ್ಕೆ ಹಾಕಬಹುದು ಎಂಬ ಆತಂಕ ಅದನ್ನು ಸದಾ ಕಾಡುತ್ತಿರುತ್ತದೆ. ಈ ಕಾರಣಕ್ಕಾಗಿ ತಮ್ಮ ಪ್ರತಿಸ್ಪರ್ಧಿಗಳ ಮೇಲೆ ಹದ್ದಿನಗಣ್ಣನ್ನು ನೆಟ್ಟಿರುತ್ತವೆ. 2013 ರ ಕೊನೆಯಲ್ಲಿ ಒಂದು ದಿನ ಅನಿರೀಕ್ಷಿತವಾಗಿ, ಇಸ್ರೇಲ್ ಮೂಲದ ವಾಜ್ (Waze) ಕಂಪನಿಯ ಸಂಸ್ಥಾಪಕರಲ್ಲೊಬ್ಬನಾದ ಉರಿ ಲೆವಿನ್ ಗೆ ಗೂಗಲ್ ಕಂಪನಿಯಿಂದ ಒಂದು ಇಮೇಲ್ ಬಂದಿತು - 'ನಾವು ನಿಮ್ಮನ್ನು ಇಸ್ರೇಲಿನ ನಿಮ್ಮ ಕಚೇರಿಯಲ್ಲಿ ಭೇಟಿ ಮಾಡಲು ಉತ್ಸುಕರಾಗಿದ್ದೇವೆ. ಸಮಯ ಮತ್ತು ದಿನಾಂಕವನ್ನು ನಿಗದಿಪಡಿಸಿ. ಇನ್ನು ಮೂರು ದಿನಗಳೊಳಗೆ ಭೇಟಿ ಸಾಧ್ಯವಾಗುವುದಾದರೆ ಒಳ್ಳೆಯದು.' ಆರು ವರ್ಷಗಳ ಹಿಂದಷ್ಟೇ ವಾಜ್ ಕಂಪನಿ ಆರಂಭವಾಗಿತ್ತು. ಆ ಹೆಸರಿನ ಕಂಪನಿ ಇದೆ ಎಂಬುದು ಹೊರ ಜಗತ್ತಿಗಲ್ಲ, ಇಸ್ರೇಲಿಗರಿಗೇ ಹೆಚ್ಚು ಜನರಿಗೆ ಗೊತ್ತಿರಲಿಲ್ಲ. ಕಾರಣ ಆ ಸಂಸ್ಥೆಯಲ್ಲಿ ಕೇವಲ ಹನ್ನೆರಡು ಜನ ಮಾತ್ರ ಕೆಲಸ ಮಾಡುತ್ತಿದ್ದರು. ವಾಜ್ ನಲ್ಲಿ ಏನು ನಡೆಯುತ್ತಿದೆ ಎಂಬುದು ಅದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸುವ ಇತರರಿಗೂ ಗೊತ್ತಿರಲಿಲ್ಲ. 'ಫ್ರೀಮ್ಯಾಪ್ ಇಸ್ರೇಲ್' ಎಂಬ ಹೆಸರಿನಲ್ಲಿ ಆರಂಭವಾದ ಸಂಸ್ಥೆ ನಂತರ ವಾಜ್ ಎಂದು ತನ್ನ ಹೆಸರನ್ನು ಬದಲಿಸಿಕೊಂಡಿತು. ಸ್ಮಾರ್ಟ್‌ಫೋನ್ ಮೂಲಕ ಸ್ಯಾಟಲೈಟ್ ನೇವಿಗೇಶನ್ ಸಾಫ್ಟ್ ವೇರ್ ಅಭಿವೃದ್ಧಿಪಡಿಸುವುದರಲ್ಲಿ ನಿರತವಾದ ವಾಜ್, ಜಿಪಿಎಸ್ ತಂತ್ರಜ್ಞಾನದಲ್ಲಿ ಅಸಾಧಾರಣ ಸಾಧನೆಯನ್ನು ಮಾಡುವುದರತ್ತ ದಾಪುಗಾಲು ಹಾಕಿತ್ತು. ಈ ಸಂಗತಿ ಗೂಗಲ್ ಗೆ ಹೇಗೋ ಗೊತ್ತಾಗಿಬಿಟ್ಟಿತು. ವಾಜ್ ಅಭಿವೃದ್ಧಿಪಡಿಸುತ್ತಿರುವ ತಂತ್ರಜ್ಞಾನ, ತನ್ನ ಹಿಡಿತದಲ್ಲಿರುವ ಜಿಪಿಎಸ್ ಮಾರುಕಟ್ಟೆಯನ್ನು ಕಬಳಿಸಿಬಿಡಬಹುದು ಎಂದು ಗೂಗಲ್‌ಗೆ ಅನಿಸಿತು. ಈ ಬೆಳವಣಿಗೆ ಗಮನಕ್ಕೆ ಬರುತ್ತಿದ್ದಂತೆ ಹಠಾತ್ ಎಚ್ಚರಗೊಂಡ ಗೂಗಲ್, ವಾಜ್ ಸಂಸ್ಥಾಪಕರನ್ನು ಸಂಪರ್ಕಿಸಿತು. ಇಮೇಲ್ ಕಳಿಸಿದ ಮೂರನೇ ದಿನ ಗೂಗಲ್ ಪ್ರತಿನಿಧಿಗಳು ಇಸ್ರೇಲಿನ ಟೆಲ್ ಅವಿವ್ ನಲ್ಲಿರುವ ವಾಜ್ ಕಚೇರಿಯಲ್ಲಿ ಹಾಜರಿದ್ದರು. ಗೂಗಲ್ ಪ್ರತಿನಿಧಿಗಳು ಒಂದು ಪುಟದ ಒಪ್ಪಂದ ಪತ್ರವನ್ನು ಹಿಡಿದಿದ್ದರು. 'ನೀವು ಒಪ್ಪುವುದಾದರೆ, 1.15 ಶತಕೋಟಿ ಅಮೆರಿಕನ್ ಡಾಲರ್ ನಗದು ಹಣ ನೀಡಿ, ನಿಮ್ಮ ಕಂಪನಿಯನ್ನು ಖರೀದಿಸಲು ನಾವು ಸಿದ್ಧ. ನಿಮ್ಮ ಕಂಪನಿ ಹೆಸರನ್ನು ನಾವೇನೂ ಬದಲಿಸುವುದಿಲ್ಲ, ಅದು ಹಾಗೇ ಇರಲಿ. ಇಡೀ ವ್ಯವಹಾರ ಒಂದು ವಾರದೊಳಗೆ ಮುಗಿಯುತ್ತದೆ' ಎಂದು ಬರೆದಿತ್ತು. 'ಯೋಚಿಸಲು ನಮಗೆ ಕಾಲಾವಕಾಶ ಬೇಕು' ಎಂದು ವಾಜ್ ಸಂಸ್ಥಾಪಕರು ಹೇಳಿದರು. ಆದರೆ ಗೂಗಲ್ ಪ್ರತಿನಿಧಿಗಳು ಕೇಳುವ ಮನಸ್ಥಿತಿಯಲ್ಲಿ ಇರಲಿಲ್ಲ. 'ನಿಮಗೆ ಇನ್ನೂ ಹೆಚ್ಚಿನ ಹಣ ಬೇಕಾದರೆ ಹೇಳಿ. ನಾವು ಅದಕ್ಕೂ ಸಿದ್ಧರಿದ್ದೇವೆ' ಎಂದು ಗೂಗಲ್ ಪ್ರತಿನಿಧಿಗಳು ಹೇಳಿದಾಗ, ಆ ಒಪ್ಪಂದದಿಂದ ಹೊರಬರುವ ಅಥವಾ ಕಾಲ ನೂಕುವ ಪ್ರಶ್ನೆಯೇ ಇರಲಿಲ್ಲ. ಅತ್ಯಂತ ಪ್ರೀತಿಯಿಂದ ಕಟ್ಟಿದ ಆ ಕಂಪನಿಯನ್ನು ಗೂಗಲ್ ಗೆ ಮಾರಾಟ ಮಾಡಲು ಒಪ್ಪಿದರು. ಇಡೀ ವ್ಯವಹಾರ ಹತ್ತು ದಿನಗಳಲ್ಲಿ ಮುಗಿದು ಹೋಯಿತು. ಅಲ್ಲಿಗೆ ಗೂಗಲ್ ತನ್ನ ಜಿಪಿಎಸ್ ಮಾರುಕಟ್ಟೆಯನ್ನು ಸದ್ದಿಲ್ಲದೇ ಕಬಳಿಸಲು ಹೊರಟಿದ್ದ ವಾಜ್ ಕಂಪನಿಯನ್ನು ನುಂಗಿ ನೀರು ಕುಡಿಯಿತು. ಗೂಗಲ್ ಮ್ಯಾಪ್ ಎಲ್ಲರಿಗೂ ಗೊತ್ತು. ಆ ಹೆಸರನ್ನು ಕೇಳದವರಿಲ್ಲ. ವಾಜ್ ಹೆಸರು ನೂರರಲ್ಲಿ ನಾಲ್ಕೈದು ಮಂದಿಗೆ ಗೊತ್ತಿದ್ದಿರಬಹುದು. ಅಂದು ವಾಜ್ ನ್ನು ಖರೀದಿಸದಿದ್ದರೆ ಗೂಗಲ್ ಮ್ಯಾಪ್ ಕತೆ ಏನಾಗುತ್ತಿತ್ತೋ? ಚೀನಾದ 'ಡೀಪ್ ಸೀಕ್' ತಂತ್ರಜ್ಞಾನದ ಮೂಲಕ ಅಮೆರಿಕದ ಚಾಟ್ ಜಿಪಿಟಿಗೆ ಸಡ್ಡು ಹೊಡೆದ ಸುದ್ದಿ ಓದಿದಾಗ ಈ ಪ್ರಕರಣ ಮತ್ತೆ ನೆನಪಾಯಿತು.

ಅಮೆರಿಕನ್ನರ ಪುಸ್ತಕ ಪ್ರೀತಿ ನಮ್ಮಲ್ಲೇಕಿಲ್ಲ?

ಅಮೆರಿಕನ್ ಪ್ರಜೆ, ಸರಾಸರಿ ಪ್ರತೀ ವರ್ಷ ತಲಾ ನೂರು ಡಾಲರ್ ಗಿಂತ ಜಾಸ್ತಿ ಹಣವನ್ನು ಓದಲು ವ್ಯಯಿಸುತ್ತಾನೆ. ಪ್ರಿಂಟ್ ಪುಸ್ತಕದ ವ್ಯವಹಾರ ಅಮೆರಿಕಾದೊಳಗೆ 350 ಕೋಟಿ ಡಾಲರ್ ನಷ್ಟು ದೊಡ್ಡದು. ಇಲ್ಲಿನ ಬಹುತೇಕ ಪುಸ್ತಕಗಳು ದೇಶದಾಚೆ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗುತ್ತವೆ. ಅದನ್ನೆಲ್ಲ ಸೇರಿಸಿದರೆ ಇದು 300 ಲಕ್ಷ ಕೋಟಿ ರೂಪಾಯಿಯ ಬಹುದೊಡ್ಡ ಇಂಡಸ್ಟ್ರಿ, ವ್ಯವಹಾರ. ಅಮೆರಿಕಾದಲ್ಲಿ ಲಕ್ಷದ ಲೆಕ್ಕದಲ್ಲಿ ಬರಹಗಾರರಿದ್ದಾರೆ.

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ನಮ್ಮ ಊರಿಂದ ಗೋಕರ್ಣ ಬೈಕಿನಲ್ಲಿ ಒಂದರ್ಧ ಗಂಟೆಯ ದೂರ. ದೇವಸ್ಥಾನ, ವೇದ ಮಂತ್ರ, ಕೋಟಿತೀರ್ಥ, ಓಂ, ಕುಡ್ಲೆ ಬೀಚುಗಳು ಹೀಗೆ ಗೋಕರ್ಣದ ಬಗ್ಗೆ ಹೇಳಲು ನೂರೆಂಟು ವಸ್ತು ವಿಶೇಷಗಳಿವೆ. ಜಯಂತ ಕಾಯ್ಕಿಣಿಯವರ ಕಥೆಗಳಲ್ಲಿ ಗೋಕರ್ಣವೆಂಬ ಸೂಕ್ಷ್ಮ ಪ್ರಪಂಚದ ಕೆಲವು ಝಲಕ್ ಬಂದುಹೋಗುತ್ತವೆ. ಅವರಷ್ಟು ಚಂದಕ್ಕೆ ಭಾವಗಳಿಗೆ ಶಬ್ದವನ್ನು ಆರೋಪಿಸುವವರು ಕನ್ನಡದಲ್ಲಿ ಇನ್ನೊಬ್ಬರಿಲ್ಲ. ಹೇಳಿ ಕೇಳಿ ಗೋಕರ್ಣ ಅವರ ಊರು - ಕೇಳಬೇಕೆ !! ಪ್ರತೀ ಊರಿಗೂ ಒಂದು ವ್ಯಕ್ತಿತ್ವವಿರುತ್ತದೆಯಂತೆ. ಗೋಕರ್ಣಕ್ಕೆ ಹತ್ತೆಂಟಿದೆ. ಗೋಕರ್ಣದ ವ್ಯಕ್ತಿತ್ವ ಅಷ್ಟು ಸುಲಭದಲ್ಲಿ, ಒಂದೆರಡು ದಿನದಲ್ಲಿ ಪ್ರವಾಸಿಗರಿಗೆ ದಕ್ಕುವುದಿಲ್ಲ. ಮುಂಬೈ, ನ್ಯೂಯಾರ್ಕ್ ಗೆ ಮೀರಿದ ಜೀವಕಳೆ ಗೋಕರ್ಣದ್ದು.

ವಿದೇಶಿಗರು ಎಂಬೊಂದು ಪ್ರತ್ಯೇಕತೆ ಕೂಡ ಗೋಕರ್ಣದ ಭಾಗವೇ. ಗೋಕರ್ಣದ ಬೀಚುಗಳಲ್ಲಿ ವಿದೇಶಿಗರನ್ನು ಕಾಣುವುದೆಂದರೆ ಮೇಲರಿಮೆ - ಕೀಳರಿಮೆಯನ್ನು ಮೀರಿದ ಒಂದು ಬೆರಗು. ವಿದೇಶಿಗರ ನಾನಾ ನಮೂನೆಯ ವೇಷಗಳನ್ನು ಕಂಡು ಬೆಳೆದ ನನಗೆ ಪರದೇಶಕ್ಕೆ ಹೋದಾಗ ಅಷ್ಟು ವಿದೇಶೀ ಭಾವ ಬಂದಿರಲಿಕ್ಕಿಲ್ಲ. ಸಮುದ್ರತಟದಲ್ಲಿ ಬೀಚ್ ಚೇರ್ ಹಾಕಿ ಮಲಗಿರುತ್ತಿದ್ದ ಬಹುತೇಕ ವಿದೇಶಿಗರ ಕೈಯಲ್ಲಿ ಪುಸ್ತಕವಿರುತ್ತಿತ್ತು. ಇದೇನೋ ಒಂದು ವಿಶೇಷ ಎಂದು ಆಗ ಅನ್ನಿಸಿರಲಿಲ್ಲ. ಆಗ ಅದರ ಬಗ್ಗೆ ಅದರಾಚೆ ಯೋಚಿಸಿರಲಿಲ್ಲ. ನಂತರದಲ್ಲಿ ದಕ್ಷಿಣ ಅಮೆರಿಕಾ, ಯುಎಸ್ಎ, ದಕ್ಷಿಣ ಆಫ್ರಿಕಾ ಮೊದಲಾದ ದೇಶಗಳನ್ನು ನೋಡಿದಾಗ ಇಲ್ಲೆಲ್ಲ ವಿಶ್ರಮಿಸುವ, ಪ್ರಯಾಣ ಇತ್ಯಾದಿ ಕಾಯುವ ಸಂದರ್ಭದಲ್ಲೆಲ್ಲ ಪುಸ್ತಕ ಓದುವುದು ವಿದೇಶಿಗರ ಒಂದು ಸಾಮಾನ್ಯವಾದ ವಿಚಾರ ಎನ್ನುವುದು ಹೆಚ್ಚೆಚ್ಚು ಗೋಚರವಾಗುತ್ತ ಹೋಯಿತು.

ನಾನು ಹುಟ್ಟಿ ಬೆಳೆದ ಜಾಗಗಳಲ್ಲೆಲ್ಲ ಪ್ರಾಜ್ಞರ ಸಂಖ್ಯೆ ಯಥೇಚ್ಛವಾಗಿದ್ದರೂ ಯಾರೇ ಒಬ್ಬರು ಪುಸ್ತಕ ಓದುವುದು ಹೊರಜಗತ್ತಿಗೆ ಕಾಣಿಸುತ್ತಿರಲಿಲ್ಲ. ಕೆಲವರ ಮನೆಗೆ ಹೋದರೆ ಗಾಜಿನ ಕಪಾಟುಗಳಲ್ಲಿ ಚಂದಕ್ಕೆ ಸರಿದು ಕೂತಿರುತ್ತಿದ್ದ ಪುಸ್ತಕಗಳನ್ನು ಬಹುಷಃ ಅಂಗಡಿಯಿಂದ ತರುವಾಗ ಮುಟ್ಟಿದ್ದೇ ಕೊನೆಯೆನಿಸುತ್ತಿತ್ತು. ನನಗೋ, ಪುಸ್ತಕಗಳನ್ನು ಕಂಡ ಕೂಡಲೇ ಒಮ್ಮೆ ಮುಟ್ಟಿ, ಎರಡು ಹಾಳೆ ತಿರುವಿಸಬೇಕು, ಆಗಲೇ ಸಮಾಧಾನ. ಆಗೆಲ್ಲ ಧೂಳ್ಪದರಗಳು ಕೈಗೆ ತಾಕುತ್ತಿತ್ತು. ಒಳಕ್ಕೆ ಹಾಳೆ ತೆರೆದು ಮೂಸಿದರೆ ಪ್ರಿಂಟಿಂಗ್ ಪ್ರೆಸ್ ನ ಪರಿಮಳ ಆರಿಹೋಗಿರುತ್ತಿರಲಿಲ್ಲ. ಇನ್ನು ಕೆಲವರ ಮನೆಗಳಿಗೆ ಹೋದಾಗ ಪುಸ್ತಕ ನೋಡಲು ನಿಂತರೆ ಅವರೂ ಪಕ್ಕದಲ್ಲಿಯೇ ಬಂದು ನಿಲ್ಲೋರು. ಒಮ್ಮೆ ಹೀಗೆ ಆದಾಗ ಯಜಮಾನರು ಮೂರ್ನಾಲ್ಕು ಒಟ್ಟಿಗೆ ಜೋಡಿಸಿದ್ದ ಪುಸ್ತಕವನ್ನು ಮುಟ್ಟಲಿಕ್ಕೆ ಬಿಡಲಿಲ್ಲ. ಏನೋ ಒಂದು ಕಥೆ ಹೇಳಿ, ಕೈತಪ್ಪಿಸಿಬಿಡುತ್ತಿದ್ದರು. ನಂತರ ಅವರು ಒಳಕ್ಕೆ ಹೋದಾಗ ಥಟ್ಟನೆ ತೆರೆದು ನೋಡಿದರೆ ಅದರ ಮೊದಲ ಪುಟದಲ್ಲಿ ಊರಿನ ಇನ್ನೊಬ್ಬರ ಹೆಸರು ಇತ್ತು. ಇದು ಬಹುಷಃ ಇವರು ಅವರ ಮನೆಯಿಂದ ತಂದಿದ್ದರು. ಇವರೂ ಓದಿಲ್ಲ, ಹಿಂತಿರುಗಿ ಕೊಡಲು ಏನೋ ಒಂದು ಮೋಹ, ಕೊಟ್ಟವರಿಗೂ ನೆನಪಿಲ್ಲ, ಏಕೆಂದರೆ ಅವರೂ ಓದುವವರಲ್ಲ. ಡಾಕ್ಟರ್ ಕ್ಲಿನಿಕ್, ಬ್ಯಾಂಕ್, ಆಫೀಸು ಮೊದಲಾದವುಗಳಲ್ಲಿ ಕಾಯುವಾಗ ಎಲ್ಲರೂ ಆಕಾಶವನ್ನೇ ನೋಡುತ್ತಿರುತ್ತಿದ್ದರೇ ವಿನಃ ಯಾರೊಬ್ಬರ ಕೈಯಲ್ಲೂ ಪುಸ್ತಕವಿರುತ್ತಿರಲಿಲ್ಲ. ಬಸ್ಸಿನಲ್ಲಿ ಪ್ರಯಾಣಿಸುವಾಗ ಯಾರೋ ಒಬ್ಬರು ಪೇಪರ್ ಓದುತ್ತಿದ್ದರೆ ಅದರ ಹಾಳೆಯನ್ನು ಕೇಳುವವರು ಬಿಡಿ, ಅವರು ಓದುತ್ತಿರುವಾಗಲೇ ಮಡಿಸಿದ್ದ ಪೇಪರ್ ನ ಇನ್ನೊಂದರ್ಧವನ್ನು ತಲೆಕೆಳಗಾಗಿಯೇ ಓದುತ್ತಿರುವವರಿದ್ದರು. ಓದು ಎಂದರೆ ಹೊರಗೆ ಕಾಣಿಸಿದ್ದು ಇಷ್ಟೇ. ಓದುವವರು ಇದ್ದದ್ದೇ ತೀರಾ-ತೀರಾ ಕಡಿಮೆ. ಕೆಲವೇ ಕೆಲವರು. ಅವರೆಲ್ಲ ಏನೋ ವಿಚಿತ್ರದಂತೆ, ಗುಂಪಿನಲ್ಲಿ ಸೇರದ 'ಪದ'ದಂತೆ ಕಾಣಿಸುತ್ತಿದ್ದರು. ಊರಲ್ಲಿ ಇನ್ನು ಕೆಲವರು ಎರವಲು ಪುಸ್ತಕಗಳನ್ನಷ್ಟೇ ಓದುವವರಿದ್ದರು. ಅವರೆಂದೂ ಪುಸ್ತಕವನ್ನು ದುಡ್ಡು ಕೊಟ್ಟು ಖರೀದಿಸುತ್ತಿರಲಿಲ್ಲ. ಹೀಗೆ ಎರವಲು ಕೊಡುವವರು ಒಂದು ಪಟ್ಟಿಯಲ್ಲಿ ಯಾರ್ಯಾರಿಗೆ ಯಾವ ಯಾವ ಪುಸ್ತಕ ಕೊಟ್ಟೆ ಎಂದು ಲೆಕ್ಕ ಹಚ್ಚಿ ಇಡುವವರಿದ್ದರು. ನಂತರ ದೊಡ್ಡ ಶಹರಗಳಲ್ಲಿ, ಬೆಂಗಳೂರು, ಚೆನ್ನೈ, ಕೋಲ್ಕತಾ, ದೆಹಲಿ ಇಲ್ಲೆಲ್ಲಾ ಓದುವವರನ್ನು ಬಹಿರಂಗವಾಗಿ ಕಂಡಿದ್ದು ಅಷ್ಟಕ್ಕಷ್ಟೆ.

ಇಂದಿಗೂ ಜೀವಮಾನದಲ್ಲಿ ಒಂದೇ ಒಂದು ಪುಸ್ತಕ ಓದದ ಸುಶಿಕ್ಷಿತರ ಬಹುದೊಡ್ಡ ಸಂಖ್ಯೆ ನಮ್ಮಲ್ಲಿ ಇದೆ. ಈಗ ಕೆಲವು ಸಮಯದ ಹಿಂದೆ ಫೇಸ್ ಬುಕ್ ನಲ್ಲಿ ನಾನು ಓದಿದ ಕೆಲವು ಪುಸ್ತಕಗಳ ಮುಖಪುಟಗಳನ್ನು ಹಂಚಿಕೊಂಡಿದ್ದೆ. ಅದಕ್ಕೆ ಪ್ರತಿಕ್ರಿಯಿಸಿದ ಒಬ್ಬರು ನಾವು ಏಕೆ ಪುಸ್ತಕ ಓದಬೇಕು? ಪುಸ್ತಕ ಓದದವರು ಬದುಕುವುದೇ ಇಲ್ಲವೇ? ಎಂದು ಪ್ರಶ್ನಿಸಿದ್ದರು. ಅಂಥದ್ದಕ್ಕೆಲ್ಲ ಉತ್ತರಿಸಿ, ವಿವರಿಸಿ, ಒಪ್ಪಿಸುವುದೆಲ್ಲ ಸಾಧ್ಯವಾದದ್ದಲ್ಲ ಎಂದು ಸುಮ್ಮನೆ ಒಂದು ಲೈಕ್ ಒತ್ತಿ ಅಲ್ಲಿಗೇ ಬಿಟ್ಟೆ. ಅವರು ಕೇಳಿದ ಪ್ರಶ್ನೆ ಸರಿಯೇ ಇದೆ. ಆದರೆ ಉತ್ತರವನ್ನು ಅವರು ಬಯಸಿದಂತೆನಿಸಲಿಲ್ಲ. ಓದದವರಿಗೇನ್ ಗೊತ್ತು ಪುಸ್ತಕದ ಪರಿಮಳ!

ಮನೆಯಲ್ಲಿ ಪುಸ್ತಕ ಓದುವ ವಾತಾವರಣವಿದ್ದದ್ದರಿಂದ ಮತ್ತು ತಂದೆಯವರ ಸ್ವಲ್ಪ ಒತ್ತಾಯದಿಂದ ಪುಸ್ತಕಗಳನ್ನು ಓದಲಿಕ್ಕೆ ಶುರುಮಾಡಿದ್ದು. ಬಹುಷಃ ಹಾಗೊಂದು ವಾತಾವರಣವಿಲ್ಲದಿದ್ದಲ್ಲಿ, ಓದಲಿಕ್ಕೆ ಕಲಿಯದಿದ್ದಲ್ಲಿ ನಾನು ಈ ಅಂಕಣವನ್ನು ಮೂರು ವರ್ಷದಿಂದ ನಿರಂತರ, ಒಂದೂ ವಾರ ತಪ್ಪಿಸದೇ ಬರೆಯಲಿಕ್ಕೆ ಸಾಧ್ಯವೇ ಆಗುತ್ತಿರಲಿಲ್ಲ, ನನ್ನ ಮಟ್ಟಿಗೆ ಓದೇ ಬರೆಯುವ ಮೆಟ್ಟಿಲು ಹತ್ತಿಸಿದ್ದು. ಹಾಗಂತ ಓದಾಗಲಿ, ಬರವಣಿಗೆಯ ಸಿದ್ಧತೆಯಾಗಲಿ, ಬರವಣಿಗೆಯಾಗಲಿ, ನನ್ನ ವೈಯಕ್ತಿಕ ಮೋಜು, ವಿಶ್ರಾಂತಿಗೆ ಯಾವತ್ತೂ ಹೊರೆಯೆನಿಸಿದ್ದಿಲ್ಲ. ಇರಲಿ, ಅವೆಲ್ಲ ವೈಯಕ್ತಿಕವಾಯಿತು. ಈಗ ಓದಿನ ಮಹತ್ವದ ಬಗ್ಗೆ ಎಲ್ಲ ಕೊರೆಯಲಿಕ್ಕೆ ಹೋಗುವುದಿಲ್ಲ. ನೀವು ಈ ಲೇಖನ ಓದುತ್ತಿದ್ದೀರಿ ಎಂದರೆ ಓದುವ ಹವ್ಯಾಸದವರೇ ಎಂದಾಯಿತು, ಹಾಗಾಗಿ ಅದೆಲ್ಲ ವಿವರ ಬೇಡ. ನನ್ನ ಅನಿಸಿಕೆಯಲ್ಲಿ ನಾವು ಯಾರಿಗೂ ಓದುವ ಮಹತ್ವದ ಬಗ್ಗೆ ಹೇಳಲೇ ಬಾರದು. ಓದುವವರಿಗೆ ಅದು ಗೊತ್ತು. ಇನ್ನು ಓದದವರಿಗೆ ನೀವು ಎಷ್ಟೇ ಹೇಳಿದರೂ ಅವರು ಬದಲಾಗರು. ಒಂದೊಮ್ಮೆ ನಿಮ್ಮ ಮಾತು ಸರಿಯೆನಿಸಿ ಓದಲು ಶುರುವಿಟ್ಟುಕೊಂಡರೆಂದುಕೊಳ್ಳಿ, ಮುಂದುವರಿಸಲಿಕ್ಕಾಗದೇ ಕೈಚೆಲ್ಲುವವರೇ ಜಾಸ್ತಿ. ಏಕೆಂದರೆ ಒಂದು ವಯಸ್ಸಿನ ನಂತರ ಓದಿನ ಹವ್ಯಾಸವನ್ನು ಒಲಿಸಿಕೊಳ್ಳುವುದು ಅಷ್ಟು ಸುಲಭದ್ದಲ್ಲ. ಹಾಗೆ ಕೆಲವರು ಇನ್ನೊಬ್ಬರನ್ನು ಕಂಡು, ಕೇಳಿ ಓದಲು ಶುರುಮಾಡಿ ಅದನ್ನು ಜೀವನದ ಸಹಜ ಭಾಗವಾಗಿ ಹೊಂದಿಸಿಕೊಂಡಿದ್ದಾರೆ ಎಂದರೆ ಅದು ಅವರ ಅಚಲ ಚಿತ್ತದ ಪ್ರತೀಕವೇ ಸರಿ.

ಆಸ್ಟ್ರಿಚ್, ಪೆಂಗ್ವಿನ್ ಮೊದಲಾದ ಹಾರಲು ಬಾರದ ಹಕ್ಕಿಗಳನ್ನು ನೋಡಿದಾಗ ಅವೆಲ್ಲ ವೈಲ್ಡ್ ಜಗತ್ತಿನಲ್ಲಿ ಇದೊಂದು ವೈಕಲ್ಯದಿಂದ ಇನ್ನೂ ನಶಿಸಿಹೋಗಿಲ್ಲ ಏಕೆ ಎನ್ನುವ ಪ್ರಶ್ನೆ ಎದುರಾಗುತ್ತದೆ. ಸಾಮಾನ್ಯವಾಗಿ ಬಹುತೇಕ ಪ್ರಾಣಿಗಳು ಅವುಗಳ ಲೈಫ್ ಸ್ಕಿಲ್, ಬದುಕುವ ಕಲೆಯನ್ನು ಕಲಿಯುವುದೇ ಅವುಗಳ ತಂದೆ ತಾಯಿಯಿಂದ. ಅದರಲ್ಲಿಯೂ ವೇಗವಿಲ್ಲದ, ಹಾರಲು ಬಾರದ, ಮರವೇರಲು ಸಾಧ್ಯವಾಗದ ಹೀಗೆ ಯಾವುದೋ ಒಂದು ಚಾಲೆಂಜ್ ಇರುವ ಜೀವಿಯಾದರೆ, ಅಲ್ಪಾಯುಷಿ ಜೀವಿಯಾದರೆ ಅವುಗಳ ಲೈಫ್ ಸ್ಕಿಲ್ ಟ್ರೈನಿಂಗ್ ಗಳು ಇನ್ನಷ್ಟು ತೀವ್ರವಾಗಿರುತ್ತವೆ. ಜೀವಿಗಳಲ್ಲಿಯೇ ಮನುಷ್ಯನ ಬದುಕು ಅತ್ಯಂತ ಕ್ಲಿಷ್ಟವಾದದ್ದು. ಹಾಗಾಗಿಯೇ, ಇಲ್ಲಿ ಬದುಕಲಿಕ್ಕೆ ಅಣಿಯಾಗಲು ಗುರುಕುಲ, ಶಾಲೆ ಇತ್ಯಾದಿಗಳು ಬೇಕಾದದ್ದು. ಆದರೆ ಈ ಶಾಲೆಗಳಲ್ಲಿ ಕೆಲವು ತೀರಾ ಅವಶ್ಯಕ ಲೈಫ್ ಸ್ಕಿಲ್ ಗಳನ್ನು ಕಲಿಸುವುದೇ ಇಲ್ಲ, ಅದೆಲ್ಲ ತಂದೆತಾಯಿ ಕಲಿಸಿಕೊಳ್ಳಬೇಕು, ಅವರಿಗೆ ಗೊತ್ತಿದ್ದರೆ, ಮಹತ್ವದ್ದೆನಿಸಿದರೆ. ಆದರೆ ಕಾಲ ಕಳೆದಂತೆ ತಂದೆ-ತಾಯಂದಿರು ಮಕ್ಕಳಿಗೆ ಅಷ್ಟೊಂದು ಸಮಯ ಕೊಡಲಿಕ್ಕಾಗುತ್ತಿಲ್ಲ, ಕೊಟ್ಟರೂ ಪ್ರೀತಿ ಮುದ್ದಿಸಲಿಕ್ಕೆ, ಓಡಾಡಲಿಕ್ಕೆ ಹೊರತಾಗಿ ಜೀವನ ಕಲೆಯನ್ನು ಕಲಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ಶಾಲೆಯ ಅವಲಂಬನೆ ದಿನಗಳೆದಂತೆ ಹೆಚ್ಚುತ್ತಿದೆ. ಆ ಕಾರಣಕ್ಕೇ ಮಕ್ಕಳು ತಂದೆತಾಯಿಗಿಂತ ಮೇಷ್ಟ್ರು ಹೇಳಿದ್ದೇ ಸರ್ವಸ್ವ ಅನ್ನೋದು. ಆದರೆ ಇಂದು, ಆ ಹಿನ್ನೆಲೆಯಲ್ಲಿ ಶಾಲೆಯ ಶಿಕ್ಷಣದ ವಾಸ್ತವಿಕ ಉದ್ದೇಶವನ್ನೇ ಪ್ರಶ್ನಿಸುವಂತಿದೆ. ಶಾಲೆಯಲ್ಲಿ ಮೊಳೆ ಹೊಡೆಯೋದು ಹೇಗೆ, ಗರಗಸ ಹಿಡಿಯೋದು ಹೇಗೆ, ಸ್ವಿಚ್ - ಪ್ಲಗ್ ಬದಲಿಸೋದು ಹೇಗೆ, ಈಜುವುದು ಹೇಗೆ ಇವನ್ನೆಲ್ಲ ಕಲಿಸುತ್ತಾರೆಯೇ ಎಂದು ಕೇಳಿದರೆ ಪ್ರಶ್ನೆಯೇ ಹಾಸ್ಯಾಸ್ಪದವೆನ್ನಿಸುವಂತಾಗಿದೆ.

ಶಾಲೆಯಲ್ಲಿ ಓದುವುದು ಹೇಗೆ, ಬರೆಯುವುದು ಹೇಗೆ ಎಂದು ಪ್ರೈಮರಿಯಲ್ಲಿ ಕಲಿಸುವಾಗ ಅದು ತೀರಾ ಥಿಯೇರಿ ವಿಷಯವಾಗಿಯೇ ಇದ್ದುಬಿಡುತ್ತದೆ. ಅಲ್ಲಿಯೇ ಇನ್ನೊಂದು ಕೋಣೆಯಲ್ಲಿ, ಲೈಬ್ರರಿಯಲ್ಲಿರುವ ಪುಸ್ತಕಗಳನ್ನು - ಲೈಬ್ರರಿ ಇನ್ ಚಾರ್ಜ್ ಗಿರುವ ಜವಾಬ್ದಾರಿಯಿಂದಾಗಿ ಕಪಾಟಿನಿಂದ ಹೊರಬೀಳದಂತಹ ಸ್ಥಿತಿ. ಆ ಲೈಬ್ರರಿಯ ಪುಸ್ತಕಗಳನ್ನು ತಂದು ಪಠ್ಯೇತರ ಓದು, ಆ ಓದಿನ ಮೋಜು ಇವನ್ನೆಲ್ಲ ಕಲಿಸುವ ಶಾಲೆಗಳು ನಮ್ಮಲ್ಲಿ ಕೆಲವು ಇದ್ದಿರಬಹುದು, ಆದರೆ ವಿರಳ.

ಭಾರತದಲ್ಲಿ ಈ ಪಬ್ಲಿಕ್ ಓದಿನ ಹವ್ಯಾಸ ತೀರಾ ಕಡಿಮೆಯೇ ಸರಿ. ವಿದೇಶಿಗರು, ಅದರಲ್ಲಿಯೂ ಅಮೆರಿಕನ್ನರು ಹಾಗಲ್ಲ. ಅವರ ಕೈಯಲ್ಲಿ, ಬ್ಯಾಗಿನಲ್ಲಿ, ಪುಸ್ತಕ ಅಥ್ವಾ ಕಿಂಡಲ್ ಇದ್ದೇ ಇರುತ್ತದೆ. ಇವರೆಲ್ಲ ಇದೇಕೆ ಇಷ್ಟು ಓದೋದು? ಇವರನ್ನೆಲ್ಲ ಓದಿಗೆ ಹಚ್ಚಿಸಿದವರು ಯಾರು. ಕಲ್ಚರ್ ನಲ್ಲಿಯೇ ಇವರಿಗೆ ಈ ಪ್ರಮಾಣದಲ್ಲಿ ಓದಿನ ಹವ್ಯಾಸ ಬಂದಿದ್ದು ಹೇಗೆ ಎನ್ನುವ ಪ್ರಶ್ನೆ ಬಹುಕಾಲವಿದಿಂದ ನನ್ನಲ್ಲಿತ್ತು. ಏಕೆಂದರೆ ಓದುವ ಹವ್ಯಾಸಕ್ಕೆ ಬೆಳೆದು ಬಂದ ಪರಿಸರ ಮುಖ್ಯವಾಗುತ್ತದೆ ಎನ್ನುವುದು ಕಂಡು ಗೊತ್ತಿತ್ತು. ಓದು ಹಿಂದೂಸ್ತಾನಿ ಸಂಗೀತದಂತೆ. ಅದು acquired taste, ಒಲಿಸಿಕೊಳ್ಳಬೇಕಾದ ಒಂದು ಜೀವನ ಕಲೆ, ರುಚಿ.

ಅದಕ್ಕೆ ಉತ್ತರ ಸಿಕ್ಕಿದ್ದು ಮಗಳು ಮೈನಾ ಶಾಲೆಗೆ ಹೋಗಲು ಶುರುಮಾಡಿದಾಗಿನಿಂದ. ಇಲ್ಲಿನ ಮಕ್ಕಳಿಗೆ ಶಾಲೆಗಳಲ್ಲಿ ಕಥೆ ಓದಿ ಹೇಳಲೆಂದೇ ಪ್ರತೀ ದಿನ ಒಂದಿಷ್ಟು ಸಮಯ ನಿಗದಿಪಡಿಸಿರಲಾಗುತ್ತದೆ. ಇದು ವ್ಯಾಕರಣ ಕಲಿಯುವುದಕ್ಕೆ ವ್ಯಯಿಸುವ ಸಮಯಕ್ಕಿಂತ ಜಾಸ್ತಿ. ಒಂದನೇ ಕ್ಲಾಸಿನಿಂದಲೇ ಕಾಮಿಕ್ ಪುಸ್ತಕಗಳನ್ನು ಓದಿ ಹೇಳೋದು ಶುರುವಾಗುತ್ತದೆ. ಎರಡನೇ ಕ್ಲಾಸಿಗೆ ಬರುವಾಗ ಓದು, ಬರೆಯೋದು ಕಲಿತ ಮಗುವಿಗೆ ಪುಸ್ತಕವನ್ನು ಕೊಟ್ಟು ಚಿತ್ರ ನೋಡುತ್ತ ಕೆಲವೇ ಶಬ್ದಗಳಲ್ಲಿ ಕಥೆ ಹೇಳುವ ಪುಸ್ತಕಗಳನ್ನು ಕೊಟ್ಟು ಓದಿಸಲು ಕೂರಿಸಲಾಗುತ್ತದೆ. ಇದು ಇಲ್ಲಿನ ಮಿಡ್ಲ್ ಸ್ಕೂಲ್ (ಹಿರಿಯ ಪ್ರಾಥಮಿಕ)ದ ವರೆಗೂ ಮುಂದುವರಿದುಕೊಂಡು ಹೋಗುತ್ತದೆ. ಅಲ್ಲದೆ ಮಕ್ಕಳಿಗೆ ಊರಿನ ಲೈಬ್ರರಿಗೆ ಹೋಗುವಂತೆ, ಅಲ್ಲಿ ಇವಿಷ್ಟು ಬರಹಗಾರರಲ್ಲಿ ಒಬ್ಬರ ಪುಸ್ತಕವನ್ನು ಓದುವಂತೆ ಹೋಮ್ ವರ್ಕ್ ಕೊಡಲಾಗುತ್ತದೆ. ಹೀಗೆ ವಾರಕ್ಕೊಮ್ಮೆ ಮಕ್ಕಳನ್ನು ಲೈಬ್ರರಿಗೆ ಕರೆದೊಯ್ಯಲೇಬೇಕು. ಬರೀ ಓದಿಸುವುದಷ್ಟೇ ಅಲ್ಲ, ಅದರ ಬಗ್ಗೆ ಅವರಿಗೆ ಅನಿಸಿದ್ದನ್ನು ಶಾಲೆಯಲ್ಲಿ ಎಲ್ಲರೆದುರು ಹೇಳಬೇಕು. ಇದು ಪಬ್ಲಿಕ್ ಸ್ಪೀಕಿಂಗ್ ಕಲಿಯಲಿಕ್ಕೆ, ಸ್ಟೇಜ್ ಫಿಯರ್ (ಸಭಾ ನಡುಕ) ದೂರಮಾಡಲಿಕ್ಕೆ ಸಹಾಯವಾಗುತ್ತದೆ.

ಇದಷ್ಟೇ ಅಲ್ಲ, ಚಿಕ್ಕ ಗುಂಪುಗಳನ್ನು ಮಾಡಿ, ಆ ಗುಂಪಿಗೆ ಒಂದು ಪುಸ್ತಕ ಕೊಡಲಾಗುತ್ತದೆ. ಆ ಮಕ್ಕಳು ದಿನವೊಂದರಂತೆ ಒಬ್ಬೊಬ್ಬರು ಕೈ ಬದಲಿಸಿ, ಓದಿ, ಕೊನೆಯಲ್ಲಿ ಆ ಕಥೆಯನ್ನು ಹೇಳುವಂತೆ, ಚರ್ಚಿಸುವಂತೆ ಶಾಲೆಯಲ್ಲಿ ನೋಡಿಕೊಳ್ಳಲಾಗುತ್ತದೆ. ಇನ್ನು ಒಂದಿಷ್ಟು ಪುಸ್ತಕವನ್ನು ಜಿಲ್ಲೆಯ ಎಲ್ಲರೂ ಓದಬೇಕು. ಆ ಪುಸ್ತಕದ ಮೇಲೆ ಅಭಿಪ್ರಾಯ ಬರೆಯಬೇಕು. ಅದಕ್ಕೆ ಜಿಲ್ಲಾ ಮಟ್ಟದ ಸ್ಪರ್ಧೆ. ಗೆದ್ದವರಿಗೆ ಬಹುಮಾನ. ಮಕ್ಕಳು ಓದಿನಲ್ಲಿ ಅದೆಷ್ಟು ಒಳಹೊಕ್ಕಿರುತ್ತಾರೆಂದರೆ ಮೂರನೇ ಕ್ಲಾಸಿನಲ್ಲಿರುವಾಗಲೇ ಕನಿಷ್ಠ ಹತ್ತು ಬರಹಗಾರರನ್ನು ಹಿಂಬಾಲಿಸಲು ಮಕ್ಕಳು ಶುರುಮಾಡುತ್ತಾರೆ. ಆ ಬರಹಗಾರನ ಮುಂದಿನ ಈ ಪುಸ್ತಕ, ಈ ತಿಂಗಳಲ್ಲಿ ಬಿಡುಗಡೆಯಾಗಲಿದೆ ಎನ್ನುವ ವಿಷಯವೂ ಮೂರನೇ ಕ್ಲಾಸಿನ ಮಕ್ಕಳಿಗೆ ತಿಳಿದಿರುತ್ತದೆ. ಉಳಿದದ್ದು ಊಹಿಸಿಕೊಳ್ಳಿ. ಹೀಗೆ ಓದು, ಆ ಮೂಲಕ ಮಾತು, ಚರ್ಚೆ, ಬರವಣಿಗೆ, ಇವೆಲ್ಲವನ್ನೂ ಎಲ್ಲವೂ ಒಂದೇ ಎನ್ನುವ ರೀತಿಯಲ್ಲಿ ಕಲಿಸಲಾಗುತ್ತದೆ. ಐದನೇ ಕ್ಲಾಸಿಗೆ ಬರುವಷ್ಟರೊಳಗೆ ಪ್ರತೀ ಮಗುವೂ ಪಠ್ಯೇತರ ಓದು ದಿನಚರಿಯ ಭಾಗವಾಗಿಸಿಕೊಂಡುಬಿಟ್ಟಿರುತ್ತದೆ.

ಇದೆಲ್ಲದರಿಂದ ಮಕ್ಕಳು ಎರಡು-ಮೂರನೇ ಕ್ಲಾಸಿನಲ್ಲಿಯೇ ಕಾಮಿಕ್ ಪುಸ್ತಕಗಳನ್ನು, ಚಿತ್ರ ಬಿಡಿಸಿ, ಹಾಳೆಗಳಲ್ಲಿ ಬರೆಯುತ್ತಾರೆ. ಅವರವರದೇ ಕಲ್ಪನೆಗಳು. ಅದೆಲ್ಲವನ್ನು ಸೇರಿಸಿ, ಪೇಜ್ ನಂಬರ್ ಹಾಕಿ, ಸ್ಟೇಪಲ್ ಮಾಡಿ ಶಾಲೆಗೆ ಒಯ್ದು ಅದರ ಸರಿ ತಪ್ಪುಗಳ ಚರ್ಚೆ ಸಹಪಾಠಿಗಳ ಜೊತೆ ಆಗುತ್ತದೆ.ಈ ಮಕ್ಕಳು ಹೈಸ್ಕೂಲು ಮುಟ್ಟುವಾಗ ಸಾಕಷ್ಟು ಓದುವುದು ರೂಢಿಸಿಕೊಂಡಿರುತ್ತಾರೆ. ಅಲ್ಲಿ ಅವರೆದುರು ಎರಡು ಆಯ್ಕೆಗಳು. ಒಂದೋ ಬರವಣಿಗೆಯತ್ತ ಅವರ ಕಲಿಕೆ ಮುಂದುವರಿಸಬಹುದು ಅಥವಾ ಓದುಗನಾಗಿ ಇನ್ನಷ್ಟು ಅಡ್ವಾನ್ಸ್ ಪುಸ್ತಕಗಳನ್ನು ಓದಬಹುದು. ಅಲ್ಲಿಯೂ, ಓದು, ಚರ್ಚೆ, ಪುಸ್ತಕದ ರಿವ್ಯೂ ಬರೆಯುವುದು, ಪುಸ್ತಕ ಬರೆಯುವುದು ಇತ್ಯಾದಿ ಮುಂದುವರಿಯುತ್ತದೆ. ಅಲ್ಲಿಂದ ಮುಂದೆ, ಹೈಸ್ಕೂಲ್ ಮುಗಿಸಿದವನು ಪ್ರಬುದ್ಧ ಬರಹಗಾರನಾಗಲು ಏನೇನು ಬೇಕು ಎಂದು ತಿಳಿದಿರುತ್ತಾನೆ, ಕಲಿತಿರುತ್ತಾನೆ. ಜೊತೆಗೆ ಪ್ರೌಢ ಓದುಗನಾಗಿರುತ್ತಾನೆ. ಮುಂದೆ ಓದುಗನಾಗಲಿ, ಬರಹಗಾರನಾಗಲಿ, ಆತನಿಗೆ ಓದಿನ ಆಯಾಮಗಳಾದ ಆತ್ಮಕಥನ, ಕಾದಂಬರಿ, ಕೃಷಿ, ವಿಜ್ಞಾನ ಸಾಹಿತ್ಯ, ಫುಡ್ ಸಾಹಿತ್ಯ, ಹೀಗೆ ಎಲ್ಲವುಗಳ ಸಾಕಷ್ಟು ಪರಿಚಯವಾಗಿರುತ್ತದೆ. ಅಲ್ಲಿಂದ, ಮುಂದೆ ಓದು, ಬರಹ ಅವರವರ ಆಯ್ಕೆಗೆ ಬಿಟ್ಟದ್ದು.

ಈ ಕಾರಣಕ್ಕೆ ಅಮೆರಿಕಾದಲ್ಲಿ ಸಾಹಿತ್ಯ, ಬರವಣಿಗೆ ಮಲ್ಟಿ ಮಿಲಿಯನ್ ಡಾಲರ್ ವ್ಯವಹಾರ. ಮಕ್ಕಳಿಗೆ ಈ ರೀತಿ ಓದುವುದನ್ನು ಕಲಿಸುವುದರಿಂದ ಅದಕ್ಕೆ ತಕ್ಕನಾಗಿ ಅಷ್ಟೇ ಪ್ರಮಾಣದ ಶಿಶು, ಬಾಲ ಸಾಹಿತ್ಯ ಬೇಕಲ್ಲ. ಅಂತೆಯೇ ಉಳಿದೆಲ್ಲ, ಆಯಾ ವಯಸ್ಸಿನಲ್ಲಿ ಓದುವ ಸಾಹಿತ್ಯಪ್ರಕಾರಕ್ಕೂ ಎಲ್ಲಿಲ್ಲದ ಬೇಡಿಕೆ. ಬೇಡಿಕೆ ಹೆಚ್ಚಿದಂತೆ ಲಭ್ಯತೆ ಹೆಚ್ಚುತ್ತದೆ, ಪೈಪೋಟಿಯೂ ಅದಕ್ಕನುಗುಣವಾಗಿ. ಇದರಿಂದಾಗಿ ಇನ್ನಷ್ಟು ಅದ್ಭುತ ಬರಹಗಾರರು ತಯಾರಾಗುತ್ತಾರೆ. ಅಮೆರಿಕಾದಲ್ಲಿ ಬರಹಗಾರನಿಗೆ ಸ್ಟಾರ್ ವ್ಯಾಲ್ಯೂ ಇದೆ. ನೂರಾರು ಲೇಖಕರ ಪುಸ್ತಕಗಳನ್ನು ಓದುಗರು ಮುಂಗಡ ಕಾಯ್ದಿರಿಸುತ್ತಾರೆ. ಕೆಲವೊಂದು ಲೇಖಕರ ಪುಸ್ತಕಗಳನ್ನಂತೂ ಹೊಸ ಐಫೋನ್ ಖರೀದಿಗೆ ನಿಂತದ್ದಕ್ಕಿಂದ ಜಾಸ್ತಿ ಉದ್ದದ ಕ್ಯೂ ನಲ್ಲಿ ನಿಂತು ಓದುಗರು ಖರೀದಿಸುತ್ತಾರೆ. ಲೈಬ್ರರಿಯಲ್ಲಿ ಬಹುತೇಕ ಪುಸ್ತಕಗಳು ಸಿಕ್ಕರೂ ಜನರಿಗೆ ಸ್ವಂತಕ್ಕೇ ಬೇಕು.

ಅಮೆರಿಕನ್ ಪ್ರಜೆ, ಸರಾಸರಿ ಪ್ರತೀ ವರ್ಷ ತಲಾ ನೂರು ಡಾಲರ್ ಗಿಂತ ಜಾಸ್ತಿ ಹಣವನ್ನು ಓದಲು ವ್ಯಯಿಸುತ್ತಾನೆ. ಪ್ರಿಂಟ್ ಪುಸ್ತಕದ ವ್ಯವಹಾರ ಅಮೆರಿಕಾದೊಳಗೆ 350 ಕೋಟಿ ಡಾಲರ್ ನಷ್ಟು ದೊಡ್ಡದು. ಇಲ್ಲಿನ ಬಹುತೇಕ ಪುಸ್ತಕಗಳು ದೇಶದಾಚೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗುತ್ತವೆ. ಅದನ್ನೆಲ್ಲ ಸೇರಿಸಿದರೆ ಇದು 300 ಲಕ್ಷ ಕೋಟಿ ರೂಪಾಯಿಯ ಬಹುದೊಡ್ಡ ಇಂಡಸ್ಟ್ರಿ, ವ್ಯವಹಾರ. ಅಮೆರಿಕಾದಲ್ಲಿ ಲಕ್ಷದ ಲೆಕ್ಕದಲ್ಲಿ ಬರಹಗಾರರಿದ್ದಾರೆ. ಇಲ್ಲಿ ಪುಸ್ತಕ ಪ್ರಕಟಣೆಗೆ ಬೇಕಾದ ವ್ಯವಸ್ಥೆ ಸುಲಭದಲ್ಲಿ ಎಲ್ಲರ ಕೈಗೆ ಸಿಗುತ್ತದೆ. ಪುಸ್ತಕ ಬರೆಯುತ್ತಿದ್ದೇನೆ ಎಂದು ಯಾವುದೇ ಊರಿನ ಲೈಬ್ರರಿಗೆ ಹೋದರೆ, ಅದಕ್ಕೆ ಬೇಕಾಗುವ ಸಾಫ್ಟ್ ವೇರ್‌ಗಳು ಮುಫತ್ತಾಗಿ ಲಭ್ಯ. ಅದಲ್ಲದೇ ಅದೇ ಲೈಬ್ರರಿಯಲ್ಲಿ ಪುಸ್ತಕ ವಿನ್ಯಾಸವನ್ನೂ ಹೇಳಿಕೊಡಲಾಗುತ್ತದೆ. ಪುಸ್ತಕ ಬಹಳ ಒಳ್ಳೆಯದಾಗಿ ಮೂಡಿ ಬಂದಿದ್ದರೆ ಲೈಬ್ರರಿಯವರೇ ಪಬ್ಲಿಶಿಂಗ್ ಏಜಂಟ್ ಜೊತೆ ಸಂಪರ್ಕ ಮಾಡಿಕೊಡುತ್ತಾರೆ.ಇದೆಲ್ಲದರಿಂದ ಬರೆಯಬೇಕೆಂದಿದ್ದರೆ, ಒಳ್ಳೆಯ ಬರಹಗಾರನಾಗಿದ್ದರೆ ಮೊದಲ ಪುಸ್ತಕ ಹೊರತರುವುದು ಕಷ್ಟವಾಗುವುದಿಲ್ಲ. ಅದಕ್ಕೆ ಯಾರ ಬೆಂಬಲವೂ ಬೇಕಾಗಿಲ್ಲ. ಪುಸ್ತಕದ ಏಜೆಂಟ್‌ಗಳು ಪ್ರಿಂಟಿಂಗ್ ನಿಂದ ಹಿಡಿದು ಪ್ರಕಟಣೆ, ಜಾಹೀರಾತು ಎಲ್ಲವನ್ನೂ ನೋಡಿಕೊಳ್ಳುತ್ತಾರೆ. ಹೀಗೆ ಇಡೀ ವ್ಯವಸ್ಥೆ ಬರವಣಿಗೆಗೆ ಮತ್ತು ಓದಿಗೆ ಬೇಕಾದ ಪೂರ್ಣ ವಾತಾವರಣ ಇಲ್ಲಿ ನಿರ್ಮಿಸಿದೆ. ಅಮೆರಿಕಾದಲ್ಲಿ ಪ್ರತೀ ವಯಸ್ಕ ಬರೀ ಪ್ರಿಂಟ್ ಪುಸ್ತಕದ ಓದಿಗೆ ವ್ಯಯಿಸುವ ಸರಾಸರಿ ಸಮಯ ದಿನಕ್ಕೆ 31 ನಿಮಿಷ (ಇದು ಸರಾಸರಿ - ಸಣ್ಣ ಸಂಖ್ಯೆಯಲ್ಲ). ಈ ಪ್ರಮಾಣದ ಓದಿನ ಸುತ್ತ ಉಳಿದೆಲ್ಲ ಜೀವನಾವಶ್ಯಕ ಕಲಿಕೆಗಳು. ಇದರ ಪರಿಣಾಮ ಕೊರ್ಪೊರೇಟ್ ಜಗತ್ತಿನಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಅಮೆರಿಕನ್ನರು ಆ ಕಾರಣದಿಂದಲೇ ಅಷ್ಟು ಚಂದಕ್ಕೆ ಇಮೇಲ್ ಬರೆಯುತ್ತಾರೆ, ಮೀಟಿಂಗ್ ಗಳಲ್ಲಿ ಮಾತನಾಡುನಾಡುತ್ತಾರೆ, ಪ್ರಸೆಂಟ್ ಮಾಡುತ್ತಾರೆ.

ಯಾವುದೋ ಕಾರ್ಯಕ್ರಮದಲ್ಲೋ, ಸಾಹಿತ್ಯೋತ್ಸವದಲ್ಲೋ, ಅಥವಾ ಇನ್ನೆಲ್ಲೋ ಇಂದಿನ ಮಕ್ಕಳು, ದೊಡ್ಡವರು ಓದುವುದು ಕಡಿಮೆಯಾಗಿದೆ. ಓದುವವರು ಅಲ್ಪಸಂಖ್ಯಾತರು ಎಂದೆಲ್ಲ ಬಾಯಿ ಬಡಿದುಕೊಂಡರೆ ಓದುವ ಹವ್ಯಾಸ ಜನರಲ್ಲಿ ಹುಟ್ಟಿಬಿಡುವುದಿಲ್ಲ. ಅದನ್ನು ಎಳವೆಯಿಂದಲೇ, ಹಂತಹಂತವಾಗಿ ಕಲಿಸಿಬಿಡಬೇಕು. ಓದು, ಅದರ ಜೊತೆಜೊತೆಯಲ್ಲಿ ಮಾತನಾಡುವ, ಬರೆಯುವ, ವಿಮರ್ಶಿಸುವ, ಚರ್ಚಿಸುವ, ವಿಷಯವನ್ನು ಪ್ರಸ್ತುತಿ ಪಡಿಸುವ ಹೀಗೆ ಉಳಿದೆಲ್ಲ, ಆಧುನಿಕ ಬದುಕಿಗೆ ತೀರಾ ಅವಶ್ಯಕವಿರುವ ಲೈಫ್ ಸ್ಕಿಲ್ ಅನ್ನು ಶಿಕ್ಷಣ ಕಲಿಸಬೇಕು. ಈ ವಿಷಯದಲ್ಲಿ ಅಮೆರಿಕಾದ ವ್ಯವಸ್ಥೆಯನ್ನು ಮೆಚ್ಚಲೇಬೇಕು, ನೋಡಿ ಕಲಿಯಬೇಕು, ಅಳವಡಿಸಿಕೊಳ್ಳಬೇಕು. ಜೊತೆಗೆ, ಇಂದಿನ ಇಂಟರ್ನೆಟ್ ಜಮಾನದಲ್ಲಿಯೂ ಪುಸ್ತಕಗಳು ಮಹತ್ವ ಕಳೆದುಕೊಳ್ಳದಂತೆ ನೋಡಿಕೊಂಡಿರುವ ಅಮೆರಿಕನ್ನರಿಗೆ, ಅವರ ಕಾಳಜಿಗೆ ಶಹಬಾಸ್ ಕೊಡಲೇಬೇಕು.

ಅಮೆರಿಕನ್ನರ ಪಾಶ್ಚಾತ್ಯ ಜಂಕ್ ಬದುಕನ್ನು ಅವರಿಗಿಂತ ಚೆನ್ನಾಗಿ ಪಾಲಿಸುತ್ತಲೇ ಬೈದುಕೊಳ್ಳುವ ನಮಗೆ ಇಂಥದ್ದನ್ನೆಲ್ಲ ಅನುಸರಿಸಬೇಕು ಎಂದೇಕೆ ಅನಿಸುವುದಿಲ್ಲವೇನೋ !!

ಕೇಂದ್ರ ಬಜೆಟ್: ಹೊಣೆಯರಿತ ಜಾಣ್ಮೆಯ ಹೆಜ್ಜೆಯಿರಲಿ

ಅಭಿಮತ
ಡಾ.ಎ.ಜಯ ಕುಮಾರ ಶೆಟ್ಟಿ
vveditoped@gmail.com

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಾಳೆ (ಫೆಬ್ರವರಿ 1, 2025) ಅನಾವರಣಗೊಳಿಸಲಿರುವ 2025ರ ಕೇಂದ್ರ ಬಜೆಟ್ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರದ 3ನೇ ಅವಧಿಯ ಮೊದಲ ಬಜೆಟ್. ನಿರ್ಮಲಾ ಸೀತಾರಾಮನ್ ಅವರ ಪಾಲಿಗೆ ಇದು ಸತತ 8 ನೇ ಬಜೆಟ್. ಸಹಜವಾದ ನಿರೀಕ್ಷೆಗಳು ಮತ್ತು ಸವಾಲುಗಳ ಮಧ್ಯೆ ಪ್ರಗತಿ ಹಾಗೂ ಸದೃಢತೆಗೆ ಪೂರಕವಾದ ಬಜೆಟ್ ಮಂಡನೆಯ ಜಾಣ್ಮೆಯ ಅಗತ್ಯ ಭಾರತದ ಆರ್ಥಿಕತೆಯ ಮುಂದಿದೆ. ಪ್ರಸಕ್ತ ಬಜೆಟ್ ನಲ್ಲಿ ನಿಧಾನಗತಿಯ ಆರ್ಥಿಕ ಬೆಳವಣಿಗೆ ಮತ್ತು ಏರುತ್ತಿರುವ ಹಣದುಬ್ಬರದ ಸವಾಲಿನ ನಡುವೆ ಸಕಾರಾತ್ಮಕ ದಿಕ್ಕಿನಲ್ಲಿ ಮನ್ನಡೆಸಲು ದಿಟ್ಟ ಕ್ರಮಗಳನ್ನು ಕೈಗೊಳ್ಳುವ ನಿರೀಕ್ಷೆಯಿದೆ. ಪ್ರತಿ ಬಾರಿ ಬಜೆಟ್ ಮಂಡನೆಯಾಗುವಾಗ ಪ್ರತಿಯೊಬ್ಬರೂ ಕಾತರತೆಯಿಂದ ತಮಗೆ ಅನುಕೂಲಕರ ಬದಲಾವಣೆಯನ್ನು ತರುತ್ತದೆ ಎಂದೇ ಕಾಯುತ್ತಾರೆ.

ಜನಸಾಮಾನ್ಯರ ನಿರೀಕ್ಷೆ

ಬಳಕೆಯನ್ನು ಉತ್ತೇಜಿಸುವ, ಜಿಡಿಪಿ ಬೆಳವಣಿಗೆಯನ್ನು ಪುನರುಜ್ಜೀವನಗೊಳಿಸುವ ಮತ್ತು ಜನಸಾಮಾನ್ಯರಿಗೆ ಹಾಗೂ ವೇತನದಾರರಿಗೆ ತೆರಿಗೆ ವಿನಾಯಿತಿ ನೀಡುವ ಬಜೆಟನ್ನುಮಂಡಿಸುತ್ತಾರೆಯೇ ಎಂದು ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಮೂಡುವ ಪ್ರಶ್ನೆ. ಪ್ರತಿ ವರ್ಷ, ಮಧ್ಯಮ ವರ್ಗದ ಜನರು ತಮ್ಮ ಹೊರೆಯನ್ನು ತಗ್ಗಿಸಲು ತೆರಿಗೆ ಕಡಿತಕ್ಕಾಗಿ ಹಣಕಾಸು ಸಚಿವರ ಕಡೆಗೆ ನೋಡುತ್ತಾರೆ. ಬೆಲೆ ಏರಿಕೆಯಿಂದ ತತ್ತರಿಸಿರುವ ಜನರು ಆದಾಯ ತೆರಿಗೆ ಮಿತಿ ಹೆಚ್ಚಳ, ಗೃಹ ಸಾಲ, ಉಳಿತಾಯಕ್ಕೆ ಒಂದಷ್ಟು ಪ್ರೋತ್ಸಾಹಗಳ ನಿರೀಕ್ಷೆಯಲ್ಲಿದ್ದಾರೆ. ಈ ವರ್ಷ, ಜನರು ತಮ್ಮ ಕೈಯಲ್ಲಿ ಹೆಚ್ಚಿನ ಹಣವನ್ನು ಹಾಕಲು ಮತ್ತಷ್ಟು ಬದಲಾವಣೆಗಳನ್ನು ನಿರೀಕ್ಷಿಸುತ್ತಾರೆ. ಆದಾಯ ತೆರಿಗೆಯಲ್ಲಿ ವಿನಾಯಿತಿ ಮಿತಿಯನ್ನು ಹೆಚ್ಚಿಸುವ ಮೂಲಕ ಮಾರುಕಟ್ಟೆಯಲ್ಲಿ ವಿನಿಯೋಗವೂ ಹೆಚ್ಚಲಿದೆ.

ಮುಖ್ಯವಾಗಿ 80ಸಿ ಸೆಕ್ಷನ್‌ನಲ್ಲಿ ಬದಲಾವಣೆ ಅಗತ್ಯ ಎಂದು ಮಧ್ಯಮ ವರ್ಗ ಬಯಸಿದೆ. ಸದ್ಯ ಇರುವ ₹1.5 ಲಕ್ಷ ಮಿತಿಯು 2014ರಿಂದ ಬದಲಾಗಿಲ್ಲ. ನಿಶ್ಚಿತ ಠೇವಣಿ, ಪಿಪಿಎಫ್ ಇತ್ಯಾದಿ ಹೂಡಿಕೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಇದು ಅವಶ್ಯಕವಾಗಿದೆ.

ಉದ್ಯಮದ ನಿರೀಕ್ಷೆಗಳು

ದೇಶೀಯ ವ್ಯವಹಾರಗಳನ್ನು ರಕ್ಷಿಸಲು ಮತ್ತು ನ್ಯಾಯಯುತ ಸ್ಪರ್ಧೆಯನ್ನು ಉತ್ತೇಜಿಸಲು ರಕ್ಷಣಾ ಕ್ರಮಗಳನ್ನು ಜಾರಿಗೆ ತರಲು ಸರಕಾರವನ್ನು ಒತ್ತಾಯಿಸಲಾಗಿದೆ. ದೇಶೀಯ ಉತ್ಪಾದನೆಯನ್ನು ಉತ್ತೇಜಿಸಲು ಮತ್ತು ಭಾರತಕ್ಕೆ ಜಾಗತಿಕ ಮೌಲ್ಯ ಸರಪಳಿಗಳನ್ನು ಆಕರ್ಷಿಸಲು, ವಿತ್ತ ಸಚಿವರು ಭಾರತವನ್ನು ಉತ್ಪಾದನೆಗೆ ಕೇಂದ್ರವಾಗಿ ಬಳಸುವ ಸಂಸ್ಥೆಗಳಿಗೆ ರಿಯಾಯಿತಿ ಕಾರ್ಪೊರೇಟ್ ತೆರಿಗೆ ಯೋಜನೆಯನ್ನು ಘೋಷಿಸುವ ನಿರೀಕ್ಷೆಯಿದೆ. ನಾವೀನ್ಯತೆಯನ್ನು ಉತ್ತೇಜಿಸಲು, ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಸರ್ಕಾರವು ಹೊಸ ಉತ್ಪಾದನೆ-ಸಂಯೋಜಿತ ಪ್ರೋತ್ಸಾಹವನ್ನು ಪರಿಚಯಿಸಬಹುದು. ಕಚ್ಚಾ ವಸ್ತುಗಳು ಮತ್ತು ಯಂತ್ರೋಪಕರಣಗಳ ಮೇಲಿನ ಸಬ್ಸಿಡಿಗಳು, ಎಂಎಸ್ಎಂಇಗಳು ಮತ್ತು ಸ್ಟಾರ್ಟ್‌ಅಪ್‌ಗಳಿಗೆ ತೆರಿಗೆ ವಿನಾಯಿತಿಗಳು, ಇ-ಕಾಮರ್ಸ್ ಪ್ಲಾಟ್ ಫಾರ್ಮ್‌ಗಳು ಮತ್ತು ಡಿಜಿಟಲ್ ಮೂಲಸೌಕರ್ಯಗಳಿಗೆ ಆರ್ಥಿಕ ಬೆಂಬಲ ಮತ್ತು ಭಾರತೀಯ ಬ್ರ್ಯಾಂಡ್‌ಗಳಿಗೆ ಸ್ಪರ್ಧಿಸಲು ಸಹಾಯ ಮಾಡಲು ವರ್ಧಿತ ರಫ್ತು ಪ್ರೋತ್ಸಾಹದಂತಹ ದೇಶೀಯ ಉತ್ಪಾದನೆಯನ್ನು ಉತ್ತೇಜಿಸುವ ಕ್ರಮಗಳನ್ನು ಬಜೆಟ್ ಒಳಗೊಂಡಿರುತ್ತದೆ ಎಂದು ತಜ್ಞರು ಭಾವಿಸಿದ್ದಾರೆ.

ಮೂಲಸೌಕರ್ಯ ಅಭಿವೃದ್ಧಿಯು ನಿರ್ಣಾಯಕ ಕ್ಷೇತ್ರವಾಗಿದ್ದು, ಇದಕ್ಕಾಗಿ ಗಮನಾರ್ಹ ಬಜೆಟ್ ಹಂಚಿಕೆಯನ್ನು ನಿರೀಕ್ಷಿಸಲಾಗಿದೆ. ಹೆದ್ದಾರಿಗಳು, ರಸ್ತೆಗಳು ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳನ್ನು ಸುಧಾರಿಸುವ ಮೂಲಕ ಸಂಪರ್ಕವನ್ನು ಹೆಚ್ಚಿಸುವತ್ತ ಗಮನಹರಿಸಬೇಕು. ಸ್ಮಾರ್ಟ್ ಸಿಟಿ ಯೋಜನೆಗಳ ವೇಗವರ್ಧನೆ ಮತ್ತು ಹಸಿರು ಮೂಲಸೌಕರ್ಯಗಳ ಅಭಿವೃದ್ಧಿಗೆ ಒತ್ತು ನೀಡಬೇಕು.

ಅಗತ್ಯ ಔಷಧಗಳು, ಉದ್ದೇಶಿತ ಚಿಕಿತ್ಸಾ ಔಷಧಗಳು ಮತ್ತು ರೊಬೊಟಿಕ್ಸ್ ಮತ್ತು ರೇಡಿಯೊಥೆರಪಿ ಯಂತ್ರಗಳಂತಹ ಸುಧಾರಿತ ಕ್ಯಾನ್ಸರ್ ಚಿಕಿತ್ಸಾ ಸಾಧನಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ಕಡಿಮೆ ಮಾಡಲು ಬಜೆಟ್ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ತಜ್ಞರು ಭಾವಿಸುತ್ತಾರೆ. ಗ್ರಾಮೀಣ ಆರೋಗ್ಯ ಸೌಲಭ್ಯಗಳನ್ನು ವಿಸ್ತರಿಸಲು ಮತ್ತು ಟೆಲಿಮೆಡಿಸಿನ್ ಸೇವೆಗಳಿಗೆ ಹಣವನ್ನು ಹೆಚ್ಚಿಸಲು ಕ್ರಮಗಳು ಇರಬೇಕು. ಆಮದು ಅವಲಂಬನೆಯನ್ನು ಕಡಿಮೆ ಮಾಡಲು ದೇಶದೊಳಗೆ ಔಷಧೀಯ ಉತ್ಪಾದನೆ ಮತ್ತು ವೈದ್ಯಕೀಯ ಉಪಕರಣಗಳನ್ನು ಬೆಂಬಲಿಸುವ ನೀತಿಗಳಿಗೆ ಒತ್ತಾಸೆಯಿದೆ.

ಭಾರತೀಯ ಕೈಗಾರಿಕೆಗಳ ಒಕ್ಕೂಟ ಆರ್ಥಿಕತೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಬಜೆಟ್ ನಲ್ಲಿ ಉಪಕ್ರಮಗಳನ್ನು ಸೇರಿಸಲು ಸಲಹೆ ನೀಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಾಲೇಜು-ಶಿಕ್ಷಿತ ಯುವಕರಿಗೆ ಇಂಟರ್ನ್‌ಶಿಪ್ ಕಾರ್ಯಕ್ರಮಗಳನ್ನು ಪ್ರಾರಂಭಿಸಲು, ರೋಬೋಟಿಕ್ಸ್ ,ಕೃತಕ ಬುದ್ಧಿಮತ್ತೆಯಂತಹ ಭವಿಷ್ಯದ-ಕೇಂದ್ರಿತ ಕ್ಷೇತ್ರಗಳಲ್ಲಿ ವೃತ್ತಿಪರ ತರಬೇತಿ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣಕಾಸಿನ ಬೆಂಬಲದ ನಿರೀಕ್ಷೆಯಲ್ಲಿವೆ.

ಭಾರತದ ಆರ್ಥಿಕತೆ ಬೆಳೆದರೂ, ಕೃಷಿ ಕ್ಷೇತ್ರ ಸಾಕಷ್ಟು ಸ್ವಾವಲಂಬನೆ ಸಾಧಿಸಿದರೂ ರೈತರ ಬದುಕು ಮಾತ್ರ ಹಸನಾಗಿಲ್ಲ. ಸಾಕಷ್ಟು ಯೋಜನೆಗಳು ಸಕಾರಾತ್ಮಕ ಭಾವನೆ ಮೂಡಿಸಿದರೂ ಕೃಷಿ ಕ್ಷೇತ್ರದ ಮುಂದಿನ ಸಮಸ್ಯೆಗಳು ಹಾಗೂ ಸವಾಲುಗಳು ಅನೇಕ. ಕಡಿಮೆ ಬಡ್ಡಿ ದರದಲ್ಲಿ ಕೃಷಿ ಸಾಲ, ಸಣ್ಣ ರೈತರಿಗೆ ಉಚಿತ ಬೆಳೆ ವಿಮೆ, ಕೃಷಿ ಯಂತ್ರೋಪಕರಣ, ರಸಗೊಬ್ಬರಗಳಿಗೆ ಜಿಎಸ್ಟಿಯಿಂದ ವಿನಾಯಿತಿ ಬೇಕು ಎಂಬುದು ಕೃಷಿ ಕ್ಷೇತ್ರದ ಬೇಡಿಕೆಗಳು.

ವಿತ್ತೀಯ ಕೊರತೆ

ವಿತ್ತೀಯ ಕೊರತೆಯು ಸರ್ಕಾರದ ಆರ್ಥಿಕ ಆರೋಗ್ಯದ ಪ್ರಮುಖ ಸೂಚಕವಾಗಿದೆ. 2026 ರ ವೇಳೆಗೆ ಶೇ.4.5 ಗುರಿಯನ್ನು ಸಾಧಿಸುವ ಮಹತ್ವಾಕಾಂಕ್ಷೆಯ ಗುರಿಯೊಂದಿಗೆ 2025 ರಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ. 5.1 ಕ್ಕೆ ಕಡಿಮೆ ಮಾಡಲು ಸರಕಾರವು ಬದ್ಧವಾಗಿದೆ. ಈ ಪ್ರಯತ್ನಗಳು ಹಣಕಾಸಿನ ಶಿಸ್ತನ್ನು ಕಾಪಾಡಿಕೊಳ್ಳುವ ಮತ್ತು ಸಾರ್ವಜನಿಕ ವೆಚ್ಚದ ಮೂಲಕ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ನಡುವಿನ ಸೂಕ್ಷ್ಮ ಸಮತೋಲನವನ್ನು ಪ್ರತಿಬಿಂಬಿಸುತ್ತವೆ. ಆರ್ಥಿಕತೆಯಲ್ಲಿನ ಮಂದಗತಿಯಿಂದ ಉದ್ಭವಿಸಿರುವ ಸವಾಲುಗಳನ್ನು ಎದುರಿಸಲು ವ್ಯಾಪಾರ ಚಟುವಟಿಕೆಗಳನ್ನು ಪುನರುಜ್ಜೀವನಗೊಳಿಸಲು ಹೂಡಿಕೆಗಳನ್ನು ಪ್ರೋತ್ಸಾಹಿಸುವ ಸವಾಲು ಬಹು ಮುಖ್ಯವಾಗಿದೆ.

ಬೆಳವಣಿಗೆ ಮತ್ತು ಆರ್ಥಿಕ ಶಿಸ್ತು ಬೆಳವಣಿಗೆ ಮತ್ತು ಹಣಕಾಸಿನ ಶಿಸ್ತಿನ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಕಠಿಣ ಜವಾಬ್ದಾರಿ ಈ ಬಜೆಟಿಗಿದೆ. ಜಿಡಿಪಿ ಬೆಳವಣಿಗೆಯು ಹಲವಾರು ತ್ರೈಮಾಸಿಕಗಳಲ್ಲಿ ಅತ್ಯಂತ ಕಡಿಮೆ ಹಂತಕ್ಕೆ ಕುಸಿದಿರುವ ಹಿನ್ನೆಲೆಯಲ್ಲಿ ಸರ್ಕಾರ ಆರ್ಥಿಕ ಚೇತರಿಕೆಗೆ ಒತ್ತು ನೀಡುವ ನಿರೀಕ್ಷೆಯಿದೆ. ದುರ್ಬಲ ದೇಶೀಯ ಬೇಡಿಕೆ, ರೂಪಾಯಿಯ ಅಪಮೌಲ್ಯದ ಅಪಾಯಗಳು ಮತ್ತು ಟ್ರಂಪ್ 2.0 ಅಡಿಯಲ್ಲಿ ಹೆಚ್ಚಿನ ಸುಂಕಗಳ ಬೆದರಿಕೆಗಳ ಹಿನ್ನೆಲೆಯಲ್ಲಿ ಫೆಬ್ರವರಿ 1 ರಂದು ಬಜೆಟನ್ನು ಮಂಡಿಸಲಾಗುತ್ತದೆ. ತೆರಿಗೆ ಸುಧಾರಣೆಗಳು ಮತ್ತು ಬೆಳವಣಿಗೆಯ ತಂತ್ರಗಳನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ಹಣದುಬ್ಬರವನ್ನು ಹದ್ದುಬಸ್ತಿನಲ್ಲಿಡುವುದರೊಂದಿಗೆ ಮೂಲಸೌಕರ್ಯ ಅಭಿವೃದ್ಧಿ, ಖಾಸಗಿ ಬಳಕೆ, ಹೂಡಿಕೆ ಮತ್ತು ರಫ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದರ ಮೇಲೆ ಕೇಂದ್ರೀಕರಿಸುವುದು ಅತೀ ಅಗತ್ಯ.

ಹೊಣೆಯರಿತ ಜಾಣ್ಮೆಯ ಹೆಜ್ಜೆಯಿರಲಿ

2047 ರ ಹೊತ್ತಿಗೆ ವಿಕಸಿತ್ ಭಾರತದ ಗುರಿಗೆ ಅನುಗುಣವಾಗಿ ಈ ಬಜೆಟ್ ಆರ್ಥಿಕ ಬೆಳವಣಿಗೆಗೆ ಆದ್ಯತೆ ನೀಡುವ ಸಾಧ್ಯತೆಯಿದೆ. ಒಟ್ಟಾರೆಯಾಗಿ ಬೆಳವಣಿಗೆ ಮತ್ತು ಹಣಕಾಸಿನ ಶಿಸ್ತಿನ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಹೊಣೆಯರಿತ ಜಾಣ್ಮೆಯ ನಡೆಯ ನಿರೀಕ್ಷೆ ನಮ್ಮದು.

(ನಿವೃತ್ತ ಪ್ರಾಂಶುಪಾಲರು ಶ್ರೀ.ಧ.ಮಂ.ಕಾಲೇಜು, ಉಜಿರೆ)

ಭಟ್ಟರ್ ಸ್ಕಾಚ್

- **ನಾಗೇಶ ಬಿಳಿಮಲೆ, ಮಂಡ್ಯ**
ಭಟ್ರೇ, ರಾಜಕಾರಣಿಗಳನ್ನು ನಂಬಬಹುದಾ ?
- **ನಂಬಬಹುದು, ಅವರಿಂದ ಯಾವ ಕೆಲಸವೂ ಆಗುವುದಿಲ್ಲ ಎಂದು ನಂಬಬಹುದು!**

- **ರಾಜೇಶ್ ಕರುಣಾಕರ, ಮೂಡಿಗೆರೆ**
ಭಟ್ರೇ, ನಿಮ್ಮ ಮುಂದಿನ ವಿದೇಶಪ್ರಯಾಣದಲ್ಲಿ ನಾನು ಜತೆಯಾಗಬಹುದಾ?
- **ಆಗಬಹುದು, ಪ್ರತಿ ಸಲ ಗಗನಸಖಿ ಸೇರಿದಂತೆ ಯಾರ್‍ಯಾರೋ ಜತೆಯಾಗ್ತಾರೆ, ನೀನೂ ಆಗಬಹುದು!**

- **ಚಂದ್ರಶೇಖರ ಕಿರುಗಾವಲು, (ಇಮೇಲ್ ಮೂಲಕ)**
ಭಟ್ರೇ, ನನ್ನ ಸ್ನೇಹಿತೆ ನಿಮ್ಮನ್ನು ತಪ್ಪು ಭಾವಿಸಿದ್ದಳಂತೆ?
- **ಇನ್ನು ನಾನು ತಪ್ಪು ಮಾಡಿದರೂ ಪರವಾಗಿಲ್ಲ ಅನ್ನು... ಸರಿ ಭಾವಿಸಬಹುದು!**

- **ಸದಾಶಿವ ಅಡ್ಯಾರು, ಶಿವಮೊಗ್ಗ**
ಭಟ್ರೇ, ಪುಸ್ತಕ ಓದುವಾಗ ನಿದ್ದೆ ಬಂದರೆ ಏನರ್ಥ ?
- **ಮೊಯಿಲಿ ಮಹಾಕಾವ್ಯ ಓದುವಾಗ ನಿದ್ದೆ ಬಂದರೆ ಅದು ವಿಮರ್ಶೆ!**

- **ರಾಮು, ಮೋಟೆಬೆನ್ನೂರು**
ಭಟ್ರೇ, ವಿದೇಶಗಳಿಗೆ ಹೋಗುವಾಗ ನೀವೇಕೆ ಹೆಂಡತಿಯನ್ನು ಕರೆದುಕೊಂಡು ಹೋಗುವುದಿಲ್ಲ?
- **ಅದು ನನ್ನ ವಿರೋಧಿಗಳ ಅಪಪ್ರಚಾರ!**

- **ನಂದನ ಭಾಗ್ವತ, ಹೊನ್ನಾವರ**
ಭಟ್ರೇ, ದೇವೇಗೌಡರು ಇತ್ತೀಚೆಗೆ ವೇದಿಕೆ ಮೇಲೆ ನಿದ್ದೆ ಮಾಡುವುದಿಲ್ಲವಲ್ಲ?
- **ಅವರು ಮಾತಾಡುವಾಗ ನಿದ್ದೆ ಮಾಡುವ ಅವಕಾಶವನ್ನು ಜನರಿಗೆ ಬಿಟ್ಟಿದ್ದಾರಂತೆ!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ನಿಮ್ಮ ಜತೆ ಜಗಳವಾಡಲು ಸಾಧ್ಯವಿಲ್ಲ ಅಂತ ಇಲ್ಲೊಬ್ಬಳು ವಾದಿಸುತ್ತಾಳಲ್ಲ?
- **ಅವಳು ಜಗಳಕ್ಕೆ ಸೀಮಿತಗೊಳಿಸಿರುವುದೇ ವಾಸಿ ಕಣಯ್ಯ!**

- **ನಾಗಶ್ರೀ ಶಿವ, ಗುಬ್ಬಿ**
ಭಟ್ರೇ, ಪ್ರೀತಿಯಲ್ಲಿ ಲಾಭ, ನಷ್ಟ ಇದೆಯಾ?
- **ಅಲ್ಲೇನಿದ್ದರೂ ನಷ್ಟವೊಂದೇ!**

- **ರವಿ ಬಾವಿಮನೆ, ಚಿತ್ರದುರ್ಗ**
ಭಟ್ರೇ, ಕಾಂಗ್ರೆಸ್ ನಾಯಕರು ಹಿಂದೂಗಳನ್ನು ಬೈದರೂ, ಹಿಂದೂಗಳು ಅವರಿಗೆ ವೋಟ್ ಹಾಕ್ತಾರಲ್ಲ?
- **ಈ ದೇಶದಲ್ಲಿ ಹಿಂದೂಗಳಿಲ್ಲ, ಅವರೆಲ್ಲ ಜಾತಿಗಳಾಗಿ ಆರಾಮಾಗಿದ್ದಾರೆ!**

ಇರುವೆಗಳನ್ನು ತಿನ್ನುವ ಹಾರುವ ಓತಿ!

ಶಶಾಂಕಣ

ಶಶಿಧರ ಹಾಲಾಡಿ
vveditoped@gmail.com

ಹಾರುವ ಓತಿಗಳು ನಮ್ಮ ರಾಜ್ಯದ ಮಲೆನಾಡು, ಕರಾವಳಿಯ ಕಾಡುಗಳಲ್ಲಿ ಅಲ್ಲಲ್ಲಿ ಕಾಣಿಸಿಗುವ ವಿಶಿಷ್ಟ ಜೀವಿಗಳು. ಅವು ವಾಸಿಸುವ ತಾಣವು ನಿರಂತರವಾಗಿ ನಲುಗುತ್ತಿದ್ದರೂ, ಇಂದಿಗೂ ಅವುಗಳನ್ನು ಅಡಕೆ ತೋಟಗಳಲ್ಲಿ, ಹಕ್ಕಲುಗಳಲ್ಲಿ, ಕಾಡುಗಳಲ್ಲಿ ಕಾಣಬಹುದು. ತೀರಾ ಅಪೂರ್ವ ಜೀವಿಗಳಲ್ಲ; ಅಧಿಕೃತ ಪಟ್ಟಿಯ ಪ್ರಕಾರ ಅವು ಅಳಿವಿನಂಚಿನ ಜೀವಿಗಳಲ್ಲ. (ಲೀಸ್ಟ್ ಕನ್ಸರ್ನ್). ವಿಶೇಷವೆಂದರೆ, ಅವುಗಳ ಜೀವನ ಕ್ರಮವನ್ನು ಸಂಪೂರ್ಣ ಮತ್ತು ವಿವರವಾದ ಅಧ್ಯಯನಕ್ಕೆ ಒಳಪಡಿಸಿದಂತೆ ಕಾಣುತ್ತಿಲ್ಲ. ಈಗಲೂ ನಮ್ಮೂರಿಗೆ ಹೋದಾಗ, ನಮ್ಮ ಮನೆಯ ಸುತ್ತಲಿನ ಹಕ್ಕಲಿನಲ್ಲಿ, ಅಡಕೆ ತೋಟದಲ್ಲಿ, ಮನೆ ಎದುರಿನ ತೆಂಗಿನ ಮರಗಳ ನಡುವೆ ಅವುಗಳನ್ನು ಕಣ್ಣು ಹುಡುಕುತ್ತದೆ, ಆಗಾಗ ಅವು ಕಾಣಸಿಗುತ್ತವೆ.

ಅದು ಒಂದು ಪುಟ್ಟ, ಆರೆಂಟು ಇಂಚು ಉದ್ದದ ಜೀವಿ. ದೇಹದಷ್ಟೇ ಉದ್ದದ ಬಾಲ. ತನ್ನ ಬೆನ್ನಿನ ಚರ್ಮವನ್ನು ಅಗಲಿಸಿ, ಮರದಿಂದ ಮರಕ್ಕೆ ತೇಲಿಕೊಂಡು ಹಾರಬಲ್ಲ ಹಾರುವ ಜೀವಿ. ಅದು ಹಕ್ಕಿಯಂತೆ ಹಾರಲಾಗದು; ಗ್ಲೈಡ್ ಮಾಡುತ್ತಾ ಹಾರುತ್ತದೆ. ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ ಕರ್ವಾಲೋ ಕಾದಂಬರಿಯಲ್ಲಿ ನಿಗೂಢ ಪರಿಸರದ ಪ್ರತೀಕವಾಗಿ ಕಾಣಿಸಿಕೊಂಡ ನಂತರ, ಹಾರುವ ಓತಿಯು ಕನ್ನಡ ಅಕ್ಷರ ಲೋಕದಲ್ಲಿ ಗಳಿಸಿರುವ ಸ್ಥಾನ ಅನನ್ಯ. ತೇಜಸ್ವಿಯವರ ಆ ಅದ್ಭುತ ಕಾದಂಬರಿಯ ಕೊನೆಯಲ್ಲಿ, ಪರ್ವತ ಕಲ್ಲಿನ ಅಂಚಿನಿಂದ ದಿಗಂತದೆಡೆಗೆ ಆ ಹಾರುವ ಓತಿ, ನಿಶ್ಶಬ್ದವಾಗಿ ತೇಲಿಕೊಂಡು ಹೋಗುವ ಚಿತ್ರಣವಂತೂ, ಪರಿಸರ ರಕ್ಷಣೆಯ ಪ್ರತೀಕವಾಗಿ ಕನ್ನಡ ಸಾಹಿತ್ಯದಲ್ಲೇ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ.

ತೀರಾ ಅಪೂರ್ವವಲ್ಲದ ಈ ಹಾರುವ ಓತಿಯೊಂದಿಗೆ ನನ್ನ ಮುಖಾಮುಖಿ ಹಲವು ಮಜಲುಗಳದ್ದು. ವಿದ್ಯಾರ್ಥಿಯ ದಿನಗಳಲ್ಲಿ, ಮನೆಯಿಂದ ಮೂರು ಕಿ.ಮೀ. ದೂರವಿರುವ ಶಾಲೆಗೆ ನಡೆದು ಹೋಗುವಾಗ, ಪುಟ್ಟ ಅಡಿಕೆ ತೋಟದ ಅಂಚಿನಲ್ಲಿ ಸಾಗುತ್ತಿತ್ತು ನಮ್ಮ ದಾರಿ. ಅಲ್ಲಿದ್ದ ಪುರಾತನ ಅಡಿಕೆ ಮರಗಳ ಮೇಲೆ ಕೂತು, ತನ್ನ ಗಂಟಲಿನ ಹೊರಭಾಗದಲ್ಲಿರುವ ಹಳದಿ ನಾಲಿಗೆಯನ್ನು ಅಲ್ಲಾಡಿಸುತ್ತಾ ಕುಳಿತಿರುತ್ತಿತ್ತು ಹಾರುವ ಓತಿ.

ನಮ್ಮೂರಿನ ಭಾಷೆಯಲ್ಲಿ ಅದನ್ನು 'ಓಂತಿ' ಎಂದು ಕರೆಯುತ್ತಿದ್ದರು. 'ಕಾಯಿಕಳ್ಳ' ಎಂದು ಸ್ಥಳೀಯರು ಕರೆಯುತ್ತಿದ್ದ ಓತಿಕ್ಯಾತವನ್ನು ಇದರಿಂದ ಪ್ರತ್ಯೇಕಿಸುವ ಸಲುವಾಗಿ ಓಂತಿ ಎಂಬ ಆ ಹೆಸರು ಚಂದ. ಆದರೆ, ಪ್ರತಿದಿನ ಶಾಲೆಗೆ ಹೋಗುವಾಗ, ಅದು ಕಾಣಸುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ಅದು ಅಪರೂಪದ ಜೀವಿ. ವಿದ್ಯಾಭ್ಯಾಸ ಮುಗಿಸಿ, ಹಾಲಾಡಿಯನ್ನು ತೊರೆದು, ಬಯಲು ಸೀಮೆಯ ಪುಟ್ಟ ಹಳ್ಳಿಯಲ್ಲಿ ಉದ್ಯೋಗಸ್ಥನಾದ ನಂತರ ಎರಡನೆಯ ಹಂತದಲ್ಲಿ ಹಾರುವ ಓತಿಯನ್ನು ಸ್ಪಷ್ಟವಾಗಿ ಕಂಡಿದ್ದು ನಮ್ಮ ಮನೆಯ ಪಕ್ಕದಲ್ಲಿ!

ನಮ್ಮ ಮನೆ ಎದುರಿನಲ್ಲಿದ್ದ ಅಡಿಗೆ ತೋಟದಲ್ಲಿ ಹೀಗೇ ಒಂದು ದಿನ ಸುತ್ತಾಡುತ್ತಿದ್ದೆ. ಎತ್ತರವಾದ ಒಂದು ಅಡಿಕೆ ಮರದಿಂದ ಹಾರಿದ ಹಾರುವ ಓತಿಯನ್ನು ಕಂಡಾಗ, ಮೊದಲಿಗೆ ಒಂದು ಮರದಿಂದ ಮತ್ತೊಂದಕ್ಕೆ ಚಿಟ್ಟೆಯೊಂದು ಹಾರುತ್ತಿದೆ ಎನಿಸಿತು. ಆದರೆ, ತುಸು ಗಮನವಿಟ್ಟು ನೋಡಿದಾಗ, ಸ್ಪಷ್ಟವಾಯಿತು, ಅದು ಹಾರುವ ಓತಿ! ತನ್ನ ಬಗಲಿನಲ್ಲಿದ್ದ ಚರ್ಮವನ್ನು ಬಿಚ್ಚಿ, ಸುಮಾರು 30 ಅಡಿ ಎತ್ತರದ ಮರದಿಂದ ನೆಗೆದ ಆ ಹಾರುವ ಓತಿಯು, ನಿಧಾನವಾಗಿ ತೇಲುತ್ತಾ ಕೆಳಗಿನ ಮತ್ತೊಂದು ಅಡಿಕೆ ಮರದ ಮೇಲೆ ಹೋಗಿ ಕುಳಿತುಕೊಂಡಿತು! ಪಕ್ಕೆಲುಬುಗಳಿಗೆ ಅಂಟಿಕೊಂಡ ಚರ್ಮವನ್ನೇ ಅಗಲವಾಗಿ ಬಿಡಿಸಿ ಹಾರಬಲ್ಲ ಆ ಓಂತಿಗಳಿಗೆ, ಹಾರುವ ಕಲೆಯು ಒಂದು ರಕ್ಷಣಾ ತಂತ್ರ. ಜೊತೆಗೆ, ತನ್ನ ಗಾತ್ರವನ್ನು ಹಿಗ್ಗಿಸಿಕೊಂಡು ಹೆಣ್ಣು ಓಂತಿಯನ್ನು ಆಕರ್ಷಿಸುವ ತಂತ್ರವೂ ಇದ್ದೀತು. ಅದಾಗಲೇ ನಾನು ತೇಜಸ್ವಿಯವರ ಕರ್ವಾಲೋ ಕಾದಂಬರಿಯನ್ನು ಓದಿದ್ದರಿಂದ, ನಮ್ಮದೇ ತೋಟದಲ್ಲಿ ಕಂಡ ಹಾರುವ ಓತಿಯನ್ನು ಸಾಕಷ್ಟು ಚೆನ್ನಾಗಿಯೇ

ಗಮನಿಸಿದೆ, ಮುದಗೊಂಡೆ, ಬೆರಗುಗೊಂಡೆ. ಕಾದಂಬರಿಯಲ್ಲಿ ವರ್ಣಿತಗೊಂಡ ಈ ಅಪರೂಪದ ಜೀವಿಯನ್ನು ನಮ್ಮ ಹಿತ್ತಲಿನಲ್ಲೇ ಕಂಡಾಗ ತುಸು ಸಂಭ್ರಮವೂ ಆಯಿತು. ನಂತರ, ಅದು ಅಡಿಕೆ ಮರಗಳ ಸಂದಿಯಲ್ಲಿ ಹಾರಿ ಕಣ್ಮರೆಯಾಯಿತು. ನಂತರ ಹಲವು ಬಾರಿ ಸನಿಹದ ಹಕ್ಕಲಿನಲ್ಲಿಲ, ಅಡಕೆ ತೋಟದಲ್ಲಿ ಒಂದು ಮರದಿಂದ ಇನ್ನೊಂದು ಮರಕ್ಕೆ ಅದು ಹಾರುತ್ತಿರುವುದನ್ನು ಕಂಡಿದ್ದುಂಟು.

ಮೂರು ದಶಕಗಳ ನಂತರ ಮೂರನೆಯ ಬಾರಿ ಹಾರುವ ಓತಿಯೊಡನೆ ನನ್ನ ಮುಖಾಮುಖಿಯಾದದ್ದು, ಹಾಲಾಡಿ ಪೇಟೆಯಲ್ಲಿದ್ದ ನಮ್ಮ ಮನೆ ಎದುರು. ಹತ್ತಾರು ತೆಂಗಿನ ಮರ, ನಾಲ್ಕಾರು ಅಡಕೆ ಮರ, ಒಂದು ಮಾವಿನ ಮರ, ತೇಗದ ಮರ, ಕುರುಚಲು ಗಿಡಗಳು, ಪಕ್ಕದಲ್ಲೇ ನಾಗರ ಬನದ ದಟ್ಟ ಬಳ್ಳಿ ಎಲ್ಲಾ ಸೇರಿ, ಅಲ್ಲಿ ಪುಟ್ಟ ಹಕ್ಕಲಿನ ಪರಿಸರ ರೂಪುಗೊಂಡಿತ್ತು. ಅಕ್ಕ ಪಕ್ಕದ ಮನೆಗಳ ಸುತ್ತ ಮುತ್ತ ಸಹಾ ಸಾಕಷ್ಟು ಗಿಡಮರಗಳಿದ್ದವು. ನಮ್ಮ ತಂದೆ, ತಮ್ಮ ಅನಾರೋಗ್ಯದಿಂದಾಗಿ ಸಾಮಾನ್ಯವಾಗಿ ಒಂದೆಡೆ ಕುಳಿತಿರುತ್ತಿದ್ದರು ಅಥವಾ ಮಲಗಿರುತ್ತಿದ್ದರು. ಅಂದು ಆ ಓತಿಯು ಅವರ ದೃಷ್ಟಿಗೆ ಬಿದ್ದ ಕೂಡಲೇ, ನಿಶ್ಶಕ್ತಿ ಇದ್ದರೂ, ತಾವು ಕುಳಿತ ಜಾಗದಿಂದ ಎದ್ದು ಬಂದು, ಅದರತ್ತ ಕೈತೋರಿ 'ನೋಡಲ್ಲಿ, ಅದನ್ನು ಓಡಿಸು' ಎಂದು ನನ್ನತ್ತ ನೋಡುತ್ತಾ ಸನ್ನೆ ಮಾಡಿದರು.

ಅವರು ಕೈತೋರಿದ ದಿಕ್ಕಿನಲ್ಲಿ ನೋಡಿದರೆ, ಒರಟು ದೇಹದ ಪುಟ್ಟ ಓತಿಕ್ಯಾತವೊಂದು ಕುಳಿತಿತ್ತು. ತನ್ನ ವಿಚಿತ್ರ ಶೈಲಿಯಲ್ಲಿ ಕತ್ತನ್ನು ತಿರುಗಿಸುತ್ತಾ ಭಾವಭಂಗಿಗಳನ್ನು ಪ್ರದರ್ಶಿಸುತ್ತಿತ್ತು! ತಲೆಯನ್ನು ಅತ್ತಿತ್ತ ಅಲ್ಲಾಡಿಸುತ್ತಾ, ಕಣ್ಣನ್ನು ಹೊಳೆಯಿಸುತ್ತಿತ್ತು. ನಮ್ಮಪ್ಪ ಇನ್ನೊಮ್ಮೆ ಅದರತ್ತ ಕೈಮಾಡಿ, 'ಅದನ್ನು ಓಡಿಸು' ಎಂದು ಸೂಚಿಸಿದರು. ನಮ್ಮ ಓಡಾಟವನ್ನು ಕಂಡು, ಎರಡಡಿ ದೂರವಿದ್ದ ಬಾವಿಯ ಮೋಟುಗೋಡೆಯತ್ತ ಅದು ಹಾರಿತು. ಹೌದೋ ಅಲ್ಲವೋ ಎಂಬಂತೆ, ಅದರ ಎರಡೂ ಬಗಲಿನಲ್ಲಿದ್ದ ಚರ್ಮದ ಹಾಳೆ ಬಿಡಿಸಿಕೊಂಡಿತು. ತಕ್ಷಣ ನನಗೆ ಗೊತ್ತಾಯಿತು, ಅದು ಸಾಮಾನ್ಯ ಓತಿಕ್ಯಾತ ಅಲ್ಲ, ಅದೊಂದು ಹಾರುವ ಓತಿ ಎಂದು! 'ಅದನ್ನು ನಾನು ನೋಡಿಕೊಳ್ಳುತ್ತೇನೆ, ಅದರ ಫೋಟೋ ತೆಗೆಯಬೇಕು' ಎಂದು ನಮ್ಮಪ್ಪನ ಬಳಿ ಹೇಳಿದ ನಂತರ, ಅವರು ವಿಶ್ರಾಂತಿ ತೆಗೆದುಕೊಳ್ಳಲು ಕೊಠಡಿಗೆ ಹೋದರು. ನಾನು ಡಿಜಿಟಲ್ ಕ್ಯಾಮೆರಾ ಹಿಡಿದು ಆ ಹಾರುವ ಓತಿಯ ಹಿಂದೆ ಹೊರಟೆ.

ಮುಂದಿನ ಒಂದೆರಡು ಗಂಟೆಗಳ ಕಾಲ ಹಾರುವ ಓತಿಯ ಓಡಾಟವನ್ನು ನೋಡುವುದು, ಅದನ್ನು ಕ್ಲಿಕ್ಕಿಸುವುದು, ನನ್ನ ಪರಿಮಿತಿಯಲ್ಲಿ ಅದರ ಶೈಲಿ, ನೋಟವನ್ನು ಅಧ್ಯಯನ ಮಾಡುವುದೇ ನನ್ನ ಕೆಲಸವಾಯಿತು. ಅದು ಬಾವಿಕಟ್ಟೆಯ ಮೇಲೆ ಅತ್ತಿತ್ತ ಓಡಾಡುತ್ತಾ, ಇರುವೆಗಳನ್ನು ತಿನ್ನುತ್ತಾ, ಸುತ್ತಲಿದ್ದ ನರಮನುಷ್ಯರನ್ನು ಸಂಪೂರ್ಣ ಅಲಕ್ಷ್ಯ ಮಾಡಿ ತನ್ನ ಪಾಡಿಗೆ ಅದರದೇ ಲೋಕದಲ್ಲಿತ್ತು! ಚಿಕ್ಕ ಗಿಡವೊಂದನ್ನು ಏರಿ, ಅಲ್ಲಿಂದ ಗಿಡ ಟೊಂಗೆಗೆ ಹಾರುವಾಗ ಅದರ 'ರೆಕ್ಕೆ' ಸ್ವಲ್ಪ ಬಿಚ್ಚಿದ್ದು ಕಾಣಿಸಿತು. ಭುಜ ಮತ್ತು ಪಕ್ಕೆಲುಬಿನ ನಡುವೆ ಇರುವ ಚರ್ಮವನ್ನೇ ರೆಕ್ಕೆಯ ರೂಪಕ್ಕೆ ಬದಲಿಸಿಕೊಂಡು, ಒಂದು ಮರದಿಂದ ಇನ್ನೊಂದು ಮರಕ್ಕೆ 'ಗ್ಲೈಡ್' ಮಾಡುತ್ತಾ (ತೇಲುತ್ತಾ) ಸಾಗುವ ಆ ಹಾರುವ ಓತಿಯ ಹಾರಾಟವನ್ನು ಹತ್ತಿರದಿಂದ ನೋಡುವ ಅನುಭವ ಅನನ್ಯ.

ಗಿಡದಿಂದ ಪುನಃ ಬಾವಿ ಕಟ್ಟೆಯತ್ತ ಬಂದ ಹಾರುವ ಓತಿಯು ನಿಧಾನವಾಗಿ ನಡೆದು, ಪಕ್ಕದ ಕಾಂಪೌಂಡ್ ಗೋಡೆಯ ಮೇಲೆ ಕುಳಿತಿತು. ಅಲ್ಲಿನ ಪಾಚಿ, ಹಾವಸೆಗಳ ನಡುವೆ ಚಲಿಸುತ್ತಾ, ತನ್ನ ಕುತ್ತಿಗೆ ತಳದ ಹಳದಿ ನಾಲಿಗೆಯನ್ನು ನೀಡುತ್ತಾ ಪೋಸು ಕೊಡತೊಡಗಿತು. ಮನುಷ್ಯರು ತೀರಾ ಹತ್ತಿರಬಂದರೆ, ಅವರಿಂದ ಅಪಾಯ ಬಂದರೆ ತೇಲುತ್ತಾ ತಪ್ಪಿಸಿಕೊಳ್ಳಬಲ್ಲೆನೆಂಬ ಯೋಚನೆ ಅದರದ್ದು! ಜೊತೆಗೆ, ತಾನು ಕುಳಿತ ಜಾಗದ ಬಣ್ಣಕ್ಕೆ ಅನುಗುಣವಾಗಿ ತನ್ನ ಬಣ್ಣವನ್ನು ಬದಲಿಸುವ ಚಾಕಚಕ್ಯತೆ!

ಕಾಂಪೌಂಡ್ ಮೇಲೆ ತುಂಬಾ ಹೊತ್ತು ಮಿಸುಕಾಡದೇ ಕುಳಿತಿದ್ದ ಆ ಓತಿ, ನಾನು ಕ್ಯಾಮೆರಾ ಕ್ಲಿಕ್ಕಿಸುವಾಗಲೇ, ತನ್ನ ನಾಲಿಗೆಯನ್ನು ಛಕ್ಕೆಂದು ಝುಳಪಿಸಿ, ಅಲ್ಲೇ ಸಾಲಾಗಿ ಹರಿದಾಡುತ್ತಿದ್ದ ನಾಲ್ಕೆಂಟು ಕೆಂಪು ಇರುವೆಗಳನ್ನು ಸ್ವಾಹಾ ಮಾಡಿದ್ದೂ ಆಯಿತು! ಈ ರೀತಿಯ ಜೀವಿಗಳು ಇರುವೆಗಳನ್ನು ತಿನ್ನುತ್ತವೆ ಎಂದು ಓದಿದ್ದೆ; ಅಂದು ಹಾರುವ ಓತಿಯು ಇರುವೆಗಳನ್ನು ತಿನ್ನುತ್ತವೆ ಎಂಬುದನ್ನು ಕಣ್ಣಾರೆ ಕಂಡೆ. ಸಣ್ಣ ಗಾತ್ರದ ಕೆಂಪಿರುವೆಗಳನ್ನು ಅದು ಇಷ್ಟಪಟ್ಟು ತಿನ್ನುತ್ತಿತ್ತು. ಸುಮಾರು ಎರಡು ಗಂಟೆಗೂ ಹೆಚ್ಚು ಕಾಲ ನಮ್ಮ ಮನೆಯ ಸುತ್ತ ಮುತ್ತ ಸುಳಿದಾಡುತ್ತಿದ್ದ ಹಾರುವ ಓತಿಯು, ನಂತರ ಅಡಿಕೆ ಗಿಡವೊಂದಕ್ಕೆ ನೆಗೆದು, ಇತರ ಕುರುಚಲು ಗಿಡಗಳ ನಡುವೆ ಕಣ್ಮರೆಯಾಯಿತು!

ನಾಲ್ಕಾರು ವಾರಗಳ ನಂತರ, ಅದೇ ಜಾಗದಲ್ಲಿ ಹಾರುವ ಓತಿ ದಂಪತಿ ಆಟವಾಡುವ ದೃಶ್ಯ ನೋಡುವ ಅವಕಾಶ ಲಭಿಸಿತು. ಮಧ್ಯಾಹ್ನ ಮೂರು ಗಂಟೆಯ ಸಮಯ. ಒಳ್ಳೆಯ ಬಿಸಿಲು. ಮನೆ ಮುಂಭಾಗದ ಸಿಟ್‌ಔಟ್‌ನಲ್ಲಿ, ಬರೆಯುತ್ತಾ ಕುಳಿತಿದ್ದೆ. ಪಕ್ಕದ ಮನೆಯ ಎದುರು ನಾಲ್ಕು ತೆಂಗಿನ ಮರಗಳಿವೆ. ಕೊನೆಯ ಮರದಿಂದ ಒಂದು ಹಾರುವ ಓತಿ ತೇಲುತ್ತಾ ಬಂದು ಮೂರನೆಯ ಮರದ ಕಾಂಡದ ಮೇಲೆ ಕುಳಿತಿತು. ಅದರ ಹಿಂದೆಯೇ ಇನ್ನೊಂದು ಹಾರುವ ಓತಿ ಹಾರುತ್ತಾ ಬಂದು ಅದೇ ಮರವನ್ನು ಅಪ್ಪಿತು. ನನಗೆ ಮರೆಯಾಗಿದ್ದ ಭಾಗದಲ್ಲಿ ತೆಂಗಿನ ಮರವನ್ನೇ ಸ್ವಲ್ಪ ಮೇಲೇರಿ, ಎರಡನೆಯ ಮರಕ್ಕೆ ಒಂದು ಓತಿ, ಅದರ ಹಿಂದೆಯೇ ಓತಿ ತೇಲುತ್ತಾ ಬಂದವು. ನಾಲ್ಕಾರು ನಿಮಿಷಗಳಲ್ಲಿ, ಮೊದಲನೆಯ ಮರಕ್ಕೂ ಒಂದರ ಹಿಂದೆ ಒಂದರಂತೆ, ತೇಲುತ್ತಾ ಹಾರಿ, ಕೊನೆಗೆ ಎರಡೂ ಬಂದ ದಾರಿಯಲ್ಲೇ ಮರದಿಂದ ಮರಕ್ಕೆ ಹಾರುತ್ತಾ, ವಾಪಸಾದವು. ಕೊನೆಯ ಮರದಾಚೆ ಇರುವ ದಟ್ಟವಾದ ಹಲಸಿನ ಮರವನ್ನೇರಿ ಕಣ್ಮರೆಯಾದವು!

ಒಂದರ ಹಿಂದೆ ಒಂದನ್ನು ಅನುಸರಿಸಿದ್ದರಿಂದಾಗಿ, ಅವುಗಳನ್ನು ದಂಪತಿ ಎಂದು ಕರೆದೆ. ಅವೆರಡೂ ಹಾರುವ ಓತಿಗಳು ದಂಪತಿಗಳಾಗಿರಲಿ, ಇಲ್ಲದಿರಲಿ, ಒಂದು ಜೋಡಿ ಹಾರುವ ಓತಿ ಈ ರೀತಿ ಮರದಿಂದ ಮರಕ್ಕೆ ಹಾರಾಡುವ ದೃಶ್ಯ ನೋಡಲು ಸಿಕ್ಕಿದ್ದು ನಿಜಕ್ಕೂ ಅಪೂರ್ವ. ಮಕ್ಕಳು ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಜೂಟಾಟ ಆಡುವ ರೀತಿ ಇತ್ತು ಅವುಗಳ ಆ ದಿನದ ಹಾರಾಟ! ಹಾರುವ ಓತಿಯು ಪ್ರತಿ ಹಾರಾಟದಲ್ಲೂ ತನ್ನ ಎತ್ತರವನ್ನು ಕಳೆದುಕೊಳ್ಳುತ್ತದೆ, ಕಳೆದುಕೊಳ್ಳಲೇಬೇಕು. ಅದು ಅನಿವಾರ್ಯ, ಮಿತಿ. ಗ್ಲೈಡಿಂಗ್ ಮಾದರಿಯ ಹಾರಾಟವಾದ್ದರಿಂದ, ಎತ್ತರದಿಂದ ತುಸು ತಗ್ಗಿನ ಜಾಗಕ್ಕೆ ಅದು ಹಾರಬಲ್ಲದೇ ಹೊರತು, ಮೇಲ್ಭಾಗಕ್ಕೆ ಹಾರಲು ಅದರಿಂದ ಅಸಾಧ್ಯ. ಆದ್ದರಿಂದಲೇ ಇರಬೇಕು, ಹಾರಿಬಂದು ಕುಳಿತ ತೆಂಗಿನ ಮರದ ಕಾಂಡವನ್ನು ಅಪ್ಪಿ ಹಿಡಿದು, ನಾಲ್ಕೆಂಟು ಅಡಿ ಮೇಲಕ್ಕೆ ಚಲಿಸಿ, ಮತ್ತೆ ಹಾರಲು ಅನುವಾಗುತ್ತಿತ್ತು! ಹಿಂಬಾಲಿಸಿಕೊಂಡು ಬಂದ ಎರಡನೆಯ ಹಾರುವ ಓತಿ ಸಹ, ಅದೇ ರೀತಿ ಮೇಲಕ್ಕೆ ಏರುತ್ತಿತ್ತು. ಅವು ಒಂದರ ಹಿಂದೆ ಒಂದು ಏಕೆ ಹಾರುತ್ತಿದ್ದವು? ಅವು ಆ ದಿನದ ಮಟ್ಟಿಗೆ ಲವರ್ಸ್ ಇರಬಹುದೆ? ಎಲ್ಲಾ ಓತಿಕ್ಯಾತಗಳು ಮತ್ತು ಅವಕ್ಕೆ ಸಂಬಂಧಿಸಿದ ಇತರ ಜೀವಿಗಳು ನೆಲದ ಮೇಲೆ, ಮರದ ಮೇಲೆ ಓಡಾಡುತ್ತಾ ಜೀವನ ನಡೆಸುತ್ತಿರಬೇಕಾದರೆ, ಹಾರುವ ಓತಿ ಮಾತ್ರ ತನ್ನ ಪಕ್ಕೆಲುಬುಗಳಲ್ಲಿ ಅಗಲಿಸುವಂತಹ ಚರ್ಮವನ್ನು ಬೆಳೆಸಿಕೊಂಡು, ಒಂದು ಮರದಿಂದ ಇನ್ನೊಂದು ಮರಕ್ಕೆ ಹಾರಲು ಕಲಿತ ವಿಚಾರ ವಿಸ್ಮಯಕಾರಿ. ಬೇರೆ ಓತಿಕ್ಯಾತಗಳು, ಕೆಲವು ಅಡಿ ನೆಗೆಯಬಲ್ಲವು. ಆದರೆ ತನ್ನ ಬಗಲಿನಲ್ಲಿರುವ ಚರ್ಮದ ಪದರವನ್ನು ಬಳಸಿ ಹತ್ತಾರು ಅಡಿ ದೂರದ ತನಕ ಮರದಿಂದ ಮರಕ್ಕೆ ಹಾರಬಲ್ಲ ಹಾರುವ ಓತಿಯು ನಮ್ಮ ರಾಜ್ಯದ ಕುತೂಹಲಕಾರಿ ಜೀವಿಗಳಲ್ಲಿ ಒಂದು. ಅದರ ವಾಸಸ್ಥಳವನ್ನು ರಕ್ಷಿಸುವ ಜವಾಬ್ದಾರಿ ನಮ್ಮದು.

ಪ್ರಸ್ತುತ

ಸಂದೀಪ್ ಶರ್ಮಾ

ಜಮ್ಮು- ಕಾಶ್ಮೀರ: ಅಂದು, ಇಂದು

ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು, ಕಾಶ್ಮೀರ ಮತ್ತು ಲಡಾಖ್ ರಚನೆಯಾಗಿ ಐದು ವರ್ಷಗಳೇ ಸಂದಿವೆ, ಈ ವಿಷಯವು ಭಾರತೀಯರಿಗೆ ಸಂತೋಷ ಹಾಗು ಹೆಮ್ಮೆಯ ವಿಚಾರ. ಈ ಪ್ರದೇಶಗಳಲ್ಲಿ ಭಾರತೀಯ ಐಕ್ಯತೆ ಮತ್ತು ಅಭಿವೃದ್ಧಿಯನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ಮಹತ್ವದ ಸಾಧನೆಯನ್ನು ಪಡೆದಿರುವುದರಿಂದ ಅಖಂಡ ಭಾರತದಂತೆ ಗೋಚರಿಸುತ್ತಿದೆ. ಸುಮಾರು 4 ದಶಕಗಳ ಕಾಲ ಹಿಂಸೆಯಿಂದ ನಲುಗಿದ ಜಮ್ಮು ಮತ್ತು ಕಾಶ್ಮೀರದಲ್ಲಿ ಸುಮಾರು 41,500 ಜನರು ಭಯೋತ್ಪಾದಕರ ಅಟ್ಟಹಾಸಕ್ಕೆ ಬಲಿಯಾಗಿದ್ದರು. ಇತ್ತೀಚೆಗೆ ನಡೆದ ವಿಧಾನ ಸಭೆ ಚುನಾವಣೆ ವೇಳೆ ಉಗ್ರರು ರಕ್ತದ ಹೊಳೆ ಹರಿಸಿದರೂ ಈಗ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ. ಭೂಲೋಕದ ಸ್ವರ್ಗ ಮರಳಿ ತನ್ನ ವೈಭವ ಕಾಣಲು ತವಕಿಸುತ್ತಿದೆ.

ಆರ್ಟಿಕಲ್ 370 ಮತ್ತು 35 ಎ ಯ ವಿಶೇಷ ಸ್ಥಾನಮಾನವು ರದ್ದಾದ ಬಳಿಕ ಭಾರತದ ಉಳಿದ ರಾಜ್ಯಗಳಂತೆಯೇ ಈ ಪ್ರದೇಶ ಗಳನ್ನು ಆರ್ಥಿಕ ಪುನಶ್ಚೇತನಗೊಳಿಸಲು ಪ್ರಧಾನಿ ಮೋದಿ ರೂ. 80,068 ಕೋಟಿ ಮೀಸಲಿಟ್ಟಿದ್ದಾರೆ. ಆಡಳಿತವನ್ನು ಬಲಪಡಿಸುವ ಮೂಲಕ, ಅಭಿವೃದ್ಧಿಯನ್ನು ತ್ವರಿತಗೊಳಿಸುವ ಮೂಲಕ, ಮೂಲ ಸೌಕರ್ಯಗಳನ್ನು ನಿರ್ಮಿಸುವ ಮೂಲಕ, ಉದ್ಯೋಗವನ್ನು ಸೃಷ್ಟಿ ಸುವ ಮೂಲಕ ಹೊಸ ಶಕೆಗೆ ನಾಂದಿ ಹಾಡಿದ್ದಾರೆ. ಕೇಂದ್ರಾಡಳಿತ ರಚನೆಯಾದ ಕೂಡಲೇ ಪಂಚಾಯತಿ ರಾಜ್ ಸಂಸ್ಥೆಗಳನ್ನು ಸ್ಥಾಪಿಸಿ ಕ್ರಿಯಾತ್ಮಕಗೊಳಿಸಲಾಗಿದೆ ಮತ್ತು ರೂ. 366 ಕೋಟಿಯನ್ನು 4,483 ಪಂಚಾಯಿತಿಗಳಿಗೆ ಬಿಡುಗಡೆ ಕೂಡ ಮಾಡಲಾಗಿದೆ.ಕಣಿವೆ ಪ್ರದೇಶದಲ್ಲಿ ಹಮ್ಮಿಕೊಂಡಿರುವ 2,273 ಅಭಿವೃದ್ಧಿ ಯೋಜನೆಗಳಲ್ಲಿ 506 ಪೂರ್ಣಗೊಂಡಿದೆ. 963 ಯೋಜನೆಗಳನ್ನು ಮಾರ್ಚ್ 2026 ರೊಳಗೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ. ಐಐಟಿ ಸ್ಥಾಪನೆ, ಜಮ್ಮು ಮತ್ತು ಶ್ರೀನಗರ-ಲೇಹ್ ವಿದ್ಯುಚ್ಛಕ್ತಿ ಪ್ರಸರಣ ಮಾರ್ಗಗಳು ಪೂರ್ಣಗೊಂಡ ಕೆಲವು ಪ್ರಮುಖ ಯೋಜನೆಗಳಾಗಿವೆ. ಆರೋಗ್ಯ ಸಂಸ್ಥೆಗಳ ಪುನರ್ನಿರ್ಮಾಣಕ್ಕಾಗಿ 881 ಕೋಟಿ ರೂ. ಮೀಸಲಿಡಲಾಗಿದ್ದು, 144 ಯೋಜನೆಗಳಲ್ಲಿ 60 ಯೋಜನೆಗಳು ಪೂರ್ಣಗೊಂಡಿದೆ. ಝೇಲಂ-ತಾವಿ ರಿಕವರಿ ಪ್ರಾಜೆಕ್ಟ್ , ಚೆನಾಬ್ ಸೇತುವೆ, ರೈಲ್ವೆ ಮೂಲಕ ಕಾಶ್ಮೀರದ ಸಂಪರ್ಕ, ಮೆಗಾ-ಮಲ್ಟಿ ಪ್ರಾಜೆಕ್ಗಳಾದ ಉಜ್ ಮತ್ತು ಶಹಪುರ್ ಕಂಡಿ 330 ಮೆಗಾವ್ಯಾಟ್ ಕಿಶೆಂಗಂಗಾ ಯೋಜನೆ ಅನುಷ್ಠಾನಗೊಂಡಿವೆ. 45,000 ಉದ್ಯೋಗಾವಕಾಶ ಗಳು ಮತ್ತು ಕ್ಷಿಪ್ರಗತಿಯಲ್ಲಿ ರಸ್ತೆ ನಿರ್ಮಾಣ ಕಾರ್ಯಯೋಜನೆಗಳು ಭರದಿಂದ ಸಾಗಿದೆ. 330 ಕ್ಕೂ ಹೆಚ್ಚು ಶಾಲೆಗಳು ಮತ್ತು ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಪ್ರಕ್ರಿಯೆಗಳು, ಎರಡು ಏಮ್ಸ್ ಸೇರಿದಂತೆ ಸುಧಾರಿತ ವೈದ್ಯಕೀಯ ಮೂಲಸೌಕರ್ಯಗಳು, ಲಘು ರೈಲು ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಪ್ರಾರಂಭ, ವಸತಿ ಸೇರಿದಂತೆ ಎಲ್ಲರಿಗೂ ಕಲ್ಯಾಣ ಕ್ರಮಗಳು, ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ ಯೋಜನೆಗಳ ಅನುಷ್ಠಾನ, ರೈತರಿಗೆ ಬೆಂಬಲ, ತೋಟಗಾರರರು ಮತ್ತು ಅಸಂಘಟಿತ ಕಾರ್ಮಿಕರು, ಪ್ರವಾಸೋದ್ಯಮ ಸೌಲಭ್ಯಗಳ ವಿಸ್ತರಣೆ, ಕ್ರೀಡಾ ಮೂಲಸೌಕರ್ಯ ಮತ್ತು ಗಡಿ ಪ್ರದೇಶದ ಅಭಿವೃದ್ಧಿ ಕಾರ್ಯಯೋಜನೆಯಂತೆ ನಡೆಯುತ್ತಿದೆ. ಕೆಲ ದಿನಗಳ ಹಿಂದೆ ವಿಶ್ವದ ಅತಿ ಎತ್ತರದ ರೈಲು ಸೇತುವೆಯ ಮೇಲೆ ವಂದೇ ಭಾರತ್ ರೈಲಿನ ಮೊದಲ ಪ್ರಾಯೋಗಿಕ ಸಂಚಾರ ಕೂಡ ಪೂರ್ಣಗೊಂಡಿದೆ. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ, 2025-26ರ ವೇಳೆಗೆ 5,300 ಕಿಲೋಮೀಟರ್ ರಸ್ತೆ ನಿರ್ಮಿಸಲು ಮುಂದಾಗಿದೆ. ಕಾಶ್ಮೀರಿ ವಲಸಿಗರು ಉದ್ಯೋಗ, ಸಾರಿಗೆ ವಸತಿ ಮತ್ತು ಮಾಸಿಕ ಆರ್ಥಿಕ ಸಹಾಯದಂತಹ ಕಲ್ಯಾಣ ಕ್ರಮಗಳ ಪ್ರಯೋಜನ ಪಡೆದಿದ್ದಾರೆ. ಕಾನೂನು ಸುವ್ಯವಸ್ಥೆ ಸುಧಾರಿಸಿದೆ ಮತ್ತು ಹಿಂಸಾಚಾರವು ಕಡಿಮೆಯಾಗಿದೆ. ಭಯೋತ್ಪಾದನೆ ಹೊರತಾಗಿಯೂ ಪರಿಸರವನ್ನು ಕಲುಷಿತಗೊಳಿಸಲು ಇನ್ನಿಲ್ಲದ ಸ್ಥಿತಿಗೆ ತಲುಪಿ ಮತ್ತೆ ಸಕ್ರಿಯಗೊಳಿಸಲು ನಿರಾಶಾದಾಯಕ ಪ್ರಯತ್ನಗಳ ನಡೆಸುತ್ತಿದ್ದರರೂ ಜನರು ಧೃತಿಗೆಡದೆ ಭಯೋತ್ಪಾದನೆಗೆ ಇತಿಶ್ರೀ ಹಾಡುತ್ತಿದ್ದಾರೆ.

ಕೇಂದ್ರೀಯ ಜಮ್ಮು, ಕಾಶ್ಮೀರ ಮತ್ತು ಲಡಾಖ್ ರಚನೆಯು ಅಭಿವೃದ್ಧಿಗೆ ಸಾಕ್ಷಿಯಾಗಿದೆ ಮಾತ್ರವಲ್ಲದೆ ಇಲ್ಲಿನ ಜನರಲ್ಲಿ ದೇಶಪ್ರೇಮವನ್ನು ಹುಟ್ಟುಹಾಕಿದೆ, ಭಾರತದ ಸಂವಿಧಾನದಲ್ಲಿ ಜನರ ವಿಶ್ವಾಸವನ್ನು ಮರುಸ್ಥಾಪಿಸಿದೆ. ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಿದೆ.

(ಸಿವಿಲ್ ಎಂಜಿನೀಯರ್, ಹವ್ಯಾಸಿ ಬರಹಗಾರ)

ಮಹಾಕುಂಭಮೇಳ ಮತ್ತು ವೀರಶೈವ ಪರಂಪರೆ

ಬಸವ ಮಂಟಪ

ರವಿ ಹಂಜ್
vveditoped@gmail.com

ಮಹಾಕುಂಭಮೇಳದ ಜಗಮಗಿಸುವ ವ್ಯವಸ್ಥೆ, ವಿದೇಶಿ ಪ್ರವಾಸಿಗರು, ಕೌತುಕ ನಾಗಾ ಸಾಧುಗಳು, ನಿಗೂಢ ಅಘೋರಿಗಳು, ಎಲ್ಲೆಲ್ಲೂ ಕ್ಯಾಮೆರಾಕಣ್ಣಿಗರು, ಮತ್ತು ರೋಚಕ ಸುದ್ದಿಗಳ ಪರಿಧಿಯಾಚೆಗೆ ಕುಂಭಮೇಳವು ಪ್ರಾಥಮಿಕವಾಗಿ ಶೈವ ಸಂಸ್ಕೃತಿ ಎನಿಸಿದರೂ ದೇಶದ ಎಲ್ಲಾ ಹಿಂದೂ ಸಂಸ್ಕೃತಿಯ ಧರ್ಮಗಳನ್ನು ಒಗ್ಗೂಡಿಸುವ ಏಕೈಕ ಸಾಂಕೇತಿಕ ಸ್ವರೂಪವಾಗಿದೆ. ಇಡೀ ಜಗತ್ತೇ ಬಲ್ಲಂತೆ ಇಲ್ಲಿ ನಾಗಾಸಾಧುಗಳಿಗೆ ಪ್ರಥಮ ಅಮೃತ ಸ್ನಾನದ ಆದ್ಯತೆ ನೀಡಲಾಗಿದೆ ಎಂದು ಬಲ್ಲಿರಷ್ಟೇ! ಆದರೆ ಈ ನಾಗಾ, ಅಘೋರಿ, ನಾಥ ಮುಂತಾದ ಸಾಮೂಹಿಕ ಪಂಥದವರಲ್ಲಿ ಪ್ರಥಮ ಬಾರಿಗೆ ಯಾರೊಬ್ಬರೂ ಕುಂಭಮೇಳದ ಪವಿತ್ರ ಸ್ನಾನಕ್ಕೆ ಮುಂದಾಗುವುದಿಲ್ಲ ಎಂದರೆ ಆಶ್ಚರ್ಯವಾಗುವುದೇ? ನಾಗಾಸಾಧುಗಳಲ್ಲದೆ ಅಘೋರಿಗಳು, ನಾಥ ಮತ್ತಿತರೆ ಸಾಧಕರು ತಮ್ಮ ಸ್ನಾನಕ್ಕೂ ಮುನ್ನ ಓರ್ವ ವೀರಶೈವ ಜಂಗಮನನ್ನು ಸಂಗಮಸ್ಥಳದಲ್ಲಿ ಕೂರಿಸಿ ಪೂಜಿಸಿ ಆಶೀರ್ವಾದ ಪಡೆದು ದಕ್ಷಿಣೆ ನೀಡಿ, ಆತನ ಸ್ನಾನವಾದ ನಂತರವೇ ತಮ್ಮ ಅಮೃತ ಸ್ನಾನಕ್ಕೆ ಚಾಲನೆ ನೀಡುತ್ತಾರೆ, ಗೊತ್ತೇ!

ಸಂಶೋಧಕರಾದ ವೀರಭದ್ರಯ್ಯ ಚಿಕ್ಕಾಟಿಮಠ ಅವರು ತಮ್ಮ 'ವೀರಶೈವ ಸಂಶೋಧನಾ ಲೇಖನಗಳು: ಭಾಗ -1' ಕೃತಿಯ 'ಉತ್ತರ ಭಾರತದ ಜಂಗಮರು' ಅಧ್ಯಾಯದಲ್ಲಿ, ... ಎಲ್ಲಾ ಕುಂಭಮೇಳದ ಪರಂಪರೆಯ ಪದ್ಧತಿಯಂತೆ ಪಲ್ಲಕ್ಕಿಯೋ ಪಾದಿಯಲ್ಲಿ ನಾಲ್ಕು ಜನ ದಿಗಂಬರ ವಾಮಮಾರ್ಗದ ಸಾಧಕರು ನಾಲ್ಕುದಿಕ್ಕಿನಲ್ಲಿ ನಿಂತು ಮಧ್ಯದಲ್ಲಿ ಜಂಗಮನನ್ನು ನಿಲ್ಲಿಸಿ ಅವನನ್ನು ಭ ಕ್ತಿಶ್ರದ್ಧೆಗಳಿಂದ ತ್ರಿವೇಣಿ ಸಂಗಮಕ್ಕೆ ಕರೆದೊಯ್ಯುತ್ತಾರೆ, ಆ ತ್ರಿವೇಣಿ ಸಂಗಮದ ನೀರು ಸಮೀಪಿಸುತ್ತಿದ್ದಂತೆ ಮುಂದಿನ ಇಬ್ಬರು ದಿಗಂಬರರು ಅಕ್ಕಪಕ್ಕಕ್ಕೆ ಸರಿದು ಜಂಗಮನನ್ನು ನದಿಯ ನೀರಿಗೆ ಕುಂಭಮೇಳದ ದಿವ್ಯಸ್ನಾನಕ್ಕಾಗಿ ಅನುಕೂಲ ಮಾಡಿಕೊಡುತ್ತಾರೆ. ಆ ಜಂಗಮನು ಅತ್ಯಂತ ಗೌರವಾದರಗಳಿಂದ ತ್ರಿವೇಣಿ ಸಂಗಮವನ್ನು ಪ್ರವೇಶಿಸಿ ಆರಂಭದಲ್ಲಿ ಸ್ನಾನಮಾಡಿ ದಡ ಸೇರುತ್ತಿದ್ದಂತೆ ಸಾಧುಗಳು ಅವನನ್ನು ಮೊದಲಿನ ಪಲ್ಲಕ್ಕಿ ಪದ್ಧತಿಯಂತೆ ಕರೆತಂದು ನದಿಯ ದಡದ ಮೇಲೆ ಆತನು ಆಸೀನನಾದ ಮೇಲೆ ಆ ನಾಲ್ಕು ಜನ ಸಾಧುಗಳು ವೀರಮಾಹೇಶ್ವರ ಜಂಗಮನಿಗೆ ದಕ್ಷಿಣಾದಿಗಳನ್ನು ನೀಡಿ ಅವನ ಪಾದಕ್ಕೆ ಶಿರಸಾಷ್ಟಾಂಗ ನಮಸ್ಕಾರಗಳನ್ನು ಭಕ್ತಿಶ್ರದ್ಧೆ ಗೌರವಗಳಿಂದ ಸಮರ್ಪಿಸಿ ನಂತರ ಕುಂಭಮೇಳದ ತ್ರಿವೇಣಿ ಸಂಗಮದಲ್ಲಿ ಮಿಂದು ಪುನೀತರಾಗುತ್ತಾರೆ. ಇದೇ ಪದ್ಧತಿಯನ್ನು ಇನ್ನುಳಿದ ಕುಂಭಮೇಳದಲ್ಲಿ ಸೇರಿದ ಎಲ್ಲಾ ಸನ್ಯಾಸಿ, ಸಾಧು, ಸಂತರು, ವಾಮಾಚಾರದ ದಿಗಂಬರ ಅಘೋರಿಗಳು ಮತ್ತು ಮುಂತಾದವರು ಆಚರಿಸುವ ಪದ್ಧತಿಯು ಪ್ರಸ್ತುತ ಇಂದಿನ ದಿನಮಾನಗಳಲ್ಲಿ ಉಳಿದಿರುವುದು ಗತಕಾಲದ ವೀರಶೈವ ಲಿಂಗಾಯತ ಪರಂಪರೆಯ ಇತಿಹಾಸದ ಸಾಕ್ಷ್ಯಾಧಾರವಾಗಿದೆ ಎಂದಿದ್ದಾರೆ.

ಈ ಗೌರವಕ್ಕೆ ಪಾತ್ರರಾಗುವ ಉತ್ತರ ಭಾರತದ ಜಂಗಮರು ಹರಿಯಾಣ, ಪಂಜಾಬ್, ರಾಜಸ್ಥಾನಗಳಲ್ಲಿ ವಾಸಿಸುತ್ತಿದ್ದರೂ ಸದಾ ಸಂಚಾರಿಗಳಾಗಿರುತ್ತಾರೆ. ಈ ಉತ್ತರ ಭಾರತದ ವೀರಶೈವ ಜಂಗಮರಿಗೂ ಕರ್ನಾಟಕದ ಜಂಗಮರಿಗೂ ಪ್ರಾದೇಶಿಕ ವ್ಯತ್ಯಾಸಗಳನ್ನು ಬಿಟ್ಟರೆ ತಾತ್ವಿಕವಾಗಿ ಯಾವುದೇ ಭೇದಗಳಿಲ್ಲ. ಅವರು ತಮ್ಮನ್ನು ವೀರಶೈವ ಲಿಂಗಾಯತ ಜಂಗಮರೆಂದೇ ಗುರುತಿಸಿಕೊಂಡರೂ ಸಾಮಾಜಿಕವಾಗಿ ಜನರು ಇವರನ್ನು ದಶ್ನಮ್ ಸಾಧುಗಳು ಎಂದು ಗುರುತಿಸುತ್ತಾರೆ. ಆದರೆ ಇವರು ದಶ್ನಮ್ ಅಖಾಡಾ ವ್ಯವಸ್ಥೆಯ ಹೊರಗಿದ್ದು ದಶ್ನಮ್ ಅಖಾಡಾಗಳ ಪುರೋಹಿತರಾಗಿರುವರು. ತಮ್ಮದೇ ವಿಶೇಷ ಶೈಲಿಯಲ್ಲಿ ಶಿವಪಾರ್ವತಿ ಸ್ತುತಿ, ಗಿರಿಜಾ ಕಲ್ಯಾಣ ವರ್ಣನೆಯನ್ನು ಹಾಡುವ ಇವರನ್ನು ಜನರು ನಡೆದಾಡುವ ಶಿವ, ಶಿವನ ಶಿಖರ ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ವಚನಸಾಹಿತ್ಯ ಹೇಗೆ ವಿಭಿನ್ನ ಎನಿಸುತ್ತದೆಯೋ ಹಾಗೆಯೇ ಈ ಉತ್ತರ ಭಾರತದ ಜಂಗಮರ ಗಾಯನವು ವಿಶಿಷ್ಟ ಎನಿಸುತ್ತದೆ. ಎಲ್ಲಾ ಪಂಥಗಳ ಶಿವನ ಭಕ್ತರು ಇವರನ್ನು ಕರ್ನಾಟಕದ ವೀರಶೈವ ಲಿಂಗಾಯತ ಪದ್ಧತಿಯಂತೆಯೇ ತಮ್ಮ ಮನೆಗಳಿಗೆ ಬಿನ್ನಹ ಮಾಡಿ ಆಹ್ವಾನಿಸಿ ದಕ್ಷಿಣಾದಿ ಗೌರವ ಕೊಟ್ಟು ಆಶೀರ್ವಾದ ಪಡೆದುಕೊಳ್ಳುತ್ತಾರೆ. ಇವರ ವೇಷಭೂಷಣಗಳು ಸಹ ಕರ್ನಾಟಕದ ಜಂಗಮರು ಶ್ರಾವಣ ಮಾಸಗಳಲ್ಲಿ ಸಾಂಪ್ರದಾಯಿಕ ಕೋರುಧಾನ್ಯ ಭಿಕ್ಷಕ್ಕೆ ಹೊರಡುವಾಗ ಧರಿಸುವ ವೇಷಗಳಂತೆಯೇ ಇರುತ್ತದೆ. ಆದರೆ ಇವರು ಕೇವಲ ಶ್ರಾವಣ ಮಾಸದಲ್ಲಲ್ಲದೆ ಎಲ್ಲಾ ಮಾಸಗಳಲ್ಲಿಯೂ ಸಂಚರಿಸುತ್ತಾ ಕರೆದವರ ಮನೆಗಳಿಗೆ ತೆರಳಿ ಶಿವಸ್ತುತಿ ಮಾಡಿ ಗಿರಿಜಾ ಕಲ್ಯಾಣ ಪುರಾಣವನ್ನು ಹೇಳಿ ದಕ್ಷಿಣೆ ಪಡೆದುಕೊಳ್ಳುತ್ತಾರೆ. ಪ್ರಮುಖವಾಗಿ ಕರ್ಣಕುಂಡಲ (ಪಾರ್ವತಿಯ ಸ್ವರೂಪ), ನಾಗ (ಶಿವನ ಸ್ವರೂಪ), ಮತ್ತು ನಂದಿಯ ಸ್ವರೂಪವಾಗಿ ಚಿಕ್ಕ ಘಂಟೆ ಅಥವಾ ಹಲವಾರು ಚಿಕ್ಕ ಚಿಕ್ಕ ಘಂಟೆಗಳ ಸರಘಂಟೆಯನ್ನು ಧರಿಸಿರುತ್ತಾರೆ. ಈ ಸರಘಂಟೆಯನ್ನೇ ಮುರುಗಿ ಅಥವಾ ಮುರಿಗೆ (ಗೆಜ್ಜೆ/ಗಂಟೆ ಕಡಗ) ಎಂದು ಕರ್ನಾಟಕದಲ್ಲಿ ಕರೆಯುವುದು ಮತ್ತು ಖ್ಯಾತ ಮುರುಘಾಮಠದ ಮುರಿಗಿಸ್ವಾಮಿಗಳ ಈ ಆಭರಣವನ್ನು ಧರಿಸುತ್ತಿದ್ದ ಕಾರಣದಿಂದಲೇ ಅವರ ಹೆಸರು ಮುರಿಗೆ ಸ್ವಾಮಿಗಳು ಎಂದು ಹೆಚ್ಚು ಪ್ರಚಲಿತವಾದದ್ದು ಎಂಬುದು ಇಲ್ಲಿ ಉಲ್ಲೇಖಾರ್ಹ.

ಆದರೆ ಇವರು ಕರ್ನಾಟಕದ ಜಂಗಮರಂತೆ ಹೆಚ್ಚು ವಿದ್ಯಾವಂತರಲ್ಲ. ಉತ್ತರ ಮತ್ತು ದಕ್ಷಿಣ ಭಾರತದ ನಡುವಿನ ಸಾಕ್ಷರತೆಯ ವ್ಯತ್ಯಾಸ ಈ ಜನಾಂಗದಲ್ಲಿಯೂ ಢಾಳಾಗಿ ಕಾಣಿಸುತ್ತದೆ. ಇವರು ಸಂಪೂರ್ಣವಾಗಿ ತಮ್ಮನ್ನು ಶಿವಸ್ತುತಿ ಮತ್ತು ಸಂಚಾರದಲ್ಲಿ ತೊಡಗಿಸಿಕೊಂಡಿರುವ ಕಾರಣ ಇವರ ಕುರಿತು ಹೆಚ್ಚು ಮಾಹಿತಿ ಇಲ್ಲಿನ ಜನರಿಗೆ ಲಭ್ಯವಿಲ್ಲ. ಹಾಗಾಗಿ ಇವರ ವೀರಪರಂಪರೆಯ ವಿಷಯವು ಇತ್ತೀಚಿನವರೆಗೆ ಯಾವುದೇ ಗುರು ವಿರಕ್ತರಿಗೆ ಗೊತ್ತೇ ಇರಲಿಲ್ಲ! ಪಂಚಪೀಠಗಳಿಗೆ ಈ ವಿಷಯ ತಿಳಿದಿದ್ದರೂ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸಿ ನೋಡುವ ನವಲಿಂಗಾಯತರು ಅವರ ಎಲ್ಲಾ ಮಾತನ್ನು ಉಡಾಫೆಯಿಂದಲೇ ನೋಡುವ ಕಾರಣ ಈ ಮಾನವಿಕ ಅಂಶ ಅಷ್ಟೊಂದು ಪ್ರಚಲಿತವಾಗಿರಲಿಲ್ಲ. ಇನ್ನು ವಿರಕ್ತರಂತೂ ಕುಂಭಮೇಳದಲ್ಲಿ ಭಾಗವಹಿಸುವುದೇ ಮೌಢ್ಯವೆಂದು ಹೇಳುತ್ತಾ ತಮ್ಮ ಅಗಾಧ ಪರಂಪರೆಯನ್ನೇ ಕೆಂಪೀಕರಣದ ಖಾಲಿ ಕುಂಭಮೌಢ್ಯದಲ್ಲಿ ಮುಳುಗಿಸಿ ತೇಲಾಡುತ್ತಿದ್ದಾರೆ. ಹಾಗಾಗಿಯೇ ಈ ಬಾರಿಯ ಮೇಳದಲ್ಲಿ ವೀರಶೈವ ಕಾಶಿ ಜಗದ್ಗುರುಗಳು ಪ್ರಯಾಗರಾಜದಲ್ಲಿ ಉತ್ತರ ಭಾರತದ ಜಂಗಮರನ್ನು ಒಗ್ಗೂಡಿಸಿ ಮಂಡಲ ತಪೋನುಷ್ಠಾನನ್ನು ಹಮ್ಮಿಕೊಂಡಿರುವುದು ಎನಿಸುತ್ತದೆ. ಪ್ರಸ್ತುತ ಲಿಂಗಾಯತ ಧರ್ಮಭಂಜಕರೇ ವಿಜೃಂಭಿಸುತ್ತಿರುವ ಈ ವರ್ತಮಾನದಲ್ಲಿ ಕಾಶಿ ಜಗದ್ಗುರುಗಳ ಈ ಒಗ್ಗೂಡಿಸುವ ಪ್ರಯತ್ನ ಆಶಾದಾಯಕವಾಗಿದೆ ಎನ್ನಬಹುದು.

ಇನ್ನು ಕುಂಭಮೇಳಗಳ ಹಿಂದಿರುವ ಅಗಾಧ ಶಕ್ತಿಯಾಗಿ ಗೋರಖ್ ಪಂಥ ಬೆಳೆದಿದ್ದರೆ ಹಠಯೋಗದಿಂದ ವಜ್ರದೇಹಿಯಾಗಿದ್ದ ಗೋರಖನಾಥನ ಬೀಸುಗತ್ತಿಗೆ ಸಿಗದಂತೆ ಶಿವಯೋಗಸಾಧನೆ ತೋರಿ ಆಧ್ಯಾತ್ಮಿಕ ವಾದದಲ್ಲಿ ಅವನನ್ನು ಸೋಲಿಸಿ ಕೇವಲ ಹಠಯೋಗದಿಂದ ಎಲ್ಲವೂ ಸಾಧ್ಯವಿಲ್ಲ, ಗೋರಕ್ಷ! ಶಿವಯೋಗದ ಹಾದಿ ನಿನ್ನದಾಗಲಿ ಎಂದು ಆಶೀರ್ವದಿಸಿದ್ದ ಆಧ್ಯಾತ್ಮಿಕ ಮಹಾಗುರು ಅಲ್ಲಮನ ಶೂನ್ಯಪೀಠ ಇಂದು ಆಧ್ಯಾತ್ಮಿಕವಾಗಿ ನಿಶ್ಶೂನ್ಯವಾಗಿದೆ. ಗೋರಖ ಸಂತನೊಬ್ಬ ಭಾರತದ ಬಹುದೊಡ್ಡ ರಾಜ್ಯದ ಮುಖ್ಯಮಂತ್ರಿಯಾಗುವಷ್ಟು ಈ ಪಂಥ ಬೆಳೆದಿದ್ದರೆ, ಧೀಮಂತ ಅಲ್ಲಮನ ಶೂನ್ಯಪೀಠವು ನಾಸ್ತಿಕವಾದದ ಅಧ್ಯಾತ್ಮಹೀನರ ಸಂಗದಲ್ಲಿ ತೇಲಿ ಪೋಕ್ಸೋ ಕಾಯ್ದೆಯಡಿಯಲ್ಲಿ ಜೈಲು ಸೇರಿಯಾಗಿದೆ. ಹನ್ನೆರಡನೇ ಶತಮಾನದ ರಾಜಪ್ರಭುತ್ವದ ವಿಪ್ಲವದಲ್ಲಿ ಸಾಮಾಜಿಕ ಹೋರಾಟವನ್ನು ಬೆಂಬಲಿಸುವುದು ಬಸವಣ್ಣನಿಗೆ ಅನಿವಾರ್ಯವಾಗಿತ್ತು. ಹಾಗಾಗಿ ಆತ ಸಾಮಾಜಿಕ ಹೋರಾಟದಲ್ಲಿ ತೊಡಗಿಸಿಕೊಂಡ. ಆದರೆ ಚೆನ್ನಬಸವಣ್ಣ, ಅಲ್ಲಮ, ಸಿದ್ಧರಾಮ, ಮಹಾದೇವಿಯರು ಸಾಮಾಜಿಕ ಹೋರಾಟಕ್ಕೆ ಬೆಂಬಲ ತೋರಿದರೂ ಅಧ್ಯಾತ್ಮವನ್ನು ಬಿಡದ ಕಾರಣವಾಗಿಯೇ ವೀರಶೈವ ಪಂಥವು ಇಂದು ಉಳಿದಿರುವುದು! ಇಸ್ಲಾಂ ದಾಳಿಯ ಪರಿಣಾಮವಾಗಿ ಉಂಟಾದ ಧಾರ್ಮಿಕ ವಿಪ್ಲವವನ್ನು ಎದುರಿಸಲು ಉದ್ಭವವಾದ ಭಕ್ತಿಪಂಥದ ಯಾದಿಯನ್ನೇ ಬಸವಣ್ಣನು ಅನುಸರಿಸಿದ್ದನಷ್ಟೇ. ಜಾಗತಿಕವಾಗಿ ಸಹ ರಾಜಪ್ರಭುತ್ವ ಆಳ್ವಿಕೆಗಳಲ್ಲಿ ಧರ್ಮಕಾರಣ ಸಹಜವಾಗಿ ಮಹತ್ತರ ಪಾತ್ರ ವಹಿಸಿದ್ದಿತು. ಆದರೆ ಇಂದಿನ ಸಾಂವಿಧಾನಿಕ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸಾಮಾಜಿಕ ಹೋರಾಟಕ್ಕೆ ಸಾಕಷ್ಟು ಪ್ರಜಾಕಾರಣವಿದೆ. ಹಾಗಾಗಿಯೇ ಪ್ರಜಾಪ್ರಭುತ್ವ ರಾಷ್ಟ್ರವಾದ ಅಮೇರಿಕಾದ ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಖುದ್ದು ಕ್ರೈಸ್ತ ಪಾದ್ರಿಯಾಗಿದ್ದರೂ ಆತ ಧರ್ಮವನ್ನು ತನ್ನ ಸಾಮಾಜಿಕ ಹೋರಾಟದೊಂದಿಗೆ ಎಂದೂ ಬೆಸೆಯಲಿಲ್ಲ. ಪ್ರಜಾಪ್ರಭುತ್ವ ಭಾರತದ ಜನಕಾರಣ ಹೋರಾಟದಲ್ಲಿ ಸಾಧುಸಂತರು ಭಾಗವಹಿಸುವಷ್ಟು ಅನಿವಾರ್ಯತೆ ಅಷ್ಟಾಗಿ ಇಲ್ಲವೇ ಇಲ್ಲ. ಆದರೆ ಮತಕ್ಕಾಗಿ (ಓಟಿಗಾಗಿ) ಮತವನ್ನು (ಧರ್ಮವನ್ನು) ಓಲೈಸುವ ರಾಜಕಾರಣವು ಅಂತಹ ಕೃತಕ ಅನಿವಾರ್ಯತೆಯನ್ನು ಸೃಷ್ಟಿಸಿದೆಯಷ್ಟೇ. ಈ ಕೃತಕ ಅನಿವಾರ್ಯತೆಗೆ ತಕ್ಕಂತೆ ಸಂಶೋಧನೆಗಳು, ಸಿದ್ಧಾಂತಗಳು, ಬುದ್ಧಿಜೀವಿಗಳು, ರಾಜಕೀಯ ಪಕ್ಷಗಳು ಸೃಷ್ಟಿಯಾಗಿ ಅಸಲು ಅಧ್ಯಾತ್ಮ ಕಣ್ಮರೆಯಾಗಿದೆ. ಈ ಅನಿವಾರ್ಯತೆಗೆ ಪ್ರಮುಖ ಇಂಧನವಾಗಿ ವಿದ್ಯಾದಾನವು ವಿದ್ಯಾದನವಾಗಿ ಧನಕ್ಕೆ ಬಿಕರಿಯಾಗಿದೆ. ಹೀಗಿದ್ದೂ ಕರ್ನಾಟಕದ ನಾಸ್ತಿಕ ವೈಚಾರಿಕ(?) ಕಮ್ಯೂನಿಸ್ಟರು, ಬುದ್ಧಿಜೀವಿಗಳು ತಮ್ಮ ನಂಬಿಕೆಗೆ ವ್ಯತಿರಿಕ್ತವಾಗಿ ಅಕ್ಕ, ಅಲ್ಲಮ, ಚೆನ್ನಬಸವಣ್ಣ, ಬಸವಣ್ಣನೆಂಬ ಧಾರ್ಮಿಕ ಪುರುಷರಿಗೆ ಏಕೆ ಜೋತು ಬಿದ್ದಿರುವರು ಎಂಬುದು ಹತ್ತು ಹಲವಾರು ತುಲನಾತ್ಮಕ ಅಧ್ಯಯನಗಳನ್ನು ಬಯಸುತ್ತದೆ. ವಿಶ್ವವಿದ್ಯಾಲಯಗಳು ಈ ನಿಟ್ಟಿನಲ್ಲಿ ಯೋಚಿಸಿ ಆದಾಯಮೂಲವನ್ನು ಕಂಡುಕೊಳ್ಳಬಹುದು ಎಂಬುದು ಒಂದು ಉಚಿತ ಸಲಹೆ!

ಈ ಪರಾವಲಂಬಿ ಪರತಂತ್ರ ವಿಚಾರವಾದಿಗಳು ಲಿಂಗಾಯತಕ್ಕೆ ಅಂಟಿಕೊಂಡ ಕಾರಣವೇ ಲಿಂಗಾಯತ ವಿರಕ್ತ ಸ್ವಾಮಿಗಳು ಇತ್ತ ನಾಸ್ತಿಕರೂ ಆಗದೇ ರಾಜಕಾರಣಿಗಳೂ ಆಗದೇ ತ್ರಿಶಂಕು ಸ್ಥಿತಿಯಲ್ಲಿದ್ದರೂ ಖಾವಿಯೆಂಬ ಕೇಸರಿವಸ್ತ್ರದಲ್ಲೇ ಆತಂತ್ರರಾಗಿ ಕೆಂಪು ಕೆಂಪಾಗಿರುವರು. ಶಿವನ ಗಣ ಎನಿಸಿದ ಬಸವಣ್ಣನಿಗೆ ಜೋತುಬಿದ್ದಿದ್ದರೂ ಗಣಗಳ ಅಧಿಪತಿ ಗಣಪತಿಯನ್ನು ಪೂಜಿಸಬೇಡಿ ಎಂಬ ಆತಂತ್ರವನ್ನು ಬೋಧಿಸುವರು. ಇಂತಹ ವೀರಶೈವ ವಿರಕ್ತರ ಅಧ್ಯಾತ್ಮಶೂನ್ಯತೆಯ ಕಾರಣವೇ ಒಂದೊಮ್ಮೆ ಅಧ್ಯಾತ್ಮಕ್ಕೆ ಆದ್ಯ ಗೌರವಪ್ರಾಯವಾಗಿದ್ದ ಕರ್ನಾಟಕದ ವೀರಶೈವ ಲಿಂಗಾಯತರು ಇಂದಿನ ಕಾಲಮಾನದಲ್ಲಿ ಬ್ರಹ್ಮಕುಮಾರಿ, ಸತ್ಸಂಗ, ಕಲ್ಕಿ, ಈಶ, ಸಿದ್ಧಿ ಸಮಾಧಿ ಯೋಗ, ಅವಧೂತ ದತ್ತ ಪೀಠ, ನಿತ್ಯಾನಂದ ಧ್ಯಾನಪೀಠ ಮುಂತಾದವುಗಳ ಕಡೆ ಸತ್ಯದ ಅಧ್ಯಾತ್ಮವನ್ನು ಅರಸಿ ನಡೆದಿದ್ದಾರೆ. ಖುದ್ದು ಅಧ್ಯಾತ್ಮವನ್ನು ಅರಿಯದೆ ಕರ್ತವ್ಯವಿಮುಖರಾದ ವೀರಶೈವ ಲಿಂಗಾಯತ ಸ್ವಾಮಿಗಳು ಜನರ ಆಧ್ಯಾತ್ಮಿಕ ಹಸಿವನ್ನು ಹೇಗೆ ತಾನೇ ಇಂಗಿಸಿಯಾರು? ಸೋಹಂ ಎನ್ನದೆ ದಾಸೋಹಂ ಎನ್ನಿಸಯ್ಯ ಎಂಬ ಸಾಂದರ್ಭಿಕ ಮಾತನ್ನೇ ತಿದ್ದಿ ಬೌದ್ಧಿಕ ದಾಸೋಹಕ್ಕೆ ತಿಲಾಂಜಲಿಯಿಟ್ಟು ದೈಹಿಕ ದಾಸೋಹಕ್ಕೆ ಶರಣಾಗಿರುವಾಗ ಇನ್ನೆಲ್ಲಿಯ ಆಧ್ಯಾತ್ಮ?! ನೆಟ್ಟಗೆ ಒಂದು ಸರ್ವಾಂಗಾಸನ ಹಾಕಲಾಗದವರು ಕರಣಹಸಿಗೆಯನ್ನು ಏನೆಂದು ವಿವರಿಸಿಯಾರು? ಒಂದು ಬದ್ಧ ಪದ್ಮಾಸನ ಹಾಕಲಾಗದ ಇವರು ಭಕ್ತರಿಗೆ ಅಲ್ಲಮನ ಕುಂಡಲಿನಿ ಚಕ್ರವನ್ನು ಜಾಗೃತಿಗೊಳಿಸುವ ಬಗೆಯನ್ನು ಹೇಗೆಂದು ಹೇಳಿಯಾರು? ಓಂ ನಮಃ ಶಿವಾಯ ಎಂಬ ಷಡಕ್ಷರಿ ಮಂತ್ರವನ್ನೇ ಓಂ ಶ್ರೀಗುರುಬಸವಲಿಂಗಾಯ ನಮಃ ಎಂಬ ಹನ್ನೆರಡಕ್ಷರಿ ಮಂತ್ರವನ್ನು ಮಾಡಿರುವ ಇವರು ಮಂತ್ರಗೋಪ್ಯವನ್ನು ಏನೆಂದು ಬೋಧಿಸಿಯಾರು? ಅಂದ ಹಾಗೆ ಸೋಹಂ ದಾಸೋಹಂ ಎಂಬ ಸಾಂದರ್ಭಿಕ ಸಾಮಾಜಿಕ ವಚನಕ್ಕೂ ಆಧ್ಯಾತ್ಮಿಕ ಸೋಹಂ ಅರ್ಥಕ್ಕೂ ಇರುವ ವ್ಯತ್ಯಾಸವನ್ನೇ ಅರಿಯದ ಇವರಿಗೆ ಅಲ್ಲಮನ ಕೆಳಗಿನ ವಚನವೇನು ಅರ್ಥವಾದೀತು!?

ಗಗನ ಮಂಡಳದ ಸೂಕ್ಷ್ಮನಾಳದಲ್ಲಿ
'ಸೋಹಂ ಸೋಹಂ' ಎನುತ್ತಿರ್ದತ್ತದೊಂದು ಬಿಂದು,
ಅಮೃತದ ವಾರಿಧಿಯ ದಣಿಯುಂಡ ತೃಪ್ತಿಯಿಂದ.
ಗುಹೇಶ್ವರಾ ನಿಂದ(ನಿಮ್ಮ?)ಲ್ಲಿಯೆ ಎನಗೆ ನಿವಾಸವಾಯಿತ್ತು.

ಹಾಗಾಗಿಯೇ ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ಸಾಮಾಜಿಕ ಮೇಲ್ಪದರದ ವಚನಗಳಿಗೆ ಆತುಕೊಂಡು ಮೇಲ್ಪದರದ ವಿಜ್ಞಾನಿ(?) ಕಮ್ಯುನಿಸ್ಟರನ್ನು ಅಪ್ಪಿಕೊಂಡು ನಾವು ಹಿಂದೂಗಳಲ್ಲ, ದೇವರನ್ನು ನಂಬುವುದಿಲ್ಲ, ಮೂರ್ತಿಪೂಜೆ ಮಾಡುವುದಿಲ್ಲ, ಮಂದಿರಗಳು ನಮ್ಮ ಸಂಸ್ಕೃತಿಯಲ್ಲ, ತೀರ್ಥಯಾತ್ರೆ ಮಾಡುವುದಿಲ್ಲ ಇತ್ಯಾದಿಯಾಗಿ ರಂಜನೀಯ ಭಾಷಣಗಳನ್ನು ಮಾಡುತ್ತಾ ಜನರಿಗೆ ಹಾಸ್ಯರಸ ಹರಿಸುತ್ತ ಮೇಲ್ಪದರದ ಪೀಠಾಧಿಪತಿಗಳಾಗಿದ್ದಾರೆ. ಆಧ್ಯಾತ್ಮ ಉಣಬಡಿಸದಿದ್ದರೂ ಹಾಸ್ಯಸಂಜೆ ಏರ್ಪಡಿಸಿ ತಾವೂ ನಗೆಗಡಲಲ್ಲಿ ತೇಲಾಡುತ್ತಾರೆ. ಅದೇ ರೀತಿ ನಾಡಿನ ಮೇಲ್ಪದರದ ಮಲಾಯಿ ಮಕ್ಕಲ್ ಸಾಕ್ಷಿಪ್ರಜ್ಞೆಗಳು ಹಿಹೀ ಎನ್ನುತ ಈ ಖಾವಿವೇಷಧಾರಿ ಜಾತಿ ಡಂಭಕ ಪ್ರಜ್ಞಾವಂತ ಸ್ವಾಮಿಗಳಿಗೆ ಬಹುಪರಾಕ್ ಬಹುಪರಾಕ್ ಎನ್ನುತ್ತಿದ್ದಾರೆ. ಒಂದೆಡೆ ಎಲ್ಲಾ ಐತಿಹಾಸಿಕ ಪುರಾವೆಗಳು ವೀರಶೈವ ಲಿಂಗಾಯತವು ಹಿಂದೂ ಪ್ರಬೇಧದ ಧರ್ಮವೆಂದು ಸಾರಿ ಸಾರಿ ಹೇಳುತ್ತಿದ್ದರೆ, ಇನ್ನೊಂದೆಡೆ ಯಾವುದೇ ಹೋಲಿಕೆಯಿರದಿದ್ದರೂ ಕೇವಲ ಭಾವಾವೇಶದಿಂದ ಬಸವಣ್ಣನನ್ನು ಹಾಲಡಮೋರ್ ನರಮೇಧಕ್ಕೆ ಕಾರಣರಾದ ರಷ್ಯನ್ ಲೆನಿನ್ ಸ್ಟಾಲಿನ್ನರಿಗೆ ಹೋಲಿಸುತ್ತಾರೆ. ಭಾರತಕ್ಕೆ ಹೊಂದದ ಕಾರ್ಲ್ ಮಾರ್ಕ್ಸ್ ಸಿದ್ಧಾಂತಕ್ಕೆ ಶರಣ ಚಳವಳಿಯನ್ನು ಜೋಡಿಸುತ್ತಾರೆ! ಹೀಗೆಯೇ ಮುಂದುವರಿಯಲು ಬಿಟ್ಟರೆ ಮುಂದೆ:

ಬಡಹಾರುವ 'ನೇಸು ಭಕ್ತ'ನಾದಡೆಯೂ ನೇಣಿನ ಹಂಗ ಬಿಡ!
ಮಾಲೆಗಾರ'ನೇಸು ಭಕ್ತ'ನಾದಡೆಯೂ ಬಾವಿಯ ಬೊಮ್ಮನ ಹಂಗ ಬಿಡ!
ಬಣಜಿಗ 'ನೇಸು ಭಕ್ತ'ನಾದಡೆಯೂ ಒಟ್ಟಿಲ ಬೆನಕನ ಹಂಗ ಬಿಡ!
ಕಂಚುಗಾರ'ನೇಸು ಭಕ್ತ'ನಾದಡೆಯೂ ಕಾಳಿಕಾದೇವಿಯ ಹಂಗ ಬಿಡ!
ನಾನಾ ಹಂಗಿನವನಲ್ಲ, ನಿಮ್ಮ ಶರಣರ ಹಂಗಿನವನಯ್ಯಾ ಕೂಡಲಸಂಗಮದೇವಾ.

ಎಂಬ ವಚನವನ್ನು ಹಿಡಿದು, ಬಸವಣ್ಣನವರು ಜನರು 'ಏಸು ಭಕ್ತ'ರಾದರೂ ಮೂಲಾಚರಣೆಗಳನ್ನು ಬಿಡರು ಎಂದು ಅಂದೇ ತಮ್ಮ ದಿವ್ಯದೃಷ್ಟಿಯಿಂದ ಕಂಡುಕೊಂಡು ಈ ವಚನದ ಮೂಲಕ ವಾಚ್ಯವಾಗಿ ತಿಳಿಹೇಳಿದ್ದಾರೆ. ಈ ವಚನದಲ್ಲಿನ 'ಏಸು' ಪದವನ್ನು ಎಷ್ಟು ಎಂಬ ತಪ್ಪು ಗ್ರಹಿಕೆಯಿಂದ ನೋಡಲಾಗಿದೆ. ಅಸಲಿಗೆ ಇದನ್ನು ಕನ್ನಡ ವ್ಯಾಕರಣದ ಸಂಧಿ ಸಮಾಸದನ್ವಯ (ಅವನು+ಏಸು ಭಕ್ತ = ಅವನೇಸು ಭಕ್ತ) ಎಂದು ನೋಡಬೇಕು. ತನ್ನ ವಚನದಲ್ಲಿ ನಾನು ಚೆನ್ನಯ್ಯನ ಮಗ ಎಂದು ಬಸವಣ್ಣನು ಹೇಗೆ ತಾನು ದಲಿತನೆಂದು, ಆನು ಹಾರುವನೆಂದರೆ ನಾನು ಬ್ರಾಹ್ಮಣನೆಂದು ಹೇಗೆ ವಾಚ್ಯವಾಗಿ ಹೇಳಿಕೊಂಡಿದ್ದಾನೋ, ಹಾಗೆಯೇ ಇಲ್ಲಿ ವಾಚ್ಯಾರ್ಥದಲ್ಲಿ ಏಸು ಪದವನ್ನು ಗ್ರಹಿಸಬೇಕು.

ಇಂದಿನ ದಲಿತ ಕ್ರಿಶ್ಚಿಯನ್, ನಾಡಾರ್ ಕ್ರಿಶ್ಚಿಯನ್, ಮುಕ್ಕುವರ್ ಕ್ರಿಶ್ಚಿಯನ್, ಕೊಂಕಣಿ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್ ಎಂಬ ಈಗಿರುವ ಚರ್ಚುಗಳೇ ಬಸವಣ್ಣನವರ ದೂರಾಲೋಚನೆಗೆ ಪುರಾವೆ! ಈ ದೂರಾಲೋಚನೆಗೆ ತಕ್ಕಂತೆ ಮುಂದೆ ಸಕಲ ಜಾತಿಯಾಧಾರಿತ ಚರ್ಚುಗಳು ಅಸ್ತಿತ್ವಕ್ಕೆ ಬರಲಿವೆ. ಅವು ಅಸ್ತಿತ್ವಕ್ಕೆ ಬಂದರೂ ಜನರು ನೆಲಮೂಲ ಜಾತಿ ಸಂಸ್ಕೃತಿಯನ್ನು ಬಿಡದ ಕಾರಣ ಅವರನ್ನು ಪ್ರತ್ಯೇಕವಾಗಿ ಗುರುತಿಸುತ್ತ ಒಳಗೊಂಡು ಸಮಸಮಾಜ ನಿರ್ಮಿಸಲು ಇಂದಿನಿಂದಲೇ ದತ್ತಿನಿಧಿ, ಆಪದ್ಧನ ಸೃಷ್ಟಿಸಿ ಸರ್ಕಾರಿ ಸ್ಥಳವನ್ನು ಮೀಸಲಿರಿಸಬೇಕು. ವಿಶ್ವವಿದ್ಯಾಲಯಗಳಲ್ಲಿ ವಿಶೇಷ ಪೀಠಗಳನ್ನು ಸೃಷ್ಟಿಸಬೇಕು. ಇದೆಲ್ಲ ಕೈಗೂಡಲು ನಮ್ಮ ಸಮಸಮಾಜ ನಾಯಕರ ಕೈ ಬಲಪಡಿಸಬೇಕು. ಇದಕ್ಕೇನಾದರೂ ಕ್ಯಾಥೋ ಲಿಕ್ಕರು ಕೈಂಞ ಕುಂಞ ಎಂದರೆ ಅವರನ್ನು ಲಿಂಗಾಯತದಿಂದ ವೀರಶೈವವನ್ನು ಕಿತ್ತೊಗೆದಂತೆ ಕ್ರಿಸ್ತಾಯತದಿಂದ ಕಿತ್ತೊಗೆದು ಕರ್ನಾಟಕ ಕ್ರಿಸ್ತಾಯತ ಸ್ವತಂತ್ರ ಧರ್ಮ ಸ್ಥಾಪನೆ ಮಾಡಬೇಕು ಎಂಬ ಖ್ಯಾತ ಉಗ್ರಗಣ್ಯ ಸಂಶೋಧಕರ, ಅಸಂಸ್ಕೃತಿ ಚಿಂತಕರ ಸಂಶೋಧನೆಗಳಾಗಿ ಪಠ್ಯವಾಗಿ ಮುಂದಿನ ಪೀಳಿಗೆಯ ಸಂಶೋಧನಾ ಮಾದರಿಗಳಾಗುವ ಸಾಧ್ಯತೆ ಅತ್ಯಂತ ಗಾಢವಾಗಿದೆ.

ಎತ್ತಣ ಮಾಮರ ಎತ್ತಣ ಕೋಗಿಲೆ!

ಇಂತಹ ಸಂಕಥಗಳು ಸೃಷ್ಟಿಯಾಗುವ ಮುನ್ನ ಇತಿಹಾಸದುದ್ದಕ್ಕೂ ಢಾಳಾಗಿರುವ ವೀರಶೈವದ ಸತ್ಯದ ಹೆಜ್ಜೆಯ ಗುರುತುಗಳನ್ನು ನಿರೂಪಿಸಿ ಇತಿಹಾಸವನ್ನು ಮರುಸ್ಥಾಪಿಸುವ ತುರ್ತು ನಮ್ಮ ಮುಂದಿದೆ. ಇಲ್ಲದಿದ್ದರೆ ಮುಂದಿನ ಪೀಳಿಗೆ ನಮ್ಮನ್ನು ಯಾವತ್ತೂ ಕ್ಷಮಿಸದು. ಒಂದು ಮಹಾಕುಂಭದ್ರೋಣ ಮಳೆ ಬಂದು ಈ ಎಲ್ಲಾ ಸುಳ್ಳುಗಳನ್ನು ತೊಡೆಯುವ ಕಾಲ ಎಂದು ಬರುವುದೋ ಆ ಶಿವಸ್ವರೂಪಿ ಜಂಗಮರಾದ ಅಲ್ಲಮ, ಚೆನ್ನಬಸವಣ್ಣ, ಬಸವ, ಮಹಾದೇವಿಯರೇ ಬಲ್ಲರು!

(ಲೇಖಕರು ಶಿಕಾಗೊ ವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 17

ಸಮಾಚಾರ ಸಣ್ಣದಲ್ಲ

ವಕ್ಫ್: ಸ್ಪೀಕರ್‌ಗೆ ಜೆಪಿಸಿ ವರದಿ ಸಲ್ಲಿಕೆ

ದೆಹಲಿ: ವಕ್ಫ್ (ತಿದ್ದುಪಡಿ) ವಿಧೇಯಕದ ಪರಾಮರ್ಶೆ ನಡೆಸಿದ ಬಳಿಕ ಸಂಸದೀಯ ಜಂಟಿ ಸಮಿತಿ (ಜೆಪಿಸಿ) 14 ತಿದ್ದುಪಡಿ ಶಿಫಾರಸುಗಳನ್ನು ಒಳಗೊಂಡ ಕರಡು ವರದಿ ಮತ್ತು ತಿದ್ದುಪಡಿ

ವಿಧೇಯಕದ ಆವೃತ್ತಿಯನ್ನು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಗುರುವಾರ ಸಲ್ಲಿಸಿದೆ. ಜೆಪಿಸಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರು ಓಂ ಬಿರ್ಲಾ ಅವರನ್ನು ಸಂಸತ್ ಭವನದ ಸ್ಪೀಕರ್ ಕಚೇರಿಯಲ್ಲಿ ಭೇಟಿಯಾಗಿ ಕರಡು ಪ್ರತಿ ಹಸ್ತಾಂತರಿಸಿದರು. ಇದಕ್ಕೂ ಮುನ್ನ ಎನ್‌ಡಿಎ ಸಂಸದರು ಸೂಚಿಸಿದ ತಿದ್ದುಪಡಿಗಳನ್ನು ಒಳಗೊಂಡ ಜೆಪಿಸಿ ವರದಿಯನ್ನು ಜೆಪಿಸಿ ಬುಧವಾರ ಬಹುಮತದಿಂದ ಅಂಗೀಕರಿಸಿದೆ. ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು 2024ರ ಆಗಸ್ಟ್‌ನಲ್ಲಿ ಲೋಕಸಭೆಯಲ್ಲಿ ವಕ್ಫ್(ತಿದ್ದುಪಡಿ) ವಿಧೇಯಕ-2024 ಮಂಡಿಸಿದ್ದರು. ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಆ.8ರಂದು ಜಂಟಿ ಸಂಸದೀಯ ಸಮಿತಿ(ಜೆಪಿಸಿ) ಪರಿಶೀಲನೆಗೆ ಒಪ್ಪಿಸಲಾಗಿತ್ತು.

ಕುಂಭಮೇಳದಲ್ಲಿ ಬೆಂಕಿ: 15 ಟೆಂಟ್ ಭಸ್ಮ

ಪ್ರಯಾಗ್‌ರಾಜ್: ಮಹಾ ಕುಂಭ ಮೇಳದ ಸೆಕ್ಟರ್ 22ರ ಹೊರವಲಯದಲ್ಲಿನ ಚಮನ್‌ಗಂಜ್ ಚೌಕಿಯಲ್ಲಿ ಗುರುವಾರ ಬೆಂಕಿ ಅವಘಡವಾಗಿದ್ದು, ಶಿಬಿರದಲ್ಲಿನ 15 ಟೆಂಟ್‌ಗಳು ಉರಿದು ಭಸ್ಮವಾಗಿವೆ. ಯಾವುದೇ ಪ್ರಾಣ ಹಾನಿ ಆಗಿಲ್ಲ. ಬೆಂಕಿ ಹೊತ್ತಿರುವ ಸುದ್ದಿ ತಿಳಿದ ಬಳಿಕ ಅಗ್ನಿಶಾಮಕ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ತೆರಳಿ ಬೆಂಕಿಯನ್ನು ನಂದಿಸಿದ್ದಾರೆ. ಈ ಟೆಂಟ್‌ಗಳು ಶಿಬಿರದ ಭಾಗವಾಗಿರಲಿಲ್ಲ. ಅಕ್ರಮವಾಗಿ ಸ್ಥಾಪಿಸಲಾಗಿತ್ತು ಎಂದು ಜಿಲ್ಲಾಡಳಿತದ ಅಧಿಕಾರಿಗಳು ತಿಳಿಸಿದ್ದಾರೆ.

ಸಿಎಂ ಮಾನ್ ದೆಹಲಿ ಮನೆಯಲ್ಲಿ ಶೋಧ

ದೆಹಲಿ: ಪಂಜಾಬ್ ಮುಖ್ಯಮಂತ್ರಿ ಭಗವಾನ್ ಮಾನ್ ಅವರ ದೆಹಲಿಯಲ್ಲಿನ ಕಪುರ್ತಲಾ ಹೌಸ್ ನಿವಾಸದ ಮೇಲೆ ಗುರುವಾರ ದಿಢೀರ್ ದಾಳಿ ನಡೆಸಿದ ಚುನಾವಣಾ ಆಯೋಗದ ತಂಡ ಶೋಧ ನಡೆಸಿದೆ ಎಂದು ಆಮ್ ಆದ್ಮಿ ಪಕ್ಷ ಆರೋಪಿಸಿದೆ. 'ಪಂಜಾಬ್ ಸರ್ಕಾರ' ಸ್ಟಿಕ್ಕರ್ ಹೊಂದಿದ್ದ ಇನ್ನೋವಾ ಕಾರನ್ನು ಬುಧವಾರ ದೆಹಲಿ ಪೊಲೀಸರು ವಶಪಡಿಸಿಕೊಂಡಿದ್ದರು. ಕಾರಿನಲ್ಲಿ ನಗದು ಹಣ, ಅಕ್ರಮ ಮದ್ಯದ ಬಾಟಲಿಗಳು ಮತ್ತು ಆಮ್ ಆದ್ಮಿ ಪಕ್ಷದ (ಎಎಪಿ) ಕರಪತ್ರಗಳು ಪತ್ತೆಯಾಗಿದ್ದವು. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿದ್ದರು. ಅದರ ಪರಿಣಾಮವಾಗಿ ಮಾನ್ ಅವರ ಮನೆಯಲ್ಲಿ ಶೋಧ ನಡೆಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಕಾಂಗೊ ಉಗ್ರರ ದಾಳಿ 100ಕ್ಕೂ ಹೆಚ್ಚು ಬಲಿ

ಬ್ರೆಜ್ವಿಲ್ಲೆ: ಡೆಮೊಕ್ರೆಟಿಕ್ ರಿಪಬ್ಲಿಕ್ ಕಾಂಗೊದಲ್ಲಿ ಆಂತರಿಕ ಸಂಘರ್ಷ ತಾರಕಕ್ಕೇರಿದೆ. ಬಂಡುಕೋರರ ದಾಳಿಗೆ ಸಿಲುಕಿ 100ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಸಾವಿರಾರು ಜನರು ಗಾಯಗೊಂಡಿದ್ದಾರೆ. ರುವಾಂಡಾ ಬೆಂಬಲಿತ ಎಂ-23 ಬಂಡುಕೋರರು ನಗರಗಳಲ್ಲಿ ಲೂಟಿ ನಡೆಸಿದ್ದಾರೆ. ರುವಾಂಡಾ, ಫ್ರಾನ್ಸ್, ಬೆಲ್ಜಿಯಂ, ಕೀನ್ಯಾ, ಉಗಾಂಡಾ ಸೇರಿ ಹಲವು ದೇಶಗಳ ರಾಯಭಾರ ಕಚೇರಿಗಳನ್ನು ದೋಚಿ, ಬೆಂಕಿ ಹಚ್ಚಿದ್ದಾರೆ. ಬಂಡುಕೋರರನ್ನು ಚದುರಿಸಲು ಪೊಲೀಸರು ಗುಂಡು ಹಾರಿಸಿ, ಅಶ್ರುವಾಯು ಪ್ರಯೋಗಿಸಿದ್ದರೂ ಲೂಟಿ ನಿಯಂತ್ರಣಕ್ಕೆ ಬಂದಿಲ್ಲ. ಇನ್ನೊಂದೆಡೆ 20 ಲಕ್ಷ ಜನಸಂಖ್ಯೆಯ ಗೋಮಾ ನಗರವನ್ನು ಬಂಡುಕೋರರು ವಶಕ್ಕೆ ಪಡೆದಿದ್ದಾರೆ. ಈ ಭಾಗದಲ್ಲಿ 1,200ಕ್ಕೂ ಹೆಚ್ಚು ಕಾಂಗೋಲೀಸ್ ಸೈನಿಕರು ಬಂಡುಕೋರರಿಗೆ ಶರಣಾಗಿದ್ದಾರೆ.

ಸಿರಿಯ ಹಂಗಾಮಿ ಅಧ್ಯಕ್ಷ ಅಹ್ಮದ್ ಶರಾ

ಡಾಮಸ್ಕಸ್: ಸಿರಿಯಾದಲ್ಲಿ ಅಸಾದ್ ಕುಟುಂಬದವರ 50 ವರ್ಷಗಳ ಆಳ್ವಿಕೆ ಕೊನೆಗೊಂಡ ಬಳಿಕ ದೇಶದ ಹಂಗಾಮಿ ಅಧ್ಯಕ್ಷರಾಗಿ ಅಹ್ಮದ್ ಅಲ್



-ಶರಾ ಅವರನ್ನು ನೇಮಿಸಲಾಗಿದೆ. ಜತೆಗೆ ಶಾಸಕಾಂಗ ರಚನೆ ಹೊಣೆಯನ್ನು ಅವರಿಗೆ ವಹಿಸಲಾಗಿದೆ. ಇಸ್ಲಾಮಿಕ್ ಬಂಡುಕೋರ ಮೈತ್ರಿಕೂಟದ ಹಯಾತ್ ತಹ್ರೀರ್ ಅಲ್-ಶಾಮ್ ನೇತೃತ್ವದ ಬಂಡುಕೋರರು ಡಿ.8ರಂದು ಬಶರ್ ಅಲ್-ಅಸ್ಸಾದ್ ಅವರನ್ನು ಅಧಿಕಾರದಿಂದ ಹೊರಹಾಕಿದ್ದರು. ನಂತರ ಅಹ್ಮದ್ ಅಲ್-ಶರಾರನ್ನು ದೇಶದ ಅಧ್ಯಕ್ಷರಾಗಿ ಮಾಡಲು ನಿರ್ಧರಿಸಲಾಗಿತ್ತು. ಅಹ್ಮದ್ ಅಲ್-ಶರಾ ಸದ್ಯ ದೇಶದ ಹಂಗಾಮಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾರೆ ಮತ್ತು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಸಿರಿಯಾವನ್ನು ಪ್ರತಿನಿಧಿಸುತ್ತಾರೆ ಎಂದು ಸೇನಾಧಿಕಾರಿ ಹಸನ್ ಅಬ್ದೆಲ್ ಘನಿ ಬುಧವಾರ ಘೋಷಿಸಿದ್ದಾರೆ.

ತೈವಾನ್‌ನಲ್ಲಿ ಭೂಕಂಪ

ಚಿಯಾಯಿ ಕೌಂಟಿ: ತೈವಾನ್ ದೇಶದ ಚಿಯಾಯಿ ಕೌಂಟಿಯ ದಾಪು ಟೌನ್‌ಶಿಪ್‌ನಲ್ಲಿ ಬೆಳಗ್ಗೆ 10.11ರ ವೇಳೆ ಭೂಕಂಪ ಸಂಭವಿಸಿದೆ. 10 ಕಿ.ಮೀ. ಆಳದಲ್ಲಿ ಕಂಪನದ ಕೇಂದ್ರ ಬಿಂದುವಿತ್ತು ಎಂದು ತಿಳಿದುಬಂದಿದೆ. ಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 5.6ರಷ್ಟು ದಾಖಲಾಗಿದೆ. ಬೃಹತ್ ಕಟ್ಟಡಗಳು ಅಲುಗಾಡಿದ್ದು, ಜನರು ಭಯದಿಂದ ಹೊರಗೋಡಿಬಂದಿದ್ದಾರೆ. ಯಾವುದೇ ಜೀವ ಹಾನಿ ವರದಿಯಾಗಿಲ್ಲ.

ಸಚಿವ ಅಶ್ವಿನಿ ವೈಷ್ಣವ್ ಮಹತ್ವದ ಘೋಷಣೆ | ಅಮೆರಿಕ, ಚೀನಾ ವಿರುದ್ಧ ಭಾರತ ಸ್ಪರ್ಧೆ

ಭಾರತದಿಂದ ಶೀಘ್ರ ಎಐ ಮಾಡೆಲ್

ದೆಹಲಿ: ವಿಶ್ವದಲ್ಲೇ ಅತ್ಯಧಿಕ ಜನಸಂಖ್ಯೆಯ, ಅತಿದೊಡ್ಡ ಪ್ರಜಾಪ್ರಭುತ್ವದ ರಾಷ್ಟ್ರ ಎನಿಸಿಕೊಂಡಿರುವ ಭಾರತ, ತಡವಾಗಿಯಾದರೂ 'ಕೃತಕ ಬುದ್ಧಿಮತ್ತೆ' (ಎಐ) ಕ್ಷೇತ್ರದಲ್ಲಿ ತನ್ನದೇ ಆದ ಪ್ರಬಲ ತಂತ್ರಾಂಶವನ್ನು ಹೊಂದಲಿದೆ. ಅಮೆರಿಕ, ಬ್ರಿಟನ್ ಮತ್ತು ಚೀನಾ ದೇಶಗಳು ಪ್ರಾಬಲ್ಯ ಮೆರೆದಿರುವ 'ಎಐ ಮಾಡೆಲ್' ವಲಯದಲ್ಲಿ ಸದ್ಯದಲ್ಲೇ 'ಇಂಡಿಯ ಎಐ ಮಿಷನ್' ಮೂಲಕ ಸ್ಪರ್ಧೆ ಒಡ್ಡಲು ಸಿದ್ಧವಾಗಿದೆ.

ಕೃತಕ ಬುದ್ಧಿಮತ್ತೆ ಆಧರಿಸಿದ ಹೊಸ ಬಗೆಯ ತಂತ್ರಾಂಶ ಮಾದರಿಯನ್ನು ಭಾರತವೂ ತಯಾರಿಸಿ ಮಾರುಕಟ್ಟೆಗೆ ಪರಿಚಯಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಎನ್‌ಡಿಎ ಮೈತ್ರಿಕೂಟ ಸರಕಾರ ಗುರುವಾರ ಘೋಷಿಸಿದೆ.

ಅಮೆರಿಕದ 'ಓಪನ್ ಎಐ' ಕಂಪನಿಯ 'ಚಾಟ್ ಜಿಪಿಟಿ' ಹಾಗೂ ಚೀನಾದ ಸ್ಟಾರ್ಟ್‌ಅಪ್ ಇತ್ತೀಚೆಗೆ ಅಭಿವೃದ್ಧಿಪಡಿಸಿದ 'ಡೀಪ್‌ಸೀಕ್ ಆರ್1 ಮತ್ತು ವಿ3' ಎಐ ತಂತ್ರಾಂಶಗಳಿಗೆ ಸ್ಪರ್ಧೆ ನೀಡುವಂತಹ ಪ್ರಬಲ ತಂತ್ರಾಂಶವನ್ನು ಭಾರತವೂ ಅಭಿವೃದ್ಧಿಪಡಿಸುತ್ತಿದ್ದು ಸದ್ಯದಲ್ಲೇ ಮಾರುಕಟ್ಟೆಗೆ ಪರಿಚಯಿಸಲಿದೆ. ಭಾರತ ಸ್ವಂತದ್ದೇ ಆದ ಜನರೇಟಿವ್ ಎಐ ಮಾಡೆಲ್ ಹೊಂದಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಘೋಷಿಸಿದ್ದಾರೆ. ಒಡಿಶಾ ರಾಜ್ಯದಲ್ಲಿನ ಕಾರ್ಯಕ್ರಮವೊಂದರಲ್ಲಿ ಗುರುವಾರ ಕೃತಕ ಬುದ್ಧಿಮತ್ತೆ ವಿಚಾರವಾಗಿ ಮಾತನಾಡಿದ ಸಚಿವರು, ಭಾರತ ತನ್ನದೇ ಆದ 'ಎಐ ಮಾದರಿ'ಯನ್ನು ಈ ವರ್ಷದಲ್ಲೇ ಬಿಡುಗಡೆ ಮಾಡಲಿದೆ ಎಂದರು.

ಪರಿಸರ ವ್ಯವಸ್ಥೆಯ ರಚನೆ, ಸಾಮಾನ್ಯ ಕಂಪ್ಯೂಟ್ ಪ್ರಕ್ರಿಯೆ, ಕಂಪ್ಯೂಟರ್ ಕೋಡಿಂಗ್ ಮೊದಲಾದ ಕಾರ್ಯಗಳಿಗಾಗಿ ನಮ್ಮದೇ ಆದ ಪ್ರಬಲ ಎಐ ಮಾದರಿ ಅಭಿವೃದ್ಧಿಪಡಿಸುವುದು ಇಂದಿನ ಅಗತ್ಯ ಮತ್ತು ಅತ್ಯಂತ ಮುಖ್ಯ. ಭಾರತದಲ್ಲಿ ಆರು ದೊಡ್ಡ ಸಾಫ್ಟ್‌ವೇರ್, ಚಿಪ್ ಡೆವಲಪರ್ ಇದ್ದಾರೆ. ಅವರು ಗರಿಷ್ಠ 6-8 ತಿಂಗಳಲ್ಲೇ ಅತ್ಯುತ್ತಮ 'ಎಐ' ಮಾದರಿಗಳನ್ನು ರಚಿಸಬಲ್ಲವರಾಗಿದ್ದಾರೆ ಎಂದು ಹೇಳಿದ್ದಾರೆ.

ಫೌಂಡೇಶನ್ ಮಾಡೆಲ್: ಭಾರತ ತನ್ನದೇ ಆದ ಫೌಂಡೇಶನ್ 'ಎಐ ಮಾಡೆಲ್' ಸಿದ್ಧಪಡಿಸಲಿದೆ. ಈ ಮಾದರಿ 6-8 ತಿಂಗಳಲ್ಲಿ ಸಿದ್ಧವಾಗಲಿದೆ. ಭಾರತದ ಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆ ಗಮನದಲ್ಲಿಟ್ಟುಕೊಂಡು ಅದರ ಡೇಟಾಸೆಟ್ ಸಿದ್ಧಪಡಿಸಲಾಗುತ್ತದೆ. ಎಐ ಮಾದರಿಗಳನ್ನು ರಚಿಸಲು ಆಸಕ್ತಿ ಇರುವ ಸಾಫ್ಟ್‌ವೇರ್ ಡೆವಲಪರ್‌ಗಳು ಈ ದಿಶೆಯಲ್ಲಿ ಪ್ರಸ್ತಾವನೆ ಸಲ್ಲಿಸಬಹುದಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಕರೆ ನೀಡಿದ್ದಾರೆ.

ಪೈಪೋಟಿ ತೀವ್ರ: 2023ರ ವರ್ಷಾಂತ್ಯ ವೇಳೆ ಆರ್ಟಿಫಿಷಿಯನ್ ಇಂಟೆಲಿಜೆನ್ಸ್(ಎಐ) ಪ್ರಾರಂಭಿಸುವ ಮೂಲಕ ಎಐ ಯುಗ ಪ್ರಾರಂಭವಾಯಿತು. ಮೊದಲಿಗೆ ಓಪನ್ ಎಐ ಕಂಪನಿಯ ಚಾಟ್ ಜಿಪಿಟಿ ಮತ್ತಿತರ ತಂತ್ರಾಂಶಗಳು ಅಭಿವೃದ್ಧಿಯಾದವು. ಬಳಿಕ ಈ ರೇಸ್‌ನಲ್ಲಿ ಚೀನಾದ ಸ್ಟಾರ್ಟ್‌ಅಪ್ ತಯಾರಿಸಿದ 'ಡೀಪ್‌ಸೀಕ್' ಸೇರಿಕೊಂಡಿತು. ಈಗ ಭಾರತದ ಸರದಿ.

ಭಾರತಕ್ಕೆ ಬೇಕಿದೆ 'ಎಲ್‌ಎಲ್‌ಎಂ'!

ವೈವಿಧ್ಯತೆ, ಬಹು ಭಾಷೆಗಳು ಬಳಕೆ ಇರುವ ಭಾರತ ದೇಶಕ್ಕೆ ವಿಭಿನ್ನವಾಗಿ ಚಿಂತಿಸುವ, ಬಹುಭಾಷೆಗಳಲ್ಲಿಯೂ ಕಾರ್ಯನಿರ್ವಹಿಸಬಲ್ಲ 'ಲಾರ್ಜ್ ಲಾಂಗ್ವೇಜ್ ಫೌಂಡೇಷನಲ್ ಎಐ ಮಾಡೆಲ್'(ಎಲ್

ಎಲ್‌ಎಂ) ಅಗತ್ಯವಿದೆ ಎಂಬುದು ಕೇಂದ್ರ ಸರಕಾರದ ಆಲೋಚನೆಯಾಗಿದೆ. ಆದರೆ, ಅದು ಚಾಟ್ ಜಿಪಿಟಿಯಂತೆ ವಿಶ್ಲೇಷಣೆ ಮಾಡಿ ಕೆಲಸ ಮಾಡಿದರೆ ಸಾಲದು, ಅದಕ್ಕೂ ಮಿಗಿಲಾಗಿ, ದೇಶದ ವೈವಿಧ್ಯತೆಗೆ ತಕ್ಕದಾಗಿ ವಿಭಿನ್ನವಾಗಿ, ದೇಶೀಯವಾಗಿ ಚಿಂತನೆ ನಡೆಸಿ ವರ್ತಿಸುವಂತಿರಬೇಕು. ಹಾಗಾಗಿಯೇ ಭಾರತದ ಎಐ ಮಾದರಿಯನ್ನು ದೇಶೀಯವಾಗಿಯೇ ಅಭಿವೃದ್ಧಿಪಡಿಸಬೇಕಿದೆ ಎಂಬುದು ಎನ್‌ಡಿಎ ಸರಕಾರದ ಆಲೋಚನೆಯಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

10 ಸಾವಿರ ಕೋಟಿ ರು. ಯೋಜನೆ

ಕೇಂದ್ರ ಸರಕಾರವು ಮಹತ್ವಾಕಾಂಕ್ಷೆಯಿಂದ 10 ಸಾವಿರ ಕೋಟಿ ರು. ವೆಚ್ಚದಲ್ಲಿ 'ಇಂಡಿಯ ಎಐ'(ಭಾರತ್ ಎಐ) ತಯಾರಿಕೆಗೆ ಮುಂದಾಗಿದೆ. ಸಂಶೋಧಕರು, ಶೈಕ್ಷಣಿಕ ತಜ್ಞರು, ತಂತ್ರಾಂಶ ಅಭಿವೃದ್ಧಿ ಮತ್ತು ಇಂಜಿನಿಯರಿಂಗ್ ಕ್ಷೇತ್ರದವರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಕೃತಕ ಬುದ್ಧಿಮತ್ತೆ ಆಧರಿಸಿದ ಎಲ್ಲಾ ಕ್ಷೇತ್ರದವರಿಗೂ ಪ್ರಯೋಜನಕಾರಿಯಾಗುವಂತೆ ಭಾರತ ತನ್ನದೇ ಆದ ಎಐ ಮಾದರಿ ಸೃಷ್ಟಿಗೆ ಪ್ರಯತ್ನಶೀಲವಾಗಿದೆ. ಭಾರತದ 'ಎಐ ಮಿಷನ್' ಗಮನದಲ್ಲಿರಿಸಿ, ಹಂಚಿಕೊಳ್ಳಬಹುದಾದ ಕಂಪ್ಯೂಟಿಂಗ್ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರಕಾರ ಆದ್ಯತೆ ನೀಡಿದೆ. ಭಾರತದಲ್ಲಿನ 'ಎಐ ಕಂಪ್ಯೂಟ್' ಸೌಲಭ್ಯ ಮಾರುಕಟ್ಟೆಯ, ಬಳಕೆದಾರರ ನಿರೀಕ್ಷೆಗಳನ್ನು ಮೀರಿದೆ ಮತ್ತು 19 ಸಾವಿರ ಜಿಪಿಯು ಪಡೆದುಕೊಂಡಿದೆ. ಅವುಗಳಲ್ಲಿ 12,896 'ಎನ್‌ವಿಡಿಯ' ಎಚ್100 ಜಿಪಿಯು ಮತ್ತು 1,480 'ಎನ್‌ವಿಡಿಯ' ಎಚ್ 200 ಜಿಪಿಯು ಇವೆ. ಅವುಗಳ ಪೈಕಿ 10,000 ಜಿಪಿಯುಗಳು ಈಗ ಬಳಕೆಗೆ ಸಿದ್ಧವಾಗಿವೆ. ಈ ಸೌಲಭ್ಯ ಎಲ್ಲರೂ ಬಳಸುವುದಕ್ಕೆ ಮುಕ್ತವಾಗಿರಲಿದೆ. ಶೀಘ್ರದಲ್ಲೇ ಭಾರತ ಎಐ ಮಾಡೆಲ್ ಕಾರ್ಯಾಚರಣೆ ಆರಂಭವಾಗಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ವಿವರಿಸಿದ್ದಾರೆ.

ಮಧ್ಯಮ ವರ್ಗದವರ ತೆರಿಗೆ ಹೊರೆ ಇಳಿಸಲು ಮನವಿ

ಬಜೆಟ್‌ನಲ್ಲಿ ರಾಷ್ಟ್ರೀಯ ಉತ್ಪಾದನಾ ನೀತಿ: ಆರ್‌ಎಸ್‌ಎಸ್ ಒತ್ತಾಯ

ದೆಹಲಿ: ಕೇಂದ್ರ ಬಜೆಟ್ ಮಂಡನೆಗೆ ಕ್ಷಣಗಣನೆ ಆರಂಭವಾಗಿದ್ದು, ಶನಿವಾರ ಬೆಳಗ್ಗೆ 11 ಗಂಟೆಗೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ತಮ್ಮ 8ನೇ ಬಜೆಟ್ ಮಂಡನೆ ಮಾಡಲಿದ್ದಾರೆ.

ದೇಶದ ವಿವಿಧ ಉದ್ದಿಮೆ ವಲಯಗಳು, ಬ್ಯಾಂಕಿಂಗ್ ಕ್ಷೇತ್ರ, ಜನ ಸಮುದಾಯ ಮುಂಗಡಪತ್ರದ ಬಗ್ಗೆ ಭಾರೀ ನಿರೀಕ್ಷೆಗಳನ್ನು ಇಟ್ಟುಕೊಂಡಿವೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ವಿವಿಧ ಸಂಘಟನೆಗಳೂ ಕೂಡ ಬಜೆಟ್ ಬಗ್ಗೆ ತಮ್ಮದೇ ನಿರೀಕ್ಷೆಗಳನ್ನು ಹೊಂದಿವೆ.

ದೇಶದಲ್ಲಿ ಸಣ್ಣ ಉದ್ದಿಮೆಗಳು ಹುಲುಸಾಗಿ ಬೆಳೆಯುವ ರೀತಿಯಲ್ಲಿ ರಾಷ್ಟ್ರೀಯ ಉತ್ಪಾದನಾ ನೀತಿ ರೂಪಿಸಬೇಕು. ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಸಂಶೋಧನೆಗೆ ಒತ್ತುಕೊಡಬೇಕು ಎಂದು ಆರ್‌ಎಸ್‌ಎಸ್ ಕೇಂದ್ರ ಸರಕಾರದ ಗಮನ ಸೆಳೆದಿದೆ. ಮಧ್ಯಮ ವರ್ಗದವರಿಗೆ ಸಂಕಷ್ಟ ತಂದೊಡ್ಡುತ್ತಿರುವ ತೆರಿಗೆಗಳ ಹೊರೆಯನ್ನು ಇಳಿಸಬೇಕಿದೆ. ನಿರ್ದಿಷ್ಟ ಚೀನಾ ಉತ್ಪನ್ನಗಳ ಮೇಲೆ ಆಮದು ತೆರಿಗೆ ಹೆಚ್ಚಿಸಬೇಕಿದೆ ಎಂಬುದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಆರ್‌ಎಸ್‌ಎಸ್‌ನ ಸಲಹೆಯಾಗಿದೆ.

ಶಿಕ್ಷಣ ಮತ್ತು ಕೌಶಲವೃದ್ಧಿ ತರಬೇತಿಗೆ ಹೆಚ್ಚಿನ ಹಣ ನೀಡಬೇಕು, ಸಣ್ಣ ಉದ್ದಿಮೆಗಳಿಗೆ 'ಪಿಎಲ್‌ಐ'ನಂತಹ ಯೋಜನೆಗಳಿಂದ ಉತ್ತೇಜನ ನೀಡಬೇಕು ಎನ್ನುವ ಸಲಹೆಗಳನ್ನು ಸಂಘ ಪರಿವಾರದ ವಿವಿಧ ಸಂಘಟನೆಗಳು ನೀಡಿವೆ. ಸಂಘ ಪರಿವಾರದಲ್ಲಿ ಹಲವು ಸಂಘಟನೆಗಳಿವೆ. ಕೈಗಾರಿಕೆ, ವ್ಯಾಪಾರ, ಕಾರ್ಮಿಕ, ಶಿಕ್ಷಣ ಇತ್ಯಾದಿ ಕ್ಷೇತ್ರಗಳಲ್ಲಿರುವ ಲಘು ಉದ್ಯೋಗ್ ಭಾರ್ತಿ (ಎಲ್‌ಯುಬಿ), ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ), ಸ್ವದೇಶಿ ಜಾಗರಣ ಮಂಚ್ ಮೊದಲಾದ ಸಂಘ ಪರಿವಾರ ಸಂಘಟನೆಗಳು ಕೇಂದ್ರ ಸರಕಾರಕ್ಕೆ ನಿರೀಕ್ಷೆಗಳನ್ನು ಮುಂದಿಟ್ಟಿವೆ. ದೊಡ್ಡ ಮಟ್ಟದ ಸುಧಾರಣಾ ಕ್ರಮಗಳು, ತೆರಿಗೆ ಸಂಗ್ರಹ, ಆದಾಯ ಹೆಚ್ಚಳ ಇತ್ಯಾದಿ ಕಾರ್ಯಗಳು ಇಂದಿನ ಸಂದರ್ಭದಲ್ಲಿ ಬಹಳ ಮುಖ್ಯ ಎಂಬುದನ್ನು ಆರ್‌ಎಸ್‌ಎಸ್ ಒಪ್ಪುತ್ತದೆ. ಆದರೆ, ಮಧ್ಯಮ ವರ್ಗದವರ ಮೇಲಿರುವ ತೆರಿಗೆ ಹೊರೆಯನ್ನು ಇಳಿಸುವುದೂ ಬಹಳ ಮುಖ್ಯ. ಸ್ಥಳೀಯ ಸಣ್ಣ ಉದ್ದಿಮೆಗಳು ಹುಲುಸಾಗಿ ಬೆಳೆಯಬೇಕು. ಸರ್ಕಾರಿ ಉದ್ದಿಮೆಗಳ ಖಾಸಗೀಕರಣ ಅತಿಯಾಗದ ರೀತಿ ನೋಡಿಕೊಳ್ಳಬೇಕಾದ್ದು ಮುಖ್ಯ ಎಂದು ಆರ್‌ಎಸ್‌ಎಸ್ ಹಿರಿಯರ ಅನಿಸಿಕೆ.

ಶಿಕ್ಷಣಕ್ಕೆ ಒತ್ತು ಕೊಡಿ

ಭಾರತೀಯ ಸಂಸ್ಕೃತಿ, ನೈಜ ಇತಿಹಾಸ, ಸಾಧನೆಗಳನ್ನು, ಪ್ರಾಚೀನ ಭಾರತೀಯರ ಜ್ಞಾನಗಳ ಬಗ್ಗೆ ಮಕ್ಕಳಿಗೆ ತಿಳಿಸುವ ಮೌಲ್ಯಾಧಾರಿತ ಶಿಕ್ಷಣ ವ್ಯವಸ್ಥೆ ಇರಬೇಕು. ಗ್ರಾಮೀಣ ಭಾಗದ ಶಾಲೆಗಳಿಗೆ ಹೆಚ್ಚು ಒತ್ತು ಕೊಡಬೇಕು. ವಿವಿಧ ರಾಜ್ಯಗಳಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನೆರವು ನೀಡಬೇಕು. ಕೌಶಲಾಭಿವೃದ್ಧಿ ಯೋಜನೆಗಳು ಮತ್ತು ಸಂಶೋಧನೆಗಳಿಗೆ ಹೆಚ್ಚಿನ ಅನುದಾನ ನೀಡಬೇಕು ಎಂಬುದು ಆರ್‌ಎಸ್‌ಎಸ್ ವಿದ್ಯಾರ್ಥಿ ಸಂಘಟನೆಯಾದ 'ಎಬಿವಿಪಿ'ಯ ಒತ್ತಾಯವಾಗಿದೆ.

ದೆಹಲಿ ಚುನಾವಣೆ ಪ್ರಚಾರದಲ್ಲಿ ಅಚ್ಚರಿ ಪ್ರಸಂಗ

ಪಕ್ಷದ ಅಭ್ಯರ್ಥಿ ಪಾದಕ್ಕೆರಗಿದ ಪ್ರಧಾನಿ

ಯಾರು ಈ ನೇಗಿ?

ಯಾರಪ್ಪಾ ಈ ರವೀಂದ್ರ ನೇಗಿ? ಪ್ರಧಾನಿ ಮೋದಿ ಅವರಿಂದಲೇ 3 ಬಾರಿ ಪಾದಕ್ಕೆ ನಮಸ್ಕಾರ ಮಾಡಿಸಿಕೊಂಡವರು ಎಂದು ನೆಟ್ಟಿಗರಂತೂ ಜಾಲತಾಣದಲ್ಲಿ ಬುಧವಾರ ಬಹಳವಾಗಿ ಶೋಧ ನಡೆಸಿದ್ದಾರೆ. ಇದು ಸರ್ಚ್‌ಎಂಜಿನ್ ಗೋಗಲ್‌ನಲ್ಲಿ ದಾಖಲಾಗಿದೆ. ಉತ್ತರಾಖಂಡ ಮೂಲದ ರವೀಂದ್ರ ನೇಗಿ ಅಪ್ಪಟ ಆರ್‌ಎಸ್‌ಎಸ್ ಕಾರ್ಯಕರ್ತ. ಸಂಘ ಪರಿವಾರದಲ್ಲಿ ಪ್ರಭಾವಿ ಆಗಿರುವವರು. ಪ್ರಸ್ತುತ ದೆಹಲಿ ಮುನ್ಸಿಪಲ್ ಕಾರ್ಪೊರೇಷನ್‌ನಲ್ಲಿ ಬಿಜೆಪಿ ಸದಸ್ಯ. ವಿನೋದ್ ನಗರ ವಾರ್ಡ್‌ನಿಂದ ಗೆದ್ದಿದ್ದಾರೆ. ಈಗ ವಿಧಾನಸಭೆ ಚುನಾವಣೆ ಅಭ್ಯರ್ಥಿ.

ದೆಹಲಿ: ಫೆ.5ರಂದು ನಡೆಯಿರುವ ದೆಹಲಿ ವಿಧಾನಸಭಾ ಚುನಾವಣೆಯ ಕಣದಲ್ಲಿ ಬಿಜೆಪಿ, ಎಎಪಿ ಮತ್ತು ಕಾಂಗ್ರೆಸ್ ಪಕ್ಷಗಳ ಪ್ರಚಾರ ಭರದಿಂದ ಸಾಗುತ್ತಿದೆ.

ಬಿಜೆಪಿ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಬುಧವಾರ ದೆಹಲಿಯ ಕರವಾಲ್ ನಗರದಲ್ಲಿ ಬೃಹತ್ ರ‍್ಯಾಲಿ ನಡೆಸಿದ್ದು, ಅಪಾರ ಸಂಖ್ಯೆಯಲ್ಲಿ ಜನರು ನೆರೆದು ಜೈಕಾರ ಹಾಕಿದ್ದಾರೆ. ಈ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿ ಅಭ್ಯರ್ಥಿಯೊಬ್ಬರ ಪಾದಮುಟ್ಟಿ 3 ಬಾರಿ ನಮಸ್ಕರಿಸುವ ಮೂಲಕ ಇಡೀ ಸಭೆ ಆಶ್ಚರ್ಯಚಕಿತವಾಗುವಂತೆ ಮಾಡಿದ್ದಾರೆ. ಈ ಸಂದರ್ಭದ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ.

ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿರುವ ಪಕ್ಷದ ಕೆಲವು ಅಭ್ಯರ್ಥಿಗಳನ್ನು ವೇದಿಕೆಗೆ ಬರಮಾಡಿಕೊಂಡು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪರಿಚಯ ಮಾಡಿಕೊಡಲಾಯಿತು. ಈ ಸಂದರ್ಭ ಎಲ್ಲಾ ಅಭ್ಯರ್ಥಿಗಳೂ ಪ್ರಧಾನಿ ಮೋದಿ ಅವರಿಗೆ ಕೈಮುಗಿದು ಮುಂದೆ ಸಾಗಿದರೆ, ಪಟ್ಪರ್‌ಗಂಜ್ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ರವೀಂದ್ರ ಸಿಂಗ್ ನೇಗಿ ಮಾತ್ರ ಪ್ರಧಾನಿ ನರೇಂದ್ರ ಮೋದಿ ಅವರ ಪಾದಕ್ಕೆರಗಿದರು. ಮೋದಿ ಅವರು ಕೈ ಅಡ್ಡ ತಂದು ನೇಗಿ ಅವರನ್ನು ತಡೆಯಲೆತ್ನಿಸಿದರೂ ನೇಗಿ ನಡುಬಗ್ಗಿಸಿ ಪ್ರಧಾನಿಯ ಪಾದಗಳನ್ನು ಮುಟ್ಟಿ ನಮಸ್ಕರಿಸಿದರು. ಮರುಕ್ಷಣವೇ ಪ್ರಧಾನಿ ಮೋದಿ ಅವರೂ ನಡುಬಗಿಸಿ ನರೇಂದ್ರ ನೇಗಿ ಅವರ ಪಾದಗಳನ್ನು 3 ಬಾರಿ ಮುಟ್ಟಿ ನಮಸ್ಕರಿಸಿದರು. ನೇಗಿ ಪಾದಗಳನ್ನು ಪ್ರಧಾನಿ ಮೋದಿ ಮುಟ್ಟಿ ನಮಸ್ಕರಿಸಿದ್ದಕ್ಕೆ ವೇದಿಕೆಯಲ್ಲಿದ್ದ ಬಿಜೆಪಿ ನಾಯಕರೆಲ್ಲರೂ ದಿಗ್ಭ್ರಮೆಗೊಳಗಾದರು.

ತಕ್ಷಣದಿಂದಲೇ ಜಾರಿಗೆ ಬರುವಂತೆ ಎಲ್ಲಾ ಆರ್ಥಿಕ ನೆರವು ಸ್ಥಗಿತ: ಟ್ರಂಪ್

ಪಾಕ್ ವಿರುದ್ಧ ಅಮೆರಿಕ ಆರ್ಥಿಕ ಪ್ರಹಾರ

ವಾಷಿಂಗ್ಟನ್: ಅಮೆರಿಕದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ಡೊನಾಲ್ಡ್ ಟ್ರಂಪ್ ಹಲವು ಮಹತ್ವದ ಕಡತಗಳಿಗೆ ಸಹಿ ಹಾಕಿದ್ದು, ಅದರಲ್ಲೊಂದು ಆದೇಶದಿಂದ ಪಾಕಿಸ್ತಾನಕ್ಕೆ ದೊಡ್ಡ ಶಾಕ್ ನೀಡುವಂತಹುದಾಗಿದೆ. ಪಾಕಿಸ್ತಾನಕ್ಕೆ ನೀಡಲಾಗುತ್ತಿದ್ದ ನೂರಾರು ಕೋಟಿ ಡಾಲರ್‌ಗಳ ವಿದೇಶಿ ನೆರವನ್ನು ಟ್ರಂಪ್ ತಾತ್ಕಲಿಕವಾಗಿ ರದ್ದುಗೊಳಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಾಕಿಸ್ತಾನಕ್ಕೆ ಆರ್ಥಿಕವಾಗಿ ದೊಡ್ಡ ಪೆಟ್ಟು ನೀಡಿದ್ದಾರೆ. ಪಾಕಿಸ್ತಾನಕ್ಕೆ ನೀಡುತ್ತಿದ್ದ ಎಲ್ಲಾ ರೀತಿಯ ಆರ್ಥಿಕ ನೆರವನ್ನೂ ತಕ್ಷಣದಿಂದಲೇ ಜಾರಿಗೆ ಬರುವಂತೆ ಸ್ಥಗಿತಗೊಳಿಸಿ ಆದೇಶ ಪ್ರಕಟಿಸಿದ್ದಾರೆ. ಟ್ರಂಪ್ ಅವರ ಈ ನಿರ್ಧಾರದಿಂದ ಪಾಕಿಸ್ತಾನ ಅಕ್ಷರಶಃ ಕಂಗಾಲಾಗಿದೆ. ಇದು ಪಾಕಿಸ್ತಾನದ ಮೇಲಿನ ಅಮೆರಿಕದ ಆರ್ಥಿಕ ಸರ್ಜಿಕಲ್ ಸ್ಟ್ರೈಕ್ ಎಂದೇ ನೆಟ್ಟಿಗರು ವಿಶ್ಲೇಷಿಸಿದ್ದಾರೆ. ಟ್ರಂಪ್ ನಿರ್ಧಾರ ಪಾಕಿಸ್ತಾನಕ್ಕೆ ದೊಡ್ಡ ಶಾಕ್ ನೀಡಿದೆ ಎಂದು ಜಿಯೋ ನ್ಯೂಸ್ ವರದಿ ಮಾಡಿದೆ.

ಪಾಕ್‌ಗೆ ದಶಕಗಳಿಂದ ನೀಡಲಾಗುತ್ತಿದ್ದ ಎಲ್ಲಾ ರೀತಿಯ ಆರ್ಥಿಕ ನೆರವನ್ನೂ ಸ್ಥಗಿತಗೊಳಿಸಲಾಗಿದ್ದು, ಈ ಸಂಬಂಧದ ಕಡತಗಳನ್ನು ಮತ್ತೊಮ್ಮೆ ಪರಿಶೀಲನೆ ಮಾಡಬೇಕಿದೆ ಎಂದು ಟ್ರಂಪ್ ಆಡಳಿತ ಹೇಳಿದೆ. ಪರಿಣಾಮ, ಪಾಕ್‌ನಲ್ಲಿ ಅಮೆರಿಕ ಸರಕಾರ ಆರಂಭಿಸಿದ್ದ ಸಾಂಸ್ಕೃತಿಕ ಪರಂಪರೆ ರಕ್ಷಿಸುವ ರಾಯಭಾರಿ ನಿಧಿ ಸೇರಿದಂತೆ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್‌ನ 9 ಪ್ರಮುಖ ಯೋಜನೆಗಳು ತಕ್ಷಣದಿಂದಲೇ ಸ್ಥಗಿತಗೊಂಡಿವೆ. ಆರೋಗ್ಯ, ಕೃಷಿ, ಜೀವನಾಧಾರ, ಆಹಾರ ಭದ್ರತೆ, ಪ್ರವಾಹ ಪರಿಹಾರ, ವಾತಾವರಣ, ಶಿಕ್ಷಣ ಯೋಜನೆಗಳಿಗೆ ನೀಡುತ್ತಿದ್ದ ಹಣವನ್ನೂ ಸ್ಥಗಿತಗೊಳಿಸಲಾಗಿದೆ.

ಪಾಕ್‌ಗೆ ನೀಡಲಾಗುತ್ತಿದ್ದ ವಿದೇಶಿ ನೆರವು ನಿಲ್ಲಿಸಲಾಗಿದೆ. ಎಲ್ಲಾ ಯೋಜನೆಗಳ ಮರುಮೌಲ್ಯಮಾಪನ ಮಾಡಬೇಕಿದೆ ಎಂದು ಕರಾಚಿಯಲ್ಲಿನ ಅಮೆರಿಕ ರಾಯಭಾರ ಕಚೇರಿ ಅಧಿಕಾರಿಯೊಬ್ಬರು ಹೇಳಿದ್ದಾಗಿ ಪಾಕ್ ಮಾಧ್ಯಮಗಳಲ್ಲಿ ವರದಿಯಾಗಿದೆ.

ಯಾವ ಯೋಜನೆ ಸ್ಥಗಿತ

- ಪಾಕಿಸ್ತಾನ್ ಸಾಂಸ್ಕೃತಿಕ ಪರಂಪರೆ ರಕ್ಷಿಸುವ ರಾಯಭಾರಿ ನಿಧಿ
- ಇಂಧನ-ಆರ್ಥಿಕ ಪ್ರಗತಿಗೆ ನೆರವಾಗುವ 9 ಯೋಜನೆಗಳು
- ಯುಎಸ್ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್
- ಕ್ಲೀನ್ ಎನರ್ಜಿ ಲೋನ್ ಪೋರ್ಟ್‌ಫೋಲಿಯೊ ಗ್ಯಾರಂಟಿ
- ಪಾಕಿಸ್ತಾನ್ ಪ್ರೈವೇಟ್ ಸೆಕ್ಟಾರ್ ಎನರ್ಜಿ ಆಕ್ಟಿವಿಟಿ
- ಎನರ್ಜಿ ಸೆಕ್ಟಾರ್ ಅಡ್ವೈಸರಿ ಸರ್ವಿಸಸ್ ಪ್ರಾಜೆಕ್ಟ್
- ಪಾಕಿಸ್ತಾನ ಕ್ಲೈಮೇಟ್ ಫೈನಾನ್ಸಿಂಗ್ ಆಕ್ಟಿವಿಟಿ

1ನೇ ಅವಧಿಯಲ್ಲೂ ಪಾಕ್‌ಗೆ ಪೆಟ್ಟು

ಟ್ರಂಪ್ ಮೊದಲ ಅಧಿಕಾರವಧಿಯಲ್ಲೂ ಉಗ್ರಗಾಮಿ ಚಟುವಟಿಕೆ ಉತ್ತೇಜಿಸುವ ಪಾಕಿಸ್ತಾನವನ್ನು ಆರ್ಥಿಕ ಕ್ರಿಯಾ ಕಾರ್ಯಪಡೆಯ (ಎಫ್‌ಎಟಿಎಫ್) ಗ್ರೇ ಸ್ಟ್ರಿಪ್(ಕಂದುಪಟ್ಟಿ)ಗೆ ಸೇರಿಸಿದ್ದರು. ಆಗಲೂ ವರ್ಷಗಳ ಕಾಲ ಪಾಕ್ ಸರಕಾರ ಆರ್ಥಿಕವಾಗಿ ಪರದಾಡಿತ್ತು. ಬಳಿಕ ಜೋ ಬೈಡನ್ ಅಮೆರಿಕ ಅಧ್ಯಕ್ಷರಾದಾಗ ಪಾಕ್‌ಗೆ ನೆರವು ಮುಂದುವರಿಸಿದ್ದರು.

ಅತ್ಯಾಚಾರ ದೂರು: ಕಾಂಗ್ರೆಸ್ ಸಂಸದನ ಸೆರೆ

ದೆಹಲಿ: ಅತ್ಯಾಚಾರ ಆರೋಪ ಎದುರಿಸುತ್ತಿರುವ ಕಾಂಗ್ರೆಸ್ ಸಂಸದ ರಾಕೇಶ್ ರಾಥೋಡ್ ಅವರನ್ನು ಪೊಲೀಸರು ಸುದ್ದಿಗೋಷ್ಠಿ ಮಧ್ಯೆಯೇ ಬಂಧಿಸಿ ಕರೆದೊಯ್ದಿದ್ದಾರೆ.

- ಪತ್ರಿಕಾಗೋಷ್ಠಿ ನಡೆಸುತ್ತಿದ್ದಾಗಲೇ ಎಳೆದೊಯ್ದ ಪೊಲೀಸರು

ಸಂಸದ ರಾಕೇಶ್ ತಮ್ಮ ಲೋಹರ್ ಬಾಗ್‌ನಲ್ಲಿನ ನಿವಾಸದಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸುತ್ತಿದ್ದಾಗಲೇ ಧಾವಿಸಿ ಬಂದ ಕೊತ್ವಾಲಿ ಪೊಲೀಸರು ಸಂಸದರನ್ನು ಬಂಧಿಸಿ ಕರೆದೊಯ್ದರು. ಬಳಿಕ ರಾಥೋಡ್‌ರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದರು. ನ್ಯಾಯಾಧೀಶರು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.4 ವರ್ಷಗಳ ಹಿಂದೆ ಪರಿಚಿತರಾದ ರಾಕೇಶ್ ರಾಥೋಡ್ ಹಲವು ಬಾರಿ ಅತ್ಯಾಚಾರವೆಸಗಿದ್ದಾರೆ. ಮದುವೆಯಾಗುವುದಾಗಿ ಭರವಸೆ ನೀಡಿ ವಂಚಿಸಿದ್ದಾರೆ ಎಂದು ಸಂತ್ರಸ್ತ ಮಹಿಳೆ ಜ.17ರಂದು ಉತ್ತರ ಪ್ರದೇಶದ ಸೀತಾಪುರದಲ್ಲಿ ದೂರು ದಾಖಲಿಸಿದ್ದಾರೆ. ಸಂಸದರು ತಮಗೆ ಕರೆ ಮಾಡಿದ್ದರ ವಿವರ ಮತ್ತು ಕರೆಗಳ ವಾಯ್ಸ್ ರೆಕಾರ್ಡಿಂಗ್ ಅನ್ನು ಪೊಲೀಸರಿಗೆ ನೀಡಿದ್ದಾರೆ. ರಾಥೋಡ್ ಸೀತಾಪುರದ ಸೆಷನ್ಸ್ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದು, ಅದು ತಿರಸ್ಕೃತವಾಗಿತ್ತು. ಬಳಿಕ ರಾಥೋಡ್ ಪರ ವಕೀಲರು ಶರಣಾಗಲು ನ್ಯಾಯಾಲಯದಲ್ಲಿ ಸಮಯ ಕೋರಿದ್ದರು. 2 ವಾರಗಳಲ್ಲಿ ಸೆಷನ್ಸ್ ನ್ಯಾಯಾಲಯಕ್ಕೆ ಶರಣಾಗುವಂತೆ ಸೂಚಿಸಿತ್ತು. ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿ ಗುರುವಾರ ವಜಾಗೊಂಡಿದೆ.

ಬಿಜೆಪಿಯ ಹರ್‌ಪ್ರೀತ್ ಚಂಡೀಗಢ ಮೇಯರ್

ಚಂಡೀಗಢ: 35 ಸದಸ್ಯ ಬಲದ ಚಂಡೀಗಢ ಮುನಿಸಿಪಲ್ ಕಾರ್ಪೋರೇಶನ್‌ನ ಮೇಯರ್ ಚುನಾವಣೆಯಲ್ಲಿ ಬಿಜೆಪಿ ಗೆಲುವು ದಾಖಲಿಸಿದೆ. ಎಎಪಿ ಮತ್ತು ಕಾಂಗ್ರೆಸ್ ಮೈತ್ರಿಕೂಟ ತಂತ್ರ ವಿಫಲವಾಗಿದೆ. ಬಿಜೆಪಿಯ ಹರ್‌ಪ್ರೀತ್ ಕೌರ್ ಬಬಲಾ 19 ಮತಗಳಿಸಿ ಗೆಲುವು ಸಾಧಿಸಿದರೆ, ಎಎಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಪ್ರೇಮಲತಾ 17 ಮತ ಪಡೆದು ಸೋಲುಂಡಿದ್ದಾರೆ. ಮೈತ್ರಿಕೂಟದ ಮೂವರು ಕೌನ್ಸಿಲರ್‌ಗಳು ಬಿಜೆಪಿಗೆ(ಅಡ್ಡ) ಮತದಾನ ಮಾಡಿದ್ದಾರೆ. ಪಂಜಾಬ್-ಹರಿಯಾಣ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಯಶ್ರೀ ಠಾಕೂರ್ ಅವರನ್ನು ಚುನಾವಣೆ ಮೇಲ್ವಿಚಾರಣೆಗೆ ಸ್ವತಂತ್ರ ವೀಕ್ಷಕರಾಗಿ ಸುಪ್ರೀಂ ಕೋರ್ಟ್ ನೇಮಿಸಿತ್ತು.

ವಿಮಾನ ಪತನ: ಭಾರತೀಯ ಸಾವು

ಜುಬಾ: ದಕ್ಷಿಣ ಸುಡಾನ್‌ನ ಉತ್ತರ ಭಾಗದಲ್ಲಿ ಇಬ್ಬರು ಪೈಲಟ್ ಮತ್ತು 19 ಪ್ರಯಾಣಿಕರಿದ್ದ ಸಣ್ಣ ವಿಮಾನ ಬುಧವಾರ ಸಂಜೆ ಪತನಗೊಂಡಿದ್ದು, ಭಾರತೀಯ ಸೇರಿದಂತೆ 20 ಜನರು

ಸಾವನ್ನಪ್ಪಿದ್ದಾರೆ. ಒಬ್ಬರು ಸುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ ಎಂದು 'ಎಎಫ್‌ಪಿ' ಸುದ್ದಿ ಸಂಸ್ಥೆ ವರದಿ ಮಾಡಿದೆ. ಚೀನಾದ ತೈಲ ಸಂಸ್ಥೆ ಗ್ರೇಟರ್ ಪಯೋನಿಯರ್ ಆಪರೇಟಿಂಗ್ ಕಂಪನಿಯ ಚಾರ್ಟರ್ಡ್ ವಿಮಾನ ಸುಡಾನ್ ರಾಜಧಾನಿ ಜುಬಾಗೆ ತೆರಳುತ್ತಿದ್ದಾಗ ಪತನವಾಗಿದೆ. ಯುನಿಟಿ ಸ್ಟೇಟ್‌ನ ತೈಲ ಗಣಿಗಾರಿಕೆ ಸ್ಥಳದಿಂದ ಹಾರಾಟ ಆರಂಭಿಸಿದ 3 ನಿಮಿಷಗಳಲ್ಲೇ ಪತನಗೊಂಡಿದೆ. ವಿಮಾನದಲ್ಲಿದ್ದ 21 ಮಂದಿಯಲ್ಲಿ 20 ಮಂದಿ ಸಾವಿಗೀಡಾಗಿದ್ದರೆ, ಒಬ್ಬರು ಜೀವಂತ ಪಾರಾಗಿದ್ದಾರೆ ಎಂದು ಯುನಿಟಿ ರಾಜ್ಯದ ಮಾಹಿತಿ ಸಚಿವ ಗಟ್ವೆಚ್ ಬಿಪಾಲ್ ಹೇಳಿದ್ದಾರೆ. ವಿಮಾನದಲ್ಲಿದ್ದ 21 ಮಂದಿಯಲ್ಲಿ ಒಬ್ಬ ಭಾರತೀಯ, ಇಬ್ಬರು ಚೀನಿಯರು, ಇಬ್ಬರು ಉಗಾಂಡದವರು ಮತ್ತು 15 ಮಂದಿ ಸುಡಾನ್‌ನವರಾಗಿದ್ದರು. ಹೆಚ್ಚಿನವರು ತೈಲೋತ್ಪನ್ನ ಘಟಕದ ಉದ್ಯೋಗಿಗಳಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನ ಪತನಕ್ಕೆ ಕಾರಣ ತಿಳಿಯಲು ತನಿಖೆ ನಡೆದಿದೆ.

ಆಂಧ್ರ: ವಾಟ್ಸಾಪ್‌ನಲ್ಲಿ 161 ಸರಕಾರಿ ಸೇವೆ

ಅಮರಾವತಿ: ಆಂಧ್ರಪ್ರದೇಶದ ರಾಜ್ಯ ಸರಕಾರ ನಾಗರಿಕರ ಹಿತದೃಷ್ಟಿಯಿಂದ 161 ಸರಕಾರಿ ಸೇವೆಗಳು ನಾಗರಿಕರಿಗೆ ವಾಟ್ಸಾಪ್‌ನಲ್ಲಿಯೇ ಲಭ್ಯವಾಗುವಂತೆ ಮಾಡಲು ಮುಂದಾಗಿದೆ.

ಪರಿಣಾಮ ಜನರು ಈ 161 ಸೇವೆಗಳಿಗಾಗಿ ಸರಕಾರಿ ಕಚೇರಿಗೆ ಪದೇ ಪದೇ ಅಲೆದಾಡುವುದು ತಪ್ಪಲಿದೆ.

ಜನಪ್ರಿಯವಾಗಿರುವ ಈ ಮೆಸೇಜಿಂಗ್ ಅಪ್ಲಿಕೇಶನ್ ಮೂಲಕವೇ ಜನರು ರಾಜ್ಯ ಸರಕಾರದ 161 ಸೇವೆಗಳನ್ನು ಸುಲಭವಾಗಿ ಪಡೆಯಬಹುದಾಗಿದೆ. ಕಂದಾಯ, ಸಿಎಂ ಪರಿಹಾರ ನಿಧಿ, ಮುನ್ಸಿಪಲ್ ಕಾರ್ಪೊರೇಷನ್ ಸೇವೆಗಳು, ಇಂಧನ ಇಲಾಖೆ, ಎಪಿಎಸ್‌ಆರ್‌ಟಿಸಿಗೆ ಸಂಬಂಧಿಸಿದ ಸೇವೆಗಳನ್ನು ಮೊದಲ ಹಂತದಲ್ಲಿ ವಾಟ್ಸಾಪ್ ಮೂಲಕವೇ ಒದಗಿಸಲಾಗುತ್ತದೆ. 2ನೇ ಹಂತದಲ್ಲಿ ಉಳಿದ ಸೇವೆಗಳನ್ನು ಒದಗಿಸಲಾಗುವುದು ಎಂದು ಸರಕಾರದ ಅಧಿಕೃತ ಪ್ರಕಟಣೆ ಗುರುವಾರ ತಿಳಿಸಿದೆ. 161 ಸೇವೆಗಳನ್ನು ಜನರು ಹೇಗೆ ಪಡೆಯಬಹುದಾಗಿದೆ ಎಂಬುದನ್ನೂ ತಿಳಿಸಿಕೊಡಲಾಗಿದೆ. ಅಲ್ಲದೇ, ಜನಸಾಮಾನ್ಯರ ವೈಯಕ್ತಿಕ ಮಾಹಿತಿಗಳು ದತ್ತಾಂಶ ಚೋರರ(ಹ್ಯಾಕರ್ಸ್) ಕೈಗೆ ಸಿಗದಂತೆ ನೋಡಿಕೊಳ್ಳಬೇಕು ಎಂಬ ಕುರಿತೂ ಅಧಿಕಾರಿಗಳಿಗೆ ಸರಕಾರದ ಸೂಚನೆ ನೀಡಿದೆ.

ಪಾಣಿಪತ್ ರೈಲು ಹಳಿ ಮೇಲೆ ಕಬ್ಬಿಣ ರಾಡ್!

ಪಾಣಿಪತ್: ರೈಲು ಸೇವೆ ವ್ಯತ್ಯಯ ಮಾಡಲು ಸಂಚು ನಡೆಸುವ ಪ್ರಕರಣ ಉತ್ತರ ಭಾರತದಲ್ಲಿ ಮತ್ತೆ ವರದಿಯಾಗಿದೆ. ಹರಿಯಾಣ ರಾಜ್ಯದಲ್ಲಿ ಪಾಣಿಪತ್ ಜಿಲ್ಲೆಯಲ್ಲಿ

ದೆಹಲಿ ಮಾರ್ಗದ ರೈಲು ಹಳಿ ಮೇಲೆ 18 ಅಡಿ ಉದ್ದದ ಕಬ್ಬಿಣದ ರಾಡ್ ಗುರುವಾರ ಪತ್ತೆಯಾಗಿದೆ.

ಪಾಣಿಪತ್‌ನಿಂದ ಗನೌರ್‌ಗೆ ಸಂಚರಿಸುತ್ತಿದ್ದ ರೈಲಿನ ಲೋಕೊ ಪೈಲಟ್ ಗೋಹಾನಾ ಸೇತುವೆ ಬಳಿ ಹಳಿಯಲ್ಲಿ ಕಬ್ಬಿಣದ ರಾಡ್ ಬಿದ್ದಿರುವುದನ್ನು ಗಮನಿಸಿ ತಕ್ಷಣ ಬ್ರೇಕ್ ಹಾಕಿದ್ದಾರೆ ಎಂದು ರೈಲ್ವೆ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಈ ಮಾರ್ಗದಲ್ಲಿ ಸಂಚರಿಸುವ ರೈಲುಗಳನ್ನು ಹಳಿ ತಪ್ಪಿಸಿ ಜೀವಹಾನಿ ಉಂಟು ಮಾಡುವ ಉದ್ದೇಶದಿಂದಲೇ ದುಷ್ಕರ್ಮಿಗಳು ಈ ಸಂಚು ನಡೆಸಿದ್ದಾರೆ ಎಂದು ದೂರಲಾಗಿದೆ. ಈ ಸಂಬಂಧ ರೈಲ್ವೆ ರಕ್ಷಣಾ ಕಾಯಿದೆಯ ಸೆಕ್ಷನ್ 150ರಡಿ ಎಫ್‌ಐಆರ್ ದಾಖಲಾಗಿದೆ.

ಕೆಲ ದಿನಗಳ ಹಿಂದೆ ಉತ್ತರ ಪ್ರದೇಶ, ಉತ್ತರಾಖಂಡ, ಮಧ್ಯಪ್ರದೇಶ ಮತ್ತಿತರೆಡೆ ರೈಲು ಹಳಿಗಳ ಮೇಲೆ ಮರದ ತುಂಡು, ಕಬ್ಬಿಣದ ರಾಡ್ ಇರಿಸುವ, ಮಣ್ಣಿನ ರಾಶಿ ಹಾಕುವ ಘಟನೆಗಳು ನಡೆದಿದ್ದವು.

ಸೌದಿಯಲ್ಲಿ ಅಪಘಾತ: 9 ಭಾರತೀಯರ ಸಾವು

ಜೆಡ್ಡಾ: ಸೌದಿ ಅರೇಬಿಯದ ಜೆಡ್ಡಾ ಬಳಿ ಬುಧವಾರ ರಸ್ತೆ ಮಿನಿ ಬಸ್ ಅಪಘಾತಕ್ಕೀಡಾಗಿದ್ದು, ಅದರಲ್ಲಿದ್ದ 9 ಭಾರತೀಯರು ಸೇರಿ 15 ಜನರು ದುರ್ಮರಣಕ್ಕೀಡಾಗಿದ್ದಾರೆ. 9



ಭಾರತೀಯರಲ್ಲಿ ಒಬ್ಬರು ತೆಲಂಗಾಣ ಮೂಲದವರಿದ್ದಾರೆ.

ಅವರನ್ನು ತೆಲಂಗಾಣದ ಜಗತ್ಯಾಲ್ ಜಿಲ್ಲೆಯ ಮೆಟ್ಪಲಿ ಮಂಡಲದ ನಿವಾಸಿ ಕಪೇಲಿ ರಮೇಶ್ (32) ಎಂದು ಗುರುತಿಸಲಾಗಿದೆ. ಭಾರತೀಯ ರಾಯಭಾರ ಕಚೇರಿ ಅಪಘಾತವನ್ನು ದೃಢಪಡಿಸಿದ್ದು, ಮೃತರ ಕುಟುಂಬಗಳಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುವುದಾಗಿ ಭರವಸೆ ನೀಡಿದೆ.

ಒಟ್ಟು 26 ಕಾರ್ಮಿಕರು ಮಿನಿಬಸ್‌ನಲ್ಲಿ ದಕ್ಷಿಣ ಬಂದರು ನಗರ ಜಿಜಾನ್‌ನಲ್ಲಿರುವ ಕೆಲಸದ ಸ್ಥಳಕ್ಕೆ ಹೋಗುತ್ತಿದ್ದರು. ಮಾರ್ಗಮಧ್ಯೆ ಟ್ರೇಲರ್ ಟ್ರಕ್‌ಗೆ ಮಿನಿಬಸ್ ಡಿಕ್ಕಿ ಹೊಡೆದಿದೆ. ಸ್ಥಳದಲ್ಲೇ 15 ಮಂದಿ ಸಾವನ್ನಪ್ಪಿದ್ದಾರೆ. ಉಳಿದ 11 ಪ್ರಯಾಣಿಕರು ಗಾಯಗೊಂಡಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. 15 ಮಂದಿ ಮೃತರಲ್ಲಿ ನೇಪಾಳದ ಮೂವರು ಮತ್ತು ಘಾನಾ ದೇಶದ ಮೂರು ನಾಗರಿಕರೂ ಸೇರಿದ್ದಾರೆ.

ಸಮಾಚಾರ ಸಣ್ಣದಲ್ಲ

ಪರಿಸರ ಪ್ರವಾಸೋದ್ಯಮ ರಾಷ್ಟ್ರೀಯ ಸಮ್ಮೇಳನ

ಬೆಂಗಳೂರು: ಪರಿಸರ ಪ್ರವಾಸೋದ್ಯಮ ರಾಷ್ಟ್ರೀಯ ಸಮ್ಮೇಳನ ಫೆ.19 ರಿಂದ 21 ರವರೆಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಕಚೇರಿಯಲ್ಲಿ ಆಯೋಜಿಸಲಾಗಿದೆ. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಪರಿಸರ ಪ್ರವಾಸೋದ್ಯಮ ಪ್ರಕೃತಿಯನ್ನು ಅನ್ವೇಷಿಸಲು ಪ್ರಯಾಣ ಬೆಳೆಸುವುದು, ಪರಿಸರ ಸಂರಕ್ಷಣೆ ಉತ್ತೇಜಿಸುವುದು ಮತ್ತು ಸುಸ್ಥಿರ ಅಭಿವೃದ್ಧಿ ಬೆಂಬಲಿಸುವ ಸಲುವಾಗಿ ಹಮ್ಮಿಕೊಂಡಿರುವ ಸಮ್ಮೇಳನದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸ ನೀಡಲಿದ್ದು, ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಯುವ ವಿಜ್ಞಾನಿಗಳು, ಶೈಕ್ಷಣಿಕ ತಜ್ಞರು, ಯುವ ಉದ್ಯಮದಾರರು ಭಾಗವಹಿಸಬಹುದಾಗಿದೆ. ಯುವ ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳು ಸಂಶೋಧನಾ ಪ್ರಬಂಧ ಮಂಡಿಸಲು ಅವಕಾಶ ಕಲ್ಪಿಸಲಾಗಿದೆ. ಆಯ್ಕೆಯಾದ ಸಂಶೋಧನಾ ಪ್ರಬಂಧಕ್ಕೆ ನಗದು ಬಹುಮಾನ ನೀಡಲಾಗುವುದು. ಸಮ್ಮೇಳನದಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವವರು ಫೆ.12ರ ಒಳಗಾಗಿ Google form & https://forms.gle/WCW9krCt8sGQUP55A ಮೂಲಕ ನೊಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ- 9845258894, 9686449019, 9620767819.

35 ಕೋಟಿ ಬೆಲೆ ಬಾಳುವ ಪ್ರದೇಶ ವಶ

ಬೆಂಗಳೂರು: ಬಿಡಿಎಯಿಂದ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಮುಂದುವರಿಸಿದ್ದು, ಗುರುವಾರ ನಡೆದ ಕಾರ್ಯಾಚರಣೆಯಲ್ಲಿ ಬನಶಂಕರಿ 2ನೇ ಹಂತದ ಬಡಾವಣೆಯಲ್ಲಿ ನಾಗರಿಕ ಸೌಲಭ್ಯ ನಿವೇಶನವನ್ನು ವಶಪಡಿಸಿಕೊಂಡಿದೆ. ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಕತ್ರಿಗುಪ್ಪೆಯಲ್ಲಿ 18,513 ಚದರ ಅಡಿಯ ಪ್ರದೇಶದಲ್ಲಿ ಅನಧಿಕೃವಾಗಿ ನಿರ್ಮಾಣವಾಗಿದ್ದ ಶೆಡ್, ಹಳೇ ಗುಜರಿ ವಾಹನಗಳನ್ನು ತೆರವುಗೊಳಿಸಿ, 35 ಕೋಟಿ ರು. ಬೆಲೆಬಾಳುವ ಪ್ರದೇಶವನ್ನು ಪ್ರಾಧಿಕಾರ ವಶಪಡಿಸಿಕೊಂಡಿತು. ಈ ಕಾರ್ಯಾಚರಣೆಯನ್ನು ಬಿಡಿಎಯ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ದಕ್ಷಿಣ ವಿಭಾಗದ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಒಳಗೊಂಡು ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನೆರವೇರಿಸಲಾಯಿತು.

ಅಭಿನಂದನಾ ಕಾರ್ಯಕ್ರಮ ಇಂದು

ಬೆಂಗಳೂರು: ಕೊಪ್ಪಳ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಬಿ.ಕೆ.ರವಿ ಅವರಿಗೆ ಅಭಿನಂದನಾ ಕಾರ್ಯಕ್ರಮ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಜ್ಞಾನಭಾರತಿ

ಆವರಣದಲ್ಲಿ ಆಯೋಜಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯ ಸಂವಹನ ವಿಭಾಗದ ವತಿಯಿಂದ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಜಯಕರ ಎಸ್.ಎಂ., ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ ಮತ್ತು ನ್ಯೂಸ್‌ಫಸ್ಟ್ ಸುದ್ದಿವಾಹಿನಿ ಸಿಇಒ ರವಿಕುಮಾರ್, ಸಂವಹನ ವಿಭಾಗದ ಮುಖ್ಯಸ್ಥೆ ಪ್ರೊ.ಬಿ.ಶೈಲಶ್ರೀ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕೀ ಉತ್ತರ ಪ್ರಕಟ

ಬೆಂಗಳೂರು: 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಪೂರ್ವಭಾವಿ ಮರು ಪರೀಕ್ಷೆಯ ಅಂತಿಮ ಪರಿಷ್ಕೃತ ಕೀ ಉತ್ತರವನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಕಟಿಸಲಾಗಿದೆ. ಈ ಕುರಿಕಂತೆ ಕೆಪಿಎಸ್‌ಸಿ ಮಾಹಿತಿ ನೀಡಿದ್ದು, ಆಯೋಗದಿಂದ ದಿನಾಂಕ 29-12-2024ರಂದು ಗೆಜೆಟೆಡ್ ಪ್ರೊಬೆಷನರ್ 384 ಹುದ್ದೆಗಳಿಗೆ ಪೂರ್ವಭಾವಿ ಮರು ಪರೀಕ್ಷೆ ನಡೆಸಲಾಗಿತ್ತು. ಪೂರ್ವಭಾವಿ ಮರು ಪರೀಕ್ಷೆಗೆ ಸಂಬಂಧಿಸಿದಂತೆ ಪತ್ರಿಕೆ-1 ಮತ್ತು ಪತ್ರಿಕೆ-2 ಕೀ ಉತ್ತರಗಳನ್ನು ದಿನಾಂಕ 15-01-2025ರಂದು ಪ್ರಕಟಿಸಿ, ಅಭ್ಯರ್ಥಿಗಳು ಕೀ-ಉತ್ತರಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸಲು ಜ.22ರವರೆಗೆ ಕಾಲಾವಕಾಶವನ್ನು ನೀಡಲಾಗಿತ್ತು ಎಂಬುದಾಗಿ ತಿಳಿಸಿದೆ. ಅಭ್ಯರ್ಥಿಗಳಿಂದ ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ ಪತ್ರಿಕೆ-1 ಮತ್ತು ಪತ್ರಿಕೆ-2ಗಳಿಗೆ ಸಂಬಂಧಿಸಿದಂತೆ ಅಂತಿಮ ಪರಿಷ್ಕೃತ ಕೀ ಉತ್ತರವನ್ನು ಪ್ರಕಟಿಸಲಾಗಿದೆ. ಪತ್ರಿಕೆ ಒಂದರಲ್ಲಿ ಮೂರು ಪ್ರಶ್ನೆಗಳಿಗೆ ಕೃಪಾಂಕ ನೀಡಿದ್ದರೆ, ಪತ್ರಿಕೆ-2ಕ್ಕೆ ಸಂಬಂಧಿಸಿದಂತೆ ಎರಡು ಪ್ರಶ್ನೆಗಳಿಗೆ ಕೃಪಾಂಕವನ್ನು ನೀಡಿದೆ. ಈ ಮೂಲಕ ಐದು ಪ್ರಶ್ನೆಗಳಿಗೆ ಕೆಎಎಸ್ ಹುದ್ದೆಯ ನೇಮಕಾತಿ ಪೂರ್ವಭಾವಿ ಮರು ಪರೀಕ್ಷೆಯಲ್ಲಿ ಕೃಪಾಂಕ ನೀಡಿದೆ.

{ **ಯದುವೀರ್ ಒಡೆಯರ್** } ಸಂಸದರು

ಬೆಂಗಳೂರು ಅರಮನೆ ಆಸ್ತಿ ವಿಚಾರದಲ್ಲಿ ರಾಜ್ಯಪಾಲರು ಸುಗ್ರೀವಾಜ್ಞೆಗೆ ಸಹಿ ಹಾಕಿದ್ದಾರೆ ಎಂಬ ಮಾಹಿತಿ ಬಂದಿದೆ. ನಾವು ಅದಕ್ಕೆ ವಿರುದ್ಧವಾಗಿ ಕಾನೂನಾತ್ಮಕವಾಗಿ ಹೋರಾಟ ಮಾಡುತ್ತೇವೆ. ಪಾರಂಪರಿಕ ಕಟ್ಟಡಗಳನ್ನು ಸರಿಯಾದ ಕ್ರಮದಲ್ಲಿ ನಿರ್ವಹಣೆ ಮಾಡಿ ಉಳಿಸಿಕೊಳ್ಳಬೇಕು.



ಭಾರತವನ್ನು ಹಿಂದೂಸ್ಥಾನ ಮಾಡಲು ಬಿಜೆಪಿ, ಆರ್‌ಎಸ್‌ಎಸ್ ಸಜ್ಜಾಗಿದೆ । ಮನುಸ್ಮೃತಿಯನ್ನು ಮರುಜಾರಿಗೊಳಿಸಲು ಹಿಡನ್ ಅಜೆಂಡಾ । ಬಿಜೆಪಿಯಿಂದ ಹೆಜ್ಜೆ ಗುರುತು ಅಳಿಸುವ ಪ್ರಯತ್ನ: ಸಿದ್ದು

ಮತಾಂಧ ಶಕ್ತಿಗಳಿಂದ ಸಂವಿಧಾನಕ್ಕೆ ಧಕ್ಕೆ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮತಾಂಧ ನಾಥೂರಾಮ್ ಗೋಡ್ಸೆ ಮಹಾತ್ಮ ಗಾಂಧಿಯವರನ್ನು ಗುಂಡಿಟ್ಟು ಕೊಂದು, ಅವರು ಇಹಲೋಕ ತ್ಯಜಿಸಿರಬಹುದು. ಆದರೆ ಮಹಾತ್ಮ ಗಾಂಧೀಜಿಯವರ ಮೌಲ್ಯಗಳನ್ನು ಕೊಲ್ಲಲು ಗೋಡ್ಸೆಯಾಗಲಿ ಅಥವಾ ಇನ್ಯಾರಿಂದಾಗಲಿ ಸಾಧ್ಯವಿಲ್ಲ. ಇಂದಿಗೂ ಅವರ ವಿಚಾರಧಾರೆಗಳು , ಮೌಲ್ಯಗಳು ಭಾರತದಲ್ಲಿ ಮಾತ್ರವಲ್ಲ ಜಗತ್ತಿನಲ್ಲಿಯೇ ಪ್ರಸ್ತುತವಾಗಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಹುತಾತ್ಮರ ದಿನಾಚರಣೆ ಅಂಗವಾಗಿ ವಿಧಾನಸೌಧದ ಮಹಾತ್ಮ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಮಾತನಾಡಿ, ಮಹಾತ್ಮ ಗಾಂಧಿ ಯಾವಾಗಲೂ ಎಲ್ಲ ಧರ್ಮಗಳೊಂದಿಗೆ ಸಹಿಷ್ಣುತೆಯನ್ನು ಕಲಿಸಿದರು. ಮಹಾತ್ಮ ಗಾಂಧಿ ಮತ್ತು ಡಾ. ಬಿ.ಆರ್ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಹೇಳಿರುವ ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ ನಮ್ಮದು. ಯಾವುದೇ ಜಾತಿ, ಧರ್ಮ ಉತ್ತಮ ಅಥವಾ ಕೀಳಲ್ಲ. ಆಧುನಿಕ ಭಾರತದಲ್ಲಿ ಈ ಮೌಲ್ಯಗಳನ್ನು ಸಂರಕ್ಷಿಸಬೇಕಿದೆ ಎಂದು ಹೇಳಿದರು.

ಕಳೆದ ಕೆಲವು ವರ್ಷಗಳಿಂದ ಸಂವಿಧಾನ ವಿರೋಧಿ, ಒಕ್ಕೂಟ ವ್ಯವಸ್ಥೆಯ ವಿರೋಧಿ ಶಕ್ತಿಗಳು ದೇಶವನ್ನು ಹಾಳು ಮಾಡಲು ಯತ್ನಿಸುತ್ತಿವೆ. ಮಹಾತ್ಮಾ ಗಾಂಧಿ ಮತ್ತು ಅಂಬೇಡ್ಕರ್ ವಿರೋಧಿಸಿದ ದೇಶದಲ್ಲಿ ಒಂದು ಧರ್ಮ, ಒಂದು ಭಾಷೆ ಮತ್ತು ಒಂದು ಸಂಸ್ಕೃತಿಯನ್ನು ಜಾರಿಗೆ ತರುವುದಾಗಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಹೇಳುತ್ತಿವೆ. ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಉಳಿಸಬೇಕು. ಕಾಂಗ್ರೆಸ್ ಇದಕ್ಕಾಗಿ ಹೋರಾಡುತ್ತಿದೆ. ಇದು ಈ ಸಮಯದಲ್ಲಿ ಬಹಳ ಮುಖ್ಯ ಮತ್ತು ಅವಶ್ಯಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಗಾಂಧಿ ಭಾರತಕ್ಕೆ ಪ್ರಾಮಾಣಿಕ ಪ್ರಯತ್ನ: ಗಾಂಧಿ ಭಾರತ ಕಟ್ಟಲು ಪ್ರಾಮಾಣಿಕ ಪ್ರಯತ್ನ ಅಗತ್ಯ. ಗಾಂಧೀಜಿಯವರು ಕೇವಲ ಸ್ವಾತಂತ್ರ್ಯ ಹೋರಾಟ ಮಾಡಲಿಲ್ಲ, ಈ ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಹೇಗಿರಬೇಕೆಂದು ಪರಿಹಾರಗಳನ್ನು ನೀಡಿದ್ದರು. ಭಾರತ ದೇಶ ಗ್ರಾಮಗಳ ದೇಶ. ಗ್ರಾಮಗಳ ಅಭಿವೃದ್ಧಿಯಾಗದೇ ದೇಶ ಅಭಿವೃದ್ಧಿ ಆಗುವುದಿಲ್ಲ ಎಂದು ಹೇಳಿದ್ದರು. ಅದಕ್ಕಾಗಿಯೇ ಗ್ರಾಮ ಸ್ವರಾಜ್ಯ ಎಂಬಾ ಪರಿಕಲ್ಪನೆಯನ್ನು ಪ್ರತಿಪಾದಿಸಿದ್ದರು. ಗ್ರಾಮಗಳು ಸ್ವಾವಲಂಬಿಗಳಾಗಬೇಕು.ಆಗ ಮಾತ್ರ ಜನ, ದೇಶ ಸ್ವಾವಲಂಬಿಗಳಾಗಿ ಸಾಧ್ಯ.

ಭಾರತದಲ್ಲಿ ಗುಡಿ ಕೈಗಾರಿಕೆಗಳು, ಅತಿ ಸಣ್ಣ ಕೈಗಾರಿಕೆಗಳು ಆರ್ಥಿಕತೆಯ ತಳಹದಿ. ಅದಕ್ಕೆ ಉತ್ತೇಜನ ನೀಡಬೇಕು ಎಂದು ಕರೆ ನೀಡಿದ್ದರು. ಗಾಂಧಿ ಭಾರತ ಕಟ್ಟುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಬೇಕು. ಅವರ ಮೌಲ್ಯಗಳನ್ನು ರೂಢಿಸಿಕೊಂಡು ಅದರಂತೆ ನಡೆಯುವ ಪ್ರಯತ್ನ ಮಾಡಬೇಕು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.



ಹುತಾತ್ಮರ ದಿನಾಚರಣೆ ಅಂಗವಾಗಿ ವಿಧಾನಸೌಧದ ಮಹಾತ್ಮ ಗಾಂಧಿ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಲಾರ್ಪಣೆ ಮಾಡಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಇದ್ದರು.

> **ಬಿಜೆಪಿ ಮತ್ತು ಆರ್‌ಎಸ್‌ಎಸ್ ಮಹಾತ್ಮ ಗಾಂಧಿಯನ್ನು ಕೊಂದ ವ್ಯಕ್ತಿಯನ್ನು ಹೊಗಳಿ ಪೂಜಿಸುತ್ತಿವೆ. ಮಹಾತ್ಮ ಗಾಂಧೀಜಿ ಇಲ್ಲದಿದ್ದರೆ ಈ ದೇಶಕ್ಕೆ ಸ್ವಾತಂತ್ರ್ಯ ಸಿಗುತ್ತಿರಲಿಲ್ಲ. ಇಂತಹ ಮಹಾನ್ ವ್ಯಕ್ತಿಯನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ಅಮಾನವೀಯವಾಗಿ ಕೊಂದಿದ್ದಾರೆ.**
>
> - ಸಿದ್ದರಾಮಯ್ಯ, ಮುಖ್ಯಮಂತ್ರಿ

ಕುಂಭಮೇಳ ಪ್ರದೇಶದಲ್ಲಿ ವಾಹನಗಳಿಗೆ ಪ್ರವೇಶವಿಲ್ಲ । ಪ್ರಯಾಗ್‌ರಾಜ್‌ಗೆ ಸಿಎಂ ಯೋಗಿ ಭೇಟಿ-ಪರಿಶೀಲನೆ

ಮಹಾಕುಂಭ ಮೇಳ ವಿವಿಐಪಿ ಪಾಸ್ ರದ್ದು

ಪ್ರಯಾಗ್‌ರಾಜ್: ಉತ್ತರ ಪ್ರದೇಶದಲ್ಲಿನ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ 'ಮಹಾ ಕುಂಭಮೇಳ'ದಲ್ಲಿ ಬುಧವಾರ ಸಂಭವಿಸಿದ ಕಾಲ್ತುಳಿತಕ್ಕೆ ಕಾರಣವೇನು ಎಂಬುದನ್ನು ತಿಳಿಯಲು ರಾಜ್ಯ ಸರಕಾರ ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ಅದರ ಮಧ್ಯೆಯೇ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರೂ ಮಹಾಕುಂಭಮೇಳ ಸ್ಥಳಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಅಲ್ಲದೇ, ಫೆ.3ರಂದು ವಸಂತ ಪಂಚಮಿ ನಡೆಯಲಿರುವುದರಿಂದ ತ್ರಿವೇಣಿ ಸಂಗಮ ಸ್ಥಳದಲ್ಲಿ ಮತ್ತೊಮ್ಮೆ ಅಮೃತ ಸ್ನಾನಕ್ಕೆ ದಿನ ನಿಗದಿಯಾಗಿದೆ. ಫೆ.1ರಂದು 50ಕ್ಕೂ ಹೆಚ್ಚು ದೇಶಗಳ ಉಪಾಧ್ಯಕ್ಷರು ಹಾಗೂ ರಾಯಭಾರಿಗಳು ಮಹಾಕುಂಭ ಮೇಳಕ್ಕೆ ಆಗಮಿಸಲಿದ್ದಾರೆ. ಫೆ.5ರಂದು ಪ್ರಧಾನಿ ನರೇಂದ್ರ ಮೋದಿ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಲಿದ್ದಾರೆ. ಇದೆಲ್ಲದರ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮಗಳು, ಭದ್ರತಾ ವ್ಯವಸ್ಥೆ ಹೇಗೆ ಆಗಿದೆ ಎಂಬುದನ್ನು ಸಿಎಂ ಯೋಗಿ ಅವರೇ ಖುದ್ದಾಗಿ ಪರಿಶೀಲಿಸಿದರು.

ವಾಹನ ಸಂಚಾರ ರದ್ದು: ಕಾಲ್ತುಳಿತ ಘಟನೆ ನಂತರ ಮಹಾಕುಂಭ ಮೇಳದಲ್ಲಿ ಭಾರೀ ಬದಲಾವಣೆ ಮಾಡಲಾಗಿದೆ. ಮಹಾಕುಂಭ ಮೇಳ ಪ್ರದೇಶವನ್ನು 'ನೋ ವೆಹಿಕಲ್ ಝೋನ್' ಎಂದು ರಾಜ್ಯ ಸರಕಾರ ಗುರುವಾರ ಘೋಷಿಸಿದೆ. ಅಲ್ಲದೇ, ಅತಿ ಗಣ್ಯರಿಗಾಗಿ ಮೀಸಲಿದ್ದ ವಿವಿಐಪಿ ಪಾಸ್ ವಿತರಣೆಯನ್ನೂ ರದ್ದುಗೊಳಿಸಿದೆ.

ಮೌನಿ ಅಮಾವಾಸ್ಯೆ ಹಿನ್ನೆಲೆ ಬುಧವಾರ ಸಂಜೆ 6ರವರೆಗೆ ಒಟ್ಟು 6 ಕೋಟಿ ಭಕ್ತರು ಗಂಗಾ-ಯಮುನಾ ನದಿಗಳು, ತ್ರಿವೇಣಿ ಸಂಗಮ ಸ್ಥಳದಲ್ಲಿ ಅಮೃತ ಸ್ನಾನ ಮಾಡಿದ್ದರು. ಆ ಬಳಿಕವೂ ಭಕ್ತರು ಅಮೃತ ಸ್ನಾನ ಮಾಡುವುದು ಮುಂದುವರಿದಿತ್ತು. ಗುರುವಾರ ಮುಂಜಾನೆಯೂ ಚಳಿ ಮತ್ತು ದಟ್ಟವಾಗಿ ಕವಿದಿದ್ದ ಮಂಜನ್ನೂ ಲೆಕ್ಕಿಸದೆ ಲಕ್ಷಾಂತರ ಭಕ್ತರು ನದಿಗಿಳಿದು ಸ್ನಾನ ಮಾಡಿದರು. ರಾಜ್ಯ ಸರಕಾರದ ಅಂಕಿ ಅಂಶ ಪ್ರಕಾರ ಗುರುವಾರ ನಸುಕಿನಿಂದ ಆರಂಭಿಸಿ ಬೆಳಗ್ಗೆ 8 ಗಂಟೆವರೆಗೆ 55.11 ಲಕ್ಷಕ್ಕೂ ಹೆಚ್ಚು ಭಕ್ತರು ಪವಿತ್ರ ಸ್ನಾನ ಮಾಡಿದ್ದರು.

ತುರ್ತು ವಾಹನಗಳಿಗಷ್ಟೇ ಪ್ರವೇಶ: ಮಹಾ ಕುಂಭಮೇಳದ ಸುಗಮ ನಿರ್ವಹಣೆಗೆ ಪೊಲೀಸ್ ವಾಹನಗಳು, ಆಂಬ್ಯುಲೆನ್ಸ್‌ಗಳಿಗೆ, ಸಕ್ಷನ್ ಮೆಷಿನ್‌ಗಳನ್ನು ಅಳವಡಿಸಿದ ವಾಹನಗಳಿಗೆ ಮಾತ್ರವೇ ಕುಂಭ ಮೇಳ ಪ್ರದೇಶ ಪ್ರವೇಶಕ್ಕೆ ಅನುಮತಿ ನೀಡಲಾಗಿದೆ. ಉಳಿದ ವಾಹನಗಳಿಗೆ ಏನಿದ್ದರೂ ಭಕ್ತರ ನಿರ್ಗಮನ ನಂತರವಷ್ಟೇ ಪ್ರವೇಶ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಾಕುಂಭ ಮೇಳದಲ್ಲಿ ದೇಶ-ವಿದೇಶದ ಭಕ್ತರು ಗುರುವಾರ ನಸುಕಿನಲ್ಲಿ ಗಂಗಾ-ಯಮುನಾ ನದಿಗಳಲ್ಲಿ ಪುಣ್ಯ ಸ್ನಾನ ಕೈಗೊಂಡರು.

ನಾಮಫಲಕದಲ್ಲಿ ಶೇ.60ರಷ್ಟು ಕನ್ನಡ ಸಮರ್ಪಕ ಜಾರಿಗೆ ಸೂಚನೆ

ಬೆಂಗಳೂರು: ರಾಜ್ಯಾದ್ಯಂತ ಎಲ್ಲಾ ವ್ಯಾಪಾರ ಉದ್ದಿಮೆ, ಶಿಕ್ಷಣ ಸಂಸ್ಥೆ, ಅಂಗಡಿ ಮುಂಗಟ್ಟುಗಳ ನಾಮಫಲಕದಲ್ಲಿ ಶೇ.60ರಷ್ಟು ಕನ್ನಡ ಅಳವಡಿಕೆ ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವ

ಶಿವರಾಜ್ ತಂಗಡಗಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಗುರುವಾರ ಸಚಿವರು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೈಗಾರಿಕೆ ಇಲಾಖೆ, ಗೃಹ ಇಲಾಖೆ ಹಾಗೂ ಕಾನೂನು, ಶಾಲಾ ಶಿಕ್ಷಣ, ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧಿಕಾರಗಳ ಜತೆ ಸಭೆ ನಡೆಸಿ ಈ ಸೂಚನೆ ನೀಡಿದ್ದಾರೆ. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ ವನ್ನು ಸಮರ್ಪಕ ಅನುಷ್ಠಾನ ಆಗಲೇ ಬೇಕು. ಕೆಲವೆಡೆ ನಾಮಫಲಕದಲ್ಲಿ ಶೇ. 60ರಷ್ಟು ಕನ್ನಡ ಬಳಕೆಯಾಗಿಲ್ಲ. ಪ್ರಮುಖವಾಗಿ ಸ್ಥಳೀಯ ಅನುಷ್ಠಾನ ಆಡಳಿತದೊಂದಿಗೆ ಪೊಲೀಸರನ್ನೊಳಗೊಂಡ ಟಾಸ್ಕ್ ಫೋರ್ಸ್ ರಚನೆ, ಬಿಬಿಎಂಪಿ ವಲಯಗಳಲ್ಲಿ ಜಾಗೃತ ವಾಹನಗಳ ಬಳಕೆ, ರಾಜ್ಯಾದ್ಯಂತ ಸಾರ್ವಜನಿಕರಲ್ಲಿ ನಾಮ ಫಲಕದಲ್ಲಿ ಶೇ.60ರಷ್ಟು ಕನ್ನಡ ಬಳಕೆ ಬಗ್ಗೆ ಜಾಗೃತಿ ಮೂಡಿಸಬೇಕು. ವಿಧೇಯಕ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಜಾಗೃತಿ ಮೂಡಿಸಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎನ್.ಮಂಜುಳಾ, ನಿರ್ದೇಶಕರಾದ ಡಾ.ಕೆ.ಧರಣಿದೇವಿ ಮಾಲಗತ್ತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ್ ಹಾನಗಲ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಕಾನೂನು, ಕೈಗಾರಿಕೆ, ಕಾರ್ಮಿಕ ಇಲಾಖೆ ಸೇರಿದಂತೆ ಹಲವು ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಆಸ್ತಿಯ ಅಂತಿಮ 'ಬಿಬಿಎಂಪಿ ಇ-ಖಾತಾ' ಪಡೆಯಲು ಸೂಚನೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 22 ಆಸ್ತಿಗಳಿದ್ದು, ಎಲ್ಲ ಆಸ್ತಿಗಳ ಮಾಲೀಕರು ಕೂಡ ನಿಮ್ಮ ಆಸ್ತಿಗೆ ಸಂಬಂಧಪಟ್ಟ ಅಂತಿಮ ಬಿಬಿಎಂಪಿ ಇ-ಖಾತಾ ಪಡೆದುಕೊಳ್ಳಬೇಕು ಎಂದು ಪಾಲಿಕೆ ತಿಳಿಸಿದೆ.

ಪಾಲಿಕೆಯು ನಾಗರಿಕರಿಗೆ ಅನುಕೂಲವಾಗುವಂತೆ ಇ-ಖಾತಾ ವ್ಯವಸ್ಥೆಯನ್ನು ವಿನ್ಯಾಸಗೊಳಿಸಿದ್ದು, ಪಾಲಿಕೆ ಅಧಿಕಾರಿಗಳು ನಿಮ್ಮ ಮಾಹಿತಿ ಮತ್ತು ಆಸ್ತಿ ಫೋಟೊವನ್ನು ನೀಡದೆ ಅವರು ನಿಮ್ಮ ಅಂತಿಮ ಇ-ಖಾತಾವನ್ನು ರಚಿಸಲು ಸಾಧ್ಯವಿಲ್ಲ. ಸುಮಾರು 22 ಲಕ್ಷ ಆಸ್ತಿಗಳಿಗೆ ಕರಡು ಇ-ಖಾತಾಗಳನ್ನು ವಾರ್ಡ್‌ವಾರು ಆನ್‌ಲೈನ್‌ನಲ್ಲಿ BBMPeAasthi.karnataka.gov.in ನಲ್ಲಿ ಹಾಕಲಾಗಿದ್ದು, ಆಸ್ತಿ ತೆರಿಗೆ ರಶೀದಿಯಿಂದ ವಾರ್ಡ್‌ನ್ನು ನೀವು ತಿಳಿದುಕೊಳ್ಳಬಹುದು ಎಂದು ತಿಳಿಸಿದೆ.

ಬಿಬಿಎಂಪಿ ಇ-ಖಾತಾ ಮತ್ತು ಆಸ್ತಿ ತೆರಿಗೆಯನ್ನು ಪಡೆಯಲು ಅನುಕೂಲ ಆಗುವಂತೆ ಕೆಳಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿರುವ ಎರಡು ವಿಡಿಯೊಗಳ ಲಿಂಕ್ ಕೂಡ ಕೊಡಲಾಗಿದ್ದು,

ಸಂಬಂಧಪಟ್ಟ ಆಸ್ತಿ ಮಾಲೀಕರು ಈ ವಿಡಿಯೊ ನೋಡಿ ಅದರಲ್ಲಿ ಕೊಡಲಾಗಿರುವ ಆಯ್ಕೆಗಳ ಅನುಸಾರ ಇ-ಖಾತಾ ಪಡೆದುಕೊಳ್ಳಬಹುದು. ಈ ವಿಡಿಯೊ ಲಿಂಕ್ ಕ್ಲಿಕ್ ಮಾಡಿದ್ದರೆ ಬಿಬಿಎಂಪಿ ಸೂಚಿಸಿದ ವಿಡಿಯೊಗಳು ಪ್ರಸಾರ ಆಗಲಿವೆ. ಯಾವುದೇ ಅನುಮಾನ, ಗೊಂದಲಗಳು ಉಂಟಾದಲ್ಲಿ ಇ-ಖಾತಾ ಸಹಾಯವಾಣಿ 94806 83695ಗೆ ಕರೆ ಮಾಡಬಹುದು.

ಕನ್ನಡ: https://m.youtube.com/watch?v= JR3BxET46po

ಇಂಗ್ಲಿಷ್: https://youtu.be/GL8CWsdn3wo?si= Zu‰EMs3SCw5&wQwT

ದೆಹಲಿ ವಿಧಾನಸಭಾ ಚುನಾವಣೆಗೆ ಕಲ್ಕಾಜಿ ಹಾಗೂ ಕಸ್ತೂರಬಾ ನಗರ ವಿಧಾನಸಭಾ ಕ್ಷೇತ್ರಗಳಿಂದ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವ ಆಲ್ಕ ಲಂಬಾ ಮತ್ತು ಅಭಿಷೇಕ್ ದತ್ ಪರವಾಗಿ ಬುಧವಾರ ದೆಹಲಿಯ ವಿವಿಧ ಕಡೆ ಕರ್ನಾಟಕ ರಾಜ್ಯ ಮಹಿಳಾ ಸಮಿತಿ ಅಧ್ಯಕ್ಷೆ ಸೌಮ್ಯಾರೆಡ್ಡಿ ಬಿರುಸಿನ ಪ್ರಚಾರ ನಡೆಸಿ ಮತ ಯಾಚನೆ ಮಾಡಿದರು. ಈ ವೇಳೆ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಇದ್ದರು.

ಆಸ್ತಿ ತೆರಿಗೆ ಬಾಕಿ: ಆಸ್ತಿ ಹರಾಜಿಗೆ ಸಿದ್ಧತೆ

ಬೆಂಗಳೂರು: ನಗರದಲ್ಲಿ ಸುದೀರ್ಘ ಅವಧಿಯಿಂದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಆಸ್ತಿದಾರರ ಆಸ್ತಿ ಹರಾಜು ಹಾಕಲು ಬಿಬಿಎಂಪಿ ಮುಂದಾಗಿದೆ.

ಕಳೆದ ಹಲವು ವರ್ಷಗಳಿಂದ ಹಲವು ಆಸ್ತಿದಾರರು ಪಾಲಿಕೆಗೆ ಆಸ್ತಿ ತೆರಿಗೆ ಪಾವತಿಸದೆ ಬಾಕಿ ಉಳಿಸಿಕೊಂಡ್ಡಿದ್ದು, ಈ ರೀತಿ ಬಾಕಿಮ ಉಳಿಸಿಕೊಂಡವರಿಗೆ ಪಾಲಿಕೆಯು ಬಿಸಿ

ಮುಟ್ಟಿಸಲು ಮುಂದಾಗಿದ್ದು, ಪ್ರಾಯೋಗಿಕವಾಗಿ ನೋಟಿಸ್ ಜಾರಿ ಮಾಡಿತ್ತು. ನೋಟಿಸ್ ಜಾರಿ ಬೆನ್ನಲ್ಲೇ ನಗರದ ಎಂಟು ವಲಯಗಳಿಂದ ತಲಾ 10 ಆಸ್ತಿದಾರರಿಗೂ ಬಿಸಿ ಮುಟ್ಟಿಸಿದೆ.

ನಗರದಲ್ಲಿ ಹಲವು ವರ್ಷಗಳಿಂದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಹಾಗೂ ಹಲವು ಬಾರಿ ನೋಟಿಸ್ ಜಾರಿ ಮಾಡಿದರೂ ಯಾವುದೇ ಪ್ರತಿಕ್ರಿಯೆ ನೀಡದ ಆಸ್ತಿಗಳನ್ನು ಹರಾಜು ಹಾಕುವುದಕ್ಕೆ ಬಿಬಿಎಂಪಿಯು ಮುಂದಾಗಿದ್ದು, ಪ್ರಾಥಮಿಕವಾಗಿ ಕೆಲ ಆಸ್ತಿದಾರರಿಗೆ ಈ ಸಂಬಂಧ ನೋಟಿಸ್ ಜಾರಿ ಮಾಡಲಾಗಿತ್ತು.ಅದಕ್ಕೆ ಉತ್ತಮವಾಗಿ ಸ್ಪಂದನೆ ದೊರೆತ ಹಿನ್ನೆಲೆ ಇದೀಗ ಇನ್ನಷ್ಟು ಆಸ್ತಿದಾರರಿಗೆ ನೋಟಿಸ್ ನೀಡಲು ಬಿಬಿಎಂಪಿ ಮುಂದಾಗಿದೆ.ನಗರದ ಎಂಟು ವಲಯಗಳಿಂದ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ 640 ಆಸ್ತಿ ತೆರಿಗೆ ಬಾಕಿದಾರರ ಪಟ್ಟಿಯನ್ನು ರೆಡಿ ಮಾಡಿಕೊಳ್ಳಲಾಗಿದ್ದು. ಮುಂದಿನ ವಾರದಲ್ಲಿ ಈ ಎಲ್ಲಾ ಆಸ್ತಿಗಳಿಗೂ ಆಸ್ತಿ ಹರಾಜು ನೋಟಿಸ್ ಜಾರಿ ಮಾಡುವುದಕ್ಕೆ ನಿರ್ಧರಿಸಿದೆ. ಬೆಂಗಳೂರಿನಲ್ಲಿ ಆಸ್ತಿ ತೆರಿಗೆ ಸಂಗ್ರಹದಲ್ಲಿ ಬಿಬಿಎಂಪಿಯು 2023 - 2024ನೇ ಸಾಲಿನಲ್ಲಿ ಹೊಸ ದಾಖಲೆ ಸೃಷ್ಟಿ ಮಾಡಿದ್ದು, ಇನ್ನೂ ಸಾವಿರಾರು ಜನ ಆಸ್ತಿದಾರರು ಅವರ ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿದ್ದಾರೆ. ಹೀಗಾಗಿ ನೋಟಿಸ್ ಹಾಗೂ ಆಸ್ತಿ ಹರಾಜಿಗೆ ಪಾಲಿಕೆ ಮುಂದಾಗಿದೆ. ಈಚೆಗೆ ಬಿಬಿಎಂಪಿಯು ಎಂಟು ವಲಯಗಳಲ್ಲಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ಸ್ಥಿರಾಸ್ತಿ ಹರಾಜು ಹಾಕುವ ಎಚ್ಚರಿಕೆಯನ್ನು ಕೊಟ್ಟು ಪ್ರಾಯೋಗಿಕವಾಗಿ ನೋಟಿಸ್ ಕೊಟ್ಟಿತ್ತು. ಈ ರೀತಿ ನೋಟಿಸ್ ಜಾರಿ ಮಾಡಿದ ಬೆನ್ನಲ್ಲೇ ಹಲವರು ಆಸ್ತಿ ತೆರಿಗೆ ಬಾಕಿಯನ್ನು ಪಾವತಿ ಮಾಡಿದ್ದಾರೆ ಎಂದು ಹೇಳಲಾಗಿದೆ.

> ### ನೋಟಿಸ್ ಬಂದ ಮೇಲೆ ಎಚ್ಚೆತ್ತುಕೊಂಡರು
>
> **ನಗರದಲ್ಲಿ ಹಲವು ವರ್ಷಗಳ ಕಾಲ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವವರು ಹಾಗೂ ಹಲವು ಬಾರಿ ನೋಟಿಸ್ ನೀಡಿದರೂ ನಿರ್ಲಕ್ಷ್ಯ ವಹಿಸಿದ್ದ ಹಲವು ಆಸ್ತಿದಾರರ ಸ್ಥಿರಾಸ್ತಿಯನ್ನು ಹರಾಜು ಮಾಡಲಾಗುವುದು ಎನ್ನುವ ನೋಟಿಸ್ ನೀಡಿದ ಬೆನ್ನಲ್ಲೇ ಆಸ್ತಿ ತೆರಿಗೆ ಪಾವತಿ ಮಾಡಿದ್ದಾರೆ. ಇನ್ನು ಬಿಬಿಎಂಪಿಯು ಆಸ್ತಿ ಬಾಕಿ ಉಳಿಸಿಕೊಂಡವರಿಗೆ ನೋಟಿಸ್ ಕೊಡುತ್ತಿದೆ. ಇದರೊಂದಿಗೆ ಆಸ್ತಿದಾರರ ಮೊಬೈಲ್ ಸಂಖ್ಯೆಗೆ ಆಸ್ತಿ ಹರಾಜು ಹಾಕುವ ಬಗ್ಗೆ ಮೆಸೇಜ್ ಕಳುಹಿಸುವುದಕ್ಕೂ ಬಿಬಿಎಂಪಿ ಮುಂದಾಗಿದೆ ಎಂದು ಕಂದಾಯ ವಿಭಾಗದ ಅಧಿಕಾರಿಗಳು ಹೇಳಿದರು.**

ವಿಶ್ವವಿಖ್ಯಾತ ಕರಗದ ಬಗ್ಗೆ ಜನಪ್ರತಿನಿಧಿಗಳ, ಅಧಿಕಾರಿಗಳ ನಿರ್ಲಕ್ಷ್ಯ

ಐತಿಹಾಸಿಕ ಕರಗಕ್ಕೆ ವೈಟ್‌ಟಾಪಿಂಗ್ ಸಮಸ್ಯೆ

ಬೆಂಗಳೂರು: ಐತಿಹಾಸಿಕ ಬೆಂಗಳೂರು ಕರಗ ಶಕ್ತ್ಯೋತ್ಸವಕ್ಕೆ ದಿನಾಂಕ ನಿಗದಿಯಾಗಿದ್ದು, ಏ.12ರ ಚೈತ್ರ ಪೌರ್ಣಮಿಯಂದು ಕರಗ ಶಕ್ತ್ಯ ನಡೆಯಲಿದೆ ಎಂದು ಧರ್ಮರಾಯ ಸ್ವಾಮಿ ದೇವಾಲಯದ ಮಂಡಳಿ ಅಧ್ಯಕ್ಷ ಸತೀಶ್ ಹೇಳಿದರು.

ಕರಗ ಉತ್ಸವಕ್ಕೆ ದಿನಾಂಕ ನಿಗದಿಯಾಗಿದ್ದು, ಇದರ ನಡುವೆ ಬಿಬಿಎಂಪಿ ಎಸ್‌ಪಿ ರಸ್ತೆಯ ವೈಟ್‌ಟಾಪಿಂಗ್ ಕಾಮಗಾರಿಯನ್ನು ನಡೆಸುತ್ತಿದೆ. ಕರಗೋತ್ಸವಕ್ಕೆ ದಿನಾಂಕವನ್ನು ನಿಗದಿ ಮಾಡಿದ್ದೇವೆ. ಆದರೆ ಪಾಲಿಕೆಯಿನ್ನೂ ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲ, ಇದರಿಂದೇನಾದರೂ ಅನಾಹುತಗಳಾದರೆ ಪಾಲಿಕೆಯೇ ನೇರ ಹೊಣೆಯಾಗುತ್ತದೆ. ಈ ಸಾಲಿನ ಕರಗಕ್ಕೆ ಇನ್ನೂ 2 ತಿಂಗಳು ಮಾತ್ರ ಬಾಕಿ ಇದೆ. ಈಗಾಗಲೇ ಬಿಬಿಎಂಪಿ ಕಾಮಗಾರಿ ಶುರು ಮಾಡಿದ 2 ತಿಂಗಳಾಗಿದೆ, ಇನ್ನೂ ಕೂಡ ಪಾಲಿಕೆ ಕಾಮಗಾರಿ ಪೂರ್ಣ ಮಾಡಿಲ್ಲ, ಹೀಗಾಗಿ ಈ ಬಾರಿಯ ಕರಗಕ್ಕೆ ಪಾಲಿಕೆ ಕಾಮಗಾರಿ ಅಡಚಣೆ ಉಂಟು ಮಾಡಲಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ. ವಿಶ್ವವಿಖ್ಯಾತ ಕರಗದ ಬಗ್ಗೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ವಹಿಸಿದ್ದಾರೆ. ವೈಟ್ ಟಾಪಿಂಗ್ ಕಾಮಗಾರಿ ಮಾಡುತ್ತೇವೆ ಎಂದು

ಹೇಳುತ್ತಿದ್ದಾರೆ. ಒಳಚರಂಡಿ ಪೈಪ್‌ಗಳನ್ನು ಅಳವಡಿಸಲು ದೊಡ್ಡ ದೊಡ್ಡ ಗುಂಡಿಗಳನ್ನು ಅಗೆದಿದ್ದಾರೆ. ತೇರು ಶಾರದಾ ಸರ್ಕಲ್ ಬಳಿ ಬಂದರಷ್ಟೇ ಕರಗ ದೇವಾಲಯದ ಹೊರಗೆ ಬರುವುದು. ಇನ್ನೊಂದು ತಿಂಗಳಲ್ಲಿ ಎಲ್ಲಾ ಕಾಮಗಾರಿ ಮುಗಿಸಿಕೊಡಲು ಒತ್ತಾಯಿಸಿದ್ದು, ಸಿಎಂ, ಡಿಸಿಎಂ, ಬಿಬಿಎಂಪಿಗೆ ದೂರು ನೀಡಲು ನಿರ್ಧಾರ ಮಾಡಲಾಗಿದೆ ಎಂದು ತಿಳಿಸಿದರು. ಕಳೆದ ಎರಡು ತಿಂಗಳಿನಿಂದ ಒಳಚರಂಡಿ ಪೈಪ್‌ಗಳನ್ನು ಅಳವಡಿಸಲು ಗುಂಡಿಗಳನ್ನು ತೆಗೆದಿದ್ದಾರೆ ಆದರೆ ಇನ್ನೂ ಪೈಪ್‌ಗಳನ್ನು ಹಾಕಿಲ್ಲ. ಜೆಸಿಬಿಯಿಂದ ತೆಗೆದಿರುವ ದೊಡ್ಡ ದೊಡ್ಡ ಗುಂಡಿಗಳು ಹಾಗೆ ಇವೆ. ದಾಸಪ್ಪ ಆಸ್ಪತ್ರೆಯಿಂದ ಪೈ ವಿಹಾರ್ ಹೋಟೆಲ್‌ವರೆಗೆ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದೆ. ಫೆ.7ರಂದು ರಥಸಪ್ತಮಿ ಹಿನ್ನೆಲೆಯಲ್ಲಿ ಧರ್ಮರಾಯ ದೇವಾಲಯದಲ್ಲಿ ದ್ರೌಪದಿ ದೇವಿ ರಥೋತ್ಸವ ಇದೆ, ಆದರೆ ಈ ಬಾರಿ ರಥೋತ್ಸವ ನಡೆಯುವುದೇ ಸಂದೇಹವಾಗಿದೆ ಎಂದು ಹೇಳಿದರು.

> ### ನಿಧಾನಗತಿ, ಕಳಪೆ ಕಾಮಗಾರಿ ಆರೋಪ
>
> **ಧರ್ಮರಾಯ ಸ್ವಾಮಿ ದೇವಾಲಯದ ಅಧ್ಯಕ್ಷ ಕೆ. ಸತೀಶ್ ಮಾತನಾಡಿ, ಈ ಬಾರಿ ವಿಶ್ವ ವಿಖ್ಯಾತ ಬೆಂಗಳೂರು ಕರಗ ರಥೋತ್ಸವ ಮಾಡಲು ಆಗುವುದಿಲ್ಲ, ಅಷ್ಟರ ಮಟ್ಟಿಗೆ ರಸ್ತೆಯನ್ನು ಹಾಳು ಮಾಡಿದ್ದಾರೆ. ಧರ್ಮರಾಯಸ್ವಾಮಿ ದೇವಾಲಯದ ಸುತ್ತಮುತ್ತ ರಸ್ತೆ ಕಾಮಗಾರಿ ನಡೆಯುತ್ತಿದೆ. ಜನವರಿ ತಿಂಗಳಾಂತ್ಯಕ್ಕೆ ಕಾಮಗಾರಿ ಮುಗಿಸುತ್ತೇವೆ ಎಂದಿದ್ದರು. ಆದರೆ ಮುಗಿಸಿಲ್ಲ. ನಿಧಾನಗತಿಯ ಮತ್ತು ಕಳಪೆ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.**

ವೇಶ್ಯಾವಾಟಿಕೆ ಅಡ್ಡೆ ಮೇಲೆ ದಾಳಿ: ಇಬ್ಬರ ಬಂಧನ

ಬೆಂಗಳೂರು: ಉದ್ಯೋಗದಾಸೆ ತೋರಿಸಿ ಯುವತಿಯರನ್ನು ವೇಶ್ಯಾವಾಟಿಕೆಗೆ ಬಳಕೆ ಮಾಡುತ್ತಿದ್ದ ಇಬ್ಬರು ಮಹಿಳೆಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಉಮಾ, ಪುಷ್ಪಲತಾ ಬಂಧಿತ ಆರೋಪಿಗಳು. ಬ್ಯಾಡರಹಳ್ಳಿ ಠಾಣಾ ವ್ಯಾಪ್ತಿಯ ಬಿಇಎಲ್ ಬಡಾವಣೆಯಲ್ಲಿ ಹೈ ಫೈ ಮನೆ ಬಾಡಿಗೆ ಪಡೆದಿದ್ದ ಆರೋಪಿಗಳು ಈ ಕೃತ್ಯ ನಡೆಸುತ್ತಿದ್ದರು. ಮನೆ ಮಾಲೀಕರ ಬಳಿ ಪತಿ ಇಲ್ಲ ಎಂದು ಮನೆಯನ್ನು ಬಾಡಿಗೆಗೆ ಪಡೆಯುತ್ತಿದ್ದ ಇವರು ಹೊರ ರಾಜ್ಯದಿಂದ ಬರುವ ಯುವತಿಯರಿಗೆ ಉದ್ಯೋಗದ ಆಸೆ ತೋರಿಸಿ ವೇಶ್ಯಾವಾಟಿಕೆ ದಂಧೆಗೆ ದೂಡುತ್ತಿದ್ದರು. ಗಿರಾಕಿಗಳನ್ನು ಫೋನ್ ಮೂಲಕ ಸಂಪರ್ಕ ಮಾಡಿ ಫೋಟೊಗಳನ್ನು ಕಳುಹಿಸಿ ಡೀಲ್ ಮಾಡುತ್ತಿದ್ದರು. ಖಚಿತ ಮಾಹಿತಿ ಪಡೆದ ಸಿಸಿಬಿ ಮಹಿಳಾ ಸಂರಕ್ಷಣಾ ಘಟಕದ ಅಧಿಕಾರಿಗಳು ದಾಳಿ ನಡೆಸಿ ಓರ್ವ ಯುವತಿಯನ್ನು ರಕ್ಷಿಸಿ ಇಬ್ಬರು ಮಹಿಳೆಯರನ್ನು ಬಂಧಿಸಿದ್ದಾರೆ. ಬೆಂಗಳೂರಿನ ಅನೇಕ ಭಾಗಗಳಲ್ಲಿ ವೇಶ್ಯಾವಾಟಿಕೆ ಅಡ್ಡೆ ಮೇಲೆ ಸಿಸಿಬಿ ದಾಳಿ ನಡೆಸಿದೆ. ಸಂಪಿಗೇಹಳ್ಳಿ, ಕೆ.ಆರ್. ಪುರಂ, ರಾಮಮೂರ್ತಿ ನಗರ, ಹನುಮಂತ ನಗರ ಠಾಣಾ ವ್ಯಾಪ್ತಿಯ ಐಷಾರಾಮಿ ಹೋಟೆಲ್, ಅಪಾರ್ಟ್‌ಮೆಂಟ್‌ಗಳಲ್ಲಿ ದಂಧೆ ನಡೆಸುತ್ತಿದ್ದ 4 ಆರೋಪಿಗಳನ್ನು ಬಂಧಿಸಿ 9 ಮಹಿಳೆಯರನ್ನು ರಕ್ಷಿಸಿದ್ದಾರೆ.

ಮಠದ ಅವ್ಯವಹಾರಗಳ ತನಿಖೆಗೆ ಕೋಡ್ಲು ವೆಂಕಟೇಶ್ ಆಗ್ರಹ

ಬೆಂಗಳೂರು: ಭೀಮಸೇತು ಮುನಿವೃಂದ ಮಠದವರು ರಾಜ್ಯಾದ್ಯಂತ ಹೊಂದಿರುವ ಆಸ್ತಿ ಪಾಸ್ತಿ, ಅವ್ಯವಹಾರಗಳ ಕುರಿತು ಹಾಗೂ ರೈತರಿಗೆ ಕಿರುಕುಳ ಕೊಡುತ್ತಿರುವ ಬಗ್ಗೆ ಸರಕಾರ ಕೂಡಲೇ ವಿಶೇಷ ತನಿಖಾ ತಂಡ ರಚಿಸಿ ತನಿಖೆ ನಡೆಸಬೇಕು ಎಂದು ಶಿವಮೊಗ್ಗ ರಾಜ್ಯ ರೈತಸಂಘದ ಅಧ್ಯಕ್ಷ ಕೋಡ್ಲು ವೆಂಕಟೇಶ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಮಠದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ 1990ರ ದಶಕದಲ್ಲಿ ರೈತರು, ಸಾರ್ವಜನಿಕರು ಭೀಮಸೇತು ಮುನಿವೃಂದ ಮಠದ ವಿರುದ್ಧ ಹೋರಾಟ ಆರಂಭಿಸಿ ಸಂಬಂಧಪಟ್ಟ ಇಲಾಖೆಗಳಿಗೆ ವಿಷಯ ತಲುಪಿಸಲಾಗಿತ್ತು ಎಂದು ಮಾಹಿತಿ ನೀಡಿದರು. ಇನಾಂ ರದ್ದತಿ ಕಾಯಿದೆಯನ್ನು ಹಾಗೂ ಭೂ ಸುಧಾರಣಾ ಕಾಯಿದೆ ಸರಕಾರ ಜಾರಿಗೆ ತಂದಿದ್ದು, ಭೀಮಸೇತು ಮುನಿವೃಂದ ಮಠ ತನ್ನಲ್ಲಿ ಉಳಿಸಿಕೊಂಡ ಜಮೀನುಗಳ ವಿವರ, ಗೇಣಿದಾರರಿಗೆ ಸೇರಬೇಕಾದ ವಿವರ, ಹೆಚ್ಚುವರಿ ಭೂಮಿ ಇತ್ಯಾದಿಗಳ ವಿವರಗಳನ್ನು ಘೋಷಣೆ ಮಾಡಿದೆ. ನ್ಯಾಯಾಲಯಗಳಲ್ಲಿ ನಡೆಯುತ್ತಿರುವ ಮೊಕದ್ದಮೆಗಳಲ್ಲಿ ಜಯಗಳಿಸಲು ನ್ಯಾಯಾಲಯಗಳ ದಾರಿತಪ್ಪಿಸಲೆಂದೇ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯುವತಿಗೆ ಕಿರುಕುಳ: ಪ್ರಕರಣ ದಾಖಲು

ಬೆಂಗಳೂರು: ಸ್ನೇಹಿತನನ್ನು ಕರೆತರಲು ಬುಕ್ ಮಾಡಲಾಗಿದ್ದ ಕ್ಯಾಬ್‌ನಲ್ಲಿ ಯುವತಿಗೆ ಕಿರುಕುಳ ನೀಡಿದ್ದ ಆರೋಪದಡಿ ಇಬ್ಬರು ಆರೋಪಿಗಳ ವಿರುದ್ಧ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿಯೊಬ್ಬರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಇಬ್ಬರು ಅಪರಿಚಿತ ಆರೋಪಿಗಳ ಬಂಧನಕ್ಕೆ ಶೋಧಕಾರ್ಯ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ನಗರದ ಖಾಸಗಿ ಕಾಲೇಜಿನಲ್ಲಿ ವ್ಯಾಸಂಗ ಮುಗಿಸಿದ್ದ ಯುವತಿಯು ಜ.27ರ ಬೆಳಗಿನ ಜಾವ ಸುಮಾರು 2 ಗಂಟೆ ವೇಳೆ ವೈಟ್‌ಫೀಲ್ಡ್‌ನಲ್ಲಿರುವ ಸ್ನೇಹಿತನನ್ನು ಕರೆತರಲು ಉಬರ್ ಕ್ಯಾಬ್ ಬುಕ್ ಮಾಡಿದ್ದರು. ಕಮ್ಮನಹಳ್ಳಿ ಬಳಿ ಬುಕ್ ಮಾಡಿದ್ದ ಕ್ಯಾಬ್ ಹತ್ತಿ ಯುವತಿ ಕುಳಿತುಕೊಳ್ಳುತ್ತಿದ್ದಂತೆ ಇಬ್ಬರು ಅಪರಿಚಿತರು ಕಾರು ಹತ್ತಿದ್ದಾರೆ. ಗಾಬರಿಗೊಂಡ ಯುವತಿ ಕಾರಿನಿಂದ ಇಳಿದು ಓಡಿಹೋಗಲು ಪ್ರಯತ್ನಿಸಿದ್ದರು. ಈ ವೇಳೆ ಆಕೆಯ ಕುತ್ತಿಗೆ ಹಿಡಿದು ಒಬ್ಬ ನೆಲಕ್ಕೆ ಬೀಳಿಸಿದರೆ ಮತ್ತೊಬ್ಬ ಆರೋಪಿಯು ಬಟ್ಟೆಗೆ ಕೈಹಾಕಿದ್ದ. ಆತಂಕಗೊಂಡ ಯುವತಿಯು ರಕ್ಷಣೆಗಾಗಿ ಜೋರಾಗಿ ಕೂಗಿಕೊಂಡಿದ್ದರು. ಸಾರ್ವಜನಿಕರು ನೆರವಿಗೆ ಬರುತ್ತಿದ್ದಂತೆ ಕ್ಷಣಾರ್ಧದಲ್ಲಿ ಆರೋಪಿಗಳು ಕಾಲ್ಕಿತ್ತಿದ್ದಾರೆ ಎಂದು ದೂರಿನಲ್ಲಿ ಸಂತ್ರಸ್ತೆ ಆರೋಪಿಸಿದ್ದಾರೆ. ಯುವತಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಬಂಧನಕ್ಕಾಗಿ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸುತ್ತಿದ್ದು, ಶೀಘ್ರದಲ್ಲಿ ಅವರನ್ನು ಬಂಧಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ವಿಶ್ವವಾಣಿ ಆರಾಮ

ಸಾಧಕನು ದೇವಿಗೆ ಹತ್ತಿರವಾಗಿ ಉಪಾಸನೆಗೆ ತೊಡಗುತ್ತಾನೆ. ಆಗ ನೀನು ಎಂಬ ಶರೀರದಲ್ಲಿನ ನಾನು ತನ್ನ ಮಿತಿಯನ್ನು ದಾಟಿ ವಿಶ್ವದ ಅರಿವನ್ನು ಪಡೆದು ಕೊಳ್ಳುತ್ತದೆ. ಆನುವಿನ ಮೂಲಕ ಅದು ತಾನು ಎಂಬ ಅರಿವನ್ನು ಪಡೆದುಕೊಳ್ಳುತ್ತದೆ. ಸೊಲ್ಲಿಸಿದರು ಮತ್ತು ನಿಲ್ಲಿಸಿದರು ಆಧಾರ ಈ ನಾಕುತಂತಿಯೇ. ಅದು ಬೇಂದ್ರೆ ಕಂಡ ವಿಶ್ವ ಶಾಂತಿಯ ಕನ್ನಡದ ಮಂತ್ರ.

ಬೇಂದ್ರೆ ಕಂಡ ವಿಶ್ವಶಾಂತಿಯ ಮಂತ್ರ

• ಎನ್.ಎಸ್.ಶ್ರೀಧರ ಮೂರ್ತಿ

ಬೇಂದ್ರೆಯವರಿಗೆ ಜ್ಞಾನಪೀಠ ಪುರಸ್ಕಾರವನ್ನು ತಂದು ಕೊಟ್ಟ 'ನಾಕುತಂತಿ' ಸಂಕಲನದ ಶೀರ್ಷಿಕೆಯ ಕವಿತೆ ಬಹಳ ಸವಾಲಿನದು. ಅದಕ್ಕೆ ಹಲವು ನೆಲೆಗಳ ಅರ್ಥವನ್ನು ನೀಡಿದ್ದರೂ ಇನ್ನೊಂದು ನೆಲೆಯಲ್ಲಿ ಅರ್ಥ ನೀಡ ಬಲ್ಲ ಸಾಧ್ಯತೆಗಳನ್ನು ಉಳಿಸಿಕೊಂಡಿರುವುದನ್ನು ಇದರ ವಿಶೇಷತೆ ಎಂದೇ ಹೇಳಬಹುದು. ನಾಕುತಂತಿ ಕವಿತೆಯಲ್ಲಿ ನಾಲ್ಕು ಭಾಗಗಗಳಿವೆ. ಬೇಂದ್ರೆಯವರು ತಮ್ಮ ಭಾವಸೂಚಿಯಲ್ಲಿ ಹೇಳಿರುವಂತೆ ನಾಕುತಂತಿಯ ನಾಕು ಭಾಗಗಳು ಒಂದೇ ಭಾವದ ನಾಲ್ಕು ಮಗ್ಗಲುಗಳು. ಇಡೀ ಕವಿತೆ ಒಂದು ರೀತಿಯಲ್ಲಿ ಅಂಗವ್ಯವಸ್ಥೆಯ ಮೂರ್ತರೂಪವಾಗಿದೆ. ಇದು ವ್ಯಕ್ತಿಯಲ್ಲಿಯೇ ವಿಶ್ವವನ್ನು ಗುರುತಿಸುತ್ತದೆ. ವಿಶ್ವವನ್ನು ವ್ಯಕ್ತಿಯ ನೆಲೆಯಲ್ಲಿ ಗಮನಿಸುತ್ತದೆ. ಇನ್ನೂ ವಿಸ್ತರಿಸಿ ಹೇಳುವುದಾದರೆ ವಿಶ್ವ ಮತ್ತು ವ್ಯಕ್ತಿ ಈ ದ್ವಂದ್ವವನ್ನು ಮೀರಿ ನಿಲ್ಲುತ್ತದೆ.

ಇಡೀ ಕವಿತೆಯ ರೂಪಕಗಳು ಮಾನವ ದೇಹದಲ್ಲಿನ ಚಕ್ರವ್ಯವಸ್ಥೆಗೆ ಸಂವಾದಿಯಾಗಿ ಕಾರ್ಯ ನಿರ್ವಹಿಸುತ್ತದೆ. ಮೂಲಾಧಾರ-ಬೆನ್ನ ಹುರಿಯ ಬುಡದಲ್ಲಿ (ಮೇರುದಂಡ ಬುಡ) ಸ್ವಾಧಿಷ್ಟಾನ (ನಾಭಿಯ ಕೆಳಗೆ) ಅನಾಹತ(ಹೃದಯ) ವಿಶುದ್ಧ (ಕಂಠ) ಮತ್ತು ಆಜ್ಞಾ (ಭ್ರೂ ಮಧ್ಯೆ). ಇವು ಆರು ದಿಗ್ದೇವತೆಗಳಿಂದ ನಿಯಂತ್ರಿಸಲ್ಪಡುವುದನ್ನು ಇವು ಎರಡೆರಡು ಒಂದು ಗುಂಪಾಗಿ ದೇವಿಯ ಮೂರು ಅಂಶಗಳನ್ನು ಪ್ರತಿನಿಧಿಸುವುದನ್ನು ಹೇಳುತ್ತವೆ. ಇದನ್ನೇ ಕವಿತೆಯ 'ಹಡಗದ ಹುಡುಗಿ'ಯ ರೂಪಕ ಪ್ರತಿನಿಧಿಸುತ್ತದೆ.

ಕವಿತೆಯ ಮೊದಲ ಭಾಗದಲ್ಲಿ ಐದು ನುಡಿಗಳಿವೆ. ಮೊದಲ ನುಡಿಯಲ್ಲಿ ಈಯುವ ಎಂದರೆ ಸೃಷ್ಟಿಯ ಕಲ್ಪನೆ ಇದೆ. ಆವು ಈದಿದ್ದರಿಂದ ನಾವು ಆಗಿದ್ದೇವೆ. ನಾನು ನೀನಿನ ಜೊತೆಗೆ ಸೃಷ್ಟಿಯ ಈನು ಸೇರುವುದರಿಂದ ಆನುವಿಗೆ (ಪರಮಾರತ್ಮನಿಗೆ) ಸ್ಥಿತಿಯ ಸಾಧ್ಯತೆ ದೊರಕಿದೆ(ಬೇನೆ) ಅದನ್ನು ಬೇಂದ್ರೆ 'ಜಾಣಿನಾ' ಎನ್ನುತ್ತಾರೆ. ಇದು ಮಹತ್ವವಾದ (ಚಾರುತಂತ್ರಿಯ) ಪಾದಪಾದವೂ (ಸೃಷ್ಟಿಯ ಪ್ರತಿ ಅಂಶವೂ) ಶ್ರೇಷ್ಟವಾದ ಈ ನಾಲ್ಕನೆಯ ಧ್ವನಿಗೆ ಕಾರಣವಾಗುತ್ತದೆ. ಇದು ಅನಾಹುತವಾದರೆ ಅದರೆ ಬೆನ್ನಿಗೇ ತನನನಎನ್ನುವಲ್ಲಿ ನಾದ ವಿನ್ಯಾಸವೂ ಇದೆ. ಇದು ಆತ್ಮವು ಪರಮಾತ್ಮನ ಜೊತೆಗೆ ಲೀನವಾಗಿ ಬ್ರಹದ ಶೋಧಕ್ಕೆ ಕಾರಣವಾಗುವ ಸಾಧ್ಯತೆಯನ್ನು ಸೂಚಿಸುತ್ತದೆ. ಆನುವಿನಿಂದ ಇಡೀ ಜಗತ್ತು ರೂಪುಗೊಂಡಿದೆ ಎಂಬ ಸಾಧ್ಯತೆ ಅರಿವಾಗುತ್ತದೆ. ಇದು ಕವಿತೆಯ ತಾತ್ವಿಕತೆಗೆ ಅಗತ್ಯವಾದ ಭೂಮಿಕೆಯನ್ನು ರೂಪಿಸುತ್ತದೆ.

ಹಡಗದ ಹುಡುಗಿಯ ನಾದ

ಕವಿತೆಯ ಎರಡನೆಯ ಭಾಗದಲ್ಲಿ ಈಯುವ ವಸ್ತು 'ಹಡಗದ ಹುಡುಗಿ'ಯಾಗುತ್ತಾಳೆ. ಇದನ್ನು ಹಡಗು ಎಂದೇ ಬಹುತೇಕ ವಿದ್ವಾಂಸರು ವ್ಯಾಖ್ಯಾನ ಮಾಡಿದ್ದಾರೆ. ಕೀರ್ತಿನಾಥ ಕುರ್ತುಕೋಟಿಯವರು 'ಹಡಗಿನಿಂದ ಬಂದ ಹುಡುಗಿ' ಎಂದಿದ್ದಾರೆ. ಆದರೆ ಬೇಂದ್ರೆ ಹೇಳಿರುವುದು 'ಹಡಗ'. ಈ ಪದ ತಂತ್ರಮಾರ್ಗದ ಶ್ರೀಕ್ರಮದ ಮೊದಲ ಕಾಂಡದ 3-4ನೆಯ ಶ್ಲೋಕದಲ್ಲಿ ಬರುತ್ತದೆ. ಹೀಗೆಂದರೆ ಕುಂಡಲಿನಿಯ ಉನ್ಮುಖ ಚಲನೆ. ಮುಂದಿನ ಸಾಲುಗಳು ನೇರವಾಗಿ ಕುಂಡಲಿನಿಯ ಕುರಿತೇ ಇರುವುದರಿಂದ ಈ ಅರ್ಥ ಸರಿ ಹೊಂದಬಹುದು ಎನ್ನಿಸುತ್ತದೆ. 'ಕಾಮ: ಎಂಬುದರ ಸಾಮಾನ್ಯ ಅರ್ಥ ಇಚ್ಛೆ. ಆದರೆ ಶಾಸ್ತ್ರೀಯ ನೆಲೆಯಲ್ಲಿ ನೋಡಿದಾಗ ಬಾಹ್ಯ ಪ್ರಚೋದನೆ ಇಲ್ಲದೆ ಲಭಿಸುವ ಚಲನೆ' ಎಂಬ ಅರ್ಥವು ಬರುತ್ತದೆ. ಇದನ್ನು 'ನಾದ' ಎಂದು ಕರೆಯುತ್ತಾರೆ. ತಾಂತ್ರಿಕ ಸಿದ್ಧಾಂತದಂತೆ ಮೂಲಸತ್ಯವಾದ 'ಶಿವ'ಕೇವಲ ಪ್ರಕಟ ರೂಪ. ಕರ್ಮದ ಬಂಧನವಿಲ್ಲದ ಸ್ವತಂತ್ರ ಚೈತನ್ಯ. ಈ ಸಂಜ್ಞೆಯು ಶಕ್ತಿಯ ಒಳಗೆ ಸೇರಿದಾಗ ಇಚ್ಛಾ ಅಥವಾ ವೇದನಾ ರೂಪವು ಪ್ರಕಟವಾಗುತ್ತದೆ. ಇದು ಅನುಭವ ಎಂದು ಕರೆಸಿಕೊಳ್ಳುತ್ತದೆ. ಪ್ರಕಾಶದ ಪ್ರಥಮ ಚಲನೆಯು 'ಬಿಂದು'ವಿಗೆ ಕಾರಣವಾಗುತ್ತದೆ. ಬ್ರಹ್ಮಾಂಡವು ರೂಪುಗೊಂಡಿದ್ದು ಈ ಬಿಂದುವಿನಿಂದಲೇ. ಈ ಬಿಂದುವು ಕ್ರಮೇಣ ವಿಸ್ತಾರ ಹೊಂದಿ ನಾದವಾಗುತ್ತದೆ. ಬಿಂದು ಸ್ವರೂಪನಾದ ಶಿವನು ವರ್ಣಮಾಲೆಯ ಮೊದಲ ಅಕ್ಷರ 'ಅ'ದಿಂದ ಪ್ರತಿನಿಧಿತನಾದರೆ ನಾದಸ್ವರೂಪಿ ಣಿಯಾದ 'ಶಕ್ತಿ'ಯು ಕೊನೆಯ ಅಕ್ಷರ 'ಹ'ದಿಂದ ಪ್ರತಿನಿಧಿತಳಾ ಗುತ್ತಾಳೆ. ಈ ಸಂಯೋಗ ಸ್ವರೂಪಕ್ಕೆ 'ಅಹಂ' ಎಂದು ಹೆಸರು. ಅದು ಸ್ವಪ್ರಜ್ಞೆಯೂ ಆಗಿದೆ. ಇವಳೇ ಕವಿತೆಯಲ್ಲಿನ 'ಹಡಗದ ಹುಡುಗಿ'. ಕುಂಡಲನಿ ಅವಳು ಮೇಲ್ಮುಖ ಚಲನೆಯಲ್ಲಿ ಇದ್ದಾಳೆ.

ನಡುನಡುಗಿ ಬಂದಳು

ಇಂದು ಬೇಂದ್ರೆ ಜನ್ಮದಿನ

'ಅವಳು ಬೆಡಗಿ ಬಂದಳು ನಡುನಡುಗಿ' ಎಂಬ ಕ್ರಿಯೆಯ ಮೂಲಕ ವರ್ಣಿತಳಾಗಿದ್ದಾಳೆ. 'ನಡು' ಎನ್ನುವುದು ಮೂಲಾಧಾರದ ಚಿತ್ರಣ. ಇಲ್ಲಿಂದ ಸ್ವಾಧಿಷ್ಟಾನಕ್ಕೆ ಬರುವಾಗ ಅವಳು ಸಲಿಗೆಯುಳ್ಳವಳಾಗುತ್ತಾಳೆ. ಮೂರನೆಯ ನುಡಿಯ ನಾಡಿಯ ನಡಿಗೆಯ ಎಂಬುದು ಕುಂಡಲಿನಿಯ ಉನ್ಮುಖತೆಯನ್ನು ಹೇಳುತ್ತದೆ. ಅನಾಹತಕ್ಕೆ ಬರುವಾಗ ಅದು ನಲಿವಿನ ನಾಲಗೆಯಾಗುತ್ತದೆ. ಸಹಸ್ರಾರದ ಕಡೆಯ ಚಲನೆ ನೆನೆದಿರೆ ಸೋಲುವ ಚಲನೆ. ಮಾತನ್ನು ದಾಟಿದ ಮೌನವನ್ನು ಸೂಚಿಸುವ ವರ್ಣನೆ ಇದು. ಅಲ್ಲಿಗೆ ತಲುಪಿದ ಮೇಲೆ ಆದಿಯೂ ಇಲ್ಲ ಅಂತ್ಯವೂ ಇಲ್ಲ. ಮುಟ್ಟದ ಮಾಟ, ಹುಟ್ಟದ ಹುಟ್ಟಿಗೆ ಎಂದು ಬೇಂದ್ರೆ ಅದನ್ನು ಕರೆದಿದ್ದಾರೆ. ಅಂತಹದರ ಫಲವೆಂದರೆ ಜೇನಿನ ಥಳಿ ಮಳಿ ಸಿಹಿಯ ತಳಿಯ ಮಳಿ ಅದು ಅಮೃತ ವರ್ಷಣ. ಸನಿಹ ಹನಿಯಾಗಿ ಅದು ಅದು ಸಾಕ್ಷಾತ್ಕಾರದ ಕಡೆಗೆ ನಡೆಯುತ್ತದೆ (ಬಸುರಿನ ಮೊಳಕೆ). ಇಲ್ಲಿ ಪರಮಾನಂದನವನ್ನು ಜೀವನು ಪಡೆಯುತ್ತಾನೆ. ಭೂತದ ಭಾವದಲ್ಲಿ ಎಂದರೆ ಜೀವ ಜಗತ್ತಿನಲ್ಲಿ ಉದ್ಭವ ಜಾವವಾಗಿ ಎಂದರೆ ಹೊಸದಾಗಿ ಲಭಿಸಿದ ಜ್ಞಾನದಲ್ಲಿ ಜ್ಞಾನಕನ್ಯೆಯ ಮೊಲೆಯುಣ್ಣುತ್ತಾನೆ ಎನ್ನುವುದು ಸೃಜನಶೀಲತೆಯ ಪ್ರತಿಮಾತ್ಮಕ ವರ್ಣನೆಯಾಗಿದೆ.

ಚಿತ್ತೀ ಮಳೆ

ಮೂರನೆಯ ಭಾಗದಲ್ಲಿ ಚಿತ್ತೀ ಮಳೆ ಬರುತ್ತದೆ. ಸ್ವಾತಿಮಳೆಯಯಲ್ಲಿ ಹನಿ ಚಿಪ್ಪು ಸೇರಿಮುತ್ತಾಗುತ್ತದೆ. ಆದರೆ ಚಿತ್ತೀಮಳೆಯಲ್ಲಿ ಅದು ಸೃಷ್ಟಿಯ ಪ್ರತ್ಯೇಕತೆಯ ಭಾವವನ್ನು ಪಡೆಯುತ್ತದೆ. ಸುಷಮ್ನ ನಾಡಿಯು ಮೂಲಕ ಮೂಲಾಧಾರವನ್ನು ಪ್ರವೇಶಿಸಿ ಕುಂಡಲಿನಿ ರೂಪದಲ್ಲಿ ಸುಪ್ತವಾಗಿರುತ್ತಾಳೆ. ಶ್ರೀವಿದ್ಯೆಯನ್ನು ಈ ಹಿನ್ನೆಲೆಯಲ್ಲಿ 'ಚಂದ್ರಕಲಾ ವಿದ್ಯೆ' ಎಂದೂ ಕರೆಯುತ್ತಾರೆ. ಆಧಾರ ಕುಂಡವು ಗಾಢಕತ್ತಲೆಯಿಂದ ತುಂಬಿದೆ. ಮಣಿಪೂರವು ಅಗ್ನಿಸ್ಥಾನವಾಗಿದ್ದರೂ ಅಲ್ಲಿ ಕತ್ತಲೆ ಇದೆ. ಜಲವನ್ನೂ ಹೊಂದಿದೆ. ಈ ಜಲವು ಸೂರ್ಯನನ್ನು ಪ್ರತಿನಿಧಿಸುತ್ತದೆ. ಹೃದಯ ಭಾಗದಲ್ಲಿರುವ ಅನಹತ ಕೇಂದ್ರವು ಬೆಳಕಿನಿಂದ ತುಂಬಿದ ಜ್ಯೋತಿರ್ಲೋಕ. ಮೇಲಗಡೆಯಲ್ಲಿ ಇರುವ 'ವಿಶುದ್ಧ' ಕೇಂದ್ರವು ಚಂದ್ರಲೋಕ. ಹೀಗೆದ್ದರೂ ಸೂರ್ಯನ ಸಂಸರ್ಗದ ಕಾರಣದಿಂದ ಇಲ್ಲಿನ ಚಂದ್ರನ ಬೆಳಕು ಇರುವುದಿಲ್ಲ. ಶಿರೋಗ್ರದಲ್ಲಿರುವ ಸಹಸ್ರದಳ ಕೇಂದ್ರವೇ ಚಂದ್ರಪ್ರಕಾಶದಿಂದ ತುಂಬಿದ ಲೋಕ. ಇಲ್ಲಿ ಆತ್ಮ ಸಾಕ್ಷಾತ್ಕಾರದ ನಂತರದ ಸಾವೀಮಗಳಾದ ಜ್ಞಾನಕನ್ಯೆ ಸಿಕ್ಕುತ್ತಾಳೆ. ಅವಳು ಮೋಕ್ಷದ ಸೂಚನೆಯಲ್ಲಿ ಸತ್ತೀಮಗನೆಎನ್ನುತ್ತಾಳೆ. ಸತ್ ಒಂದು ಕಡೆ ಪೂರ್ವಾಶ್ರಮವನ್ನು

ಕಳೆದು ಕೊಳ್ಳುವ ಸೂಚನೆಯಾದರೆ ಸತ್ವದ ಕಡೆಗೆ ನಡೆಯುವ ಸೂಚನೆ ಕೂಡ ಹೌದು. ಈ ಸೃಷ್ಟಿ ತತ್ವವನ್ನು ಬೇಂದ್ರೆಯವರು ಈ ಜಗ (ಬ್ರಹ್ಮಾಂಡ) ಅಪ್ಪ ಅಮ್ಮನ ಮಗ (ಶಿವ ಶಕ್ತಿಯರ ಸಂಯೋಗ) ಪ್ರಕೃತಿಯಲ್ಲಿ ಪುರುಷನ ಮುಖವಿದೆ. ಈ ಪುರುಷನಿಗೆ ಪ್ರಕೃತಿಯ ಹತೋಟಿ ಬೇಕು (ನೊಗ) ಶ್ರೀಗುರು ಅಂದ ಎನ್ನುವುದರಲ್ಲಿ ಹೇಳುವುದು ಮತ್ತು ಸೌಂದರ್ಯ ಎರಡೂ ಅರ್ಥಗಳಿವೆ. ಸತ್ ಕಡೆಗೆ ನಡೆಯುವ ಸೂಚನೆಯನ್ನು ಇಲ್ಲಿ ನೋಡ ಬಹುದು.

ನಾಲ್ಕನೆಯ ಭಾಗದಲ್ಲಿ ಓಂಕಾರ ಪ್ರಸ್ತಾಪ ಬರುತ್ತದೆ. ಅ,ಉ,ಮ್ ಈ ಮೂರು ವಿಭಾಗದಲ್ಲಿ ಅದು ಹುಟ್ಟುವಂತಹದು. ಅಕಾರದಲ್ಲಿ ಪದ್ಮಾಸನ, ಉಕಾರದಲ್ಲಿ ಶರೀರ ಮತ್ತು ಮ್ ಕಾರದಲ್ಲಿ ವಕ್ರತಂಡ ಹೀಗೆ ಜ್ಞಾನೇಶ್ವರಿಯಲ್ಲಿ ಇದನ್ನು ವರ್ಣಿಸಲಾಗಿದೆ. ನಾಕುತಂತಿಯ ಕಾವ್ಯದ ಗಣನಾಯಕನ ಪರಬ್ರಹ್ಮ ರೂಪಿಯಾಗಿ ಆನು ಆಗಿದ್ದಾನೆ. 'ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ ಅಂಬಿಕಾತನಯನಿವನು' ಎಂಬ ಅರಿವಿನಲ್ಲಿ ಈ ಕವಿತೆ ಮೂಡಿದೆ. ಇದನ್ನು ಹಡಗಿನ ಹುಡುಗಿಯ ರೂಪಕಕ್ಕೆ ತಂದರೆ ಶ್ರೀವಿದ್ಯೆಯಲ್ಲಿ ''ಚಕ್ರನಾಯಿಕೆ''ಯರು ಮುಖ್ಯರಾದವರು. ಇವರಿಗೆ ಪ್ರತ್ಯೇಕ ಪ್ರತಿಮಾ ರೂಪ ಬೀಜಾಕ್ಷರಗಳು ನಿರ್ದೇಶಿತವಾಗಿದೆ. ಸಾಧಕನು ತನ್ನ ಗುರಿಯನ್ನು ತಲುಪಲು ಅವರಲ್ಲಿ ಮೂರು ದೇವತೆಗಳ ಆರಾಧನೆ ಮುಖ್ಯ ಎಂದು ಹೇಳಲಾಗಿದೆ. ಅವರನ್ನು ''ತ್ರಿಪುರರಾತ್ರಿ ವಿಧಾದೇವಿ''ಯರು ಎಂದು ಕರೆಯಲಾಗುತ್ತದೆ. ಇವರು ಪರಿವಾರ ದೇವತೆಗಳಂತೆ ಇದ್ದರೂ ಸ್ವತಂತ್ರ ದೇವಿಗಳಂತೆಯೇ ಪೂಜಿಸಲ್ಪಡುತ್ತಾರೆ.

ಬಾಲ ತ್ರಿಪುರ

ಅವರಲ್ಲಿ ಮೊದಲನೆಯವಳು ಮತ್ತು ಅತ್ಯಂತ ಪ್ರಮುಖಳಾದವಳು ಬಾಲ ತ್ರಿಪುರ. ಅವಳು ಮೋಹಕ ಕನ್ಯೆ ಎಂದು ವರ್ಣಿತಳಾಗಿದ್ದಾಳೆ. ಬಾಲಾ ಯಂತ್ರವು ಒಂದು ರೀತಿಯಲ್ಲಿ ಶ್ರೀಚಕ್ರದ ಸಂಕ್ಷಿಪ್ತ ರೂಪವೇ ಆಗಿದೆ. 'ಐಂ ಕ್ಲೀಂ ಸೌ:' ಎಂಬ ತ್ರಯಾಕ್ಷರಿ ಮಂತ್ರವನ್ನು ಈ ದೇವತೆಗೆ ಹೇಳಲ್ಪಟ್ಟಿದೆ. ಬಾಲಾಳು ಮೂರು ಕಣ್ಣುಗಳನ್ನು ಹೊಂದಿದ್ದು ಅರ್ಧಚಂದ್ರನನ್ನು ಧರಿಸಿದ್ದಾಳೆ. ಉದಯ ರವಿಯಂತೆ ಪ್ರಕಾಶಮಾನಳಾದ ಷೋಡಶಿ ರೂಪದಲ್ಲಿ ಅವಳಿದ್ದಾಳೆ. ರಕ್ತವಸನ ಧಾರಿಣಿಯಾದ ಅವಳು ಜಪಮಾಲೆಯನ್ನು ರಜ್ಜುವನ್ನು ಕೈಯಲ್ಲಿ ಧರಿಸಿದ್ದಾಳೆ. ಎರಡನೆಯ ದೇವತೆ ''ಮಂತ್ರಿಣಿ''. ಅವಳು ಶ್ಯಾಮಲ ವರ್ಣದವಳಾಗಿದ್ದು ಮಾತಂಗಿ ಎಂದು ಕರೆಯಲ್ಪಡುತ್ತಾಳೆ. ಶ್ರೀವಿದ್ಯೆಯ ರಕ್ಷಕಳಂತೆ ಕಾರ್ಯ ನಿರ್ವಹಿಸುವುದರಿಂದ ''ಮಂತ್ರಿಣಿ'' ಎಂದು ಕರೆಯಲ್ಪಡುತ್ತಾಳೆ. ''ಹ್ರೀಂ ಶ್ರೀ ಕ್ಲೀಂ ಐಂ'' ಇದು ಅವಳನ್ನು ಗುರುತಿಸುವ ಮಂತ್ರ. ಅವಳು ಎರಡು ಭುಜಗಳುಳ್ಳ ಯುವತಿಯ ರೂಪದಲ್ಲಿ ಇದ್ದು ಒಂದು ಕೈಯಲ್ಲಿ ವೀಣೆಯನ್ನು ಇನ್ನೊಂದು ಕೈಯಲ್ಲಿ ಮಧು ಪಾತ್ರೆಯನ್ನು ಹಿಡಿದಿದ್ದಾಳೆ. ಈ ರೂಪದಲ್ಲಿ ''ಸಂಪತ್ ಪ್ರದಾ ಭೈರವಿ'' ಎಂದೂ ಅವಳನ್ನು ಕರೆಯಲಾಗುತ್ತದೆ. ಮೂರನೆಯ ದೇವತೆಯು ''ದಂಡನಾಥಾ'' ಅವನ್ನು ''ವಾರಾಹಿ'' ಎಂದು ಕೂಡ ಕರೆಯುತ್ತಾರೆ. ಅವಳ ಸ್ತೋತ್ರವು ''ಸ್ಥೂಂ/ಸ/ಕ/ಲ/ಹ್ರೀಂ/ಹ್‌ಸತ್ರೌ'' ಎಂಬುದಾಗಿದೆ. ಅವಳು ಮೂರು ಕಣ್ಣುಗಳನ್ನು ಹೊಂದಿದ್ದು ಅಷ್ಟಭುಜಗಳನ್ನು ಹೊಂದಿದ್ದಾಳೆ. ವರಾಹಮುಖಿಯಾಗಿದ್ದು ಕದಂಬ ವೃಕ್ಷದ ಕೆಳಗೆ ಕುಳಿತಿದ್ದಾಳೆ. ಈ ರೂಪದಲ್ಲಿ ಅವಳನ್ನು ಚೈತನ್ಯ ಭೈರವಿ ಎಂದು ಕರೆಯುತ್ತಾರೆ. ಈ ಎಲ್ಲವೂ 'ನಾಕುತಂತಿ'ಯಲ್ಲಿ ಚಿತ್ರಿತವಾಗಿದೆ.

ಪರಮ ಚೈತನ್ಯದಲ್ಲಿ ಹೊಕ್ಕ ನಂತರ ಸಾಧಕನು ಅದನ್ನು ಉಳಿಸಿಕೊಳ್ಳಲು ದೇವಿಯ ನೆರವನ್ನೇ ಕೋರಿ ಕೊಳ್ಳುತ್ತಾನೆ. ಇದರಿಂದ ತಾನು ಕಾಣುವುದು ಸಾಧ್ಯ. ನಂತರ ಸಾಧಕನು ತನ್ನೊಳಗಿನ ಕತ್ತಲೆಯನ್ನು ಕಳೆದುಕೊಂಡು ಬೆಳಕಿನ ಮಹಾಸಮುದ್ರವನ್ನು ಪ್ರವೇಶಿಸುತ್ತಾನೆ; ದೇವಿಗೆ ಹತ್ತಿರವಾಗಿ 'ಉಪಾಸನೆ'ಗೆ ತೊಡಗುತ್ತಾನೆ. ಆಗ ನೀನು ಎಂಬ ಶರೀರದಲ್ಲಿನ ನಾನು ತನ್ನ ಮಿತಿಯನ್ನು ದಾಟಿ ವಿಶ್ವದ ಅರಿವನ್ನು ಪಡೆದು ಕೊಳ್ಳುತ್ತದೆ. ಆನುವಿನ ಮೂಲಕ ಅದು ತಾನು ಎಂಬ ಅರಿವನ್ನು ಪಡೆದು ಕೊಳ್ಳುತ್ತದೆ. 'ಸೊಲ್ಲಿಸಿದರು ಮತ್ತು ನಿಲ್ಲಿಸಿದರು' ಆಧಾರ ಈ ನಾಕುತಂತಿಯೇ. ಅದು ಬೇಂದ್ರೆ ಕಂಡ ವಿಶ್ವಶಾಂತಿಯ ಕನ್ನಡದ ಮಂತ್ರ.

ವಿಷಾದದಿಂದ ಅರಿವಿನೆಡೆಗೆ

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ತನ್ನೊಡನೆ ಎಷ್ಟೇ ನದಿಗಳು ಬಂದು ಹೋದರು ಮಹಾಸಾಗರವು ಪ್ರಭಾವಿತವಾಗದಿರುವಂತೆ ವ್ಯಕ್ತಿಯು ಆಸೆಗಳಿಂದ ವಿಚಲಿತನಾಗದೆ ಇದ್ದಾಗ ಅವನಿಗೆ ನೆಮ್ಮದಿ ಸಿಗುತ್ತದೆ ಎಂದು ಕೃಷ್ಣ ಹೇಳುತ್ತಾನೆ (2.70). ನಿರ್ಮಮ (ನಾನು ರಹಿತ) ಮತ್ತು ನಿರಹಂಕಾರ (ನಾನು ಕರ್ತೃ ಎಂಬ ಭಾವನೆ ಇಲ್ಲದಿರುವುದು) ಇವು ಅಂತಿಮ ಸ್ಥಿತಿಯನ್ನು ತಲುಪಲು ಬೇಕಾಗುವ ಶಾಂತಿಗೆ ಮಾರ್ಗಗಳಾಗಿವೆ. ಅದನ್ನು ತಲುಪಿದ ನಂತರ ಯಾರೂ ಭ್ರಮೆಗೆ ಒಳಗಾಗುವುದಿಲ್ಲ.

ಇಲ್ಲಿ ಕೃಷ್ಣ ಮಹಾಸಾಗರ ಉದಾರಣೆ ಕೊಡುತ್ತಾನೆ. ಮೋಕ್ಷ (ಅಂತಿಮ ಸ್ವಾತಂತ್ರ್ಯ ಆನಂದ ಮತ್ತು ಅನುಕಂಪ) ಅಂತಿಮ ಸ್ಥಿತಿ ಇಂದ್ರಿಯಗಳಿಂದ ಸತತವಾಗಿ ಉಂಟಾದ ಪ್ರೇರಣೆಗಳು ನದಿಗಳ ಹಾಗೆ ಮಹಾಸಾಗರದಂತೆ ವ್ಯಕ್ತಿಯ ಮನಸ್ಥಿತಿ ತಲುಪಿದಾಗ ಅಚಲವಾಗಿ ಸ್ಥಿರವಾಗಿ ನಿಲ್ಲುತ್ತಾನೆ. ಆಮಿಷ ಆಸೆಗಳು ಉಂಟಾದರೂ ಅವನು ಕದಲುವುದಿಲ್ಲ. ಎರಡನೆಯದಾಗಿ ನದಿಗಳು ಮಹಾಸಾಗರ ಸೇರಿದಾಗ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. ಅದರಂತೆಯೇ ವ್ಯಕ್ತಿಗೆ ಅಂತಿಮ ಸ್ಥಿತಿಯಲ್ಲಿ ಆಸೆಗಳು ಉಂಟಾದರೆ ಅವು ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತವೆ.

ಮೂರನೆಯದಾಗಿ ಒಂದು ವಸ್ತು ನಮ್ಮನ್ನು ದು:ಖಿತ ರನ್ನಾಗಿ ಮಾಡಿದರೆ ಅದು ಬಾಹ್ಯ ಜಗತ್ತಿನ ಪ್ರಚೋದನೆ ಹಾಗೂ ಅದನ್ನು ನಿಯಂತ್ರಿಸುವಲ್ಲಿ ನಮ್ಮ ಅಸಾಮರ್ಥ್ಯದಿಂದ ಉಂಟಾದ ಪ್ರತಿಕ್ರಿಯೆ (ಅಕರ್ಮ)ಯಾಗಿರುತ್ತದೆ. ಮಹಾಸಾಗರದಂತೆ ನಾವು ಕೂಡ ಅಂತಹ ತಾತ್ಕಾಲಿಕ ಪ್ರಚೋದನೆಗಳನ್ನು ದೂರ ಮಾಡುವುದನ್ನು ಕಲಿಯ ಬೇಕೆಂಬುದು ಇದರ ಅರ್ಥ (2.14)

ಪ್ರತೀಕರ್ಮಕ್ಕೂ ಕರ್ತೃ ಮತ್ತು ಕರ್ಮಫಲ ಇರುತ್ತದೆ ಎಂದು ನಮ್ಮ ತಿಳುವಳಿಕೆ. ಈ ಮೊದಲು ಕೃಷ್ಣನು ಕರ್ಮ ಮತ್ತು ಕರ್ಮಫಲವನ್ನು ಬೇರೆ ಮಾಡುವ ಮಾರ್ಗವನ್ನು ನಮಗೆ ತೋರಿಸಿದ್ದಾನೆ (2.47) ಈಗ ನಾನು ಎಂಬ ಭಾವನೆ ಹಾಗೂ ಅಹಂಕಾರ (ನಾನೇ ಕರ್ತೃ) ಎಂಬ ಅನಿಸಿಕೆಗಳನ್ನು ಬಿಡಬೇಕೆಂದು ಹೇಳುತ್ತಾನೆ. ಆಗ ಕರ್ತೃ ಮತ್ತು ಕರ್ಮ ಬೇರೆಬೇರೆಯಾಗುತ್ತವೆ. ಒಮ್ಮೆ ಈ ಶಾಂತಿಯ ಶಾಶ್ವತ ಸ್ಥಿತಿಯನ್ನು ತಲುಪಿದಾಗ ಹಿಂದಿರುಗುವ ಪ್ರಶ್ನೆಯೇ ಇಲ್ಲ ಮತ್ತು ಈ ಕ್ರಿಯಾಶೀಲ ಜಗತ್ತಿನಲ್ಲಿಯ ಲಕ್ಷಗಟ್ಟಲೆ ಕ್ರಿಯೆಗಳಲ್ಲಿ ಕರ್ಮವು ಕೇವಲ ಒಂದಾಗಿ ಉಳಿಯುತ್ತದೆ.

ಗೀತೆಯ ಪ್ರಕಾರ ಅಂತಿಮ ಸ್ಥಿತಿಯು ಸಾಂಖ್ಯದ ಮೂಲಕ ವಿಷಾದದ ನಂತರ ಬರುತ್ತದೆ. ಯಾಕೆಂದರೆ ಮೋಕ್ಷವನ್ನು ಉಂಟು ಮಾಡುವ ಸಾಮರ್ಥ್ಯ ಮತ್ತು ಶಕ್ತಿ ಅತಿಯಾದ ನೋವಿಗೆ ಇರುತ್ತದೆ ಎಂಬುದು ನಿಯಮ. ಕೃಷ್ಣನು ಅರ್ಜುನ ನೊಡನೆ ಧನಾತ್ಮಕವಾಗಿ ನಡೆದುಕೊಂಡಂತೆ ಇದು ಇರುತ್ತದೆ. ಮತ್ತು ಈಗಿನ ಕೋವಿಡ್ ಇದಕ್ಕೆ ಅಪವಾದವೂ ಅಲ್ಲ.



• ನರೇಶ್ ಕಾಮತ್, ಶಿವಮೊಗ್ಗ.

ಬದುಕಿನಲ್ಲಿ ಏಕಾಂತವೆಂಬುವುದು ವರವೋ ಶಾಪವೋ ತಿಳಿಯುವ ಮೊದಲೇ ಸಂಗಾತಿಯ ಆಯ್ಕೆ ಬಹುದೊಡ್ಡ ಸವಾಲಾಗಿ ಪರಿಣಮಿಸಿಬಿಡುತ್ತದೆ. ಹೀಗಿರುವಾಗ ಬದುಕಿನ ವಿವಿಧ ಸ್ತರಗಳ ಕುರಿತು ಆಲೋಚಿಸಿಯೇ ಮುಂದಡಿಯಿಡುವುದು ಅಗತ್ಯ!

ಕುಟುಂಬ ವ್ಯವಸ್ಥೆ ರೂಪಿಸುವಲ್ಲಿ ಸಂಗಾತಿಯ ಆಯ್ಕೆ ಹಾಗೂ ವಂಶಾಭಿವೃದ್ಧಿಯ ಯೋಜನೆ ಬಹುಮುಖ್ಯ ಪಾತ್ರವಹಿಸುತ್ತದೆ. ಸಂಸಾರ ಸುಗಮವಾಗಿ ನಡೆಯಲು ಕೆಲವು ಸೂತ್ರಗಳನ್ನು ಪಾಲಿಸುವುದು ಸೂಕ್ತ; ಸೂತ್ರಗಳಿದ್ದಾಗ, ಸಂಸಾರ ನೌಕೆ ಸಮತೋಲನದಲ್ಲಿ ತೇಲುತ್ತದೆ!

- ನನ್ನ ಆದಾಯ ಕುಟುಂಬದ ಸುಗಮ ಜೀವನಕ್ಕೆ ಸಾಕೇ?
- ನಾಳೆ ನನ್ನ ಕುಟುಂಬಕ್ಕೆ ಎದುರಾಗಬಲ್ಲ ಆರ್ಥಿಕ, ಕೌಟುಂಬಿಕ, ಸಾಮಾಜಿಕ ಮತ್ತು ಆರೋಗ್ಯಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ ನನಗಿದೆಯೇ?
- ಸಂಗಾತಿಯೊಡನೆ ಸಾಮರಸ್ಯದಿಂದ ಅರಿತು ನಡೆವುದು ನನ್ನಿಂದ ಸಾಧ್ಯವೇ
- ಮೇಲಿನ ಯಾವುದೇ ಸವಾಲುಗಳನ್ನು ಎದುರಿಸಲು ಸಾಧ್ಯವಿಲ್ಲವೇ? ಹಾಗಿದ್ದರೆ ಏಕಿಲ್ಲ? ಹಾಗೂ ಎದುರಿಸುವ ಶಕ್ತಿಯನ್ನು ಸಂಪಾದಿಸುವುದು ಹೇಗೆ?

ಎಂಬೆಲ್ಲ ವಿಚಾರಗಳ ಕುರಿತು ಮೊದಲೇ ಆಲೋಚಿಸಿ ಪೂರ್ವ ತಯಾರಿ ಮಾಡಿಕೊಳ್ಳುವುದು ವಿಹಿತ. ಇಲ್ಲಿ ಸಂಗಾತಿಯ ಕುರಿತು ಸಾಕಷ್ಟು ತಿಳಿಯುವ ಹಾಗೂ ಅವರ ಆಸಕ್ತಿಗಳ ಕುರಿತು ಮೊದಲೇ ಚರ್ಚಿಸುವುದು ಅನಿವಾರ್ಯ! ಅಗತ್ಯವಿದ್ದರೆ ನಿಮ್ಮ ಮುಂದಿನ ಬದುಕಿನ ಕುರಿತ ನಿರ್ಧಾರಗಳನ್ನು ವಿವರಿಸಿ ಅವರ ಅಭಿಪ್ರಾಯವನ್ನೂ ತಿಳಿದುಕೊಳ್ಳಲು ಪ್ರಯತ್ನಿಸಿ.. ಇಲ್ಲವಾದಲ್ಲಿ ಎತ್ತು ಏರಿಗೆ ಕೋಣ ನೀರಿಗೆ ಎಂಬ ನಾಣ್ನುಡಿಯಂತಾಗಿಬಿಡಬಹುದು ಬದುಕು, ಸಂಗಾತಿಯ ಭಾವನೆಗಳು ನಮ್ಮ ಭಾವನೆಗಳೊಟ್ಟಿಗೆ ಸಾಮರಸ್ಯದಿಂದ ಬೆರೆತಾಗಲಷ್ಟೇ ಬದುಕು ಸುಗಮ! ಸಂಸಾರದಲ್ಲಿ ಪರಸ್ಪರರು ನಿಷ್ಠೆಯಿಂದಿರುವುದು ಅಗತ್ಯ ಇಲ್ಲಿ ಸತ್ಯ, ಅರ್ಧಸತ್ಯ, ಸುಳ್ಳು, ಹಾಗೂ ಅತಿಯಾದ ಕಲ್ಪನೆಗಳು, ಸಂಸಾರದ ದಿಕ್ಕನ್ನೇ ಬದಲಿಸಿಬಿಡುವ ಸಾಮರ್ಥ್ಯ ಹೊಂದಿದ್ದು ಸಾಮರಸ್ಯಕ್ಕೆ ತೊಡಕಾಗಬಲ್ಲ ಯಾವ ವಿಚಾರಗಳೂ ನಿಮ್ಮನ್ನು ಬಾಧಿಸದಂತೆ ಎಚ್ಚರಿಕೆ ವಹಿಸುವುದು ಅನಿವಾರ್ಯ. ಇನ್ನು ವಿವಾಹಪೂರ್ವ ಮನಸ್ಥಿತಿ ಹಾಗೂ ವಿವಾಹದ ನಂತರದ ಮನಸ್ಥಿತಿಗಳೂ ಇಲ್ಲಿ ನಮ್ಮ ಲೆಕ್ಕಚಾರಗಳನ್ನು ತಲೆಕೆಳಗಾಗಿಸಲೂ ಬಹುದು! ತಪ್ಪುಗಳನ್ನು ತಿದ್ದಿಕೊಂಡು ಕ್ಷಮೆಯ ಔದಾರ್ಯವನ್ನು ರೂಢಿಸಿಕೊಂಡರೆ ಬದುಕು ಮತ್ತಷ್ಟು ಸುಂದರಗೊಳ್ಳುವಲ್ಲಿ ಯಾವುದೇ ಸಂಶಯವಿಲ್ಲ. ಘಟಿಸಿಹೋದ ಬದುಕಿನ ಸುಂದರ ಕ್ಷಣಗಳು ಮತ್ತೆಂದೂ ಬರಲಾರವು ಎಂದು ನಾವೇ ಕೊರಗುವುದಾದರೆ ಬದುಕು ಪ್ರಸ್ತುತ ಸ್ಥಿತಿಯ ಸುಮಧುರ ಕ್ಷಣವನ್ನು ಆನಂದಿಸುವ ಮನಸ್ಥಿತಿಯನ್ನೇ ಕೊಂದು ಬಿಡಬಹುದು! ಅದರ ಹೊರತಾಗಿ ಪ್ರತೀ ಕ್ಷಣವನ್ನೂ ಆನಂದಿಸುವ ಮನಸ್ಥಿತಿಯನ್ನು ರೂಢಿಸಿಕೊಂಡಾಗ ಮಾತ್ರ ನಾವು ಮತ್ತು ನಮ್ಮ ಪರಿವಾರ ಆನಂದದಿಂದಿರಲು ಸಾಧ್ಯ.

ಕಹಿ ಮರೆಯಿರಿ

ಹಿಂದೆಂದೋ ನಡೆದ ಕಹಿ ಘಟನೆಯನ್ನು ತಂದು ಇಂದಿನ ನೆಮ್ಮದಿ ಹಾಳುಗೆಡವುವುದು , ಅಥವಾ ನಾಳಿನ ಯಾವುದೋ ಸಮಸ್ಯೆಯನ್ನು ನೆನೆದು ಇಂದಿನ ಕ್ಷೇಮವನ್ನು ಕಳೆದುಕೊಳ್ಳುವುದು ಮೂರ್ಖತನವೇ ಸರಿ.

ಪರಸ್ಪರ ಗೌರವ

ಇನ್ನು ತುಂಬು ಕುಟುಂಬಗಳಲ್ಲಿ ಜೀವನ ಸಾಗಿಸುವುದು ಬಲು ಕಷ್ಟ ಎಂದಾದರೆ ಸ್ವಾರ್ಥರಹಿತ ಬದುಕು ನಡೆಸುವವರಿಗೆ ಅಷ್ಟೇ ಸುಲಭ ಎಂಬುದನ್ನೂ ನಾವು ಅರಿಯಬೇಕಿದೆ. ಇಲ್ಲಿ ಸಾಮರಸ್ಯ ಬಹು ಮುಖ್ಯ. ಪರಸ್ಪರ ಗೌರವಾದರಗಳು ನಮ್ಮ ನೆಮ್ಮದಿಯನ್ನು ಹೆಚ್ಚಿಸುತ್ತವೆ ಎಂಬುದೇ ಇಲ್ಲಿನ ಮೂಲ ಮಂತ್ರ. ಪರಸ್ಪರರ ಪೋಷಕರನ್ನು ಗೌರವಿಸುವುದು ಹಾಗೂ ಅವರ ಇಳಿಸಂಜೆಯನ್ನು ಪ್ರೀತಿಪೂರ್ವಕವಾಗಿ ಬೆಳಗಿಸಿ ಬಾಗಿದ ಜೀವಗಳಿಗೆ ಆಸರೆಯಾಗಿ ನಿಲ್ಲುವ ಕರ್ತವ್ಯದಿಂದ ಯಾರೂಬ್ಬರು ಹಿಂದೆ ಸರಿದರದು ಅಪರಾಧವೇ ಸರಿ! ಇದೆಲ್ಲದರಲ್ಲಿಯೂ ಸಾಮರಸ್ಯ ಸಾಧಿಸಿಯೇ ಮಕ್ಕಳನ್ನು ಪಡೆಯುವುದು ಒಳಿತು, ನಂತರ ಅವರಿಗೆ ಉತ್ತನವಾದ ಶಿಕ್ಷಣ ನೀಡುವುದರೊಂದಿಗೆ ಜವಾಬ್ದಾರಿಯುತ, ಸುಶಿಕ್ಷಿತ ಪ್ರಜೆಗಳನ್ನಾಗಿಸುವಲ್ಲಿ ಹಾಗೂ ಆರೋಗ್ಯವಂತ, ಸದೃಢ ಸಮಾಜ ರೂಪಿಸುವಲ್ಲಿ ಶ್ರಮಿಸಬೇಕು.

ವಿಶ್ವವಾಣಿ

ಯುಗಾದಿ ವಿಶೇಷಾಂಕ 2025

ವಿಶ್ವವಾಣಿಯು ಹೊರತರಲಿರುವ ವರ್ಣರಂಜಿತ ಯುಗಾದಿ ವಿಶೇಷಾಂಕಕ್ಕಾಗಿ, ಓದುಗರಿಂದ ಬರಹಗಳನ್ನು ಆಹ್ವಾನಿಸಲಾಗಿದೆ.

1. ನಾನು ಮಾಡಿದ ರೀಲ್ಸ್

ಈಗ ನಡೆಯುತ್ತಿರುವುದು ಸಾಮಾಜಿಕ ಜಾಲತಾಣದ ಯುಗ. ಮಕ್ಕಳು, ಯುವಜನತೆ, ಹಿರಿಯರು, ಸೆಲೆಬ್ರಿಟಿಗಳು, ಅನಾಮಿಕರು ಎಲ್ಲರೂ ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಿಸಿ, ಅಂತರ್ಜಾಲದಲ್ಲಿ ತೇಲಿಬಿಡುತ್ತಿದ್ದಾರೆ. ಕೆಲವು ರೀಲ್ಸ್‌ಗಳು ಒಮ್ಮೆಗೇ ಎಲ್ಲೆಡೆ ವೈರಲ್ ಆಗುತ್ತಿವೆ! ಇನ್ನು ಕೆಲವು ರೀಲ್ಸ್‌ನ ವಿವರಗಳನ್ನು ನೋಡಿ ಇತರರು ಅನುಕರಿಸುತ್ತಿದ್ದಾರೆ. ಕೆಲವು ರೀಲ್ಸ್‌ಗಳು ಕೆಲವರನ್ನು ಪೇಚಿಗೆ ಸಿಲುಕಿಸಿದ್ದೂ ಉಂಟು! ನೀವು ರೀಲ್ಸ್ ಮಾಡಿದ್ದೀರಾ? ಬೇರೆಯವರ ರೀಲ್ಸ್‌ನಿಂದ ಪ್ರಭಾವಿತರಾಗಿದ್ದೀರಾ? ನಿಮ್ಮ ಅನುಭವವನ್ನು 200 ಪದಗಳ ಒಳಗೆ ಬರೆದು ನಮಗೆ ಕಳುಹಿಸಿ.

2. ಅಪರಿಚಿತರು ಮಾಡಿದ ಸಹಾಯ

ನೀವು ಯಾವುದೋ ದೂರದ ಊರಿಗೆ ಪ್ರವಾಸಕ್ಕೆ ಹೋಗಿರಬಹುದು; ವಿದೇಶ ಪ್ರವಾಸದಲ್ಲಿ ಅದಾವುದೋ ಪ್ರದೇಶದಲ್ಲಿ ಭಾಷೆ ಬಾರದೇ ಪರದಾಡುತ್ತಿರಬಹುದು; ರೈಲಿನ ಪ್ರಯಾಣದಲ್ಲಿ ಬಳಲಿ, ಏನು ಮಾಡುವುದೆಂದು ತೋಚದೇ ಕುಳಿತಿರಬಹುದು; ಕಾಡು ದಾರಿಯ ನಡುವೆ ಬಸವಳಿದು, ಮರದ ಬುಡಕ್ಕೆ ಒರಗಿರಬಹುದು - ಅಂತಹ ಸಂದರ್ಭದಲ್ಲಿ, ಅದಾರೋ ಬಂದು ಸಹಾಯ ಮಾಡಿ, ಸಂಕಷ್ಟವನ್ನು ದೂರಮಾಡಿರಬಹುದು. ಅಂತಹವರು ಕೆಲವರು ನಂತರ ಗೆಳೆಯರೂ ಆಗಿರಬಹುದು; ಇನ್ನು ಕೆಲವರು ತಮ್ಮ ಪಾಡಿಗೆ ತಾವು ಹೋಗಿರಬಹುದು. ಇಂತಹ ಅನುಭವ ನಿಮಗಾಗಿದ್ದರೆ, ಅದನ್ನು 200 ಪದಗಳ ಒಳಗೆ ಬರೆದು ನಮಗೆ ಕಳುಹಿಸಿ.

ನುಡಿ ಅಥವಾ ಯುನಿಕೋಡ್‌ನಲ್ಲಿ ಟಂಕಿಸಿದ ಬರಹಗಳನ್ನು specialvishwa@gmail.com ಇಲ್ಲಿಗೆ ಕಳುಹಿಸಿ. ಸೂಕ್ತ ಎನಿಸಿದರೆ ಪ್ರಕಟಿಸುತ್ತೇವೆ. ಬರಹ ಕಳುಹಿಸಲು ಕೊನೆಯ ದಿನಾಂಕ : 15.2.2025

ವಿಶ್ವವಾಣಿ
31.01.2025 ಶುಕ್ರವಾರ
vishwavani.news

ದಿನ ದರ್ಶಿಕೆ

ಮಾಘ ಮಾಸ, ದ್ವಿತೀಯ ತಿಥಿ, ಶ್ರವಣ ನಕ್ಷತ್ರ, ವರಿಯಾನ್ ಯೋಗ, ಶುಕ್ಲ ಪಕ್ಷ, ವಿಕ್ರಮ ಸಂವತ್ಸರ, ಕೌಲವ ಕರಣ, ರಾಹುಕಾಲ ಬೆಳಗ್ಗೆ 11ರಿಂದ ಅಪರಾಹ್ನ 12.30

ಮನೆಮದ್ದು

ಅಸ್ತಮಾ ರೋಗ ಇರುವವರು ಪಲಾವ್ ಎಲೆಗಳನ್ನು ಮತ್ತು ಲವಂಗಗಳನ್ನು ಚೆನ್ನಾಗಿ ತೊಳೆದು 2 ಗ್ಲಾಸ್ ನೀರಿನಲ್ಲಿ ಚೆನ್ನಾಗಿ ಕುದಿಸಿ, ಖಾಲಿ ಹೊಟ್ಟೆಯಲ್ಲಿ ಬೆಳಗಿನ ಸಮಯದಲ್ಲಿ ಸೇವಿಸಬೇಕು. ತಿಂಡಿ ತಿನ್ನುವ ಅರ್ಧ ಗಂಟೆ ಅಥವಾ ಒಂದು ಗಂಟೆ ಮುಂಚೆ ಕೂಡ ಸೇವಿಸಬಹುದು.

ಸೌಂದರ್ಯ ಸೂತ್ರ

ಹುರಿದ ಕಾಫಿ ಬೀಜಗಳು ನಿಮ್ಮ ಬಾಡಿಗೆ ಸ್ಕ್ರಬ್ ಆಗಿ ಕೆಲಸ ಮಾಡಬಲ್ಲವು. ಅದನ್ನು ಜೇನುತುಪ್ಪದ ಜೊತೆ ಮಿಶ್ರಣ ಮಾಡಿ ವಾಲ್ನಟ್ ಬೀಜಗಳನ್ನು ಪುಡಿಮಾಡಿ ಸೇರಿಸಬಹುದು. ಚರ್ಮದ ಭಾಗದಲ್ಲಿ ಕಂಡುಬರುವ ಸತ್ತ ಜೀವಕೋಶಗಳನ್ನು ನಿವಾರಣೆ ಮಾಡಿಕೊಳ್ಳುವ ಜೊತೆಗೆ ಅದು ತ್ವಚೆಗೆ ಅದ್ಭುತ ಮಾಯಿಶ್ಚರೈಸಿಂಗ್ ಗುಣಲಕ್ಷಣಗಳನ್ನು ಒದಗಿಸಬಹುದು.

ದಿನ ಭವಿಷ್ಯ

ಮೇಷ: ಎಲ್ಲರನ್ನೂ ನೀವು ಕುರುಡಾಗಿ ನಂಬಬೇಡಿ, ಯಾವುದೋ ಅನಗತ್ಯ ವಿಷಯ ನಿಮ್ಮ ಚಿಂತೆಗೆ ಕಾರಣವಾದರೂ ತಲೆಕೆಡಿಸಬೇಡಿ.

ವೃಷಭ: ನಿಮ್ಮಲ್ಲಿರುವ ಉತ್ತಮ ಕ್ರಿಯಾಶೀಲತೆಯನ್ನು ಬಳಸಿ, ಉಜ್ವಲ ಭವಿಷ್ಯವನ್ನು ಕಂಡುಕೊಳ್ಳಲು ಅದು ರಹದಾರಿ.

ಮಿಥುನ: ನೀವಿಂದು ಭಾವುಕರಾಗಿ ವರ್ತಿಸುವುದರಿಂದ ಉತ್ತಮ ದಿನ ಒಳ್ಳೆಯ ದಾಗಲಿದೆ. ಎಲ್ಲರೊಂದಿಗೂ ಹೊಂದಾಣಿಕೆ ಗುಣ ಬೆಳೆಸಿ.

ಕಟಕ: ಆತ್ಮೀಯರ ಉತ್ತಮ ಕೆಲಸಕ್ಕೆ ನೀವೂ ಕೈ ಜೋಡಿಸಿ, ಮುಂದೊಂದು ದಿನ ಅಗತ್ಯ ಸಂದರ್ಭದಲ್ಲಿ ನಿಮಗೆ ಒಳಿತಾಗಲಿದೆ.

ಸಿಂಹ: ನಿಮ್ಮ ಕನಸಿನ ಬಹುಪಾಲು ಈಡೇರುವ ಸಮಯ ಹತ್ತಿರ ಬಂದಿದೆ, ನಿಮ್ಮ ಸಮಯೋಚಿತ ತಾಳ್ಮೆ ಶ್ರೀರಕ್ಷೆಯಾಗಲಿದೆ.

ಕನ್ಯಾ: ಗೊಂದಲದ ಮನಸ್ಸು ನಿಮ್ಮದಾಗಿದ್ದರೂ ಕೂಡ ದೇವರ ಮೇಲಿನ ನಿಮ್ಮ ಭಕ್ತಿ ಕೈಹಿಡಿಯುವದರಿಂದ ಸಮಸ್ಯೆ ಎದುರಾಗದು.

ತುಲಾ: ನಿಮ್ಮ ಸುತ್ತಮುತ್ತ ಇರುವ ಜನರ ಒಳ್ಳೆಯ ಕೆಲಸವನ್ನು ನೀವು ಮೆಚ್ಚಿಕೊಳ್ಳಿ, ಆಗ ಎಲ್ಲರಿಂದಲೂ ಪ್ರಶಂಸೆ ದೊರೆಯದಿರಲ್ಲ.

ವೃಶ್ಚಿಕ: ಉತ್ತಮವಾದ ಆತ್ಮ ವಿಶ್ವಾಸ ಮತ್ತು ಪ್ರಾಮಾಣಿಕತನದ ಗುಣವು ಎದುರಾಗುವ ಸಂಕಷ್ಟದಿಂದ ನಿಮ್ಮನ್ನು ಪಾರು ಮಾಡಲಿದೆ.

ಧನು: ಸ್ವಯಂಕೃತ ಅಪರಾಧಗಳಿಂದ ನಿಮಗೆ ಒಮ್ಮೆ ಹಿನ್ನಡೆ ಎದುರಾದರೂ ಕೂಡಾ, ಅದರಿಂದ ಎಚ್ಚೆತ್ತುಕೊಳ್ಳುವ ಗುಣ ವರದಾನವಾಗಲಿದೆ.

ಮಕರ: ಆರೋಗ್ಯದ ಕುರಿತು ಎಚ್ಚರಿಕೆಯಿಂದ ವರ್ತಿಸಿ, ತೊಂದರೆಯೊಂದರಿಂದ ಪಾರಾದರೆ ಉತ್ತಮ ವೃತ್ತಿಜೀವನ ಸದಾ ನಿಮ್ಮದಾಗಲಿದೆ.

ಕುಂಭ: ನಿಮ್ಮ ವಿಚಾರಧಾರೆಯು ನಿಮ್ಮನ್ನು ಎತ್ತರಕ್ಕೆ ಕೊಡೊಯ್ಯುವ ಸಾಧ್ಯತೆ ಇರುವುದರಿಂದ ನಿಲುವುಗಳಲ್ಲಿ ಗಟ್ಟಿಯಾಗಿ.

ಮೀನ: ಪ್ರವಾಹದ ವಿರುದ್ಧ ಈಜುವ ಶಕ್ತಿಯು ನಿಮ್ಮಲ್ಲಿರುವ ಕಾರಣ ಯಾವುದೇ ಸಮಸ್ಯೆ ಎದುರಾದರೂ ಅದರ ಬಗ್ಗೆ ನಿರ್ಲಕ್ಷ್ಯ ವಹಿಸಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1915-ಮೊದಲ ವಿಶ್ವಯುದ್ಧದಲ್ಲಿ ರಷ್ಯಾ ವಿರುದ್ಧ ಜರ್ಮನಿಯಿಂದ ವಿಷಾನಿಲ ಬಳಕೆ
- 1966-ರಷ್ಯಾದಿಂದ ಚಂದ್ರನತ್ತ ಲೂನಾ-9 ಉಡ್ಡಾವಣೆ
- 1923-ಮೇಜರ್ ಸೋಮನಾಥ ಶರ್ಮಾರ ಜನ್ಮದಿನ

ಚಿತ್ರಸ್ಫೂರ್ತಿ



ಹಿಮದಿಂದ ಆವೃತವಾದ ಚೇನಾದ ರಾಷ್ಟ್ರೀಯ ಹೆದ್ದಾರಿಯ ಅಡೆ-ತಡೆ ನಿವಾರಣೆ.

ಜಮದಗ್ನಿಯ ಕೋಪಕ್ಕೆ ಕೊಡಲಿ ಬೀಸಿದ ಪರಶುರಾಮ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಮಹಾಮುನಿ ಜಮದಗ್ನಿ ಹಾಗೂ ರೇಣುಕಾದೇವಿಯ ಮಗ ಪರಶುರಾಮ. ಆತ ಚಿಕ್ಕವನಾಗಿದ್ದಾಗಲೇ ಆಧ್ಯಾತ್ಮಿಕ ಹಾಗೂ ಶಸ್ತ್ರವಿದ್ಯೆಗಳಲ್ಲಿ ನಿಪುಣತೆಯನ್ನು ಹೊಂದಿದವನು. ಅವನು ಭಗವಾನ್ ಶ್ರೀವಿಷ್ಣುವಿನ ಆರನೇ ಅವತಾರವೆನ್ನುವರು. ಅವನ ತಾಯಿ ರೇಣುಕಾ ಮಹಾ ಪತಿವ್ರತೆ. ಪ್ರತಿದಿನ ಆಕೆ ಆಶ್ರಮದ ಹತ್ತಿರದಲ್ಲಿದ್ದ ನದಿಗೆ ಸ್ನಾನಕ್ಕೆ ಹೋಗುತ್ತಿದ್ದಳು. ಅವಳು ಎಷ್ಟು ಪವಿತ್ರಳೆಂದರೆ, ಅವಳ ಪಾತಿವ್ರತ್ಯದ ಪವಾಡದಿಂದ, ಮರಳಿನಿಂದ ಮಡಿಕೆ ಮಾಡಿ, ಅದರಿಂದ ಮನೆಗೆ ನೀರನ್ನು ತುಂಬಿಸಿಕೊಂಡು ಹೋಗುತ್ತಿದ್ದಳು.

ಒಂದು ದಿನ ಅವಳು ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ, ಆಕಾಶದಲ್ಲಿ ಚಿತ್ರರಥ ಎಂಬ ಗಂಧರ್ವ ಹಾದು ಹೋಗುತ್ತಿದ್ದ. ಅವನ ಪ್ರತಿಬಿಂಬವನ್ನು ಅವಳು ನೀರಿನಲ್ಲಿ ನೋಡಿ, ಯಾರೀ ಪುರುಷ? ಎಷ್ಟು ಸುಂದರವಾಗಿದ್ದಾನೆ ಎಂದು ಮನಸ್ಸಿನಲ್ಲಿ ಅಂದುಕೊಂಡಳು. ಯಾರೇ ಆದರೂ, ಮನಸ್ಸಿನಲ್ಲಿ ಅಂದುಕೊಳ್ಳುವ ವಿಚಾರವಾಗಿದ್ದರೂ, ಅದೇ ಅವಳ ಪವಿತ್ರತೆಗೆ ಕಳಂಕವಾಗಿ ಬಿಟ್ಟಿತು. ಅಂದು ಅವಳು ಮರಳಿನಿಂದ ಮಡಿಕೆ ಮಾಡಲಾಗಲಿಲ್ಲ. ಬಹಳ ಸಮಯವಾಗುತ್ತಾ ಬಂದಿತು. ತನ್ನ ಪತಿ ಕಾಯುತ್ತಿರುತ್ತಾರೆ, ಇಂದು ನಾನು ನೀರನ್ನು ತರಲಾಗಲಿಲ್ಲವೆಂದು ಚಿಂತಿಸುತ್ತಾ, ಬರಿಗೈಯಲ್ಲಿ ಬರುತ್ತಿರುವುದನ್ನು, ದೂರದಿಂದಲೇ ಗಮನಿಸಿದ ಅವಳ ಪತಿ ಜಮದಗ್ನಿ, ತನ್ನ ಜ್ಞಾನಶಕ್ತಿಯಿಂದ ಅಲ್ಲಿ ಏನು ನಡೆಯಿತು ಎಂದು ತಿಳಿದು ಬಹಳವಾಗಿ ಕುಪಿತನಾದ.

ಅಲ್ಲೇ ನಿಲ್ಲು , ನನ್ನ ಬಳಿ ಬರಬೇಡ.. ನಿನ್ನ ಮನಸ್ಸು ಅನ್ಯ ಪುರುಷನಲ್ಲಿ ಒಂದು ಕ್ಷಣ ಆವರಿಸಿತು ಎಂದು ಜೋರಾಗಿ ಗದರಿದ. ಆ ಸಮಯದಲ್ಲಿ ಪರಶುರಾಮ ಆಶ್ರಮದಲ್ಲಿ ಇರಲಿಲ್ಲ. ಉಳಿದ ನಾಲ್ಕು ಮಕ್ಕಳು ತಮ್ಮ ತಂದೆಯ ಕೋಪವನ್ನು ನೋಡಿ ಭಯದಿಂದ ತತ್ತರಿಸಿ ಹೋದರು.

ಜಮದಗ್ನಿ ತನ್ನ ಮಕ್ಕಳನ್ನು ಕರೆದು, ಇವಳಿಗೆ ಸರಿಯಾದ ಶಿಕ್ಷೆ ಕೊಡಬೇಕು, ಯಾರಾದರೂ ಇವಳ ತಲೆಯನ್ನು ಕತ್ತರಿಸಿ ಹಾಕಿ ಎಂದು ಆಜ್ಞೆ ಮಾಡಿದ.

ತಮ್ಮ ತಾಯಿಯನ್ನು ಕೊಲ್ಲಲು ಅವರಾರಿಗೂ ಮನಸ್ಸಾಗಲಿಲ್ಲ, ಎಲ್ಲರೂ ನಿರಾಕರಿಸಿಬಿಟ್ಟರು. ಆ ಸಮಯಕ್ಕೆ ಸರಿಯಾಗಿ ಪರಶುರಾಮ ಅಲ್ಲಿಗೆ ಬಂದ.

ರಾಮ, ಬಾ ಇಲ್ಲಿ, ಪತಿವ್ರತೆಯ ವ್ರತಭಂಗ ಮಾಡಿರುವ ಈ ನಿನ್ನ ತಾಯಿಯನ್ನೂ, ನನ್ನ ಆಜ್ಞೆಯನ್ನು ವಿರೋಧಿಸಿದ ನಿನ್ನ ಸಹೋದರರನ್ನು ಕೊಲ್ಲು ಎಂದು ಆಜ್ಞೆ ಮಾಡಿದ.

ತಂದೆಯ ಆಜ್ಞೆಯನ್ನು, ಪಾಲಿಸಲು ಒಪ್ಪಿಕೊಂಡು, ಎಲ್ಲರ ತಲೆಯನ್ನು ಕತ್ತರಿಸಿಯೇ ಬಿಟ್ಟ ಪರಶುರಾಮ.

ಪರಶುರಾಮ, ನಿನ್ನ ನಿಷ್ಠೆಯನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ, ನಿನಗೆ ಬೇಕಾದ ವರವನ್ನು ಬೇಡಿಕೊ ಮಗನೇ ಎಂದು ಹೇಳಿದ ಜಮದಗ್ನಿ ಮುನಿ.

ತಂದೆಯೇ, ನನಗೆ ನನ್ನ ತಾಯಿ, ನನ್ನ ಸಹೋದರರೇ ನನಗೆ ಸರ್ವಸ್ವ, ಅವರಿಗೆ ಪ್ರಾಣ ಬರುವಂತೆ ಮಾಡಿ ಎಂದು ಬೇಡಿಕೊಂಡ ಪರಶುರಾಮ. ಅಷ್ಟು ಹೊತ್ತಿಗೆ ಕೋಪ ತಣ್ಣಗಾಗಿದ್ದ ಜಮದಗ್ನಿ ಹಾಗೆಯೇ ಆಗಲಿ ಎಂದು, ತನ್ನ ತಪೋಬಲದಿಂದ ಅವರನ್ನೆಲ್ಲಾ ಪುನಃ ಬದುಕಿ ಬರುವಂತೆ ಮಾಡಿದ. ಪರಶುರಾಮ ಅಲ್ಲಿಗೆ ನಿಲ್ಲಲಿಲ್ಲ ತನ್ನ ಮೇಲೆ ಸಂಪ್ರೀತನಾದ ತಂದೆಯ ಬಳಿ ತಂದೆ ನನಗೆ ಇನ್ನೊಂದು ವರ ಬೇಕು ಎಂದು ಕೇಳಿದ. ಅವನು ಕೇಳಿದ ಏನನ್ನು ನಿರಾಕರಿಸುವ ಸ್ಥಿತಿಯಲ್ಲಿ ಮಹಾಮುನಿ ಇರಲಿಲ್ಲ ಆಗಲಿ ಹೇಳು ಎಂದಾಗ, ನಿಮಗೆ ಇಷ್ಟು ಕೋಪ ಒಳ್ಳೆಯದಲ್ಲ, ನೀವು ಕೋಪವನ್ನು ಬಿಡಬೇಕೆಂದು ತಂದೆಯನ್ನು ಬೇಡಿಕೊಂಡ. ಪರಶುರಾಮನ ಮನದ ಇಂಗಿತ ಜಮದಗ್ನಿಗೆ ಅರ್ಥವಾಯಿತು, ಪರಶುರಾಮ ಏನನ್ನು ತನಗಾಗಿ ಕೇಳಿರಲಿಲ್ಲ ಅವನ ಬಗ್ಗೆ ಹೆಮ್ಮೆಯೂ ಅನಿಸಿತು, ಹಾಗೆಯೇ ಆಗಲಿ ಎಂದು ಅಂದಿನಿಂದ ತನ್ನ ಕೋಪವನ್ನು ತೊರೆದ.

ಒಂದೊಮ್ಮೆ ಜೀವನದಲ್ಲಿ ಇಂಥ ಪರಿಸ್ಥಿತಿಗಳು ಬರುತ್ತವೆ. ಆ ಕ್ಷಣಕ್ಕೆ ಸೋತು, ಎರಡು ಹೆಜ್ಜೆ ಹಿಂದಿಟ್ಟು, ನಂತರ ನಿಧಾನವಾಗಿ ಮುಂದಡಿ ಇಡಬೇಕು. ಸೋತು ಗೆದ್ದಾಗ, ತಾಳ್ಮೆ ವಹಿಸಿದಾಗ ಜೀವನದಲ್ಲಿ ಏನನ್ನಾದರೂ ಗೆಲ್ಲಬಹುದು.

ಪ | ದ | ಬಂ | ಧ



ಎಡದಿಂದ ಬಲಕ್ಕೆ

1. ಭಗವಂತನ ಪೂಜಿಸಲು ನಾವು ಹೋಗುವ ಗುಡಿ (4)
3. ಯುದ್ಧಭೂಮಿಗೆ ಮತ್ತೊಂದು ಹೆಸರು (4)
5. ಲಿಖಿತವಾಗಿ ಮಾಡಿಕೊಳ್ಳುವ ಅರಿಕೆ (3)
7. ಸಕಾಲದಲ್ಲಿ ನೆರವಾಗುವ ಮಿತ್ರ (3)
9. ವಿಷಯವೊಂದರಲ್ಲಿ ಪಂಡಿತ (3)
10. ಇದು ಅಸ್ಪಷ್ಟವಾದುದು (3)
12. ಬಟ್ಟೆ ಒಗೆದು ಶುಚಿಮಾಡಿ ಕೊಡುವವನು (3)
13. ಮುಲಾಮು ಹಚ್ಚುವಾಗೇನು ದಾಕ್ಷಿಣ್ಯ (3)
16. ಅಸ್ತವ್ಯಸ್ತವಾಗಿ ಬಂದಿರುವ ಆನೆ (3)
18. ಹಳದಿ ಬಣ್ಣದ ಒಂದು ರಾಸಾಯನಿಕ (3)
19. ಗಣೇಶನಿಗೆ ಪ್ರಿಯವಾದ ಹುಲ್ಲು (3)
21. ತಿಳುವಳಿಕೆ ಇಲ್ಲದವನು (3)
23. ವಿದ್ಯಾರ್ಥಿಗಳು ಪಾಠ ಕೇಳುವ ಕಕ್ಷೆ (4)
24 ನೆರವಾಗುವವನು (4)

ಎಡದಿಂದ ಬಲಕ್ಕೆ

1. ಮಾಣಿಗೆ ನೀಡಿದ ವಂತಿಗೆ (3)
2. ಮೃತ್ಯುದೇವತೆ (2)
3. ಸೂರ್ಯನಿಗೆ ಮತ್ತೊಂದು ಹೆಸರು (2)
4. ಮರ ಕತ್ತರಿಸುವ ಸಾಧನ (4)
6. ಪರೀಕ್ಷೆಯಲ್ಲಿ ತೇರ್ಗಡೆಯಾಗದಿರುವಿಕೆ (3)
8. ತಿರುಗಿ ಬಂದಿರುವ ಗದ್ದಲ, ಗೊಂದಲ (3)
10. ಮತ್ತೊಂದು ಕೈಯೊಂದಿಗೆ ಬಂದಿರುವ ಮೊಸಳೆ (3)
11. ಮುದ ನೀಡಿದ ತಾವರೆ (3)
14. ಅಪಾಯಕಾರಿಯಾಗಬಲ್ಲ ಜೂಜು (3)
15. ನಿರೀಕ್ಷೆಯಿಲ್ಲದೆ ಬಂದ ಅತಿಥಿ (4)
17. ಮೃತ್ಯುದೇವತೆಯೊಂದಿಗೆ ಬಂದಿರುವ ಕಟ್ಟಳೆ (3)
20. ಮೂರಕ್ಷರದ ದುಷ್ಟ (3)
21. ಮರಗಿಡಗಳ ಬುಡದಲ್ಲಿ ನೀರು ನಿಲ್ಲಲು ಮಾಡಿರುವ ಕಟ್ಟೆ (2)
22. ಹಣ್ಣು, ಕಾಯಿ ಮುಂತಾದುವುಗಳ ದ್ರವ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಮೂಲಧನ 4. ದಿಟ್ಟತನ 6. ಗಹನ 8. ಕೆಚ್ಚು 9. ಅಂಚು 11. ಆಣತಿ 14. ತಳಪಾಯ 15. ರುದ್ರಭೂಮಿ 16. ವಣಿಕ 18. ಕಡ 19. ಆವಿ 21. ಜಾತಕ 23. ಅನುಕೂಲ 24. ದಸ್ತಗಿರಿ

ಎಡದಿಂದ ಬಲಕ್ಕೆ: 2. ಲಟಿಕೆ 3. ನಗ 4. ದಿನ 5. ತರಚು 7. ಹರಿಣ 10. ಅಂತಕ 11. ಆರವ 12. ತಿರುಕ 13. ನಿಮಿಷ 17. ನೆರುತ 18. ಕಮಾನು 20. ವಿರಾಗಿ 21. ಜಾಲ 22. ಕದ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಪಫರ್ ಮೀನು

ಮತ್ಸ್ಯವರ್ಗವೊಂದು ಬೃಹತ್ ಪಂಗಡವಾಗಿದ್ದು ಸುಮಾರು ಹತ್ತು ಸಾವಿರದಷ್ಟು ಪ್ರಬೇಧಗಳಿಂದ ಕೂಡಿದೆ. ಅಂತಹ ಮತ್ಸ್ಯವರ್ಗದ ಅಚ್ಚರಿಯೇ ಪಫರ್ ಮೀನು. ಎರಡು ಇಂಚಿನಷ್ಟು ಗಾತ್ರದಿಂದ ಹಿಡಿದು ಮೂರು ಅಡಿಗಳಷ್ಟು ಉದ್ದನೆಯವರೆಗೂ ಬೆಳೆಯುವ ಸಾಮರ್ಥ್ಯವುಳ್ಳ ಪಫರ್ ಮೀನುಗಳು ಕೊರಿಯಾ, ಚೀನಾ,

ಜಪಾನ್ ದೇಶಗಳಲ್ಲಿ ಹೆಚ್ಚು ಕಂಡುಬರುತ್ತವೆ ಮತ್ತು ಇವುಗಳ ಮಾಂಸ ಅಲ್ಲಿನ ನೆಚ್ಚಿನ ಖಾದ್ಯವೂ ಹೌದು. ಒರಟಾದ ಚರ್ಮದಿಂದ ಕೂಡಿದ ಇವುಗಳಿಗೆ ನಾಲ್ಕು ಹಲ್ಲುಗಳಿದ್ದು ಚಿಪ್ಪುಮೀನು, ಮೃದ್ವಂಗಿಗಳು, ಬಸವನಹುಳುಗಳಂತಹ ಅಕಶೇರುಕಗಳನ್ನೇ ಹೆಚ್ಚಾಗಿ ಆಹಾರವನ್ನಾಗಿ ಸೇವಿಸುತ್ತವೆ. ಇವುಗಳ ದೃಷ್ಟಿಯು ಸಾಕಷ್ಟು ತೀಕ್ಷ್ಣವಾಗಿದ್ದು ತನ್ನ ಆಹಾರವನ್ನು ದೂರ ದಿಂದಲೇ ಗುರುತಿಸಿ ಹೊಂಚುಹಾಕಿ ಹಿಡಿದು, ತಮ್ಮ ಉದ್ದನೆಯ ಚೂಪಾದ ಕೊಕ್ಕಿನಿಂದ ಕುಕ್ಕಿ ಸೀಳಿ ತಿನ್ನುತ್ತವೆ. ಹೊರಕವಚವನ್ನು ಹೊಂದಿಲ್ಲದ ಇವುಗಳಿಗೆ ಬೆನ್ನು ಮೂಳೆಗಳಿದ್ದು, ಹಲ್ಲುಗಳು ನಿರಂತರವಾಗಿ ಬೆಳೆಯುತ್ತಿರುತ್ತವೆಯಾದರೂ ಕಠಿಣ ಆಹಾರವನ್ನು ಸೀಳುವುದು ಹಾಗೂ ಜಗಿಯುವುದರಿಂದ ಅವು ಕಾಲಕ್ರಮೇಣ ಸವೆಯುತ್ತಿರುತ್ತವೆ. ಶತ್ರುಗಳು ಎದುರಾದಾಗ ಅಥವಾ ಅಪಾಯ ಬಂದೊದಗುವ ಮುನ್ಸೂಚನೆ ದೊರೆತಾಕ್ಷಣ ಬಲೂನಿನಂತೆ ಉಬ್ಬುವುದು ಅವುಗಳ ತಂತ್ರಗಾರಿಕೆಯಾಗಿದೆ.

● ಪ.ನಾ ಹಳ್ಳಿ ಹರೀಶ್ ಕುಮಾರ್

ಪುಸ್ತಕ ಲೋಕ

1947ರ ನಂತರದ ಭಾರತ

ಮಹಾತ್ಮ ಗಾಂಧಿಯವರ ಮೊಮ್ಮಗ ರಾಜ ಮೋಹನ್ ಗಾಂಧಿ ಅವರು ರಚಿಸಿರುವ ಒಂದು ಅಪರೂಪದ ಪುಸ್ತಕವಿದು. ಇದನ್ನು ಡಾ. . ಬಿ. ಆರ್ ಮಂಜುನಾಥ್ ಅವರು



ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಪುಸ್ತಕದಲ್ಲಿ ಹಲವು ಅಪರೂಪದ ಹೊಸ ಸಂಗತಿಗಳು ದಾಖಲಾಗಿವೆ. ದೇಶಕ್ಕೆ ಸ್ವಾತಂತ್ರ್ಯ ದೊರಕಿದ ನಂತರ ಎಲ್ಲರೂ ಸೇರಿ ಇಡೀ ಜಗತ್ತಿಗೆ ಸ್ಫೂರ್ತಿ ನೀಡುವಂತಹ ಒಂದು ನ್ಯಾಯಯುತವಾದ ಅಭಿವೃದ್ಧಿ ಹೊಂದುವ ದೇಶವನ್ನು ಕಟ್ಟುತ್ತಾರೆಯೇ ಎಂಬ ಪ್ರಶ್ನೆಗೆ ಉತ್ತರ ರೂಪವಾಗಿ ಈ ಪುಸ್ತಕವನ್ನು ರಾಜ್ ಮೋಹನ್ ಗಾಂಧಿ ರಚಿಸಿದರು. ಭಾರತದಲ್ಲಿ ದಾಳಿಗೆ ಒಳಗಾದ ಪ್ರಶ್ನಿಸುವ ಆದರೆ ತಿರಸ್ಕಾರಕ್ಕೆ, ಶಿಕ್ಷೆಗೆ ಗುರಿಯಾದ, ದುರ್ಬಲ, ತುಳಿಯಲ್ಪಟ್ಟ, ನಿರಾಕರಿಸಲ್ಪಟ್ಟ ಹಕ್ಕುಗಳನ್ನು ದಾಖಲಿಸಿದ ಎಲ್ಲಾ ಅನಾಮಧೇಯ ಮತ್ತು ಧೀರ ಸ್ತ್ರೀ-ಪುರುಷ ಭಾರತೀಯ ವರದಿಗಾರರಿಗೆ, ಛಾಯಾಚಿತ್ರಗಾರರಿಗೆ ಈ ಪುಸ್ತಕವನ್ನು ಲೇಖಕರು ಸಮರ್ಪಿಸಿದ್ದಾರೆ.

ಸಂವಹನ ಪ್ರಿಯ, ಸರ್ವರಿಗೂ ಪ್ರಿಯ ಡಾ.ಬಿ.ಕೆ. ರವಿ ಮೇಷ್ಟ್ರು

● **ಪ್ರೊ. ಬಿ.ಶೈಲಶ್ರೀ** ಮುಖ್ಯಸ್ಥರು, ಸಂವಹನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ

ಗ್ರಾಮೀಣ ಸೊಗಡಿನ, ಸರಳ ಹಾಗೂ ಕ್ರಿಯಾಶೀಲತೆಯ ವ್ಯಕ್ತಿತ್ವವುಳ್ಳ ಪತ್ರಕರ್ತ, ಸಾಹಿತಿ, ಸಾಮಾಜಿಕ ಹೋರಾಟಗಾರ, ಅಧ್ಯಾಪಕ, 50 ವರ್ಷಗಳ ಮಾಧ್ಯಮ ಕ್ಷೇತ್ರದಲ್ಲಿನ ಸುಧೀರ್ಘ ಪಯಣದ ಹೊಂದಿರುವ ಪ್ರಸ್ತುತ ಕುಲಪತಿಗಳಾಗಿ ಸೇವೆ ಸಲ್ಲಿಸುತ್ತಿರುವ ಡಾ.ಬಿ.ಕೆ. ರವಿ ಅವರ ನಿಸ್ವಾರ್ಥ ಸೇವೆ ಸಮಾಜಕ್ಕೆ ಅನನ್ಯವಾದ ಕೊಡುಗೆ ಅಂದರೆ ತಪ್ಪಾಗದು.

ಸಂವಹನ ಹಾಗೂ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅಪಾರ ಪಾಂಡಿತ್ಯವುಳ್ಳ ಜ್ಞಾನಿ, ಅಸಾಧ್ಯವಾದುದನ್ನೂ ಸಾಧ್ಯವಾಗಿಸಬಲ್ಲ ಛಲಗಾರ. ಎಷ್ಟೇ ಜನಪ್ರಿಯ ಗಳಿಸಿದರೂ ಪ್ರಚಾರದ ಬೆನ್ನು ಬೀಳದ ಸರಳ ವ್ಯಕ್ತಿ. ಸದಾ ಜನರಿಂದ, ಇಲ್ಲವೇ ನೆಚ್ಚಿನ ವಿದ್ಯಾರ್ಥಿಗಳಿಂದ ಸುತ್ತುವರಿಯಲ್ಪಟ್ಟ ಜನಸ್ನೇಹಿ ಮತ್ತು ಪ್ರೀತಿಯ ಮೇಷ್ಟ್ರು ಡಾ. ಬಿ.ಕೆ ರವಿ ಅವರನ್ನು ನೋಡಿಯೇ 'ಸಂವಹನ ಪ್ರಿಯ, ಸರ್ವರಿಗೂ ಪ್ರಿಯ ಎಂಬ ನಾಣ್ನುಡಿಯನ್ನು ಹುಟ್ಟು ಹಾಕಬಹುದು.

ಶೈಕ್ಷಣಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಮಾಧ್ಯಮ ಲೋಕ ಹಾಗೂ ಸಮುದಾಯ ಸಂಘಟಣೆಯಲ್ಲಿ ಸದಾ ಸಕ್ರಿಯ. ಈ ಕ್ಷೇತ್ರಗಳ ಬೆಳವಣಿಗೆ, ಅಭಿವೃದ್ಧಿಗಾಗಿ ಇವರ ನಿಸ್ವಾರ್ಥ ಸೇವಾ ದುಡಿಮೆಯು ಇಂದು ರವಿ ಮೇಷ್ಟ್ರುಅವರನ್ನು ಬಾನೆತ್ತರಕ್ಕೆ ತಂದು ನಿಲ್ಲಿಸಿದೆ.

ಸಾಮಾನ್ಯನಿಂದ, ವಿವಿ ಕುಲಪತಿವರೆಗಿನ ತನಕ: ಬಿ.ಕೆ. ರವಿ ಅವರು ಕರುನಾಡಿನ ಕೋಟೆನಾಡು ಚಿತ್ರದುರ್ಗ ಜಿಲ್ಲೆಯ ಮೂಲದವರು. ಇವರ ತಂದೆ ಕೃಷ್ಣನ್ ಹಾಗೂ ತಾಯಿ ರತ್ನಮ್ಮ. ರವಿಯವರು ಬಾಲ್ಯದಿಂದಲೇ ಮೇರು ಸಾಹಿತಿ, ಶ್ರೇಷ್ಠ ಕಾದಂಬರಿಕಾರ ತ.ರಾ.ಸು.ರವರ ಪ್ರಭಾವಕ್ಕೆ ಒಳಗಾಗಿ, ಸಾಹಿತ್ಯದ ಆಸಕ್ತಿ ಚಿಗುರಿ ಒಳ್ಳೆಯ ಪುಸ್ತಕ ಓದುವ ಜತೆಗೆ ಬರವಣಿಗೆ ಹವ್ಯಾಸ ರೂಢಿಸಿಕೊಂಡರು. ಆಗಾಗ್ಗೆ ಪ್ರಬಂಧ ಹಾಗೂ ಭಾಷಣದಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವುದಷ್ಟೇ ಅಲ್ಲದೇ ಪ್ರಶಸ್ತಿ, ಬಹುಮಾನವನ್ನು ಗಳಿಸುತ್ತಿದ್ದರು. ಚಿತ್ರದುರ್ಗದಲ್ಲೇ ಪದವಿ ಪೂರ್ವದವರೆಗೆ ಶಿಕ್ಷಣ ಪಡೆದರು. ಅವರು ಮುಂದಿನ ವಿದ್ಯಾಭ್ಯಾಸಕ್ಕಾಗಿ ಪತ್ರಿಕೋದ್ಯಮವನ್ನು ಆಯ್ಕೆ ಮಾಡಿಕೊಂಡು ಮೈಸೂರಿಗೆ ಪಯಣ ಬೆಳೆಸಿ, ಮಹಾರಾಜಾ ಕಾಲೇಜಿನಲ್ಲಿ ಪತ್ರಿಕೋದ್ಯಮ ಪದವಿ ಪಡೆದರು. ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎಸ್.ಕಮ್ಯೂನಿಕೇಶನ್ ಸ್ನಾತಕೋತ್ತರ ಪದವಿ ಪೂರೈಸಿದರು. ಬಳಿಕ ರಾಜ್ಯದ ಹೆಸರಾಂತ ಪತ್ರಿಕೆ ಪ್ರಜಾವಾಣಿಯಲ್ಲಿ ವರದಿಗಾರರಾಗಿ ಕೆಲಸಕ್ಕೆ ಸೇರಿಕೊಂಡು ಪತ್ರಿಕೋದ್ಯಮ ವಿಭಾಗದ ಕ್ರೈಂ, ಸಿನಿಮಾ, ವಿಶೇಷ ಲೇಖನ ಸೇರಿದಂತೆ ವಿಭಿನ್ನ ಬರವಣಿಗೆ ಮೂಲಕ ಅಪಾರ ಓದುಗ ಬಳಗವನ್ನು ಸಂಪಾದಿಸಿಕೊಂಡರು. ಇದರ ಜೊತೆಗೆ ಪತ್ರಿಕೆ ಓದುಗರ ಕಡೆಯಿಂದ ಬಹಳಷ್ಟು ಮೆಚ್ಚುಗೆ ಪತ್ರಗಳು ಬರುತ್ತಿದ್ದವು. 1990 ರಲ್ಲಿ ಅಂದರೆ ಪೂರ್ಣಪ್ರಮಾಣದ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿರುವ ಸಮಯದಲ್ಲೇ ಅಧ್ಯಾಪಕ ಹುದ್ದೆಯೊಂದು ಇವರನ್ನು ಅರಸಿ ಬಂತು. ತಕ್ಷಣಕ್ಕೆ ಅಧ್ಯಾಪಕ ವೃತ್ತಿಯನ್ನು ಸೇರಿಕೊಂಡು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ನೀಡುವ ಕಾಯಕದೊಂದಿಗೆ ಬರವಣಿಗೆ ನಿಲ್ಲಿಸದೆ, ನಿರಂತರವಾಗಿ ಆಕಾಶವಾಣಿ ಹಾಗೂ ಪತ್ರಿಕೆಗಳಿಗೆ ಬರೆಯುತ್ತಿದ್ದರು.

ಬೆಂಗಳೂರು ಆಕಾಶವಾಣಿಯ ಅಂದಿನ ಕಾರ್ಯ ನಿರ್ವಾಹಕರಾಗಿದ್ದ ಕೆ.ಎಸ್. ನಿರ್ಮಲಾದೇವಿಯವರ ಸಹಕಾರದೊಂದಿಗೆ ಅನೇಕ ನಾಟಕಗಳು, ಚಿಂತನ ಮತ್ತು ಭಾಷಣಗಳನ್ನು ಪ್ರಸ್ತುತಪಡಿಸುತ್ತಿದ್ದರು. ಆಕಾಶವಾಣಿಯಲ್ಲಿ ನೂರಕ್ಕೂ ಹೆಚ್ಚು ಬಾನುಲಿ ಭಾಷಣ ಕಾರ್ಯಕ್ರಮಗಳನ್ನು ನೀಡಿದ್ದಾರೆ. ದೂರದರ್ಶನದಲ್ಲಿ ಪ್ರಚಲಿತ ಎಂಬ ಕಾರ್ಯಕ್ರಮವು ಇವರ ನೇತೃತ್ವದಲ್ಲಿ ಮೂಡಿ ಬಂದಿದೆ. ಅದಲ್ಲದೆ, ದೂರದರ್ಶನಕ್ಕೆ ಹಲವಾರು ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿ, ನಿರ್ಮಿಸಿದ್ದಾರೆ.

ಅರ್ಧ ಶತಮಾನದ ಮಾಧ್ಯಮ ಶಿಕ್ಷಣ ಕ್ಷೇತ್ರದಲ್ಲಿನ ಸುಧೀರ್ಘ ಹಾದಿಯಲ್ಲಿ ಸದಾ ಕ್ರಿಯಾಶೀಲರಾಗಿದ್ದು, ನಿರಂತರ ಹಾಗೂ ದಣಿವರಿಯದ ಸೇವೆ ಇವರದಾಗಿದೆ. ಪ್ರಸ್ತುತ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ 35 ವರ್ಷಗಳ ಕಾಲ ಕಾರ್ಯ ನಿರ್ವಹಿಸಿ ಸದ್ಯ ಡಾ. ಬಿ.ಕೆ ರವಿ ಮೇಸ್ಟ್ರು 2025ರ ಜನವರಿ 31 ರಂದು ವಯೋ ನಿವೃತ್ತಿ ಹೊಂದುತ್ತಿದ್ದಾರೆ.

ಡಾ.ರವಿ ಅವರ ಕೃತಿಗಳು, ಪ್ರಶಸ್ತಿಯ ಗರಿಗಳು: ರವಿಯವರ ಸಾಧನೆಗಾಗಿ 'ರಾಜೀವ್ಗಾಂಧಿ ಪ್ರಶಸ್ತಿ', 'ಕೆಂಪೇಗೌಡ ಪ್ರಶಸ್ತಿ' ಸೇರಿದಂತೆ ಹತ್ತು ಹಲವು ಲಭಿಸಿವೆ. ಚಿಕ್ಕಂದಿನಿಂದಲೂ ಸಾಹಿತ್ಯದ ಬಗ್ಗೆ ಅಗಾಧ ಒಲವು ಬೆಳೆಸಿಕೊಂಡು, ವಿಶೇಷ ಬರವಣಿಗೆ ಶೈಲಿ ರೂಪಿಸಿಕೊಂಡಿದ್ದ ರವಿ ರವರು ಸಾಹಿತಿ ಡಾ.ಶ್ಯಾಮ್ ಸಿಂಗ್ ಶಶಿಯವರ ಇಂಗ್ಲೀಷ್ ಕೃತಿಯ ಅನುವಾದ 'ಭಾರತದ ಕುರುಬರು', 'ಬಿ.ಕೆ.ರವಿ ಅವರ ಕವಿತೆಗಳು', 'ಬಾನುಲಿ ಬರಹಗಳು', 'ಟಿಎಸ್ಸಾರ್ (ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಕಟಿತ)' ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 35 ವರ್ಷಗಳ ಕಾಲ ಕೆಲಸ ಮಾಡಿದ ಹಿರಿಯ ಶಿಕ್ಷಣ ತಜ್ಞ ಮತ್ತು ಸಂವಹನದ ಸಂಶೋಧಕ ಪ್ರೊ.ಬಿ.ಕೆ.ರವಿ ಅವರ ಮೂಲ ಕೃತಿಯಾದ ಮಾರ್ಡನ್ ಮೀಡಿಯಾ, ಎಲೆಕ್ಷನ್ಸ್ ಅಂಡ್ ಡೆಮಾಕ್ರಸಿ ಎರಡನೇ ಆವೃತ್ತಿಯು ಕಳೆದ ತಿಂಗಳು ಅಂದರೆ 2024ರ ಡಿಸೆಂಬರ್ 25 ರಂದು ಮಾನ್ಯ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಂದ ಬಿಡುಗಡೆಗೊಂಡಿತು.

ಡಾ. ಬಿ.ಕೆ.ರವಿ ಅವರು ಮಾಧ್ಯಮ ಮತ್ತು ಪ್ರಜಾಪ್ರಭುತ್ವದ ಕ್ಷೇತ್ರದಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ಸಂಶೋಧನೆಯನ್ನು ಮುನ್ನಡೆಸಲು ಮುನ್ನುಡಿಯಾಗಿದೆ. ಬೌದ್ಧಿಕ ಸಂವಾದವನ್ನು ಬೆಳೆಸುವ ಅವರ ಬದ್ಧತೆಯು ಕರ್ನಾಟಕದ ಶೈಕ್ಷಣಿಕ ಮತ್ತು ಬೌದ್ಧಿಕ ಸಮುದಾಯವನ್ನು ಗಣನೀಯವಾಗಿ ಶ್ರೀಮಂತಗೊಳಿಸಿದೆ. ಅವರು ಕರ್ನಾಟಕ ರಾಜ್ಯ ಪತ್ರಿಕೋದ್ಯಮ ಮತ್ತು ಸಂವಹನ ಶಿಕ್ಷಕರ ಸಂಘದ (ಓಖಿಐಇಖಿಐ) ಅಧ್ಯಕ್ಷರಾಗಿ ಮತ್ತು ಭಾರತೀಯ ಸಂವಹನ ಕಾಂಗ್ರೆಸ್ (ಐಇಇ) ಕಾರ್ಯಕಾರಿ ಅಧ್ಯಕ್ಷರಾಗಿ ನಂತರ ಪತ್ರಕರ್ತರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು ಮತ್ತು ಕೊಪ್ಪಳ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ರವಿ ಅವರ ಕೊಡುಗೆಗಳು. ಶ್ರೇಷ್ಠತೆಯನ್ನು ಉದಾಹರಿಸುತ್ತದೆ ಮತ್ತು ಅಸಂಖ್ಯಾತ ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಶಿಕ್ಷಕರನ್ನು ಪ್ರೇರೇಪಿಸುತ್ತದೆ.

ಜನಪ್ರಿಯ ನಾಯಕ ಸಿದ್ಧರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಬಿಡುಗಡೆಯಾದ ಮಾಡರ್ನ್ ಮೀಡಿಯಾ, ಎಲೆಕ್ಷನ್ಸ್ ಮತ್ತು ಡೆಮಾಕ್ರಸಿಯ ಮೊದಲ ಆವೃತ್ತಿಯು ಪ್ರಜಾಪ್ರಭುತ್ವ ಪ್ರಕ್ರಿಯೆಗಳಲ್ಲಿ ಮಾಧ್ಯಮದ ಪರಿವರ್ತಕ ಪಾತ್ರವನ್ನು ಅರ್ಥಮಾಡಿಕೊಳ್ಳಲು ಒಂದು ಹೆಗ್ಗುರುತಾಗಿದೆ. ಡಿಸೆಂಬರ್ 28, 2017 ರಂದು ಖಿಅಎಉ ಪಬ್ಲಿಕೇಷನ್ಸ್ ಪ್ರಕಟಿಸಿದ ಪುಸ್ತಕವು ಚುನಾವಣಾ ಪ್ರವಚನವನ್ನು ರೂಪಿಸುವಲ್ಲಿ ಸಾಂಪ್ರದಾಯಿಕ ಮತ್ತು ಹೊಸ ಮಾಧ್ಯಮಗಳ ನಡುವಿನ ಪರಸ್ಪರ ಕ್ರಿಯೆಯ ಬಗ್ಗೆ ಆಳವಾದ ಒಳನೋಟಗಳನ್ನು ನೀಡಿತು. ಪ್ರಪಂಚದಾದ್ಯಂತದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಿಂದ ಅದರ ವ್ಯಾಪಕವಾದ ಮೆಚ್ಚುಗೆ ಮತ್ತು ಅಳವಡಿಕೆಯು ಅದರ ಪ್ರಸ್ತುತತೆ ಮತ್ತು ಪ್ರಭಾವವನ್ನು ಒತ್ತಿಹೇಳುತ್ತದೆ.

ಬಿಡುಗಡೆಗೊಂಡಿರುವ ಎರಡನೇ ಆವೃತ್ತಿಯು ರಾಜಕೀಯ ಸಂವಹನದಲ್ಲಿ ಮೂಲಾಧಾರದ ವಿಕಾಸವನ್ನು ನಾವು ಆಚರಿಸುವಂತಾಗಿದೆ. ಈ ನವೀಕರಿಸಿದ ಆವೃತ್ತಿಯು ಅದರ ಪೂರ್ವವರ್ತಿ ಅಡಿಪಾಯದ ಮೇಲೆ ನಿರ್ಮಿಸುತ್ತದೆ, ಮಾಧ್ಯಮ ಭೂದೃಶ್ಯದಲ್ಲಿ ಆಧುನಿಕ ಸವಾಲುಗಳು ಮತ್ತು ಅವಕಾಶಗಳನ್ನು ಪರಿಹರಿಸುತ್ತದೆ. ಇದು ಮಾಧ್ಯಮದ ಪ್ರಮುಖ ಪಾತ್ರವನ್ನು ಒತ್ತಿಹೇಳುತ್ತದೆ.

ಮಾಹಿತಿಯೊಂದಿಗೆ ಮತದಾರರನ್ನು

ಸಬಲೀಕರಣಗೊಳಿಸುವುದು, ರಾಜಕೀಯ ಘಟನೆಗಳ ಕವರೇಜ್ ಮೂಲಕ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದು, ಮತ್ತು ವೈವಿಧ್ಯಮಯ ಧ್ವನಿಗಳನ್ನು ವರ್ಧಿಸುವ ಮೂಲಕ ರಾಜಕೀಯ ಬಹುತ್ವವನ್ನು ಉತ್ತೇಜಿಸುವುದು. ಎರಡನೆಯ ಆವೃತ್ತಿಯು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಮಾಧ್ಯಮದ ಸ್ವರೂಪ ಮತ್ತು ಭಾರತೀಯ ಮತ್ತು ಜಾಗತಿಕ ಸಂದರ್ಭಗಳಲ್ಲಿ ಚುನಾವಣೆಗಳ ಮೇಲೆ ಅದರ ಪ್ರಭಾವವನ್ನು ಪ್ರತಿಬಿಂಬಿಸಲು ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತದೆ. ಈ ಪುಸ್ತಕದ ಅಂತಾರಾಷ್ಟ್ರೀಯ ಮನ್ನಣೆಯು ಅದರ ಶೈಕ್ಷಣಿಕ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ಈ ಪುಸ್ತಕವು ಇತರೆ ಭಾಷೆಗಳಲ್ಲೂ ಭಾಷಾಂತರಗೊಂಡಿದೆ. ಯುಎಸ್‌ಎ, ಚೀನಾ, ದಕ್ಷಿಣ ಕೊರಿಯಾ ಮತ್ತು ದುಬೈನ ವಿಶ್ವವಿದ್ಯಾಲಯಗಳು ಪ್ರಮುಖ ಪಠ್ಯ-ಪುಸ್ತಕವಾಗಿ ಅಳವಡಿಸಿಕೊಳ್ಳುವುದರೊಂದಿಗೆ ಅದರ ಜಾಗತಿಕ ಆಕರ್ಷಣೆ ಮತ್ತು ನಿರಂತರ ಪ್ರಸ್ತುತತೆಯನ್ನು ಎತ್ತಿ ತೋರಿಸುತ್ತದೆ.

ಪ್ರೊ.ಬಿ.ಕೆ.ರವಿ ಅವರು ಅಮೆರಿಕ ಸಂಯುಕ್ತ ಸಂಸ್ಥಾನದ ಬ್ರಿಡ್ಜ್ ವಾಟರ್ ವಿಶ್ವವಿದ್ಯಾನಿಲಯದಲ್ಲಿ ಸಂವಹನ ವಿಭಾಗದಲ್ಲಿ ಉಪನ್ಯಾಸ ನೀಡಿದ್ದಾರೆ. ಆಧುನಿಕ ಚುನಾವಣಾ ಡೈನಾಮಿಕ್ಸ್‌ನ ಸೂಕ್ಷ್ಮ ಪರಿಶೋಧನೆಗಾಗಿ ಈ ಕೆಲಸವನ್ನು ಪ್ರಮುಖ ವಿದ್ವಾಂಸರು, ಅಭ್ಯಾಸಕಾರರು ಮತ್ತು ನೀತಿ ನಿರೂಪಕರು ಶ್ಲಾಘಿಸಿದ್ದಾರೆ. ಮಾಧ್ಯಮ, ಚುನಾವಣೆಗಳು ಮತ್ತು ಪ್ರಜಾಪ್ರಭುತ್ವದ ಸಂಕೀರ್ಣವಾದ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಇದು ಅಮೂಲ್ಯವಾದ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ.

ಈ ಸಂದರ್ಭದಲ್ಲಿ ಮುಂದಿನ ಪೀಳಿಗೆಯ ಮಾಧ್ಯಮ ವೃತ್ತಿಪರರು ಮತ್ತು ಸಂಶೋಧಕರಿಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡುವ ಡಾ.ರವಿ ಅವರ ಗಮನಾರ್ಹ ಸಾಮರ್ಥ್ಯವನ್ನು ನಾನು ಗುರುತಿಸಲೇಬೇಕು. ಅವರ ಕೆಲಸವು ನಮ್ಮ ಪ್ರಜಾಸತ್ತಾತ್ಮಕ ಚೌಕಟ್ಟಿನ ಮೇಲೆ ಶಾಶ್ವತವಾದ ಪ್ರಭಾವವನ್ನು ಬೀರುವ, ಸ್ಕಾಲರ್‌ಶಿಪ್ ಮತ್ತು ಪ್ರಾಯೋಗಿಕ ಅನ್ವಯದ ಅತ್ಯುನ್ನತ ಮಾನದಂಡಗಳನ್ನು ಉದಾಹರಿಸುತ್ತದೆ.

ಶಿಕ್ಷಣ, ಆಡಳಿತ ಮತ್ತು ಮಾಧ್ಯಮ ಅಭ್ಯಾಸಕ್ಕಾಗಿ ಮುಂದಿನ ಹಾದಿಯನ್ನು ಬೆಳಗಿಸುವ ಡಾ. ರವಿ ಅವರಂತಹ ನಮ್ಮ ವಿದ್ವಾಂಸರ ಅತ್ಯುನ್ನತ ಸಾಧನೆಗಳ ಬಗ್ಗೆ ನನಗೆ ಹೆಮ್ಮೆ ಇದೆ. ಆಧುನಿಕ ಮಾಧ್ಯಮ, ಚುನಾವಣೆಗಳು ಮತ್ತು ಪ್ರಜಾಪ್ರಭುತ್ವವು ಕೇವಲ ಪುಸ್ತಕಕ್ಕಿಂತ ಹೆಚ್ಚಾಗಿರುತ್ತದೆ; ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬಲಪಡಿಸಲು ಮತ್ತು ಮಾಧ್ಯಮದ ಪರಿವರ್ತಕ ಶಕ್ತಿಯನ್ನು ಅರ್ಥಮಾಡಿಕೊಳ್ಳಲು ಬದ್ಧವಾಗಿರುವವರಿಗೆ ಇದು ದಾರಿದೀಪವಾಗಿದೆ.

ಈ ಸ್ಮಾರಕ ಸಾಧನೆ ಡಾ. ರವಿ ಅವರು ಅಭಿನಂಧನಾರ್ಹರು. ಮತ್ತು ಅವರ ವಿದ್ವತ್ಪೂರ್ಣ ಅನ್ವೇಷಣೆಯಲ್ಲಿ ಅವರು ಯಶಸ್ಸನ್ನು ಮುಂದುವರೆಸಬೇಕು. ಈ ಪುಸ್ತಕವು ಅರ್ಥಪೂರ್ಣ ಚರ್ಚೆಗಳನ್ನು ಪ್ರೇರೇಪಿಸಲಿ ಮತ್ತು ಪ್ರಜಾಪ್ರಭುತ್ವವನ್ನು ಬೆಳೆಸುವಲ್ಲಿ ಮಾಧ್ಯಮದ ಪಾತ್ರದ ಆಳವಾದ ಮೆಚ್ಚುಗೆಗೆ ದಾರಿ ಮಾಡಿಕೊಡಲಿ.

ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಡಾ. ರವಿ ಸೇವೆ:

ಹಿಂದುಳಿದ ವರ್ಗಗಳ ಸಂಘಟಕರಾಗಿ, ಸಮಾಜಕ್ಕೆ ಸಲ್ಲಿಸಿದ ಸೇವೆ ಪರಿಗಣಿಸಿ ಕರ್ನಾಟಕ ಸರ್ಕಾರ ಇವರನ್ನು 'ಕರ್ನಾಟಕ ರಾಜ್ಯ ಹಿಂದುಳಿದ ಆಯೋಗ'ದ ಸದಸ್ಯರನ್ನಾಗಿ ಡಾ. ಬಿ.ಕೆ ರವಿ ಅವನ್ನು ಎರಡು ಅವಧಿಗೆ ನೇಮಿಸಿತ್ತು. ಆ ಅವಧಿಯಲ್ಲಿ ರಾಜ್ಯದಾದ್ಯಂತ ಸಂಚರಿಸಿದ ಅವರು ಹಿಂದುಳಿದ ಜನರಿಗೆ ಸಂವಿಧಾನದತ್ತ ಅಧಿಕಾರ ಹಾಗೂ ಸವಲತ್ತುಗಳ ಅರಿವು ಮೂಡಿಸುವಲ್ಲಿ ಮಹನೀಯ ಪಾತ್ರ ವಹಿಸಿದ್ದಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಂಗವಾದ ಕರ್ನಾಟಕ ರಾಜ್ಯ ಚಲನಚಿತ್ರ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯ ಮಾಧ್ಯಮ ಅಕಾಡೆಮಿಗೆ ಸದಸ್ಯರಾಗಿ ಆಯ್ಕೆಗೊಂಡು ಗಣನೀಯ ಸೇವೆ ಸಲ್ಲಿಸಿದ್ದಾರೆ.

ಅಪಾರ ಶಿಷ್ಯ ಬಳಗ: ಕೊಪ್ಪಳ ವಿಶ್ವವಿದ್ಯಾಲಯ ಕುಲಪತಿಯಾದ ಡಾ.ಬಿ.ಕೆ.ರವಿ ಅವರು ಸೇವಾ ನಿವೃತ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಅವರ ಅಪಾರ ಪ್ರಮಾಣದ ಶಿಷ್ಯ ಬಳಗ ಹಾಗೂ ಸಹದ್ಯೋಗಿ ವೃಂದ ಅದ್ಧೂರಿ ಬೀಳ್ಕೊಡುಗೆ ಸಮಾರಂಭವನ್ನು ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗದ ವತಿಯಿಂದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಇದೇ ಜನವರಿ 31 ರಂದು ಆಯೋಜಿಸಿದೆ.

ಸಮಾಚಾರ ಸಣ್ಣದಲ್ಲ

ಖ್ವಾಜ ದ್ವಿಶತಕ: ಆಸೀಸ್ ಬೃಹತ್ ಮೊತ್ತ

ಗಾಲೆ: ಆರಂಭಿಕ ಆಟಗಾರ ಉಸ್ಮಾನ್ ಖ್ವಾಜಾ ಅವರ ದ್ವಿಶತಕದ ನೆರವಿನಿಂದ ಆಸ್ಟ್ರೇಲಿಯಾ ತಂಡವು ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಎರಡನೇ ದಿನವಾದ ಗುರುವಾರ 6 ವಿಕೆಟ್‌ಗೆ 654 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಇದಕ್ಕೆ ಉತ್ತರವಾಗಿ ಇನ್ನಿಂಗ್ಸ್ ಆರಂಭಿಸಿದ ಅತಿಥೇಯ ತಂಡವು 44 ರನ್‌ಗಳಿಗೆ ಮೂರು ವಿಕೆಟ್ ಕಳೆದು ಸಂಕಷ್ಟದ ಸ್ಥಿತಿಯಲ್ಲಿದೆ. ಮೊದಲ ದಿನ 147 ರನ್‌ನೊಂದಿಗೆ ಅಜೇಯರಾಗಿದ್ದ ಖ್ವಾಜಾ ಎರಡನೇ ದಿನ ಲಂಕಾ ಬೌಲರ್‌ಗಳನ್ನು ಕಾಡಿದರು. ಸ್ಮಿತ್ ಜೊತೆ ಸೇರಿ ಮೂರನೇ ವಿಕೆಟ್‌ಗೆ 266 ರನ್ ಪೇರಿಸಿದರು.

ಭಾರತ ಮಹಿಳಾ ಹಾಕಿ ತಂಡ ಪ್ರಕಟ

ದೆಹಲಿ: ಫೆಬ್ರವರಿ 15ರಿಂದ 25ರ ತನಕ ನಡೆಯಲಿರುವ ಎಫ್‌ಐಎಚ್ ಪ್ರೊ.ಲೀಗ್‌ಗೆ ಭಾರತ ಮಹಿಳಾ ಹಾಕಿ ತಂಡ ಪ್ರಕಟಗೊಂಡಿದೆ. 24 ಸದಸ್ಯರುಗಳನ್ನು ಒಳಗೊಂಡ ತಂಡವನ್ನು ಸಲಿಮಾ ಟೇಟೆ ಮುನ್ನಡೆಸಲಿದ್ದಾರೆ. ಫಾರ್ವರ್ಡ್ ಆಟಗಾರ್ತಿ ನವನೀತ್ ಕೌರ್ ಉಪ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಭಾರತ ಹಾಕಿ ತಂಡವು ಫೆ.15ರಂದು ಇಂಗ್ಲೆಂಡ್ ವಿರುದ್ಧ ತನ್ನ ಅಭಿಯಾನ ಆರಂಭಿಸಲಿದೆ. ಆ ಬಳಿಕ ನೆದರ್‌ಲ್ಯಾಂಡ್ಸ್, ಸ್ಪೇನ್ ಹಾಗೂ ಜರ್ಮನಿ ತಂಡಗಳನ್ನು ಎದುರಿಸಲಿದೆ. ಪ್ರತಿ ತಂಡಗಳು ತಲಾ ಎರಡು ಬಾರಿ ಮುಖಾಮುಖಿಯಾಗಲಿವೆ.ಪ್ರಮುಖ ತಂಡದ ಜತೆಗೆ ಮೀಸಲು ಆಟಗಾರರಾಗಿ ಗೋಲ್ ಕೀಪರ್ ಬನ್ವಾರಿ ಸೋಲಂಕಿ, ಡಿಫೆಂಡರ್ ಗಳಾದ ಅಕ್ಷತಾ ಅಬಾಸೊ ಢೇಕಾಲೆ, ಜ್ಯೋತಿ ಸಿಂಗ್ ಹಾಗೂ ಫಾರ್ವರ್ಡ್‌ಗಳಾದ ಸಾಕ್ಷಿ ರಾಣಾ, ಅನ್ನು ಹಾಗೂ ಸೋನಮ್ ಆಯ್ಕೆಯಾಗಿದ್ದಾರೆ.

ಇಂದಿನಿಂದ ಡಬ್ಲ್ಯುಟಿಸಿ ಟಿಕೆಟ್ ಮಾರಾಟ

ದುಬೈ: ಜೂನ್ 11ರಿಂದ ಪ್ರತಿಷ್ಠಿತ ಲಾರ್ಡ್ಸ್ ಮೈದಾನದಲ್ಲಿ ಆರಂಭವಾಗಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್(ಡಬ್ಲ್ಯುಟಿಸಿ)ಫೈನಲ್ ಪಂದ್ಯದ ಟಿಕೆಟ್‌ಗಳ ಮಾರಾಟ ಇಂದಿನಿಂದ ಆರಂಭಗೊಳ್ಳಲಿದೆ ಎಂದು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಪ್ರಕಟಿಸಿದೆ. ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ಹಾಗೂ ಹಾಲಿ ಚಾಂಪಿಯನ್ ಆಸ್ಟ್ರೇಲಿಯ ತಂಡಗಳು ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿವೆ. ಇತ್ತೀಚೆಗೆ ಬಾರ್ಡರ್-ಗವಾಸ್ಕರ್ ಟ್ರೋಫಿಯಲ್ಲಿ ಭಾರತ ತಂಡವನ್ನು 3-1 ಅಂತರದಿಂದ ಮಣಿಸಿ ಆಸ್ಟ್ರೇಲಿಯಾ ತಂಡ ಫೈನಲ್ ಪ್ರವೇಶಿಸಿತ್ತು.

ರಣಜಿಯಲ್ಲಿ ಕೊಹ್ಲಿಯದ್ದೇ ಹವಾ

ಪಂದ್ಯ ವೀಕ್ಷಿಸಲು ಹರಿದು ಬಂದ ಜನ ಸಾಗರ । ಹೆಚ್ಚುವರಿ ಗ್ಯಾಲರಿಯಲ್ಲೂ ಅವಕಾಶ

ದೆಹಲಿ: ಗುರುವಾರ ರಣಜಿ ಟೂರ್ನಿಯ ಪಂದ್ಯದಲ್ಲಿ ವಿರಾಟ್ ಕೊಹ್ಲಿಯ ಜನಪ್ರಿಯತೆ 12 ವರ್ಷಗಳ ಬಳಿಕ ತವರಿನ ಅಭಿಮಾನಿಗಳ ಮುಂದೇ ದೇಶೀಯ ಕ್ರಿಕೆಟ್ ಆಡಲಿಳಿದ ಕೊಹ್ಲಿಯನ್ನು ನೋಡಲು ಜನ ಸಾಗರವೇ ನೆರೆದಿದ್ದು, ಸ್ಟೇಡಿಯಂನ ಗೇಟ್ ಬಳಿ ಕಾಲ್ತುಳಿತ ಕೂಡ ಸಂಭವಿಸಿ ಹಲವರು ಗಾಯಗೊಂಡ ಘಟನೆಯೂ ನಡೆಯಿತು. ಅಂತಾರಾಷ್ಟ್ರೀಯ ಪಂದ್ಯಕ್ಕೆ ಸೇರುವ ಪ್ರೇಕ್ಷಕರಿಗೂ ಅಧಿಕ ಮಂದಿ ಕೊಹ್ಲಿಯ ಆಟವನ್ನು ನೋಡಲು ಬಂದಿದ್ದರು.

ಸಾಮಾನ್ಯವಾಗಿ ರಣಜಿ ಪಂದ್ಯಗಳಿಗಾಗಿ ಒಂದು ಗ್ಯಾಲರಿಯಲ್ಲಿ ಉಚಿತ ಪ್ರವೇಶದ ವ್ಯವಸ್ಥೆ ಇರುತ್ತದೆ. ಆದರೆ ವಿರಾಟ್ ಕೊಹ್ಲಿ ಇದ್ದಾರೆಂಬ ಕಾರಣಕ್ಕೆ ದೆಹಲಿ ಕ್ರಿಕೆಟ್ ಅಸೋಸಿಯೇಶನ್ ಈ ಪಂದ್ಯಕ್ಕಾಗಿ ಎರಡರಿಂದ ಮೂರು ಗ್ಯಾಲರಿಗಳಲ್ಲಿ ಉಚಿತ ಪ್ರವೇಶ ಕಲ್ಪಿಸಿತ್ತು. ಆದರೆ ಈ ಎಲ್ಲಾ ಗ್ಯಾಲರಿ ಪೂರ್ತಿ ಆಗಿ ಹೆಚ್ಚುವರಿ ಗ್ಯಾಲರಿಗಳನ್ನು ನೀಡಿದರೂ ಪ್ರೇಕ್ಷಕರ ಸಂಖ್ಯೆ ಮಾತ್ರ ಕಡಿಮೆಯಾಗಲಿಲ್ಲ. ಸುಮಾರು 15 ಸಾವಿರಕ್ಕೂ ಅಧಿಕ ಜನ ಇಂದು ಜೇಟ್ಲಿ ಮೈದಾನದಲ್ಲಿ ನೆರೆದಿದ್ದರು ಎಂದು ವರದಿಯಾಗಿದೆ. ಕೊಹ್ಲಿಯ ಬಾಲ್ಯದ ಕೋಚ್, ಸಹೋದರ ಮತ್ತು ಕುಟುಂಬ ಸದಸ್ಯರು ಕೂಡ ಪಂದ್ಯಕ್ಕೆ ಹಾಜಾರಾಗಿದ್ದರು.

ದೇಶೀಯ ಟೂರ್ನಿಯಾದರೂ ವಿರಾಟ್ ಕೊಹ್ಲಿಯ ಜನಪ್ರಿಯತೆ ಕಿಂಚಿತ್ತು ಕಡಿಮೆ ಇರಲಿಲ್ಲ. ಅಂತಾರಾಷ್ಟ್ರೀಯ ಪಂದ್ಯದಂತೆ ಕೊಹ್ಲಿ ತವರಿನ ಅಭಿಮಾನಿಗಳನ್ನು ರಂಜಿಸಿದರು. ಮೈದಾನದಿಂದಲೇ ಕೈ ಸನ್ನೆ ಮೂಲಕ ಜೋರಾಗಿ ಕೂಗುವ ಮೂಲಕ ಆಟಗಾರರಿಗೆ ಪ್ರೋತ್ಸಾಹಿಸಿ ಎಂದು ಮನವಿ ಮಾಡುತ್ತಲೇ ಇದ್ದರು.

ಕೊಹ್ಲಿ ಪಾದಕ್ಕೆ ಬಿದ್ದು ಅಭಿಮಾನಿ ನಮಸ್ಕಾರ

ದೆಹಲಿ ನಡುವಣ ರಣಜಿ ಪಂದ್ಯದಲ್ಲಿ ಅಭಿಮಾನಿಯೊಬ್ಬ ಭದ್ರತಾ ಕೋಟೆಯನ್ನು ಉಲ್ಲಂಘಿಸಿ ಮೈದಾನಕ್ಕೆ ನುಗ್ಗಿ ವಿರಾಟ್ ಕೊಹ್ಲಿ ಪಾದಕ್ಕೆ ಬಿದ್ದು ನಮಸ್ಕರಿಸಿದ ಘಟನೆ ನಡೆಯಿತು. 12 ವರ್ಷಗಳ ಬಳಿಕ ದೇಶೀಯ ಕ್ರಿಕೆಟ್ ಪಂದ್ಯ ಆಡುತ್ತಿರುವ ವಿರಾಟ್ ಕೊಹ್ಲಿ ದೆಹಲಿ ಪರ ಫೀಲ್ಡಿಂಗ್ ನಡೆಸುತ್ತಿದ್ದ ವೇಳೆ ಭದ್ರತಾ ಸಿಬ್ಬಂದಿಯ ಕಣ್ತಪ್ಪಿಸಿ ಮೈದಾನಕ್ಕೆ ನುಗ್ಗಿ ಕೊಹ್ಲಿಯ ಕಾಲಿಗೆ ಬಿದ್ದು ನಮಸ್ಕರಿಸಿದ್ದಾನೆ. ತಕ್ಷಣವೇ ಭದ್ರತಾ ಸಿಬ್ಬಂದಿ ಆತನನ್ನು ಹಿಡಿದು ಮೈದಾನದಿಂದ ಕರೆದೊಯ್ದರು. ಇದೇ ವೇಳೆ ಕೊಹ್ಲಿ ಭದ್ರತಾ ಸಿಬ್ಬಂದಿಗಳ ಜತೆ ಆತನಿಗೆ ಏನೂ ಮಾಡದಂತೆ ಮನವಿ ಮಾಡಿಕೊಂಡರು.

ಶಾರ್ದೂಲ್‌ಗೆ ಹ್ಯಾಟ್ರಿಕ್

ಮುಂಬೈ: ಕಳೆದ ಪಂದ್ಯದಲ್ಲಿ ಜಮ್ಮು ಮತ್ತು ಕಾಶ್ಮೀರದ ವಿರುದ್ಧ ಶತಕ ಸಿಡಿಸಿದ್ದ ಶಾರ್ದೂಲ್ ಠಾಕೂರ್ ಗುರುವಾರ ಮೇಘಾಲಯ ವಿರುದ್ಧದ ರಣಜಿ ಪಂದ್ಯದಲ್ಲಿ ಹ್ಯಾಟ್ರಿಕ್ ವಿಕೆಟ್ ಪಡೆದಿದ್ದಾರೆ. ಶಾರ್ದೂಲ್ ಅವರ ಹ್ಯಾಟ್ರಿಕ್ ಮುಂಬೈಗೆ ಪಂದ್ಯದ ಮೇಲೆ ಹಿಡಿತ ಸಾಧಿಸಲು ಸಹಾಯ ಮಾಡಿದೆ. ಕೇವಲ 85ಕ್ಕೆ ಆಲೌಟ್ ಮಾಡುವ ಮೂಲಕ ಪಂದ್ಯದಲ್ಲಿ ಮೊದಲ ದಿನವೇ ಗೆಲ್ಲುವ ಫೇವರೇಟ್ ಎನಿಸಿಕೊಂಡಿದೆ. ಈ ಪಂದ್ಯದಲ್ಲಿ ಶಾರ್ದೂಲ್ ಒಟ್ಟು ನಾಲ್ಕು ವಿಕೆಟ್ ಪಡೆದು ಮಿಂಚಿದ್ದಾರೆ.

ಟಾಸ್ ಗೆದ್ದ ಮುಂಬೈ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಶಾರ್ದೂಲ್ ಪಂದ್ಯದ ಮೊದಲ ಓವರ್ ನಲ್ಲೇ ಒಂದು ವಿಕೆಟ್ ಪಡೆದರು. ಅವರು ನಿಶಾಂತ ಚಕ್ರವರ್ತಿಯನ್ನು ಶೂನ್ಯಕ್ಕೆ ಔಟ್ ಮಾಡಿದರು. ಮತ್ತೆ ಮೂರನೇ ಓವರ್‌ನಲ್ಲಿ ತಂಡಕ್ಕೆ ಮರಳಿದ ಶಾರ್ದೂಲ್ ಸತತ ಮೂರು ಎಸೆತಗಳಲ್ಲಿ ಮೂರು ವಿಕೆಟ್ ಪಡೆದರು. ಹ್ಯಾಟ್ರಿಕ್ ಮೂಲಕ ಮುಂಬೈ ಪಂದ್ಯದ ಮೇಲೆ ಹಿಡಿತ ಸಾಧಿಸಿತು.

ತಂಡದ ಮತ್ತೊಬ್ಬ ಬೌಲರ್ ಮೋಹಿತ್ ಅವಸ್ಥಿ 3 ವಿಕೆಟ್, ಸಿಲ್ವೆಸ್ಟರ್ ಡಿಸೋಜಾ 2 ವಿಕೆಟ್ ಪಡೆದರೆ, ಶ್ಯಾಮ್ಸ್ ಮುಲಾನಿ ಒಂದು ವಿಕೆಟ್ ಪಡೆದರು.

ಶಾರ್ದೂಲ್ ಠಾಕೂರ್ ಸತತ ಮೂರು ವಿಕೆಟ್ ಪಡೆಯುವ ಮೂಲಕ ಮುಂಬೈ ಪರ ಹ್ಯಾಟ್ರಿಕ್ ಪಡೆದ ಐದನೇ ಬೌಲರ್ ಎನಿಸಿಕೊಂಡರು. ಅವರಿಗಿಂತ ಮೊದಲು ಜಹಾಂಗೀರ್ ಬೆಹ್ರಾಮ್ಜಿ ಖೋಟ್, ಉಮೇಶ್ ನಾರಾಯಣ್ ಕುಲಕರ್ಣಿ, ಅಬ್ದುಲ್ ಮೂಸಾ ಭೋಯ್ ಇಸ್ಮಾಯಿಲ್ ಮತ್ತು ರಾಯ್ಸ್ಟನ್ ಹೆರಾಲ್ಡ್ ಡಯಾಸ್ ಹ್ಯಾಟ್ರಿಕ್ ಪಡೆದಿದ್ದರು.

ಮೀಡಿಯಾ ಪ್ರೀಮಿಯರ್‌ನಲ್ಲಿ ವಿಶ್ವವಾಣಿ ವಾರಿಯರ್ಸ್

ಬೆಂಗಳೂರು: ಇಲ್ಲಿ ಬುಧವಾರ ಪ್ರಾರಂಭಗೊಂಡ ಮೀಡಿಯಾ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮುಂದುವರಿದಿದ್ದು ಗುರುವಾರದ ನಡೆದ ಪಂದ್ಯದಲ್ಲಿ 'ವಿಶ್ವವಾಣಿ ವಾರಿಯರ್ಸ್' ತಂಡವು ಆಡಿದ ನಾಲ್ಕು ಪಂದ್ಯಗಳ ಪೈಕಿ ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿ, ಎರಡು ಪಂದ್ಯಗಳಲ್ಲಿ ಸೋಲನ್ನು ಕಂಡು ಟೂರ್ನಿಯಲ್ಲಿ ತನ್ನ ಅಭಿಯಾನವನ್ನು ಕೊನೆಗೊಳಿಸಿತು.

ಮುದ್ರಣ ಮತ್ತು ವಿದ್ಯುನ್ಮಾನ ವಿಭಾಗದ ಒಟ್ಟು 20 ತಂಡಗಳು ಭಾಗವಹಿಸುತ್ತಿರುವ ಈ ಟೂರ್ನಿಯಲ್ಲಿ ವಿಶ್ವವಾಣಿ ವಾರಿಯರ್ಸ್ ತಂಡದ ಪರವಾಗಿ ಕೃಷ್ಣ ಪವರ್ ಹಾಗೂ ರವೀಂದ್ರ ಆರ್. ಎಸ್ ತಲಾ ಒಂದೊಂದು ಪಂದ್ಯಗಳಲ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಯನ್ನು ಪಡೆದುಕೊಂಡರು.



ಸುಭದ್ರ ಸ್ಥಿತಿಯಲ್ಲಿ ಕರ್ನಾಟಕ

ಹರಿಯಾಣ-ಕರ್ನಾಟಕ ರಣಜಿ ಕ್ರಿಕೆಟ್ । ಕೆ.ಎಲ್. ರಾಹುಲ್ ವಿಫಲ

ಬೆಂಗಳೂರು: ಭಾರತ ತಂಡದ ಸ್ಟಾರ್ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ ಗುರುವಾರ ಇಲ್ಲಿ ಆರಂಭಗೊಂಡ ಹರಿಯಾಣ-ಕರ್ನಾಟಕ ರಣಜಿ ಕ್ರಿಕೆಟ್‌ನಲ್ಲಿ ತಂಡಕ್ಕೆ ನೆರವಾಗುವಂತಹ ಪ್ರದರ್ಶನ ನೀಡಲು ಮತ್ತೆ ವಿಫಲರಾದರು. ಆದರೆ ನಾಯಕ ಮಯಾಂಕ್ ಅಗರ್ವಾಲ್ ಅಮೋಘ ಆಟದ ನೆರವಿನಿಂದ ಹರಿಯಾಣ ವಿರುದ್ಧ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಕರ್ನಾಟಕ ಮೊದಲ ದಿನ 5 ವಿಕೆಟ್ ಕಳೆದುಕೊಂಡು 267 ರನ್ ಗಳಿಸಿ ಸುಭದ್ರ ಸ್ಥಿತಿಯಲ್ಲಿದೆ.

ಐದು ವರ್ಷಗಳ ನಂತರ ರಣಜಿ ಆಡುತ್ತಿರುವ ರಾಹುಲ್‌ರಿಂದ ಅಭಿಮಾನಿಗಳು ಅದ್ಭುತ ಪ್ರದರ್ಶನವನ್ನು ನಿರೀಕ್ಷಿಸಿದ್ದರು, ಆದರೆ ಎಲ್ಲರ ನಿರೀಕ್ಷೆ ವಿಫಲವಾಯಿತು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಗೆ ಬಂದ ರಾಹುಲ್ ಕೇವಲ 26 ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ಅನ್ಶುಲ್ ಕಾಂಬೋಜ್ ಬೌಲಿಂಗ್‌ನಲ್ಲಿ ಆರ್.ಪಿ ಶರ್ಮಾಗೆ ಕ್ಯಾಚ್ ನೀಡಿ ಔಟ್ ಆದರು.

ತಂಡಕ್ಕೆ ಆಸರೆಯಾದ ಮಯಾಂಕ್: ಪಂದ್ಯದಲ್ಲಿ ಕರ್ನಾಟಕ ತಂಡದ ನಾಯಕ ಮಯಾಂಕ್ ಅಗರ್ವಾಲ್ ದಿಟ್ಟ ಪ್ರದರ್ಶನ ನೀಡಿದರು. 149 ಎಸೆತಗಳಲ್ಲಿ ಎಂಟು ಬೌಂಡರಿ ಹಾಗೂ ಮೂರು ಸಿಕ್ಸರ್‌ಗಳ ನೆರವಿನಿಂದ 91 ರನ್ ಗಳಿಸಿದರು. ಮೊದಲ ದಿನದಾಟ ಮುಕ್ತಾಯವಾಗಿದ್ದು, ಕರ್ನಾಟಕ ಐದು ವಿಕೆಟ್‌ಗೆ 267 ರನ್ ಗಳಿಸಿದೆ. ಕೃಷ್ಣನ್ ಶ್ರೀಜಿತ್ ಮತ್ತು ಯಶೋವರ್ಧನ್ ಪರಂತಪ್ ಕ್ರಮವಾಗಿ 18 ಮತ್ತು 27 ರನ್ ಗಳಿಸಿ ಕ್ರೀಸ್‌ನಲ್ಲಿದ್ದಾರೆ.

ಉಳಿದಂತೆ ಕರ್ನಾಟಕ ಪರ ಅನೀಶ್ 17, ದೇವದತ್ ಪಡಿಕ್ಕಲ್ 43, ಸ್ಮರಣ್ 35 ರನ್ ಗಳಿಸಿ ವಿಕೆಟ್ ಒಪ್ಪಿಸಿದ್ದಾರೆ. ಹರಿಯಾಣ ಪರ ಅನ್ಶುಲ್ ಕಾಂಬೋಜ್ 25ಕ್ಕೆ 2, ಅನುಜ್ ಟಕ್ರಲ್ 74ಕ್ಕೆ 2, ನಿಶಾಂತ್ ಸಿಂಧು 45ಕ್ಕೆ 1 ವಿಕೆಟ್ ಪಡೆದು ಮಿಂಚಿದರು.



ಕಾರಿನಲ್ಲಿ ಪಾರು ಸಂಚಾರ

ಬಿಗ್ ಬಾಸ್ ಖ್ಯಾತಿಯ ದೀಪಿಕಾ ದಾಸ್ ಟ್ರಾವೆಲ್ ಅಡ್ವೆಂಚರ್‌ನ ಪಾರು ಪಾರ್ವತಿ ಚಿತ್ರದಲ್ಲಿ ನಟಿಸಿದ್ದಾರೆ. ಬಹು ದಿನಗಳ ಬಳಿಕ ಪ್ರಮುಖ ಪಾತ್ರದಲ್ಲಿ ನಟಿಸಿರುವ ಪಾರು ಪಾರ್ವತಿ ಅದ್ದೂರಿಯಾಗಿ ತೆರೆಗೆ ಬಂದಿದೆ. ಪೂನಂ ಸಿರ್ ನಾಯಕ್ ಹಾಗೂ ಫವಾಜ್ ಅಶ್ರಫ್ ಕೂಡ ಸಿನಿಮಾದ ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈಗ ಪಾರು ಪಾರ್ವತಿ ಚಿತ್ರದಲ್ಲಿ ಕಾರು ಕೂಡ ಪ್ರಮುಖ ಪಾತ್ರ ವಹಿಸಿರುವುದು ವಿಶೇಷ. ಹೌದು, ಇದೊಂದು ಟ್ರಾವೆಲ್ ಅಡ್ವೆಂಚರ್ ಡ್ರಾಮಾ ಜಾನರ್‌ನ ಚಿತ್ರವಾಗಿದ್ದು, ಕಾರು ಇಲ್ಲಿ ಗಮನಸೆಳೆಯಲಿದೆ. ಚಿತ್ರದುದ್ದಕ್ಕೂ ಕಾರು ಕಾಣಿಸಿಕೊಳ್ಳಲಿದೆ.

ಮೂರು ಪ್ರಮುಖ ಪಾತ್ರಗಳ ಸುತ್ತ ನಮ್ಮ ಚಿತ್ರ ಸಾಗುತ್ತದೆ. ದೀಪಿಕಾ ದಾಸ್, ಪೂನಂ ಸಿರ್ ನಾಯಕ್ ಹಾಗೂ ಫವಾಜ್ ಆಶ್ರಫ್ ಮೂವರು ಮುಖ್ಯ ಪಾತ್ರಧಾರಿಗಳು. ಇವರೊಂದಿಗೆ ಕಾರು ಕೂಡ ಪ್ರಮುಖ ಪಾತ್ರವಾಗಿದೆ. ಈ ಕಾರು ಪ್ರಚಾರದ ಸಲುವಾಗಿ ಕರ್ನಾಟಕದಾದ್ಯಂತ ಸಂಚರಿಸಲಿದೆ ಎಂದು ನಿರ್ದೇಶಕ ರೋಹಿತ್ ಕೀರ್ತಿ ಹೇಳುತ್ತಾರೆ. ಪಿ.ಬಿ.ಪ್ರೇಮನಾಥ್ ಚಿತ್ರ ನಿರ್ಮಾಣ ಮಾಡಿದ್ದಾರೆ.

> ನಮ್ಮ ಚಿತ್ರದಲ್ಲಿ ಪ್ರವಾಸ ಮಾತ್ರವಲ್ಲ, ಕುಟುಂಬ ಸಮೇತ ಕುಳಿತು ನೋಡಬಹುದಾದ ಅಂಶಗಳು ಬೆರೆತಿವೆ. ಕಾರು ಚಿತ್ರದ ಪ್ರಮುಖ ಹೈಲೈಟ್ ಈ ಕಾರಿನ ಜತೆಗೆ ಕರ್ನಾಟಕದಿಂದ ಉತ್ತರಾಖಂಡದವರೆಗೂ ಎಂಟು ರಾಜ್ಯಗಳನ್ನು ಸಂಚರಿಸಿದ ಅನುಭವ ಎಂದಿಗೂ ಮರೆಯಲು ಸಾಧ್ಯವಿಲ್ಲ. ಈ ಪುಟ್ಟ ಕಾರು ನಮ್ಮ ಚಿತ್ರದಲ್ಲಿ ಹೇಗೆ ಪ್ರಮುಖ ಪಾತ್ರವಹಿಸಲಿದೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.
>
> -ದೀಪಿಕಾ ದಾಸ್ ನಟಿ

ತಲ್ವಾರ್‌ನಲ್ಲಿ ಬಾಂಧವ್ಯದ ಕಥೆ

ಮುಮ್ತಾಜ್ ಖ್ಯಾತಿಯ ಮುರಳಿ ನಿರ್ದೇಶನದಲ್ಲಿ ಸಿದ್ಧವಾಗಿರುವ ತಲ್ವಾರ್ ಮುಂದಿನ ವಾರ ತೆರೆಗೆ ಬರಲಿದೆ. ಈ ಹಿಂದೆ ಲವ್ವರ್ ಬಾಯ್ ಆಗಿ ಕಂಗೊಳಿಸಿದ್ದ ಧರ್ಮ ಕೀರ್ತಿರಾಜ್ ಈ ಚಿತ್ರದಲ್ಲಿ ಆ್ಯಕ್ಷನ್ ಹೀರೋ ಆಗಿ ಮಿಂಚಿದ್ದಾರೆ. ಈ ಚಿತ್ರದ ಟ್ರೇಲರ್ ಹಾಗೂ ಮದರ್ ಸೆಂಟಿಮೆಂಟ್ ಸಾಂಗ್ ಬಿಡುಗಡೆಯಾಗಿದ್ದು ಸಿನಿಪ್ರಿಯರ ಮನಗೆದ್ದಿದೆ. ಟಚ್ ಸ್ಟೋನ್ ಪಿಕ್ಚರ್ ಬ್ಯಾನರ್‌ನಲ್ಲಿ ಸುರೇಶ್ ಭೈರಸಂದ್ರ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ನಿರ್ದೇಶಕ ಮುರಳಿ ನನ್ನ ಬಳಿ ಬಂದು ಈ ಕಥೆ ಹೇಳಿದಾಗ ಕಥೆ ಇಷ್ಟವಾಯಿತು. ನಿರ್ಮಾಣಕ್ಕೆ ಒಪ್ಪಿದೆ. ಚಿತ್ರ ಅದ್ಭುತವಾಗಿ ಮೂಡಿಬಂದಿದೆ. ತಲ್ವಾರ್ ಅಂದಾಕ್ಷಣ ಇದು ರೌಡಿಸಂ ಕಥೆ ಎನ್ನಿಸುತ್ತದೆ. ಆದರೆ ಇಲ್ಲಿ ತಾಯಿ ಮಗನ ಬಾಂಧವ್ಯದ ಕಥೆಯೂ ಬೆರೆತಿದೆ. ಇದು ಇಡೀ ಕುಟಂಬ ಸಮೇತ ಕುಳಿತು ನೋಡುವ ಸಿನಿಮಾ ಆಗಿದೆ ಎಂದು ನಿರ್ಮಾಪಕರು ತಿಳಿಸಿದರು.

> ಧರ್ಮ ಅವರ ಜತೆಗೆ ಇದು ನನ್ನ ಎರಡನೇ ಸಿನಿಮಾ. ಇದು ಬರೀ ರೌಡಿಸಂ ಸಿನಿಮಾ ಅಲ್ಲ, ಸಂಬಂಧಗಳ ಸುತ್ತ ಸಾಗುವ ಕಥೆ ಇಲ್ಲಿದೆ. ನಾನು ಹಾಸ್ಟೆಲ್‌ನಲ್ಲಿದ್ದಾಗ ನಡೆದಂತಹ ನೈಜ ಘಟನೆಯನ್ನು ಇಟ್ಟುಕೊಂಡು ಈ ಸ್ಟೋರಿ ಹೆಣೆದಿದ್ದೇನೆ. ರೌಡಿಸಂಗೆ ಇಳಿದರೆ ಎಷ್ಟು ಸಂಸಾರಗಳು ಬೀದಿಗೆ ಬರುತ್ತವೆ ಎಂಬುದನ್ನು ಇಲ್ಲಿ ಮನಮುಟ್ಟುವಂತೆ ಕಟ್ಟಿಕೊಡಲಾಗಿದೆ.
>
> -ಮುರಳಿ ನಿರ್ದೇಶಕ

> ತಲ್ವಾರ್‌ನಲ್ಲಿ ಆ್ಯಕ್ಷನ್ ಜತೆಗೆ ಮದರ್ ಸೆಂಟಿಮೆಂಟ್ ಬೆರೆತಿದೆ. ದುಡ್ಡಿಗಾಗಿ ಏನನ್ನಾದರೂ ಮಾಡಲು ಸಿದ್ಧವಾಗಿರುವ ಹುಡುಗನ ಪಾತ್ರ ನನ್ನದು. ಈ ಚಿತ್ರದಲ್ಲಿ ನಿರ್ದೇಶಕರು ನನ್ನ ಗೆಟಪನ್ನು ಚೇಂಜ್ ಮಾಡಿದ್ದಾರೆ. ಇದು ನನ್ನ ನಟನಾ ಜೀವನದಲ್ಲಿಯೇ ಅದ್ಭುತ ಸಿನಿಮಾವಾಗಲಿದೆ.
>
> -ಧರ್ಮ ಕೀರ್ತಿ ರಾಜ್ ನಟ